
ಎನ್. ಮಲ್ಲಪ್ಪನವರು

ಅಭಿನಂದನ ಗ್ರಂಥ



ಸಂಪಾದಕ

ವೀ. ಚಿಕ್ಕವೀರಯ್ಯ

ಎಸ್. ಮಲ್ಲಪ್ಪನವರು

ಅಭಿನಂದನಾ ಗ್ರಂಥ

ಸಂಪಾದಕ :

ವೀ. ಚಿಕ್ಕವೀರಯ್ಯ

ಪ್ರಕಾಶಕರು :

ಸನ್ಮಾನ ಸಮಿತಿ, ತುಮಕೂರು

ಎನ್. ಮಲ್ಲಪ್ಪನವರು–ಅಭಿನಂದನಾ ಗ್ರಂಥ—ಸಂಪಾದಕ : ವೀ. ಚಿಕ್ಕವೀರಯ್ಯ
ಪ್ರಕಟಿತ ವರ್ಷ : 1985—86

ರಕ್ಷಾಪುಟ ವಿನ್ಯಾಸ : ಎಂ. ವಿ. ಎಸ್. ಶಂಕರ್

ಬೆಲೆ : ರೂ. 18—00

ಮುದ್ರಣ : ನ್ಯಾಷನಲ್ ಪ್ರೆಸ್, ತುಮಕೂರು

ಪರಿವಿಡಿ

ಚಿತ್ರಗಳು—ಶ್ರೀಮತಿ ರಂಗಮ್ಮನವರು ಮತ್ತು ಶ್ರೀ ಬಿಸ್. ಮಲ್ಲಪ್ಪನವರು

ರಾಜ್ಯ ಖಾದಿ ಬೋರ್ಡಿನ ಕಾರ್ಯದರ್ಶಿಯಾಗಿದ್ದಾಗ ರಾಣೆಬೆನ್ನೂರಿನ ಕುರಿ ಸಂಗೋಪನ ಸಂಘದವರೊಡನೆ

ಚಿಕ್ಕನಾಯಕನಹಳ್ಳಿಯಲ್ಲಿ ಸೊಸೈಟಿ ಇನ್ಸ್‌ಪೆಕ್ಟರ್ ಆಗಿದ್ದಾಗ ಕಂಬಳಿ ಉತ್ಪಾದಕರ ಹಾಗೂ ಮಾರಾಟಗಾರರ ಮೊದಲ ಸರ್ವ ಸದಸ್ಯರ ಸಭೆಯಲ್ಲಿ ನೀಲಗಿರಿ ಸಂಜೀವಯ್ಯನವರು, ಬಿ. ಮಲ್ಲಪ್ಪನವರು ಮತ್ತು ಇತರರೊಡನೆ

ತುಮಕೂರು ಜಿಲ್ಲಾ ಕೈಗಾರಿಕಾ ಇಲಾಖೆಯ ಮುಖ್ಯಾಧಿಕಾರಿಯಾಗಿದ್ದಾಗ ದರಖಾಸ್ತು ಉಪ ವಿಭಾಗಾಧಿಕಾರಿಯಾಗಿ ಬಡತಿ ಪಡೆದಾಗಿನ ಬೀಳ್ಕೊಡುಗೆ ಸಮಾರಂಭದಲ್ಲಿ ಆಗಿನ ಜಿಲ್ಲಾಧಿಕಾರಿ ನಸಿರುದೀನ್ ಮತ್ತು ಇತರೆ ಅಧಿಕಾರಿ ವರ್ಗದವರೊಂದಿಗೆ

ಮಧುಗಿರಿ ಸ್ಥಳೀಯ ಜಮೀನು ಅಡಮಾನ ಸಹಕಾರ ಬ್ಯಾಂಕಿನ ಅಧಿಕಾರಯುಕ್ತ ಅಧ್ಯಕ್ಷರಾಗಿದ್ದಾಗ

ಕುರುಬ ಉಣ್ಣೆನೇಕಾರರ ಎರಡನೇ ಸಮ್ಮೇಳನಕ್ಕೆ ಆಗಿನ ಪುರಸಭಾಧ್ಯಕ್ಷರಾದ ವೀ. ಚಿಕ್ಕವೀರಯ್ಯ ನವರೂ ಮಲ್ಲಪ್ಪನವರೂ ಆಡಳಿತ ಕಾಂಗ್ರೆಸ್ ಸಂಚಾಲಕರಾಗಿದ್ದ ಡಿ. ದೇವರಾಜ ಅರಸ್ ಅವರನ್ನು ಸ್ವಾಗತಿಸುತ್ತಿರುವುದು

ಬೆಳ್ಳಿ ಹಬ್ಬದ ಕಟ್ಟಡದ ಶಂಕುಸ್ಥಾಪನಾ ಸಮಾರಂಭದಲ್ಲಿ ಡಿ. ಕೆ. ನಾಯ್ಕರ್,, ರಾಜ್ಯ ಸಭಾ ಸದಸ್ಯ ಬಸವರಾಜು, ಗುರುಸ್ವಾಮಿ ಸಿರಿಯಪ್ಪ ಒಡೆಯರ್, ರಾಯಚೂರು ಜಿಲ್ಲೆಯ ಶಾಸಕ ಗಂಗಣ್ಣ ಇವರೊಡನೆ

ಉಣ್ಣೆನೇಕಾರರ ಎರಡನೇ ಸಮ್ಮೇಳನದಲ್ಲಿ ಸ್ವಾಗತ ಭಾಷಣ ಮಾಡುತ್ತಿರುವುದು. ಸಮಾರಂಭದ ಅಧ್ಯಕ್ಷರಾದ ಕೊಲ್ಲೂರು ಮಲ್ಲಪ್ಪನವರನ್ನು ಚಿತ್ರದಲ್ಲಿ ಕಾಣಬಹುದು

ಮಲ್ಲಪ್ಪನವರು ದಿ॥ ನೀಲಪ್ಪನವರ ಚಿತ್ರವನ್ನು ಅನಾವರಣ ಮಾಡುತ್ತಿರುವುದು. ಪ್ರಾಂಶು ಪಾಲರಾದ ಕೆ. ಸಿ. ರಾಮಯ್ಯನವರನ್ನು ಚಿತ್ರದಲ್ಲಿ ಕಾಣಬಹುದು

ಮಕ್ಕಳು, ಮೊಮ್ಮಕ್ಕಳು, ಸೊಸೆಯಂದಿರು, ಅಳಿಯಂದಿರೊಡನೆ ಮಲ್ಲಪ್ಪ ದಂಪತಿಗಳು














ಶ್ರೀ ಕಾಳಿದಾಸ ವಿದ್ಯಾವರ್ಧಕ




ರಜತ ಮಹೋತ್ಸವ
28





ಕಾಳಿದಾಸ ಕಿರಿಯ ಕಾಲೇಜಿನ ಆರಂಭೋತ್ಸವ ಸಮಾರಂಭದಲ್ಲಿ ಸಿ. ಎನ್. ಭಾಸ್ಕರಪ್ಪನವರು ಸ್ವಾಗತ ಭಾಷಣ ಮಾಡುತ್ತಿರುವುದು. ಎನ್. ಮಲ್ಲಪ್ಪನವರು ಅಧ್ಯಕ್ಷತೆ ವಹಿಸಿದ್ದ ಚಿತ್ರದಲ್ಲಿ ಶಿಕ್ಷಣ ಆಯುಕ್ತರಾದ ಫಿಲಿಪ್ಪೋಸ್ ಮತ್ತು ಕಟ್ಟಡ ಸಮಿತಿ ಅಧ್ಯಕ್ಷರಾದ ಎಂ. ಆರ್. ಜಗದೀಶ್‌ರವರನ್ನು ಕಾಣಬಹುದು.



ಕರ್ನಾಟಕ ರಾಜ್ಯ ಉಣ್ಣೆ ಕೈಮಗ್ಗದ ನೇಕಾರರ ಸಹಕಾರ ಸಂಘ ಲಿ., (ಬೆಂಗಳೂರು) ನ
1977—78 ನೇ ಸಾಲಿನ ಆಡಳಿತ ಮಂಡಲಿ. ಎನ್. ಮಲ್ಲಪ್ಪನವರು (ಅಧ್ಯಕ್ಷರು)

ಪ್ರಸ್ತಾವನೆ

ಪ್ರಾಮಾಣಿಕತೆ ಮಲ್ಲಪ್ಪನವರ ಜೀವನದ ಉಸಿರು. ಆದರ್ಶದ ಬೆಳ್ಗೊಡೆ ಅವರಿಗೆ ಯಾವಾಗಲೂ ಬೆಂಗಾವಲು. ಕಷ್ಟಾರ್ಜಿತವಲ್ಲದ ಒಂದು ದಮ್ಮಡಿಯನ್ನೂ ಮುಟ್ಟೆನೆಂಬ ಹಟ; ಸದಾ ಬಡವರ ಪರವಾದ ನಿಲವು ಹಿಡಿದು ಅಹೋರಾತ್ರಿ ದುಡಿಮೆ; ಇದು ಅವರ ಜೀವನದ ಮೂಲಮಂತ್ರ—ಆ ಹಿರಿಯ ಜೀವದ ದೃಢ ಸಂಕಲ್ಪವಾಗಿದೆ.

ಹುಟ್ಟು ಬಡತನವನ್ನೂ ಅನಾರೋಗ್ಯವನ್ನೂ ಕಟ್ಟಿಕೊಂಡು ಬಂದ ಆ ಚೇತನಕ್ಕೆ ಜೀವನದ ಎಂತಹ ಜಟಿಲ ಸಮಸ್ಯೆಯೂ ಎದೆಗೆಡಿಸುವ ಕಷ್ಟವೂ ನಿಜವಾದ ಕಷ್ಟವಾಗಿ ತೋರದೆ ಹೋಯಿತು. ತುಂಬು ಜೀವನದ ತುಂಬ ಸಾಗಿ ಬರಲು ಒಂದು ಬಗೆಯ ಕೆಚ್ಚನ್ನೂ ಕೆಲಸಕಾರ್ಯಗಳಲ್ಲಿ ಮೈ ಮರೆಯುವ ಆತ್ಮ ತೃಪ್ತಿಯ ಪ್ರವೃತ್ತಿಯನ್ನೂ ಎಳೆತನದಿಂದಲೇ ಅವರು ಬೆಳೆಸಿಕೊಂಡು ಬಂದರು. ಮಾತು ನಯ ವಂಚನೆ ಯದ್ದಲ್ಲ. ಸ್ವಲ್ಪ ಒರಟು. ಹಳ್ಳಿಯ ನಡವಳಿಕೆಯಿಂದ ಬಂದ ಗುಣವದು. ಸ್ವಲ್ಪ ತಾಳ್ಮೆ ಕಡಿಮೆ ಏನೋ ಅನ್ನಿಸಲೂ ಬಹುದು. ತಡಮಾಡಿದರೆ ಹಿಡಿದ ಕೆಲಸ ಎಲ್ಲಿ ಕೆಡುವುದೋ ಎನ್ನುವುದೇ ಇದಕ್ಕೆ ಕಾರಣವಿದ್ದೀತು.

ಮಲ್ಲಪ್ಪನವರು ನಿಜವಾಗಿಯೂ ಮಲ್ಲಪ್ಪನವರೇ. ಅಸಹಾಯ ಶೂರರು. ಜಟ್ಟಿಯಂತಹ ಗಟ್ಟಿಗರು. ವಾಯು ಬಾಧೆ, ಮೂಲ ವ್ಯಾಧಿ, ಇದೀಗ ಸಕ್ಕರೆ ಖಾಯಿಲೆ ಹೀಗೆ ಯಾವುದಕ್ಕೂ ಬಗ್ಗದೆ ಅವರ ಜೀವನದ ದಾರಿಯಲ್ಲಿ ಅವರು ನಡೆದಿದ್ದಾರೆ.

ಜನಮೆಚ್ಚಿ ಅಹುದೆನುವಂತೆ ಸರ್ಕಾರಿ ಸೇವೆಯನ್ನು ನಿರ್ವಹಿಸಿದರು. ಸ್ವತಃ ಹಲವಾರು ಸಂಸ್ಥೆ ಗಳನ್ನು ಹುಟ್ಟು ಹಾಕಿ ಸರಿಯಾಗಿ ಬೆಳೆಸಿದರು. ರಾಜ್ಯ ಉಣ್ಣೆ ನೇಕಾರರ ಅಪೆಕ್ಸ್ ಸೊಸೈಟಿಯಂಥ ಮರಣೋನ್ಮುಖ ಸಂಸ್ಥೆಗಳನ್ನು ಪುನರುಜ್ಜೀವಿಸಿ ಪ್ರಾಣಪ್ರತಿಷ್ಠೆ ಮಾಡಿದರು. ಭಯ ಆತಂಕಗಳಿಗೆ ಅವರ ಆರೋಗ್ಯ ಒಳಗಾಗಿದ್ದಾಗಲೂ ತಮ್ಮ ಜೀವಕ್ಕಿಂತಲೂ ಮಿಗಿಲಾಗಿ ಪ್ರೀತಿಸಿದ ಸಂಸ್ಥೆಗಳ ಹಿತ ಚಿಂತನೆಯ ಹಂಬಲಿಕೆಯಲ್ಲಿರುವುದನ್ನು ಕಣ್ಣಾರೆ ಕಂಡಾಗ ಹೃದಯ ತುಂಬಿ ಈ ಜೀವ ಎಲ್ಲರ ಜೀವದಂತಲ್ಲ ಎನ್ನಿಸಿ ಬಿಟ್ಟಿತು.

ಹಾಸುವುದು ಹೊದೆಯುವುದು ಉಡುವುದು ತೊಡುವುದು ಎಲ್ಲ ಖಾದಿ. ಮಾನವತೆಯ ತನಿರಸ ದಲ್ಲಿ ಮಿಂದ ಇವರು ಗಾಂಧಿವಾದಿ. ಮನುಷ್ಯ ಎಷ್ಟುಕಾಲ ಬದುಕಿದ ಎನ್ನುವುದಕ್ಕಿಂತ ಹೇಗೆ ಬದುಕಿದ ಎನ್ನುವುದೇ ಮುಖ್ಯವಾಗಬಹುದು. ಇಂತಹ ಅಸಾಮಾನ್ಯ ಬದುಕನ್ನು ಬಾಳಿದ ಚೇತನವೊಂದರ ಸಾಧನೆಯ ಅನೇಕ ಮಗ್ಗುಲುಗಳನ್ನು ಕುರಿತ ವಿವೇಚನೆಯನ್ನು ಇಲ್ಲಿನ ಬೇರೆ ಬೇರೆ ಲೇಖನಗಳಲ್ಲಿ ಓದುಗರು ನೋಡ ಬಹುದು.

ಮಲ್ಲಪ್ಪನವರು ಅವರಂಥವರು ಇಷ್ಟು ಪ್ರಾಮಾಣಿಕವಾಗಿ ವಿರಳ ಪ್ರಮಾಣದಲ್ಲಿ ಅಲ್ಲಲ್ಲೆ ದುಡಿದರೂ ನಮ್ಮ ಸಮಾಜ ಮಾತ್ರ ಯಥಾ ಪ್ರಕಾರವಾಗಿಯೇ ಇದೆ. ಅಲ್ಪ ಸ್ವಲ್ಪ ಬದಲಾವಣೆಯಾಗಿರಬಹುದು. ಆದರೆ ಅದು ಗಣನೀಯ ಮೊತ್ತದ್ದಲ್ಲ. ಒಬ್ಬಿಬ್ಬರು ಬದಲಾವಣೆಗಾಗಿ ದುಡಿದರೆ ಸಾಲದು. ಇಡಿ ಸಮಾಜವೇ, ದೇಶವೇ ಬದಲಾವಣೆ ಬಯಸಿ ಒಂದು ನಿಗದಿಯಾದ ಕಾರ್ಯಕ್ರಮದ ಅಡಿಯಲ್ಲಿ ಅಣಿಯಾಗಿ

ಮಾತ್ರವಾಗ ಸಮೃದ್ಧಿ ಕೈಗೂಡುವ ಕನಸು. ಅದಕ್ಕೆ ಬಹುಮುಖವಾದ ಸಮಗ್ರ ಹೋರಾಟ ತತ್ಕ್ಷಣ ಬೇಕಾಗಿ ಬೇಕು. ಆ ಸುದಿನ ಬರುವವರೆಗೆ ಆ ದಿಕ್ಕಿನಲ್ಲಿ ಕಾರ್ಯ ಪ್ರವೃತ್ತರಾದ ಮಲ್ಲಪ್ಪನವರನ್ನು ಅವರಂಥವರನ್ನು ಗುರುತಿಸಿ ಗೌರವಿಸುವುದನ್ನು ಸಮಾಜ ಮಾಡಬೇಕಾಗುತ್ತದೆ. ಅವರ ಸಾಧನೆ ಸಿದ್ಧಿಗಳನ್ನು ಸ್ಮರಿಸಿ ಮತ್ತೆ ಮತ್ತೆ ಅವರಿಂದ ಸ್ಫೂರ್ತಿ ಪಡೆಯಬೇಕಾಗುತ್ತದೆ. ಈ ದೃಷ್ಟಿಯಿಂದ ಐವತ್ತು ತುಂಬಿದ ಮಲ್ಲಪ್ಪನವರಿಗೊಂದು ಸನ್ಮಾನ ಸಮಾರಂಭವನ್ನು ಏರ್ಪಡಿಸಲಾಗಿದೆ. ಅದೇ ವೇಳೆಗೆ ಅವರನ್ನು ಕುರಿತಾದ ಈ ಅಭಿನಂದನಾ ಗ್ರಂಥವೊಂದನ್ನು ಹೊರತರುತ್ತಿದ್ದೇವೆ.

ಈ ಗ್ರಂಥಕ್ಕೆ ನಾಡಿನ ನುರಿತ ಹೆಸರಾಂತ ಲೇಖಕರನೇಕರು ಮಲ್ಲಪ್ಪನವರನ್ನು ಕುರಿತು ಬರೆದಿದ್ದಾರೆ. ಈ ಗ್ರಂಥದ ತೂಕವೇನಾದರೂ ಹೆಚ್ಚಿದ್ದರೆ ಅದರ ಎಲ್ಲ ಯಶಸ್ಸು ಲೇಖಕರಿಗೆ ಸಲ್ಲುತ್ತದೆ. ದೋಷವೇನಾದರೂ ಎದ್ದುಕಂಡರೆ ಅದಕ್ಕೆ ಮಾತ್ರ ಸಂಪಾದಕನೆ ಸಂಪೂರ್ಣ ಹೊಣೆಗಾರ. ಈ ಪುಸ್ತಕದ ಸತ್ವವನ್ನು ತಮ್ಮ ಬರಹಗಳಿಂದ ಅಧಿಕಗೊಳಿಸಿದ ಲೇಖಕರೆಲ್ಲರಿಗೂ ನನ್ನ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ನಾನು ಕೊಟ್ಟ ತೊಂದರೆಗಳನ್ನು ಸಹಿಸಿಕೊಂಡು ಬರೆದ ಅವರ ಔದಾರ್ಯ ದೊಡ್ಡದು. ಕೆಲವು ಲೇಖನಗಳನ್ನು ಪರಿಷ್ಕರಿಸುವಲ್ಲಿ ಗೆಳೆಯರಾದ ಪ್ರೊ॥ ಎಚ್. ಜಿ. ಸಣ್ಣಗುಡ್ಡಯ್ಯ ಹಾಗೂ ಕೆ. ಆರ್. ಕಮಲೇಶ್ ಇವರ ಸಹಕಾರವನ್ನು ಸ್ಮರಿಸದೆ ಇರಲಾರೆ.

ಕಾರಣಾಂತರದಿಂದ ಸನ್ಮಾನ ಸಮಾರಂಭವೂ ಗ್ರಂಥ ಪ್ರಕಟನೆಯೂ ಮುಂದಕ್ಕೆ ಹೋದವು. ಈ ಮಧ್ಯೆ ಕೆಲವು ದುಃಖದಾಯಕ ಘಟನೆಗಳು ಜರುಗಿ ಮನಸ್ಸು ನಿರ್ವಿಣ್ಣವಾಯಿತು. ತೀವ್ರವಾದ ಕಾಯಿಲೆಯಿಂದ ನರಳುತ್ತಿದ್ದ ಮಲ್ಲಪ್ಪನವರ ಕುಟುಂಬ ಶ್ರೀಮತಿ ರಂಗಮ್ಮನವರು ತೀರಿಕೊಂಡರು. ಈ ಸಮಾರಂಭದಲ್ಲಿ ಪಾಲ್ಗೊಳ್ಳಬಯಸಿ ನಮಗೆ ಲೇಖನ ನೀಡಿ ನೆರವಾಗಿದ್ದ ಮಲ್ಲಪ್ಪನವರ ಆಜೀವ ಗೆಳೆಯ ಜಿ.ವಿ.ನಾ. ಗತಿಸಿದರು. ಸನ್ಮಾನ ಸಮಾರಂಭದಲ್ಲಿ ಪಾಲ್ಗೊಳ್ಳಲು ಕಾತರರಾಗಿದ್ದ ಹಾಗೂ ಈ ಗ್ರಂಥದ ಲೇಖಕರಲ್ಲಿ ಒಬ್ಬರಾದ ಕೆ. ದಾಸಪ್ಪನವರು ಇದ್ದಕ್ಕಿದ್ದಂತೆ ನಮ್ಮನ್ನೆಲ್ಲ ಅಗಲಿ ಆಘಾತವುಂಟಾಯಿತು. ಅವರೆಲ್ಲರ ಆತ್ಮಕ್ಕೆ ಚಿರಶಾಂತಿ ಲಭ್ಯವಾಗಲಿ ಎಂದು ಇಲ್ಲಿ ಹಾರೈಸುತ್ತೇನೆ.

ಈ ಅಭಿನಂದನಾ ಗ್ರಂಥ ಪ್ರಕಟಿಸಲು ಎಲ್ಲ ವಿಧದ ನೆರವಿತ್ತು ಧನ ಸಹಾಯ ಮಾಡಿದ ಸನ್ಮಾನ ಸಮಿತಿಯ ಅಧ್ಯಕ್ಷರಾದ ಸಿ. ಎನ್. ಭಾಸ್ಕರಪ್ಪನವರಿಗೂ, ಸನ್ಮಾನ ಸಮಿತಿಯ ಸದಸ್ಯರಿಗೂ, ವಿಶೇಷವಾಗಿ ಅವರ ಖಜಾಂಚಿಗಳಾದ ಹೆಚ್. ಹನುಮಂತಯ್ಯನವರಿಗೂ, ಪ್ರಾಂಶುಪಾಲರಾದ ಕೆ. ಸಿ. ರಾಮಯ್ಯನವರಿಗೂ ನನ್ನ ಕೃತಜ್ಞತೆಗಳು ಸಲ್ಲುತ್ತವೆ.

ಗ್ರಂಥವನ್ನು ಸುಂದರವಾಗಿ ಅಚ್ಚು ಮಾಡಿಕೊಡುವಲ್ಲಿ ನ್ಯಾಷನಲ್ ಪ್ರೆಸ್ಸಿನ ಟಿ. ಪಿ. ನಾಗರಾಜ್, ಟಿ. ಕೆ. ದಿಲೀಪ್ ಕುಮಾರ್‌ರವರ ನೆರವನ್ನು ಎಷ್ಟು ಹೊಗಳಿದರೂ ಕಡಿಮೆಯೆ. ರಕ್ಷಾ ಪುಟದ ವಿನ್ಯಾಸ ಮಾಡಿಕೊಟ್ಟ ಎಂ. ವಿ. ಎಸ್. ಶಂಕರ್, ರಕ್ಷಾ ಪುಟವನ್ನು ಅಂದವಾಗಿ ಮುದ್ರಿಸಿದ ಬೆಂಗಳೂರಿನ ಕಸ್ತೂರಿ ಪ್ರಿಂಟರ್ಸ್, ಇವುಗಳಿಗೆ ನೆರವಾದ ಹೆಚ್. ಆರ್. ರಘುನಾಥ್—ಈ ಎಲ್ಲ ಮಹನೀಯರಿಗೂ ಹಾರ್ದಿಕ ವಂದನೆಗಳು.

ವೀ. ಚಿಕ್ಕವೀರಯ್ಯ
ಸಂಪಾದಕ

ಮಾರ್ಗದರ್ಶಕರಿಗೆ ನಮನ

ನಾನು ವಿದ್ಯಾರ್ಥಿ ದೆಸೆಯಲ್ಲಿದ್ದಾಗಲೇ ಹಿರಿಯರಾದ ಪೂಜ್ಯ ಮಲ್ಲಪ್ಪನವರ ಹೆಸರನ್ನೂ ಅವರ ಕಾರ್ಯದಕ್ಷತೆಯನ್ನೂ ಕೇಳಿದ್ದೆ. ನಮ್ಮವರೊಬ್ಬರು ಇಷ್ಟು ವ್ಯಾಪಕವಾಗಿ ಜನಸೇವೆಯನ್ನು ಮಾಡುತ್ತಾ ಕಾರ್ಯ ತತ್ಪರರಾಗಿರುವುದನ್ನು ಕಾಣುವ ಭಾಗ್ಯ ನಾನು ಕಾಳಿದಾಸ ವಿದ್ಯಾವರ್ಧಕ ಸಂಘದ ಕಾರ್ಯಕಾರಿ ಮಂಡಲಿಯ ಸದಸ್ಯನಾದ ಮೇಲೆ ವಿಶೇಷವಾಗಿ ದೊರಕಿತು. ಮಲ್ಲಪ್ಪನವರ ಜೊತೆಯಲ್ಲಿ ಕೆಲಸ ನಿರ್ವಹಿಸು ವುದೆಂದರೆ ಅದೊಂದು ಅಭೂತಪೂರ್ವ ಸಂತೋಷದಾಯಕ ಸಂಗತಿಯೇ ಸರಿ. ಈ ಎಂಭತ್ತರ ಇಳಿವಯಸ್ಸಿ ನಲ್ಲೂ ಅವರ ಉತ್ಸಾಹಕ್ಕೆ ಕುಂದಿಲ್ಲ. ಸಂಘ ಸಂಸ್ಥೆಗಳ ಹಾಗೂ ಸಾರ್ವಜನಿಕರ ಕೆಲಸ ಮಾಡುತ್ತೇವೆ ಎನ್ನುವವರಿಗೆ ಬಿಡುವಿಲ್ಲದ ಹಾಗೆ ಅವರು ಮಾರ್ಗದರ್ಶನ ಮಾಡುತ್ತಲೇ ಇರುತ್ತಾರೆ. ಈ ಕೆಲಸ ಮಾಡು ವುದು ಅಗತ್ಯ ಎನ್ನಿಸಿದ ಕೂಡಲೇ ಅದರ ಬೆನ್ನು ಹತ್ತಿ ಸಾಧಿಸಲು ಅವರು ಕಾರ್ಯೋನ್ಮುಖರಾಗುವುದು ಜನಜನಿತವಾಗಿದೆ. ಜೊತೆಯಲ್ಲಿದ್ದವರು ಯಾರು ಬರಲಿ ಬರದೇ ಹೋಗಲಿ ಅದನ್ನು ಲೆಕ್ಕಿಸದೆ ಏಕಾಂಗ ಸಾಹಸಿಗಳಾಗಿ ಅದನ್ನವರು ಮಾಡಿಯೇ ತೀರುವರು. ಅವರ ಲೋಕ ಪ್ರಿಯತೆಯ ಗುಟ್ಟು ಅವರ ಕಾರ್ಯ ವಿಧಾನದಲ್ಲಿಯೇ ಅಡಗಿದೆ. ಅವರ ನಿಸ್ಪೃಹ ಪ್ರಾಮಾಣಿಕತೆಯಂತೂ ನಮಗೆಲ್ಲ ಮೇಲ್ಪಂಕ್ತಿ. ಬಹುಮುಖ ಪ್ರತಿಭೆಯ ಅವರ ವ್ಯಕ್ತಿತ್ವ ಪ್ರಶ್ನಾತೀತವಾದದ್ದು.

ನಾನು ಕುರಿ ಪೋಷಣೆ ಅಭಿವೃದ್ಧಿ ಮಂಡಲಿಯ ಅಧ್ಯಕ್ಷನಾಗಿ ರಾಜ್ಯ ಸರ್ಕಾರದಿಂದ ನೇಮಕವಾದ ಹೊಸತರಲ್ಲಿ ಅವರ ಜೊತೆ ಮಂಡಲಿಯ ಆಗುಹೋಗುಗಳ ಬಗ್ಗೆ ವಿವರವಾಗಿ ಒಮ್ಮೆ ಚರ್ಚಿಸಿದೆನು. ಆ ದಿನ ಮಲ್ಲಪ್ಪನವರು ಕುರಿ ಪೋಷಣೆ ಯಾವ ರೀತಿ ಆಗಬೇಕು, ಉಣ್ಣೆ ಉದ್ಯಮ ಆಧುನಿಕ ಪದ್ಧತಿಗೆ ಹೇಗೆ ಅಳವಡಿಸಿಕೊಂಡು ಮುಂದುವರಿದರೆ ಬದುಕುತ್ತದೆ ಎನ್ನುವುದನ್ನು ಅಂಕಿ ಅಂಶ ಸಹಿತವಾಗಿ ವಿವರಿಸುತ್ತಾ ಹೋದರು. ಅದನ್ನು ಕೇಳುವುದೇ ಒಂದು ರೋಮಾಂಚಕಾರಿ ರಸಮಯ ಸನ್ನಿವೇಶವಾಗಿ ತೋರಿತು. ಆ ರೀತಿ ಲೀಲಾಜಾಲವಾಗಿ ಮಹತ್ತರವಾದ ಒಂದು ಯೋಜನೆಯನ್ನೆತ್ತಿಕೊಂಡು ತಮ್ಮ ಚಿಂತನೆಯನ್ನು ಒಟ್ಟುಗೂಡಿಸಿ ಮಂಡಿಸುವ ಪರಿಣತರು ನಮ್ಮ ನಾಡಿನಲ್ಲಿ ಬಹಳ ಮಂದಿ ಇಲ್ಲವೆಂದು ನನಗೆ ಅನ್ನಿಸಿದ್ದರಲ್ಲಿ ಆಶ್ಚರ್ಯವೇನೂ ಇಲ್ಲ. ಮಲ್ಲಪ್ಪನವರಿಗೆ ಜನಾಂಗದವರು, ಹಿಂದುಳಿದವರು, ಅವರ ಏಳಿಗೆ; ಕುರಿ, ಉಣ್ಣೆ ನೇಕಾರಿಕೆ, ಅದರ ಅಭಿವೃದ್ಧಿ ಎಂದರೆ ಎರಡು ಭುಜಗಳು ಹೋಗಿ ಎಂಟು ಭುಜಗಳಾಗುತ್ತವೆ. ವಿವರಗಳಲ್ಲಿ ಅವರು ತನ್ಮಯರಾಗುತ್ತಾರೆ. ಎದುರಿಗಿರುವವರಿಗೆ ಹೊಸ ಅನುಭವ ಲೋಕವೇ ಒಂದು ಸೃಷ್ಟಿಯಾಗುತ್ತದೆ.

ನಾನು ಕಾಳಿದಾಸ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿಯಾದ ಮೇಲಂತೂ ಅವರ ಜೊತೆಗೂಡಿ ಕೆಲಸ ಮಾಡುತ್ತಾ ಅವರ ಒಡನಾಟದ ರಸಮಯ ಸನ್ನಿವೇಶಗಳೆಷ್ಟರಲ್ಲೋ ಪಾಲ್ಗೊಳ್ಳುತ್ತಾ ಬಹು ಉನ್ನತ ದರ್ಜೆಯ ಅಭಿರುಚಿಯನ್ನು ಬೆಳೆಸಿಕೊಳ್ಳಲು ಅವರ ಬದುಕು ನನಗೆ ಅವಕಾಶಮಾಡಿಕೊಟ್ಟಿದೆ.

ಶ್ರೀಯುತರು ಸರ್ಕಾರಿ ಸೇವೆಯಲ್ಲಿದ್ದಾಗಲೂ ಸಾರ್ವಜನಿಕರ ಸೇವೆಯನ್ನು ನೂರಕ್ಕೆ ನೂರರಷ್ಟು ಪ್ರಾಮಾಣಿಕವಾಗಿ ಮಾಡಿದರು. ನಿವೃತ್ತರಾದ ಮೇಲೂ ಸಾರ್ವಜನಿಕರ ಹಾಗೂ ಸಮಾಜದ ಸೇವೆಯನ್ನು ಇನ್ನೂ ಮಾಡುತ್ತಲೇ ಇದ್ದಾರೆ. ಈ ಇಳಿವಯಸ್ಸಿನಲ್ಲಿ ಅವರಿಗೆ ಪತ್ನೀ ವಿಯೋಗವಾಯಿತು. ಇವಾದ ಮೇಲೂ ಅವರ ಕಾರ್ಯಪಟುತ್ವ, ಉತ್ಸಾಹಗಳಿಗೇನೂ ಕೊರತೆಯಾಗಲಿಲ್ಲ. ವಯಸ್ಸಾಗುತ್ತಿದೆ. ಅದೂ ಅವರಿಗೆ ಲೆಕ್ಕಕ್ಕಿಲ್ಲ. ಶಿರಾದಲ್ಲಿ ಪಾಲಿಟೆಕ್ನಿಕ್ ಆರಂಭಿಸಲು ಹೋಗಿ ಬರಬೇಕೆಂದರೆ ನಾಲ್ಕಾರುಬಾರಿ ಬಸ್ಸು

ಒಡವು ಬೇಸರಪಟ್ಟುಕೊಳ್ಳದೆ ಹೋಗಿ ಬರುತ್ತಾರೆ. ಚಿಕ್ಕನಾಯಕನಹಳ್ಳಿಯ ಬಳಿ ಸಂಘದ ಜಮೀನಿನಲ್ಲಿ ತೆಂಗಿನಗಿಡ ಹೇಗೆ ಬೆಳೆಯುತ್ತಿವೆ ನೋಡಲು ಅವರು ಒಂದು ಮುಂದು ನೋಡದೆ ಹೊರಟೇ ಬಿಡುತ್ತಾರೆ. ಇಷ್ಟು ಚೈತನ್ಯಭರಿತರಾದ ಇನ್ನೊಬ್ಬರು ಕಾಳಿದಾಸ ವಿದ್ಯಾವರ್ಧಕ ಸಂಘಕ್ಕೆ ಅಧ್ಯಕ್ಷರಾಗಿ ದೊರಕುವುದು ದುರ್ಲಭ.

ಮಹಾನುಭಾವ ಕಾಳಿದಾಸ ನಿಲುವಾನಿನ ನೋಡದ ಮರೆಯಲ್ಲಿಯೇ ನಿಂತು ನಮ್ಮ ಸಂಘಕ್ಕೆ ಯಾವ ವಿಧವಾದ ಕಷ್ಟವೂ ಬರದಂತೆ, ಬಂದರೂ ಅವು ಅರೆಗಾಗಿ ಹೋಗುವಂತೆ ಮಾಡಿ ನಿರಂತರವೂ ನನಗೆ ಹುಮ್ಮಸ್ಸು ಕೊಡುತ್ತಿರುತ್ತಾನೆ ಎಂದು ಅವರು ಅನೇಕ ಸಲ ಹೇಳುವುದು ಕೇವಲ ಒಂದು ಉಪಚಾರದ ಹೇಳಿಕೆಯಾಗಿರದೆ ಅವರ ಜೀವಂತ ಅನುಭವವಾಗಿ ಒಡಮೂಡುತ್ತದೆ. ಕಾಳಿದಾಸ ವಿದ್ಯಾವರ್ಧಕ ಸಂಘ ನಡೆಸುವ ಸಂಸ್ಥೆಗಳು ಇವತ್ತು ಇಡೀ ರಾಜ್ಯದಲ್ಲಿಯೇ ಹೆಸರುಗಳಿಸಿವೆ. ಇದಕ್ಕೆ ಮಲ್ಲಪ್ಪನವರ ಸಚ್ಚಾರಿತ್ರ್ಯ ಕಾರ್ಯತತ್ಪರತೆಯೇ ಕಾರಣ.

ವಿದ್ಯಾ ಸಂಸ್ಥೆಗಳನ್ನು ತೆರೆದು ನಮ್ಮ ಸಮಾಜಕ್ಕೊಂದು ಅಸ್ತಿತ್ವ ತಂದುಕೊಟ್ಟು, ಹಿಂದುಳಿದ ವರ್ಗಗಳಿಗೆಲ್ಲ ಪ್ರೇರಕಶಕ್ತಿಯಾಗಿ ನಿಂತು ಬಡವರ ಬಂಧುವಾಗಿ ಬದುಕುತ್ತಿರುವ ಮಲ್ಲಪ್ಪನವರನ್ನು ವಿಶಾಲ ಪ್ರಮಾಣದಲ್ಲಿ ಗುರುತಿಸಿ ಗೌರವಿಸುವ ಸಲುವಾಗಿ ಸನ್ಮಾನ ಸಮಾರಂಭವೊಂದನ್ನು ಏರ್ಪಡಿಸಿರುತ್ತೇವೆ. ಅವರ ಸೇವೆಯ ನಾನಾ ಮುಖವನ್ನು ಗುರುತಿಸಿ, ಅವರ ವ್ಯಕ್ತಿತ್ವದ ವೈವಿಧ್ಯವನ್ನು ಕುರಿತಂತೆ ಮುಂದಿನ ಪೀಳಿಗೆಗೂ ಅವರ ಲಾಭ ದೊರಕಲಿ ಎನ್ನುವ ಉದ್ದೇಶದಿಂದ ಆ ಸಲುವಾಗಿ ಈ ಅಭಿನಂದನಾ ಗ್ರಂಥವನ್ನು ಪ್ರಕಟಿಸಲಾಗಿದೆ. ಮೇಲಿಂದ ಮೇಲೆ ಪಾರ್ಲಿಮೆಂಟು ಮತ್ತು ಅಸೆಂಬ್ಲಿಯ ಚುನಾವಣೆಗಳು ಬಂದುದರಿಂದ ಸಮಾರಂಭ ನಡೆಯುವುದರಲ್ಲಿ ಕೊಂಚ ವಿಳಂಬವಾಯಿತು. ಅದಕ್ಕಾಗಿ ಎಲ್ಲರ ಕ್ಷಮೆಯಿರಲಿ.

ಗ್ರಂಥವನ್ನು ಸಿದ್ಧಮಾಡುವ ಕೆಲಸವೇನೂ ಅಷ್ಟು ಸುಲಭತರವಾದದ್ದಲ್ಲ. ಅದೊಂದು ಕಠಿಣವಾದ ತಲೆತಿನ್ನುವ ಜವಾಬ್ದಾರಿ. ಎಲ್ಲವನ್ನೂ ಸಹಿಸಿಕೊಂಡು ಲೇಖನಗಳನ್ನು ಬರಮಾಡಿಕೊಂಡು ಶ್ರದ್ಧೆ ಮತ್ತು ತಾಳ್ಮೆಯಿಂದ ಸಾಹಿತಿಗಳಾದ ವೀ. ಚಿಕ್ಕವೀರಯ್ಯನವರು ಸಂಪಾದಕರಾಗಿ ಗ್ರಂಥ ಹೊರತರುವ ಕೆಲಸವನ್ನು ಅತ್ಯಂತ ಸಮರ್ಪಕವಾಗಿ ನೆರವೇರಿಸಿಕೊಟ್ಟಿದ್ದಾರೆ. ಅವರಿಗೆ ಕೆ. ಆರ್. ಕಮಲೇಶ್ ಸಹಕಾರವಿತ್ತಿದ್ದಾರೆ. ನಮ್ಮ ಜಿಲ್ಲೆಯ ಶಿರಾ, ಪಾವಗಡ, ಮಧುಗಿರಿ, ಕೊರಟಗೆರೆ, ತುಮಕೂರು, ಗುಬ್ಬಿ, ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಬಾಂಧವರು ಸಮಾರಂಭಕ್ಕೆ ಹಾಗೂ ಗ್ರಂಥ ಪ್ರಕಟನೆಗೆ ಕೊಡುಗೈಯಿಂದ ಹಣ ಸಹಾಯ ಮಾಡಿದ್ದಾರೆ. ದೇವರಾಜುರವರು, ದ್ಯಾಮಣ್ಣನವರು, ಕೆ. ಸಿ. ರಾಮಯ್ಯನವರು, ಹೆಚ್. ಹನುಮಂತಯ್ಯನವರು ಬಹು ವಿಧವಾದ ಶ್ರಮವಹಿಸಿ ಸನ್ಮಾನ ಸಮಾರಂಭದ ಏರ್ಪಾಟಿಗೆ ದುಡಿದಿರುತ್ತಾರೆ. ಹಾಗೂ ಕಾರ್ಯದರ್ಶಿಗಳಾಗಿದ್ದು ಮೊನ್ನೆತಾನೆ ನಿಧನರಾದ ಕೆ. ದಾಸಪ್ಪನವರು ಬಹಳವಾಗಿ ಈ ಬಗ್ಗೆ ಆಸಕ್ತಿ ವಹಿಸಿದ್ದರು. ಈ ಎಲ್ಲ ಮಹನೀಯರಿಗೂ, ಹಣ ಸಹಾಯ ಮಾಡಿದ ಬಂಧುಗಳಿಗೂ ನಾನು ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಮಲ್ಲಪ್ಪನವರಿಗೆ ಸಕಲ ಸನ್ಮಂಗಲಗಳೂ ಲಭ್ಯವಾಗಲಿ ಎನ್ನುವುದು ಸನ್ಮಾನ ಸಮಿತಿ ಅಧ್ಯಕ್ಷನಾಗಿ ನನ್ನ ಹಾರೈಕೆಯಾಗಿದೆ. ಅವರು ನೂರು ವರ್ಷ ಬಾಳುವಂತೆ ಭಗವಂತನು ಆಶೀರ್ವದಿಸಲಿ. ಸ್ಫೂರ್ತಿದಾಯಕವಾದ ಅವರ ವ್ಯಕ್ತಿತ್ವ ನಮ್ಮನ್ನೆಲ್ಲ ಸರಿ ದಾರಿಯಲ್ಲಿ ನಡೆಸಲಿ.

ಸಿ. ಎನ್. ಭಾಸ್ಕರಪ್ಪ
ಅಧ್ಯಕ್ಷ, ಸನ್ಮಾನ ಸಮಿತಿ

ನಾನೂ—ಮಲ್ಲಪ್ಪನವರೂ

ವೀ. ಚಿಕ್ಕವೀರಯ್ಯ

ಎಸ್. ಮಲ್ಲಪ್ಪನವರನ್ನು ಬರಹದಲ್ಲಿ ಇಳಿಸುವುದೇ ಆಗಲಿ ಕವಿತೆಯಲ್ಲಿ ಚಿತ್ರಿಸುವುದೇ ಆಗಲಿ ಆಗದ ಮಾತು. ಅವರು ಭಾಷಣಕ್ಕೆ ನಿಂತರೆ ಹಳ್ಳಿಯ ನಾಲ್ಕುಪಗಡದಸ್ವಾದ ಮಾತುಗಳನ್ನು ಉಚ್ಚರಿಸಿಯೋ ಮಿಕ್ಕದ್ದನ್ನು ತಮ್ಮ ಸಹಜವಾದ ಅಭಿನಯದ ಮೂಲಕವೋ ತಿಳಿಸಬೇಕಾದ್ದನ್ನು ಮನಗಾಣಿಸಿ ಒಂದು ಬಗೆಯ ಸಂತೃಪ್ತಿಯ ನಗೆಯ ಅಲೆ ಅಲೆಯೋ ಸಭಿಕರಲ್ಲಿ ಏಳುವಂತೆ ಮಾಡಿಬಿಡುತ್ತಾರೆ.

"ಹಳ್ಳಿ ನಮ್ಮವ್ವದೀರು ಇನ್ನೂ ಮಸುಪಿಗೆಲೆ ಎದ್ದು ಬೆಣಚುಕಲ್ಲಿನಂಥ ತೊಗೆ ಪೊಸರ್‍ನ ಮಜ್ಜಿಗಡ್ಡೆಗೆ ಹಾಕಿ ಚಾರ್ ಚೋರ್. ಚಾರ್ ಚೋರ್ ಅಂತ ಕಡೀತಿದ್ರೆ ಅದುನ್ನ ನೋಡೋಕೆ ಚಂದಾಗೋದು" ಎಂದು ಪೇಟೆಯ ಸಾರ್ವಜನಿಕ ವೇದಿಕೆಗಳ ಮೇಲೆ ಹೇಳುತ್ತಿದ್ದರೆ ಅದನ್ನು ಕೇಳುವುದೇ ಸುಯೋಗವಾಗಿ ಈಗಾಗಲೇ ಮರೆಯಾಗುತ್ತಿರುವ ಆ ಚಿತ್ರ ಕಣ್ಣಿಗೆ ಕಟ್ಟಿಬಿಡುವುದು. ಮಾತುಗಳೇ ಇಷ್ಟು ಕಾವ್ಯಮಯವಾಗಿರುವಾಗ ಹೇಳುವ ವ್ಯಕ್ತಿಯ ಅಭಿನಯವೂ ಸೇರಿದರೆ ಇನ್ನು ಹೇಗಿರಲಾರದು! ಅಷ್ಟೇ ಅಲ್ಲ. ನಮ್ಮವ್ವದೀರು ಅನ್ನುವುದಕ್ಕೆ ಮೊದಲು ಆ....ಆ....ಆ...ಆ....ಹ....ಳ್ಳಿ ನಮ್ಮವ್ವದೀರ‍್ಯ ಎಂದು ನೀಳವಾಗಿ ಸಂಗೀತಗಾರ ರಾಗಾಲಾಪನೆ ತೆಗೆದು ಹಾಡು ಶುರುವು ಮಾಡುವಂತೆ ತಾವು ಕೊಡಲಿರುವ ಚಿತ್ರಕ್ಕೆ ಮಲ್ಲಪ್ಪತನದ ಮುದ್ರೆಯೊತ್ತಿ ಕೇಳುಗರಲ್ಲಿ ವಿಶೇಷ ಬಗೆಯ ಕುತೂಹಲವುಂಟುಮಾಡುತ್ತಾರೆ. ಕೆಲಸ ಮಾಡುವಾಗಲೂ ಅಷ್ಟೆ; ಮೀನ ಮೇಷ ಅವರ ಜಾತಕದಲ್ಲಿ ಇಲ್ಲ. 77 ರ ಇಳಿವಯಸ್ಸಿನಲ್ಲೂ ಯುವಕರು ನಾಚುವಂತೆ ನಡುಕಟ್ಟಿ ನಿಲ್ಲುತ್ತಾರೆ.

ಇಂತಹ ತನ್ನದೇ ಆದ ಮಾತು, ಕತೆ. ದನಿಯ ವರಸೆ, ಆಳ್ತನ, ಕಾರ್ಯಕ್ಷಮತೆ ಉಳ್ಳ ಒಬ್ಬ ಜೀವಂತ ವ್ಯಕ್ತಿಯನ್ನು ಎಂತಹ ಪ್ರತಿಭಾವಂತ ಕುರಿತು ಬರೆಯಲು ಹೊರಟಾಗಲೂ ಅದು ಆನೆಯನ್ನು ಐವರು ತಡಕಿದ ಕತೆಯಾದೀತೇ ಹೊರತು ವ್ಯಕ್ತಿಯನ್ನು ಕಣ್ಮುಂದೆ ನಿಲ್ಲಿಸಿದ ಸಹಜ ಸಾಹಸವಾಗಲಾರದು.

ನಾನು ಮಲ್ಲಪ್ಪನವರನ್ನು ಮೊದಲಿಗೆ ನೋಡಲು ಶುರುವಾದದ್ದು ಅವರು ಆಗಲೇ ಬಿ.ಎ., ಮುಗಿಸಿದ ಮೇಲೆ; ಕೆಲಸಕ್ಕೆ ಸೇರಿದ್ದೂ ಆಗಿ ರಜಾಪಡೆದು ಯಾವಾಗಲಾದರೂ ವರ್ಷಕ್ಕೊಮ್ಮೆ ಅವರ ಏಕೈಕ ಬಂಧು ಅವರಕ್ಕ ಕೆಂಚಿಕ್ಕಮ್ಮನವರ ಮನೆಯಲ್ಲಿ ಒಂದೆರಡು ದಿನ ದೂರದಿಂದ ಬಂದು ಇರುತ್ತಿದ್ದ ಕಾಲದಲ್ಲಿ.

ಅವರ ಅಪ್ಪ, ಅಮ್ಮ ಅವರನ್ನು ನಾನು ನೋಡಿಯೇ ಇಲ್ಲ. ನಂಜುಂಡಪ್ಪ ಎನ್ನುವ ಒಬ್ಬ ಅಣ್ಣ ಅವರಿಗಿದ್ದರು. ಮದುವೆಯಾಗಿತ್ತು. ಆದರೆ ಮಕ್ಕಳಿರಲಿಲ್ಲ. ಅವರು ಕೂಡ ಅಕಾಲ ಮೃತ್ಯುವಿಗೆ ತುತ್ತಾಗಿಬಿಟ್ಟರು. ಅಣ್ಣನ ಶವ ಸಂಸ್ಕಾರಕ್ಕೆ ಮಲ್ಲಪ್ಪನವರು ಬರುವುದು ತಡವಾಯಿತು. ಕತ್ತಲಾಗುವವರೆಗೂ ಕಾಯ್ದು ಸಮಾಧಿಮಾಡಿ ಊರ ಮುಂದಿನ ದೊಡ್ಡ ಆಲದ ಮರದ ಜೊಡ್ಡಿಗೆ ಜನ ಬರುವಾಗ ಇವರು ಜಟಕಾದಲ್ಲಿ ಎದುರಿಗೆ ಬಂದರು. ಮುಖ ನೋಡಲು ಸಿಕ್ಕದ್ದಕ್ಕಾಗಿ ಶೋಕತಪ್ತರಾಗಿ ಕುಸಿದು ಬಿದ್ದ ನೆನಪು ನನಗೆ. ಆಗಿನ್ನೂ ನಾನು ಎಳೆಯ ಹುಡುಗ. ಪ್ರಾಥಮಿಕ ಶಾಲೆಯ ವಿದ್ಯಾರ್ಥಿ. ಶಿರಾ ಗೇಟಿನ ಮಿಶನ್ ಸ್ಕೂಲಿಗೆ ಹೋಗಿಬರುತ್ತಿದ್ದೆ.

ನಮ್ಮ ಮನೆ ಚಿಕ್ಕವೀರಯ್ಯನ ಪಾಳ್ಯದಲ್ಲಿ. ಮಲ್ಲಪ್ಪನವರ ಅಕ್ಕನ ಮನೆ ಅರ್ಜಿರಂಗಪ್ಪನ ಪಾಳ್ಯದ ಅಂಚಿನಲ್ಲಿತ್ತು. ಈ ಮನೆಯ ಮೂಲಕವೇ ಹಾದುಹೋಗುವ ರಸ್ತೆಯಲ್ಲೇ ದಿನಬೆಳಗಾದರೆ ನಾವು ಶಾಲೆಗೆ ಓಡಾಡುವುದು. ಹೀಗೆ ಅಲ್ಲಿ ತಿರುಗಾಡುವಾಗ ವರ್ಷಕ್ಕೋ ಎರಡು ವರ್ಷಕ್ಕೋ ಅಪರೂಪವಾಗಿ ಮಲ್ಲಪ್ಪನವರು ಪ್ರತ್ಯಕ್ಷವಾಗುತ್ತಿದ್ದರು. ಮಟ್ಟಸವಾದ ಆಳು. ಪ್ರಮಾಣಬದ್ಧವಾದ ವ್ಯಕ್ತಿತ್ವ. ಆತ್ಮ ವಿಲಾಸಕ್ಕೆ ಒಳಗಾಗಿ ನಡೆಯುವ ವಾಲಾಟದ ನಡಿಗೆ. ಬಣ್ಣ ಕಪ್ಪಾದರೂ ಅದನ್ನೆಲ್ಲ ಮರೆಸಿಬಿಡುವ ಅವರ ನಡಿಗೆಯ ವೈಖರಿಯೇ ಹುಡುಗರಾದ ನಮ್ಮನ್ನು ಸೆಳೆದುಕೊಳ್ಳುತ್ತಿತ್ತು. ದಿನವೂ ಅದೇ ದಾರಿಯಲ್ಲಿ ಸೋತ ನಡಿಗೆಯ ಸಾಧಾರಣ ಜನರನ್ನೆ ನೋಡಿ ಸಾಕಾಗಿದ್ದ ನನಗೆ ನನ್ನಂತಹ ಎಳೆಯರಿಗೆ ಆ ವಾಲಾಟದ ಆಸಾಮಿಯ ವೈಶಿಷ್ಟ್ಯಪೂರ್ಣ ನಡಿಗೆ ಪ್ರೇಕ್ಷಣೀಯವಾಗಿತ್ತು. ಆ ಕಾಲಕ್ಕೆ ಬಿ.ಎ., ಮಾಡಿದ್ದು ; ಸರ್ಕಾರಿ ನೌಕರಿ ಹಿಡಿದದ್ದು ; ತನ್ನ ಪಾಲಿನ ಕರ್ತವ್ಯವನ್ನು ನಿರ್ವಂಚನೆಯಿಂದ ಜನರ ಸಲುವಾಗಿ ಮಾಡಬೇಕೆನ್ನುವ ಹಟ ಇವುಗಳಿಂದ ಬರುವ ಆತ್ಮವಿಶ್ವಾಸ ಎಲ್ಲವೂ ಅವರ ನಡಿಗೆಯಲ್ಲಿ ಏಕೀಕೃತವಾಗಿ ಸೂಸುತ್ತಿದ್ದುವು. ಪ್ರಮಾಣ ಬದ್ಧವಾದ ಶರೀರದ ಸಮ ತೂಕಕ್ಕೆ ಕಾರಣ ಅವರು ಆರಂಭದಿಂದಲೂ ವ್ಯಾಯಾಮ ಪಟುಗಳಾಗಿದ್ದದ್ದು ಎಂದು ನನಗೆ ಇತ್ತೀಚೆಗಷ್ಟೇ ಗೊತ್ತಾದ ಅಂಶ.

ಶಾಲೆಯ ಮುಖ ನೋಡಿ ಬರಬೇಕೆನ್ನುವ ಪ್ರೇರಣೆಯೇ ಅವರನ್ನು ಬಹಳ ತಡವಾಗಿ ಶಾಲೆ ಸೇರಲು ಕಾರಣವಾಯಿತು ಎನ್ನುವ ವಿಚಾರ ಅವರ ಬಾಯಿಂದ ಒಂದು ಸಭೆಯಲ್ಲಿ ಕೇಳಿ ನನಗೆ ಪರಮಾಶ್ಚರ್ಯವಾಗಿದೆ. ಪರಿವರ್ತನೆಯ ಗಳಿಗೆ ಯಾವ ವ್ಯಕ್ತಿಯಲ್ಲಿ ಯಾವಾಗ ಸಂಭವಿಸುವುದೋ ಹೇಳಲು ಬರುವಂತಿಲ್ಲ. ಅದುವರೆಗೂ ಅಕ್ಷರದ ಗಂಧವೇ ಇಲ್ಲದ ಹಳ್ಳಿ ಕುಟುಂಬವೊಂದರ ಈ ಹುಡುಗ ತಾಯಿಯನ್ನು ಕಾಡಿ ಬೇಡಿ ಪ್ರೈಮರಿ ಶಾಲೆಯನ್ನು ನೋಡಿಬರಲು ಹೋದವರು ಅದಕ್ಕೆ ಸೇರಿಬಿಟ್ಟರಂತೆ. ಆಗ ಅವರಿಗೆ ಸುಮಾರು ಎಂಟು ವರ್ಷವಿರಬಹುದು. ಆ ನಂತರ ಅವರ ಓದು ಹಳ್ಳಿಯ ಬಾಳಿನ ದಟ್ಟ ಬಡತನದ ನಡುವೆ ಮೊದಲಿಟ್ಟಿತಂತೆ. ತಮ್ಮ ಎರಡನೇ ವಯಸ್ಸಿಗೆ ತಂದೆಯನ್ನು ಕಳೆದುಕೊಂಡಿದ್ದರು. ಕಿತ್ತು ತಿನ್ನುವ ಬಡತನ, ಅಸಹಾಯಕ ಪರಿಸ್ಥಿತಿಯ ರೈತಾಪಿ ಜೀವನ ಇವುಗಳ ನಡುವೆ ಬಹು ಕಷ್ಟ ಕಾರ್ಪಣ್ಯಗಳಿಂದ ನೆರವೇರಿದ ವಿದ್ಯಾಭ್ಯಾಸ ಅವರದು. ಇಂಟರ್‌ಮೀಡಿಯೇಟ್ ಓದುವಾಗ ತಾಯಿಯೂ ಇಲ್ಲವಾದರು. ಆಗ 20 ವರ್ಷ ವಯಸ್ಸು. 8–10 ನೇ ವರ್ಷಕ್ಕೆ ಶಾಲೆಯ ಕಟ್ಟೆ ಹತ್ತಿದ ಅವರು ಏನೇ ಎಡರು ತೊಡರು ಬಂದರೂ 1933 ರ ಹೊತ್ತಿಗೆ ಪದವಿ ಪತ್ರ ಹಿಡಿದೇ ಮೈಸೂರು ವಿಶ್ವವಿದ್ಯಾಲಯದಿಂದ ಹೊರಬಿದ್ದರು. ನಮ್ಮ ಸುತ್ತಿಗೆ ಅವರೇ ಮೊದಲ ಪದವೀಧರರೆಂದು ಕಾಣಿಸುತ್ತದೆ. ಸರ್ಕಾರಿ ನೌಕರಿಗೆ ಸೇರಿದವರಲ್ಲಿ ಕೂಡ ಅವರಿಗೇ ಆದ್ಯತೆಯೆಂದು ಭಾವಿಸುತ್ತೇನೆ.

1944 ರ ಒಂದು ಮಧ್ಯಾಹ್ನ. ನಾನು ಶಾಲೆಗೆ ಹೋಗುವಾಗಲೋ ಬರುವಾಗಲೋ ಸರಿಯಾಗಿ ನೆನಪಿಲ್ಲ. ಅವರ ಅಕ್ಕನ ಮನೆ ಮುಂದೆ ಕಳ್ಳಂಬೆಳ್ಳದ ತಿಮ್ಮಯ್ಯನ ಮನೆ. ಆ ಮನೆಯ ಪಶ್ಚಿಮಕ್ಕೆ ತಿಮ್ಮಯ್ಯನದೇ ಒಂದು ನೆಲಾರಕ್ಕೆ ಬೆಳೆದು ಹರಡಿದ ಸಸಿ ಹುಣಿಸೆಮರ. ಅದರ ಬುಡ ಒರಗಿ ಕೂತು, ತಮ್ಮ ಮೊದಲ ಮಗುವನ್ನು ಎತ್ತಿ ತೊಡೆಯ ಮೇಲೆ ಮಲಗಿಸಿಕೊಂಡು ಏನೂ ಅರಿಯದ ತನ್ನ ಪ್ರತಿರೂಪವಾದ ಆ ಹಸುಗೂಸಿಗೆ ಇದು ನಮ್ಮ ಊರು ಮಗೂ, ಇದು ನಮ್ಮ ಊರು ಎಂದು ಉಪಾಧ್ಯಾಯರು ವಿದ್ಯಾರ್ಥಿಗೆ ಪಾಠ ಹೇಳಿಕೊಡುವಂತೆ ಒಂದೇ ಸಮನೆ ಒತ್ತಿ ಹೇಳುತ್ತಿದ್ದರು. ಆಗ ಬಹುಶಃ ಅದನ್ನು ಕೇಳುತ್ತಿದ್ದ. ಅಲ್ಲ ನೋಡುತ್ತಿದ್ದ. ಆ ಎಳೆಮಗುವಿನ ಸ್ಥಿತಿಯೇ ನನ್ನ ಸ್ಥಿತಿಯೂ ಕೂಡ. ಆದರೆ ಚಿಕ್ಕ ವಯಸ್ಸಿನಲ್ಲಿ ಕೇಳಿದ ಮಾತಾದ್ದರಿಂದ ಈಗಲೂ ಜ್ಞಾಪಕವಿದೆ. ಊರಿನ ಮೇಲಿನ ಅಭಿಮಾನದಿಂದ, ಬೆಳೆದ ನೆಲದ ಮೇಲಣ ಮಮತೆಯಿಂದ ಹುಟ್ಟಿಬಂದ ಮಾತುಗಳವು. "ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸಿ" ಎಂದು ಅವರು ಆಗಾಗ ಭಾಷಣಗಳ ನಡುವೆ ಹೇಳುವ ಸಂಸ್ಕೃತ ಶ್ಲೋಕದ ತುಣುಕು ಇದು

ನಮ್ಮ ಊರು ಮಗೂ ಇದು ನಮ್ಮ ಊರು (ಆದ್ದರಿಂದ ಎಲ್ಲ ಊರುಗಳಿಗಿಂತ ಹೆಚ್ಚಿನದು) ಅಸಮಾನವಾದುದು ಆಗಿ ಕನ್ನಡಕ್ಕೆ ಪರಿವರ್ತನೆಗೊಂಡು ಮಗನಿಗೂ ಈಗಿನಿಂದಲೇ ನೆಲದ ಅಭಿಮಾನ ಮೊಳಕೆಯೊಡೆಯಲಿ ಎಂದು ಹೇಳಿದುದಾಗಿತ್ತೋ ಏನೊ !

ಯಾರಿಗೆ ಅವರ ಊರು ಕೇರಿ ಹೇಗೊ ಏನೊ. ಆದರೆ ಮಲ್ಲಪ್ಪನವರಿಗಾದರೋ ಊರು ಅದರ ಅಂಗುಲಂಗುಲ ಜಾಗ ತೀರಿಸಲಾಗದ ಋಣವನ್ನು ಹೊರಿಸಿದ ಜನ್ಮ ಕೊಟ್ಟ ತಾಯಿಯಾಗಿಯೇ ಕಾಣಿಸಿಕೊಂಡಿದೆ.

1950–52 ರ ಸುಮಾರಿರಬಹುದು. ನಮ್ಮ ತಂದೆ ತೀರಿಕೊಂಡು ನಾನು ನಮ್ಮ ತಾಯಿ ನಮ್ಮ ಚಿಕ್ಕಪ್ಪ ಚಿಕ್ಕಮ್ಮನವರ ಆಸರೆಗೆ ಸೇರಿದ್ದೆವು. ಅಷ್ಟುಹೊತ್ತಿಗೆ ಮಲ್ಲಪ್ಪನವರು ಸೊಸೈಟಿ ಇನ್‌ಸ್ಪೆಕ್ಟರ್ ಆಗಿದ್ದವರು ರೆವಿನ್ಯೂ ಇಲಾಖೆಗೆ ಬಂದು ಹರಿಹರ, ಪಾವಗಡಗಳಲ್ಲಿ ಅಮಲ್ದಾರಿ ಮಾಡಿ ಬಹಳ ಹೆಸರುಗಳಿಸಿ ಮಧುಗಿರಿಗೆ ವರ್ಗವಾಗಿ ಬಂದಿದ್ದರು. ಅಲ್ಲಿಂತೂ ಅವರ ಕೆಲಸ. ಹೆಸರು ಮನೆಮಾತಾಗಿದ್ದುವು. ಹೀಗಿರುತ್ತ ನಮ್ಮ ಚಿಕ್ಕಪ್ಪನವರಿಗೆ ತಾವು ಮಾಡುತ್ತಿದ್ದ ಗಂಗಾಧರೇಶ್ವರ ದೇವರ ಗದ್ದೆಯನ್ನು ಭೋಗ್ಯಹಾಕಿಸಿಕೊಳ್ಳುವ ಪ್ರಮೇಯ ಬಿತ್ತು. ಅದಕ್ಕಾಗಿ 500/- ರೂಪಾಯಿಗಳು ಬೇಕಾಗಿದ್ದವು. ಮಲ್ಲಪ್ಪನವರನ್ನು ಕೇಳಿದರೆ ದೊರಕಬಹುದೆಂದು ಮಧುಗಿರಿಗೆ ಹೋದರು. ಎಷ್ಟೋ ದಶಕಗಳ ಮೇಲೆ ನಮ್ಮ ಚಿಕ್ಕಪ್ಪನವರೂ ಅವರೂ ಸೇರುತ್ತಿರುವುದು. ಆ ದಿನ ಅಲ್ಲೇ ಚಿಕ್ಕಪ್ಪನವರನ್ನು ಇರಿಸಿಕೊಂಡ ಮಲ್ಲಪ್ಪನವರು ಇಡೀ ರಾತ್ರಿಯೆಲ್ಲ ತಾವು ಹುಟ್ಟಿ ಬೆಳೆದ ನೆರೆಹೊರೆಯ ಗ್ರಾಮಗಳ ಎಲ್ಲ ಜನಾಂಗದವರ ಸ್ಥಿತಿಗತಿ ಜೀವನದ ವಿವರಗಳನ್ನು ನೆನಪಿಸಿಕೊಂಡು ಮೇಲಿಂದ ಮೇಲೆ ಕೇಳಿದರಂತೆ. ಯಾರನ್ನೂ ಮರೆಯದೆ ಎಲ್ಲರ ಯೋಗಕ್ಷೇಮವನ್ನೂ ಕೇಳಿ ತಿಳಿದುಕೊಂಡ ಮಲ್ಲಪ್ಪನವರ ಆಸ್ಥೆಯನ್ನು ಕುರಿತು ಚಿಕ್ಕಪ್ಪ ಅವರ ಹೆಂಡತಿಗೆ ವರದಿಯೊಪ್ಪಿಸುತ್ತಿದ್ದದ್ದನ್ನು ನಾನು ಕೇಳಿಸಿಕೊಂಡೆ. ಅಷ್ಟು ಹೊತ್ತಿಗಾಗಲೇ ನನಗೆ ಬುದ್ಧಿ. ಪರವಾಗಿಲ್ಲ ಈ ಮನುಷ್ಯ ಎನ್ನಿಸಿ ಅಂದಿನಿಂದ ಮಲ್ಲಪ್ಪನವರ ಬಗ್ಗೆ ನನಗೆ ಕುತೂಹಲವುಂಟಾಗತೊಡಗಿತು. ಆದರೆ ಅವರೊಡನೆ ಮಾತಾಡಿ ಬೆರೆತು ಹೋಗುವ ಅವಕಾಶ ಉಂಟಾಗಲೊಲ್ಲದು. ವಯಸ್ಸಿನ ಅಂತರ, ಅವರ ವಿದ್ಯಾಹಿರಿಮೆ, ಸ್ಥಾನ-ಮಾನದ ಹಿರಿಮೆ, ನಮ್ಮ ಮನೆತನಕ್ಕೂ ಅವರ ಮನೆತನಕ್ಕೂ ನಡುವೆ ಅಘಟಿತ ಘಟನೆಯೊಂದು ನಡೆದು ಹೋಗಿದ್ದ ಕಾರಣ ನಾನೂ ಅವರೂ ಸೇರಲೇ ಇಲ್ಲ.

1956 ರ ಹೊತ್ತಿಗೆ ಕಾಳಿದಾಸ ವಿದ್ಯಾವರ್ಧಕ ಸಂಘ ಅಸ್ತಿತ್ವಕ್ಕೆ ಬಂದಿತು. ಮಲ್ಲಪ್ಪನವರು ತುಮಕೂರಿನಲ್ಲೇ ಇರಲಿ ಮೈಸೂರಲ್ಲೇ ಇರಲಿ ಅದರ ನಿಯಂತ್ರಕ, ಚಾಲಕ, ಸರ್ವಾಂತರ್ಯಾಮಿ ಶಕ್ತಿಯಾಗಿ ಕೆಲಸಮಾಡತೊಡಗಿದರು. ಕಾಳಿದಾಸ ವಿದ್ಯಾರ್ಥಿನಿಲಯ ಪುರಾತ ಹಾಸ್ಟೆಲ್ ಕಟ್ಟಡದಲ್ಲಿ ಶುರುವಾಯಿತು. ಕರ್ನಾಟಕ ರಾಜ್ಯದ ಅರ್ಥ ಸಚಿವರಾದ ಶ್ರೀ ಟಿ. ಮರಿಯಪ್ಪನವರಿಂದ 1959 ರ ಆದಿಯಲ್ಲಿ ಕಾಳಿದಾಸ ವಿದ್ಯಾರ್ಥಿನಿಲಯದ ಕಟ್ಟಡದ ಶಂಕುಸ್ಥಾಪನೆ. ಆ ಸಮಾರಂಭದಲ್ಲಿ ಮಲ್ಲಪ್ಪನವರ ಸ್ವಾಗತ ಭಾಷಣ. ಮಜಭೂತಾದ ಅಚ್ಚುಕಟ್ಟಾದ ಹಳ್ಳಿಯ ನುಡಿಗಟ್ಟು ಬೆರೆತ ಮಾತುಗಾರಿಕೆ. ಮಲ್ಲಪ್ಪನವರ ಬಹು ಪಾಲು ಆದರ್ಶಗಳಿಗೆ ಸ್ಫೂರ್ತಿದಾಯಕರು ಶ್ರೀ ಟಿ. ಮರಿಯಪ್ಪನವರು. 1931–33 ರ ಹಿಂದಿನ ವಿದ್ಯಾರ್ಥಿದೆಸೆಯ ಪದವಿ ತರಗತಿಗಳ ದಿನಗಳನ್ನೆಲ್ಲ ಅಂದು ನೆನಪಿಸಿಕೊಂಡರು ಮಲ್ಲಪ್ಪ. ಮೈಸೂರಿನಲ್ಲಿ ಒಬ್ಬ ಯುವ ಪ್ರತಿಭಾವಂತ ಅಡ್ವೊಕೇಟರ ಸುತ್ತ ಹಮಾಮ್ ಕೋಂ ಜಾತಿಯ (ಈ ಪದ ಮೊಟ್ಟಮೊದಲು ಕೇಳಿದ್ದು ಆ ಸಭೆಯಲ್ಲೆ) ಎಲ್ಲ ಹಿಂದುಳಿದ ಬಡ ಯುವಕರು ನೆರೆಯುತ್ತಿದ್ದದ್ದು : ಆ ಯುವಕರಿಗೆ ಪ್ರಾಣಪ್ರಿಯರಾಗಿ ಅನ್ನ ವಸತಿ ವಿದ್ಯೆ ಯೋಗಕ್ಷೇಮಗಳ ಹೊಣೆ ಹೊತ್ತು ಕಷ್ಟಸುಖ ವಿಚಾರಿಸಿ. ಒಂದೇ ಸಮನಾಗಿ ಎಲ್ಲರನ್ನೂ ಕಂಡು ಆ ಅಡ್ವೊಕೇಟರು ನೋಡಿಕೊಳ್ಳುತ್ತಿದ್ದುದರ ಸೊಗಸು : ಅವರ ಮಾರ್ಗದರ್ಶನಗಳ ಫಲವಾಗಿ

ಮಲ್ಲಪ್ಪನವರ ಹೃದಯಾಂತರಾಳದಲ್ಲಿ ತಮ್ಮ ಊರಲ್ಲೊಂದು ಸಾರ್ವಜನಿಕ ವಿದ್ಯಾರ್ಥಿನಿಲಯ ಕಟ್ಟಿಸಬೇಕೆಂಬ ಹಂಬಲ ಮೂಡಿದ್ದು, ಈ ವಿಚಾರಗಳನ್ನು ಸಾಂಗೋಪಾಂಗವಾಗಿ ವಿವರಿಸಿದರು. ಹಿಂದುಳಿದವರ ಕಾಮಧೇನು ಕಲ್ಪವೃಕ್ಷವಾದ ಆ ಯುವಕ ಅಡ್ವೊಕೇಟರೇ ಇಂದಿನ ಸಮಾರಂಭದ ಮುಖ್ಯ ಅತಿಥಿಗಳಾದ ಟಿ. ಮರಿಯಪ್ಪನವರು ಎಂದು ಮಾತಿನಲ್ಲಿ ಒಂದಕ್ಕೊಂದಕ್ಕೆ ಚೆನ್ನಾಗಿ ಸಂಬಂಧ ಕಲ್ಪಿಸಿದರು. ಮರಿಯಪ್ಪನವರು ಚಿತ್ತಿದ ಬೀಜವೇ ಇಲ್ಲಿ ಕಾಳಿದಾಸ ವಿದ್ಯಾವರ್ಧಕ ಸಂಘವಾಗಿ ಕಟ್ಟಡವಾಗಿ ರೂಪ ತಾಳುತ್ತಿರುವುದನ್ನು ತಮ್ಮದೇ ಆದ ಮಾತುಗಾರಿಕೆಯಿಂದ ಬಣ್ಣಿಸಿದರು.

"ಈವಂಗೆ ದೇವಂಗೆ ಆವುದಂತರವಯ್ಯ
ಜಗದೊಳಗ ಈವನೇ ದೇವ ಸರ್ವಜ್ಞ" ಹೀಗೆ ಪ್ರಾರಂಭಿಸಿ 'ಎಂದುರೋ ಮಹಾನುಭಾವರು ಅಂದುರುಕು ವಂದನೆ' ಹೇಳಿದರು. ನಾನು ಪೇಟೆ ಮನುಷ್ಯ ಅಲ್ಲ ಬಿಡ್ರಿ, ಹಳ್ಳಿಹಳ್ಳಿಯೋನು. ಮಾತು ಬಲ್ಲವನಲ್ಲ ಎಂಬ ವಿನಯ ಬೇರೆ.

ಕಬಡ್‌ದಾರ್, ವಾರೆವಾ, ಶ್ಯಭಾಸ್, ಯಪ್ಪಯ್ಯ ಯಪ್ಪಯ್ಯ ಇಲ್ನೋಡು, ತಕಲೀ ಮಹಾತ್ಮ, ನತದೃಷ್ಟ ನೌಕರಿ ಮುಂತಾದ ಅವರ ಬೊಕ್ಕಸದ ಪ್ರಿಯವಾದ ನಾಣ್ಯಗಳೆಲ್ಲ ಅಂದು ಸ್ವಾಗತ ಭಾಷಣದಲ್ಲಿ ಪ್ರಯೋಗಗೊಂಡವು. ಮಲ್ಲಪ್ಪನವರ ಮಾತುಗಾರಿಕೆಗೆ ಮರುಳಾಗದ ಒಂದು ನರಪಿಳ್ಳೆಯೂ ಅಲ್ಲಿರಲಿಲ್ಲ. ಸಂಘದ ಸಂಕ್ಷಿಪ್ತ ವರದಿಯೋದುವ ಅಥವಾ ವಂದನಾರ್ಪಣೆ ಮಾಡುವ ಸರದಿ ನನ್ನದಾಗಿತ್ತು.

1964 ರಲ್ಲೊ 1965 ರಲ್ಲೊ ತುಮಕೂರಿನ ಯಾವುದೋ ಒಂದು ಸಮಾರಂಭಕ್ಕೆ ನಾನು ಹೋಗಿದ್ದೆ. ಅಷ್ಟು ಹೊತ್ತಿಗೆ ಚೈನಾ ಆಕ್ರಮಣ ನಡೆಸಿದ ಘಟನೆ ನಡೆದುಹೋಗಿತ್ತು. ಪೂರ್ವ ಪಶ್ಚಿಮ ಎರಡೂ ಕಡೆಗೆ ಹಬ್ಬಿ ನಿಂತ ಪಾಕಿಸ್ಥಾನದಲ್ಲಿ ಲಷ್ಕರಿ ಶಾಸನವಿದ್ದು ಅಯೂಬ ಖಾನರ ಆಳ್ವಿಕೆಯ ಕಾಲ. ಪಾಕೀಸ್ಥಾನವೂ ಭಾರತದ ಮೇಲೆ ಬೀಳುವ ಸ್ಫೋಟಕ ಪರಿಸ್ಥಿತಿಯಿತ್ತು. ಆಗ ಮಲ್ಲಪ್ಪನವರು ತಮ್ಮ ಮಾತಿನಲ್ಲಿ ದೇಶದ ಸದ್ಯದ ಸ್ಥಿತಿಯನ್ನು ತದ್ವತ್ತಾಗಿ ಹೇಳಿ ಒಂದು ಕಡೆ ಚೈನಾ ಇಂಡಿಯಾ ಭಾಯಿ ಭಾಯಿ ಭಾರತಮಾತೆ ಬೆನ್ನೊಳಗೆ ಚೂರಿ ಹಾಕನ್ನೆ. ಇನ್ನೊಂದ್ ಕಡೆ ಅಯೂಬ್ ಖಾನ್ 'ಮಿಲ್ಟ್ರಿ ಮೀಸೆ ತಿರುಗಿಸ್ತಾ ಯುದ್ಧಕ್ಕೆ ಕಾಲ್‌ಕೆರೀತಾ ಅವ್ನೆ. ಅಹಿಂಸೆಯ ಪರಮಮೂರ್ತಿ, ತಕಲೀ ಮಹಾತ್ಮ ತಂದುಕೊಟ್ಟ ಸ್ವಾತಂತ್ರ್ಯ ಗಂಡಾಂತರಕ್ಕೆ ಸಿಕ್ಕಿಬಿಟ್ಟೈತೆ. ನಮ್ಮ ಜನ, ಮಿಗಿಲಾಗಿ ನಮ್ಮ ಯುವಕರು ಸ್ವಾತಂತ್ರ್ಯ ರಕ್ಷಣೆಗೆ, ರಾಷ್ಟ್ರ ಕಟ್ಟೋಕೆ ಮುಂದೆ ಬರ್ಬೇಕು ಎಂದು ಅನನ್ಯವಾದ ರೀತಿಯಲ್ಲಿ ಕರೆಕೊಟ್ಟರು. ನಾಗರಿಕ ಭಾವನೆಗಳಿಗೆ ಕಾವ್ಯಾತ್ಮಕವಾದ ಹಳ್ಳಿಯ ಆಡುಮಾತಿನ ಮೂಲಕ ಹೊಸ ಜೀವ ತುಂಬಿ ತಮ್ಮದೇ ಆದ ರೀತಿಯಲ್ಲಿ ಅದನ್ನು ಅಭಿವ್ಯಕ್ತಗೊಳಿಸುವ ಕ್ರಮವೊಂದನ್ನು ಅವರು ರೂಢಿಸಿಕೊಂಡಿದ್ದಾರೆ. ಆದ್ದರಿಂದಲೇ ಅವರ ಭಾಷಣಗಳು ಪರಿಣಾಮದಲ್ಲಿ ಮುಂದಾಗುತ್ತವೆ.

ಮದುವೆ, ಸಾವು, ಅಂತ್ಯಸಂಸ್ಕಾರ, ಹಬ್ಬ ಮುಂತಾದ ಯಾವುದೇ ಘಟನೆಯಲ್ಲೂ ಬಂಧುಗಳೊಡನೆ ತಪ್ಪದೆ ಕೂಡಿಕೊಳ್ಳುವ ಸರಳ ಮನೋಧರ್ಮ ಅವರದು. ತಾನು ಕಲಿತವನು, ನಿವೃತ್ತ ಅಸಿಸ್ಟೆಂಟ್ ಕಮಿಷನರ್ ಎನ್ನುವ ಜಂಬವಿಲ್ಲದಿರುವಿಕೆಯೇ ಅವರ ದೊಡ್ಡ ಗುಣ.

ಯಾರಾದರೂ ಅವರೊಡನೆ ಜಗಳಮಾಡಿದವರಿದ್ದರೆ ಅದನ್ನು ಬಹು ಬೇಗ ಮರೆತುಬಿಡುತ್ತಾರೆ. ಪುನಃ ನಿಮ್ಮಿಂದ ಇಂತಹ ನೆರವಾಗಬೇಕೆಂದು ಹೋಗಿ ಕೇಳಿಕೊಂಡಲ್ಲಿ ಯಾವುದನ್ನೂ ಮನಸ್ಸಿನಲ್ಲಿಟ್ಟುಕೊಳ್ಳದೆ ಕೆಲಸ ಮಾಡಿಕೊಡುತ್ತಾರೆ. ಮನಸ್ಸನ್ನು ಕಹಿ ಮಾಡಿಕೊಳ್ಳದ ಸ್ವಭಾವವಿದೆ ಅವರಲ್ಲಿ : ಅವರು ಕ್ಷಮಾವಂತರು.

ಯಾವುದೇ ಜವಾಬ್ದಾರಿಯನ್ನು ಮಲ್ಲಪ್ಪನವರು ತೆಗೆದುಕೊಂಡರೂ ಅವರಷ್ಟು ಅಚ್ಚುಕಟ್ಟಾಗಿ ಅದನ್ನು ನಿರ್ವಹಿಸಿದವರು ಅಪರೂಪ. ಕೆಲಸದ ಬೆನ್ನುಹತ್ತಿ ಆಗುವವರೆಗೂ ಅದನ್ನು ಬಿಡುವುದೇ ಇಲ್ಲ. ಎ.ಕೆ. ಬೋರ್ಡಿಂಗ್ ಹೋಮಿನಲ್ಲಿ ಹಂಗಾಮಿ ಬಡ ಅಡಿಗೆಯವನಾಗಿ ನಿವೃತ್ತನಾದ ಕುಂಭಯ್ಯನಿಗೆ ಪೆನ್‌ಷನ್ ಮಂಜೂರು ಮಾಡಿಸುವುದಾಗಿರಬಹುದು; ಡಿಸ್ಟ್ರಿಕ್ಟ್‌ಬೋರ್ಡಿನ ಜವಾನ ಲೇಟ್ ಚಿಕ್ಕಹನುಮಯ್ಯನ ಹೆಂಡತಿ ಚೆನ್ನಮ್ಮನವರಿಗೆ ಬರಬೇಕಾದ ಗ್ರಾಟ್ಯೂಯಿಟಿ, ಪೆನ್‌ಷನ್ ವಿಚಾರವಾಗಿರಬಹುದು. ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಯಲ್ಲಿ ವಿಶೇಷ ಭೂವಿತರಣಾ ಅಸಿಸ್ಟೆಂಟ್ ಕಮಿಷನರ್ ಆಗಿ ಮಲ್ಲಪ್ಪನವರು ಒಂದು ಲಕ್ಷ ಎಕರೆಗೂ ಹೆಚ್ಚಿನ ಭೂಮಿಯನ್ನು ಆಯಾ ಸರ್ವೆ ನಂಬರುಗಳನ್ನು ತುಳಿದು ಬಡವರಿಗೆ ಹಂಚುತ್ತಿದ್ದ ಒಂದು ದಿನ. ಗುಬ್ಬಿ ತಾಲ್ಲೂಕಿನಲ್ಲಿ ಜಮೀನು ಹಂಚಿ ಇನ್ನೇನು ಕ್ಯಾಂಪ್ ಮುಗಿಸಿ ಹೊರಡುವ ಹೊತ್ತು, ಯಾರೋ ಬಡವ ಓಡುತ್ತಾ ಬಂದು ಇಂಥ ಜಮೀನು ಕೇಳಿ ಅರ್ಜಿ ಕೊಟ್ಟಿದ್ದೆ, ನಾನು ನಿರ್ಗತಿಕ, ಜಮೀನಿಲ್ಲದ ಬಡವ, ಜಮೀನು ಕೊಡಿಸಿ ಕೊಡಬೇಕೆಂದು ಕೈಮುಗಿದ. ಬಡವರ ಬಂಧುವಾದ ಸಾಹೇಬರು ಅರ್ಜಿ ಹುಡುಕಲು ಹೇಳಿದರು. ಅರ್ಜಿ ತಪಾಸಣೆಯಾಗಲಿಲ್ಲ, ಬಿಳಿಕಾಗದವೂ ಮುಗಿದು ಹೋಗಿತ್ತು. ಅಲ್ಲಿ ನೆಲದಲ್ಲೊಂದು ಸಿಗರೇಟು ಪೊಟ್ಟಣ ಬಿದ್ದಿತ್ತಂತೆ. ಅದನ್ನೇ ಎತ್ತಿಕೊಂಡು ಅದರ ಮೇಲೆ ಇಂಥವನಿಗೆ ಇಂಥ ಸರ್ವೆ ನಂಬರಿನಲ್ಲಿ ಇಷ್ಟು ಎಕರೆ ಮಂಜೂರು ಮಾಡಿದ್ದೇನೆ. ಇಂದೇ ಹಕ್ಕುಪತ್ರ ನನ್ನ ಸಮಕ್ಷಮ ಕೊಡುವುದು. ಹಿಂದಿನ ಕ್ರಮಾನ್ವಯ ರಿಕಾರ್ಡು ಮಾಡಿಕೊಳ್ಳುವುದು ಎಂದು ಬರೆದು ಹುಕುಂ ಹೊರಡಿಸಿದರಂತೆ. ಈ ವಿವರವನ್ನು ನನಗೆ ತುಮಕೂರು ಭೂ ನ್ಯಾಯಮಂಡಲಿಯ ಕಾರ್ಯದರ್ಶಿಗಳಾಗಿ ಕೆಲಸ ಮಾಡುತ್ತಿರುವ ಪ್ರಾಮಾಣಿಕ ವಿಶೇಷ ತಹಶೀಲ್ದಾರ್ ಶ್ರೀ ಎಸ್. ಸಿದ್ದಪ್ಪನವರು ಮೊನ್ನೆತಾನೆ ತಿಳಿಸಿದರು. ಇದನ್ನು ಕೇಳಿದಾಗ ನನಗಾದ ಆನಂದ ಧನ್ಯತೆ ಅಷ್ಟಿಷ್ಟಲ್ಲ.

ಗುರುಸ್ವಾಮಿ ಸಿರಿಯಪ್ಪ ಒಡೆಯರ್ ಅವರು ತುಂಬಾ ಉತ್ಸಾಹಶೀಲರು. ಮಲ್ಲಪ್ಪನವರ ಜೊತೆಯಲ್ಲಿ ವಿದ್ಯಾರ್ಥಿನಿಲಯದ ಕಟ್ಟಡದ ನಿರ್ಮಾಣ, ಸಂಘದ ಕೆಲಸ ಕಾರ್ಯಗಳಲ್ಲಿ ಹೆಗಲಿಗೆ ಹೆಗಲು ಕೊಟ್ಟು ಹಗಲಿರುಳೂ ದುಡಿದವರು. 20 ವರ್ಷಕ್ಕೂ ಮಿಗಿಲಾಗಿ ಸಂಘದ ಹೊಣೆಯನ್ನು ಕಾರ್ಯದರ್ಶಿಯಾಗಿ ಹೊತ್ತವರು. ಅದಾವ ಅಮೃತಗಳಿಗೆಯಲ್ಲಿ ಒಡೆಯರ್ ಅವರು ಯುನೈಟೆಡ್ ಹೈಸ್ಕೂಲ್ ಎನ್ನುವ ಹೆಸರಿನ ಶಾಲೆಯನ್ನು ಶಿರಾ ಗೇಟ್ ಬಳಿ ಸ್ಥಾಪಿಸಿದರೋ. ಅದು ಕಡೆಗೆ ಕಾಳಿದಾಸ ಹೈಸ್ಕೂಲ್ ಆಗಿ ಕಾಳಿದಾಸ ವಿದ್ಯಾವರ್ಧಕ ಸಂಘದ ವಶಕ್ಕೆ ಮಲ್ಲಪ್ಪನವರ ಕೈಗೆ ಬಂದಿತು. ಕೆ. ಸಿ. ರಾಮಯ್ಯನವರು ಮುಖ್ಯೋಪಾಧ್ಯಾಯರಾಗಿ ಬಂದರು. ಇಲ್ಲಿಗೆ ಬರುವ ಮೊದಲು ಅವರು ಕೊರಟಗೆರೆಯ ಪಾತಗಾನಹಳ್ಳಿಯಲ್ಲಿನ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾಗಿದ್ದರು. ಆ ಶಾಲೆಯ ವಾರ್ಷಿಕೋತ್ಸವಕ್ಕೆ ಅತಿಥಿಗಳಾಗಿ ಹೋದ ಮಲ್ಲಪ್ಪನವರ ದೃಷ್ಟಿ ರಾಮಯ್ಯನವರ ಮೇಲೆ ಬಿತ್ತು. ಅವರನ್ನು ಇಲ್ಲಿಗೆ ಬರುವಂತೆ ಆಹ್ವಾನಿಸಿದರು. ರಾಮಯ್ಯನವರು ನಮ್ಮ ನಿಲಯದ ಹಳೆಯ ವಿದ್ಯಾರ್ಥಿ. ಸಂಘದ ಅತೀವ ಅಭಿಮಾನಿ. ಶಾಲೆ ಕಟ್ಟುವ ವಿಚಾರವಾಗಿ ಹಲವಾರು ಕಲ್ಪನೆಯಿದ್ದವರು. ಕಷ್ಟಸಹಿಷ್ಣು. ನುರಿತ ಅಧ್ಯಾಪಕ. ಅತ್ತ ಹಳ್ಳಿಯೂ ಅಲ್ಲ, ಇತ್ತ ಪಟ್ಟಣವೂ ಅಲ್ಲ ಎನ್ನುವ ಪರಿಸರದ ಈ ಶಾಲೆಯ ಮುಖ್ಯೋಪಾಧ್ಯಾಯರಾಗಿ ಬಂದಮೇಲೆ ಕಾಳಿದಾಸ ಹೈಸ್ಕೂಲಿಗೆ ಶುಕ್ರದೆಸೆ ಪ್ರಾಪ್ತಿ. ದೆಹಲಿಯ ನೆಹರೂ ರಾಷ್ಟ್ರೀಯ ವಿಜ್ಞಾನ ಮೇಳಕ್ಕೆ ರಾಜ್ಯದ ಪ್ರತಿನಿಧಿಯಾಗಿ ಇದೊಂದೇ ಶಾಲೆ ಆಯ್ಕೆಯಾದದ್ದೂ ಉಂಟು. ಅಷ್ಟರಮಟ್ಟಿಗೆ ಇದರ ಯಶಸ್ಸು ಹಬ್ಬುವಂತಾಗಿದೆ. ಅದಕ್ಕೆ ಕಾರಣ ರಾಮಯ್ಯನವರ ಸಮಯ ಪ್ರಜ್ಞೆ, ಆಡಳಿತ ನಿರ್ವಹಣೆ, ಸಹ ಅಧ್ಯಾಪಕರಿಗೆ ಅವರು ಕೊಡುವ ಪ್ರೋತ್ಸಾಹ.

ಹೂವಿನಸರ ಎತ್ತಿದಂತೆ 22×18 ಅಡಿಯ ಹದಿನೆಂಟು ಕಾಂಕ್ರೀಟು ಕೊಠಡಿಗಳ ಕಟ್ಟಡವಾಗಿದೆ. ಫಲಿತಾಂಶ ಉತ್ತಮ ಮಟ್ಟದ್ದು. ಭಡತಿ ಪಡೆದು ಅದೀಗ ಕಿರಿಯ ಕಾಲೇಜು. ಅಲ್ಲಿ ಕಲಿಯುವ ಮಕ್ಕಳ

ಸಂಖ್ಯೆ 1500 ಕ್ಕೂ ಹೆಚ್ಚು. ಅಲ್ಲಿಂದ ಗುಬ್ಬಿ ತಾಲ್ಲೂಕಿನ ಬಿದರೆಯಲ್ಲೊಂದು ಹೈಸ್ಕೂಲು. ಅದಕ್ಕೆ ಅವರದೇ ಆದ ಕಟ್ಟಡ. ಫಲಿತಾಂಶ ಉತ್ತಮವಾಗಿದೆ. ಶಿರಾದಲ್ಲಿ ಹೈಸ್ಕೂಲು. ಅದಕ್ಕೆ ಪ್ರವೇಶ ಮಂಜೂರಾಗುತ್ತಿದೆ. ದ್ವಾರನಕುಂಟೆಯಲ್ಲಿ ಹೈಸ್ಕೂಲು. ಅದಕ್ಕೆ ಸ್ವಂತ ಕಟ್ಟಡ. ಹೀಗೆ ಮಲ್ಲಪ್ಪನವರು ಕೈಇಟ್ಟದ್ದೆಲ್ಲ ಅಪರಂಜಿಯಾಗಿ ಹಿಂದುಳಿದವರು ವಾಸಿಸುವ ಕಡೆ ಸಾಮಾನ್ಯ ಜನಕ್ಕೊಂದು ವರವಾಗಿ ಪಾಳುಬಿದ್ದ ನೆಲದ ಪುಣ್ಯವಾಗಿ ಸಂಸ್ಥೆಗಳು ಯಥೋಚಿತವಾಗಿ ಬೆಳೆಯುತ್ತಿರುವುದನ್ನು ನೋಡಬಹುದು.

ಇದನ್ನೆಲ್ಲ ಕಂಡು ಕೇಳಿದ ಬೇರೆ ಬೇರೆ ಹಿಂದುಳಿದ ಜಾತಿಗಳ ಮುಖಂಡರು ಕೂಡ ಮಲ್ಲಪ್ಪನವರಂತಹ ಕಾರ್ಯಶೀಲರು ಯಾವ ಜನಾಂಗದಲ್ಲೇ ಆಗಲಿ ವಿರಳ ಎನ್ನುತ್ತಾರೆ. ನನ್ನ ಮಾರ್ಕ್ಸಿಸ್ಟ್ ಗೆಳೆಯರಾದ ಕೆ. ಆರ್. ನಾಯಕ್‌ರವರು ಮಲ್ಲಪ್ಪನವರ ಬಗ್ಗೆ ಅತ್ಯಂತ ಮೆಚ್ಚಿಗೆಯ ಮಾತಾಡಿದ್ದನ್ನು ನಾನು ಕೇಳಿದ್ದೇನೆ. ಜಗತ್ತಿನಲ್ಲಿ ಯಾರ ಮೆಚ್ಚುಗೆಯನ್ನು ಬೇಕಾದರೂ ಸುಲಭವಾಗಿ ಗಿಟ್ಟಿಸಬಹುದು. ಆದರೆ ಮಾರ್ಕ್ಸ್‌ವಾದಿಗಳನ್ನು ಗೆಲ್ಲುವುದು ಬಲುಕಷ್ಟ.

ಮಲ್ಲಪ್ಪನವರು ಹಳೆಯ ತಲೆಮಾರಿನವರು. ರೆವಿನ್ಯೂ ಇಲಾಖೆಯಲ್ಲಿ ಅಮಲ್ದಾರ್, ಅಸಿಸ್ಟೆಂಟ್ ಕಮಿಷನರ್ ಆಗಿ ನಿವೃತ್ತಿ ಹೊಂದಿದವರು. ಯಾಜಮಾನ್ಯದ ಗತ್ತು ಜಾಸ್ತಿ. ಸಿಟ್ಟಿಗೆ ತಡೆಯುವವರಲ್ಲ. ಕೆಲಸದಲ್ಲಿ ಒಂದು ಸಣ್ಣ ತಪ್ಪು ಕಂಡುಬಂದರೂ ಕೆರಳಿಕೆಂಡವಾಗುತ್ತಾರೆ. ಛೀಮಾರಿಹಾಕಲು ಆರಂಭಿಸಿದರೆ ಆಡುತ್ತಲೆ ಇರುತ್ತಾರೆ. ಮಧುಗಿರಿಯಲ್ಲಿನ ಅವರ ಅಮಲ್ದಾರಿಯನ್ನು ಈಗಲೂ ಜನ ಹೊಗಳುತ್ತಾರೆ. ಅಮಲ್ದಾರರಾಗಿದ್ದಾಗ ಮಧುಗಿರಿಯಲ್ಲೊಮ್ಮೆ ಪ್ಲೇಗು ಬಂದಿತ್ತಂತೆ. ಆ ಕಾಲದಲ್ಲಿ ಪ್ಲೇಗು ಬಂದರೆ ಮೃತ್ಯುವಶವಾದಂತೆಯೇ, ಅದು ಅಂಟು ಜಾಡ್ಯ ಬೇರೆ. ಸತ್ತವರನ್ನು ಹೊರಲು ಕೂಡ ಜನ ಮುಂದೆ ಬರುತ್ತಿರಲಿಲ್ಲ. ಆಗ ಟಿ. ಎಸ್. ಶಿವಣ್ಣ ಅಲ್ಲಿ ಪುರಸಭಾಧ್ಯಕ್ಷರು. ಈ ಇಬ್ಬರೂ ಸೇರಿ ಯಾರೂ ದಿಕ್ಕಿರದ ಒಂದು ಹೆಣಕ್ಕೆ ಹೆಗಲು ಕೊಟ್ಟು ಶವ ಸಂಸ್ಕಾರ ಮಾಡಿ ಬಂದರಂತೆ. ಯಾರ ಮುಲಾಜಿಗೂ ಒಳಗಾಗುವವರೂ ಅಲ್ಲ. ಅಳ್ಳೆದೆಯವರಂತೂ ಅಲ್ಲವೇ ಅಲ್ಲ. ಬಾಯಿ ಸ್ವಲ್ಪ ಜಾಸ್ತಿಯಾಗಿದ್ದದ್ದರಿಂದ ಇವರಿಗೆ ಮಧುಗಿರಿಯಲ್ಲಿ ಕೂಗೋ ಮಲ್ಲಪ್ಪನವರೆಂಬ ಪ್ರತೀತಿ ಇತ್ತೆಂದು ಕೇಳಿದ್ದೇನೆ.

ತುಮಕೂರು ಜಿಲ್ಲಾ ಸಣ್ಣ ಕೈಗಾರಿಕೆಗಳ ಮುಖ್ಯಾಧಿಕಾರಿಗಳಾಗಿ ಅವರು ಕೆಲಸ ಮಾಡುತ್ತಿದ್ದಾಗ ಒಮ್ಮೆ ಹಾಸ್ಟಲ್ ಕಟ್ಟಡಕ್ಕೆ ಹಣ ವಸೂಲು ಮಾಡುವ ಕೆಲಸದ ಮೇಲೆ ಅವರ ಜೊತೆಯಲ್ಲಿ ಶಿರಾಕ್ಕೆ ಹೋಗುವ ಪ್ರಸಂಗ ಬಂದಿತು. ಇವರ ಟೂರ್ ಪ್ರೋಗ್ರಾಂ ಮೊದಲೇ ಅಲ್ಲಿನ ಸಂಬಂಧಪಟ್ಟ ಅಧಿಕಾರಿಗಳಿಗೆ ತಲುಪಿತ್ತು. ಶಿರಾ ತಲುಪುವ ಹೊತ್ತಿಗೆ ಮಲ್ಲಪ್ಪನವರ ಆರೋಗ್ಯ ಕೆಟ್ಟಿತು. ಅಜೀರ್ಣದಿಂದಾಗಿ ಹೊಟ್ಟೆನುಲಿ ಭೇದಿ. ಕೂಡುವಂತಿಲ್ಲ, ನಿಲ್ಲುವಂತಿಲ್ಲ ಹೀಗಾಯಿತು. ಕೈಗಾರಿಕಾಭಿವೃದ್ಧಿ ಇನ್‌ಸ್ಪೆಕ್ಟರ್ ಅವರನ್ನು ನೋಡಲು ತಡವಾಗಿ ಟಿ.ಬಿ.ಗೆ ಬಂದ. ಆತ ತಡಮಾಡಿ ಬಂದನೆಂದು ಇವರಿಗೆ ಸಿಟ್ಟು. ಬಿಸಿಲೋ ಎಂದು ಬಿಸಿಗು ಮಳೆ ಬೇರೆ. ಅವನನ್ನು ನೋಡಿದ್ದೆ ತಡ I say d'ont show your face for Haven's sake ಅ ಪ ಹ. ಚಳ್ಳವ ಹಾಕ್ಕೊಂಡು ಈಗ ಬಂದ್‌ಬಿಟ್ಟ ಎಂದು ಗ್ರಹಚಾರ ಬಿಡಿಸತೊಡಗಿದರು. ಆತ ಶೆಟ್ಟರ ಹುಡುಗನಂತೆ. ಪಾವಗಡದ ಕಡೆಯವನು. ಬೆಪ್ಪಾಗಿ ನಿಂತುಕೊಂಡ. ಕಡೆಗೆ ಬೈದು ಸಾಕಾಗಿ ನನ್ನನ್ನೂ ಅವನನ್ನೂ ಔಷಧಿ ತರಲು ಕೂಡೆ ಕೊಟ್ಟು ಕಳುಹಿಸಿದರು. ಅಮೇಲೆ ಎಲ್ಲವೂ ಸರಿಹೋಯಿತು ಅನ್ನಿ.

ಅನ್ನಲು ಶುರುವು ಮಾಡಿದರೆ ಅನ್ನುತ್ತಲೇ ಇರುತ್ತಾರೆ. ಇದು ಅವರ ಹುಟ್ಟು ಜಾಯಮಾನ. ಬಹುಶಃ ವಂಶಾವಳಿಯೋ ಏನೊ. ಯಾವಾಗಲೂ ಹಾಸ್ಟೆಲ್ಲಿನ ಬಗ್ಗೆ ಮಮತೆ, ವಿದ್ಯಾಸಂಸ್ಥೆಗಳ ಚಿಂತೆ. ಎಲೆ ರಾಮಯ್ಯ ಬಾರಯ್ಯ ಇಲ್ಲಿ. ಭಾಸ್ಕರ ಎಲ್ಲೋ ಪತ್ತೇನೇ ಇಲ್ಲ (ಈಗಿನ ಸಂಘದ ಕಾರ್ಯದರ್ಶಿಗಳಲ್ಲಿ ಒಬ್ಬರು). ದಾಸಪ್ಪನಂತೂ ಸರಿಯೇ ಸರಿ. ಐಯ್ಯೋರಂತು ಕೈಗೆ ಸಿಕ್ಕಲ್ಲ ಹೀಗೆ ಎಲ್ಲರನ್ನೂ ತರಾಟೆಗೆ

ತೆಗೆದುಕೊಂಡು ಆಗಬೇಕಾದ ಕೆಲಸದ ಕಡೆಗೆ ಚಾಲನೆ ಕೊಡುತ್ತಾರೆ. ಯಾರಿಗೂ ವಿನಾಯ್ತಿ ಇಲ್ಲ. ಸಂಘದ ಕೆಲಸ ಅಚ್ಚು ಮೆಚ್ಚಾಗಿ ಮಾಡುವವರನ್ನು ಕಂಡರೆ ಮಾತ್ರ ಅಕ್ಕರೆ. ಸರ್ಕಾರಿ ಗ್ರ್ಯಾಂಟು ಬರುವುದಕ್ಕೆ ಮುನ್ನ ಶಿರಾಗೇಟಿನ ಶಾಲೆಗೆ ಟಿ. ಹೆಚ್. ಹನುಮಂತರಾಯಪ್ಪನವರು ನೆರವು ಹಣ ಕೂಡಿಸಿ ಕೊಟ್ಟದ್ದನ್ನು ನೆನೆಯುತ್ತಾ ಅವರ ವಂಶ ತಣ್ಣಗಿರಲಿ ಎಂದು ಹೇಳಿದ್ದನ್ನು ಅವರ ಸುತ್ತ ಇರುವವರೆಲ್ಲ ಬಲ್ಲರು.

ಮಲ್ಲಪ್ಪನವರ ನೆನಪು ಬಹಳ ಗಟ್ಟಿಮುಟ್ಟಾದುದು. ನಾಡಿನ ಯಾವ ಮೂಲೆಯಲ್ಲಿ ಯಾರೇ ಪರಿಚಯವಾಗಿರಲಿ ಎಂದೂ ಮರೆಯತಕ್ಕವರಲ್ಲ. ಸಾವಿರಾರು ವಿಳಾಸಗಳನ್ನು ಪಟ್ಟಿ ನೋಡದೆಯೇ ಹೇಳಿ ಬರೆಯಿಸಿ ಅಂಚೆಗೆ ರವಾನಿಸಲು ಹೇಳುತ್ತಾರೆ. ಪ್ರೀತಿ ವಿಶ್ವಾಸ ದಾನದಿಂದ ಮನುಷ್ಯ ಶ್ರೀಮಂತನಾಗ ಬಹುದಾದರೆ ಮಲ್ಲಪ್ಪನವರು ಅವರ ಸುತ್ತ ಕೆಲಸ ಮಾಡುವವರಿಗೆ ಅದನ್ನು ಬೇಕಾದಷ್ಟು ದಾನಮಾಡಿದ್ದಾರೆ. ಮನೆಯನ್ನೇ ಮರೆತು ಅವರ ಒಡನೆ ಇರುವಷ್ಟು ಕಾಲವೂ ಅವರ ಹಾಗೆಯೇ ಸಂಘ ಸಂಸ್ಥೆಗಳ ಕೆಲಸ ಮಾಡಬೇಕೆನ್ನುವ ಪ್ರೇರಣೆ ನೀಡುವ ಚುಂಬಕ ಶಕ್ತಿ ಅವರಲ್ಲಿದೆ. ಒಂದು ಚಿಕ್ಕಾಸು ಸಂಘದ ಹಣ ದಸ್ತಾದರೂ ಸ್ವಲ್ಪವೂ ಸಹಿಸರು. ಗೆಲವು ಉತ್ಸಾಹಗಳ ಕಾರಂಜಿಯಾಗಿರುವ ಅವರನ್ನು ಎಪ್ಪತ್ತೇಳರ ಮುದುಕರೆನ್ನಲು ಮನಸ್ಸು ಒಪ್ಪದು.

ಬಸವಣ್ಣನವರು ನಾಳೆ ಬಪ್ಪುದು ನಮಗೀಗಲೆ ಬರಲಿ ಎಂದಿದ್ದಾರೆ. ಇವರೂ ಹಾಗೆಯೆ. ನಾಳೆ ಮಾಡಬೇಕಾದ್ದನ್ನು ಈಗಲೇ ಮಾಡಿ ಮುಗಿಸೋಣ ಎನ್ನುವರು. ಮುಂದಕ್ಕೆ ಹಾಕುವ ಪ್ರಶ್ನೆಯೇ ಇಲ್ಲ. ನಾಳೆ ಎಂದದ್ದು ಹಾಳು ಎಂದು ನಮ್ಮವರು ಗಾದೆಯನ್ನೇ ಕಟ್ಟಿಲ್ಲವೆ ?

ಅವರಿಗೆ ಏಳು ಮಕ್ಕಳಿವೆ. ಮೂರು ಗಂಡು, ನಾಲ್ಕು ಹೆಣ್ಣು. ಅವರ ಕುಟುಂಬ ರಂಗಮ್ಮನವರು ಮಲ್ಲಪ್ಪನವರಿಗಿಂತ ನೋಡಲು ಬಣ್ಣದಲ್ಲಿ ಮೇಲು ಎನ್ನಬೇಕು. ಆದರೆ ಆ ಏಳು ಮಕ್ಕಳ ಮುಖ ಕೆನ್ನೆ ಶರೀರದ ಎಲ್ಲೆಡೆಯೂ ಮಲ್ಲಪ್ಪನವರ ಚಹರೆಯದೇ ಮೇಲುಗೈ. ಅಲ್ಲಿಯೂ ಅವರ ಘಟವೇ ಗೆದ್ದಿದೆ.

1984 ರ ಫೆಬ್ರುವರಿ 7–8 ನನ್ನ ಎರಡನೇ ಮಗಳ ಮದುವೆಯಿತ್ತು. ಬೆಂಗಳೂರಿನ ಜೀವನ್ ಭೀಮಾನಗರ್‌ನಲ್ಲಿ ನಮ್ಮ ಅಣ್ಣನ ಮೂರನೆ ಮಗಳು ಭಾಗ್ಯಮ್ಮ ಅವರ ಯಜಮಾನರು ಚಿಕ್ಕಣ್ಣ ಇದ್ದರು, ಹೇಳಿಬರಲು ಹೋಗಿದ್ದೆ. ಅಲ್ಲೇ ಪಕ್ಕದಲ್ಲಿ ಮಲ್ಲಪ್ಪನವರ ಮೂರನೆ ಮಗ ಕುಮಾರ್ ಇರುವುದೂ ಆತನ ಮನೆಯಲ್ಲಿ ಅವರ ತಾಯಿ ಇರುವುದೂ ತಿಳಿಯಿತು. ರಂಗಮ್ಮನವರ ಆರೋಗ್ಯ ಈಗ್ಗೆ ಎರಡು ವರ್ಷದಿಂದ ತೀರ ಕೆಟ್ಟಿರುವುದರಿಂದ ವೈದ್ಯಕೀಯ ಸೌಖರ್ಯಕ್ಕಾಗಿ ಅಲ್ಲಿದ್ದರು. ಇಷ್ಟು ದೂರ ಬಂದು ಅವರನ್ನು ನೋಡಿ ಹೋಗೋಣವೆಂದು ಅಲ್ಲಿಗೆ ಹೋದೆ. ಆಗ ರಾತ್ರಿ 9 ರ ಸಮಯ. ಕುಮಾರ್ ಆಗತಾನೆ ತಾಯಿಯನ್ನು ನೋಡಲು ಬಂದಿದ್ದ ಹಿರಿಯಣ್ಣ ನಂಜರಾಜರನ್ನು ಕಳಿಸಿ ಬರಲು ಆಚೆ ಹೋಗಿದ್ದರು. ರಂಗಮ್ಮನವರ ಆರೋಗ್ಯ ವಿಚಾರಿಸಿ ಅವರ ಸೊಸೆ ಕೊಟ್ಟ (ಕುಮಾರ್ ಹೆಂಡತಿ) ಹಣ್ಣು ತಿಂದು ಹಾಲು ಕುಡಿಯುವ ಹೊತ್ತಿಗೆ ಕುಮಾರ್ ಬಂದರು.

ಲೋಕಾಭಿರಾಮವಾಗಿ ಮಾತಾಡುತ್ತ ಕಡೆಗೆ ಅವರ ತಂದೆಯವರ ವಿಷಯಕ್ಕೆ ಮಾತು ಬಂದಿತು. ನೋಡಿ ನಮ್ಮ ತಾಯಿಗೆ ಆರೋಗ್ಯವಿಲ್ಲ. ತುಮಕೂರಿನಲ್ಲಿ ನಮ್ಮ ತಂದೆಯವರನ್ನು ಬಿಟ್ಟರೆ ಅವರನ್ನು ನೋಡಿಕೊಳ್ಳಲು ಯಾರೂ ಇಲ್ಲ. ಹೆಣ್ಣುಮಕ್ಕಳು ಮದುವೆಯಾಗಿ ಹೋಗಿವೆ. ಗಂಡುಮಕ್ಕಳೆಲ್ಲ ಅವರ ಜೀವನಾರ್ಥವಾಗಿ ಬೇರೆ ಬೇರೆಡೆ ಉದ್ಯೋಗದಲ್ಲಿದ್ದೇವೆ. ಇಲ್ಲಿ ಬಂದು ಸುಖವಾಗಿ ಇರಿ ಎಂದರೆ ಕೇಳುವು ದಿಲ್ಲ. ಹಾಸ್ಟಲ್ಲು, ಸ್ಕೂಲು, ಸಂಘ ಎಂದು ಅಲ್ಲಿ ಒಬ್ಬರೇ ಇದ್ದು ಬಿಡುತ್ತಾರೆ. ಈ ಇಳಿವಯಸ್ಸಿನಲ್ಲಿ ಇದೇನು ವಿಚಿತ್ರ ನೋಡಿ. ನಮ್ಮ ತಂದೆ ಮದುವೆಯಾದದ್ದು ನಮ್ಮಮ್ಮನನ್ನೋ ಈ ಕಾಳಿದಾಸ ವಿದ್ಯಾವರ್ಧಕ

ಸಂಘವನ್ನೋ? ಗೊತ್ತಾಗುವುದಿಲ್ಲ ಎಂದು ನೊಂದು ನುಡಿದರು. ಮಲ್ಲಪ್ಪನವರಿಗೂ ತುಮಕೂರಿನ ಬಿ.ಹೆಚ್ ರಸ್ತೆಯಲ್ಲಿರುವ ಕಾಳಿದಾಸ ವಿದ್ಯಾವರ್ಧಕ ಸಂಘಕ್ಕೂ ಇಂಥ ಒಂದು ಅವಿನಾ ಸಂಬಂಧವಿರುವುದಂತೂ ಸುಸ್ಪಷ್ಟ.

ಈ ವಿಷಯ ಮಲ್ಲಪ್ಪನವರಲ್ಲಿ ಪ್ರಸ್ತಾಪಿಸಿದರೆ ಓಹೋ ಆಗಲೇ ನನಗೆ ಹೇಳುವಂತಾವನೆ ಇವನು ಎಂದು ವಿಜೃಂಭಿಸಲೂ ಬಹುದು. ಅವರ ದಾಷ್ಟಿಕತನ ಇಂಥಾದ್ದು. ತಮ್ಮ ನಿಜದ ನೇರಕ್ಕೆ ನಡೆದಾರೆ? ವಿನಾ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳು ಹೇಳಿದರೂ ಕೇಳುವವರಲ್ಲ.

ಅವರ ಕುಟುಂಬದ ಆರೋಗ್ಯ ಕೆಟ್ಟಮೇಲೆ ನಾನು ಅವರೂ ಇಬ್ಬರೇ ಇದ್ದಾಗ ಈ ಇಳಿವಯಸ್ಸಿನಲ್ಲಿ ಹಿಂತಿರುಗಿ ನಿಮ್ಮ ಜೀವನವನ್ನೆಲ್ಲಾ ನೋಡಿದಾಗ ಏನನ್ನಿಸುತ್ತದೆ? ಎಂದು ಒಂದುಸಲ ಕೇಳಿದೆ.

ಅನ್ನಿಸೋದೇತರ್ದು ಮೂರು ಜನ ಮಕ್ಕಳಲ್ಲಿ ಒಬ್ಬ ಇಂಜಿನಿಯರ್, ಒಬ್ಬ ಡಾಕ್ಟರ್. ಇನ್ನೊಬ್ಬ ಸೀನಿಯರ್ ಅಸಿಸ್ಟೆಂಟ್ ಡೈರೆಕ್ಟರ್ ಹೀಗೆ ಮೂರು ಜನ ಯುವಕರನ್ನು ದೇಶಕ್ಕೆ ಕೊಟ್ಟಿದ್ದೇನೆ. ಹೆಣ್ಣು ಮಕ್ಕಳೆಲ್ಲ ಅವರವರ ಗಂಡನಮನೆಯಲ್ಲಿ ಚೆನ್ನಾಗಿದ್ದಾರೆ. ಯಾವ ಕಷ್ಟಕಲೆ ನನ್ನ ಬದುಕಿನಲ್ಲಿ ಇಲ್ಲ. ನನ್ನ ಹೆಂಡ್ತಿ ಆರೋಗ್ಯ ಈ ರೀತಿ ಆಗಬಾರ್ದಾಗಿತ್ತು. ಆದ್ರೇನು ಮಾಡುವುದು, ಬಂದು ಬಿಟ್ಟೈತೆ. ಅನುಭವಿಸ್ಬೇಕು. ಅನುಭವಿಸೋದು. ಆದ್ರೆ ಚಿಕ್ಕೀರಪ್ಪ ಇನ್ನೊಂದ್ ಜೀವ ಪಕ್ಕದಾಗೇ ನೋಯೋದನ್ನು ನೋಡೋಕಾಗಾಕಿಲ್ಲ ಕಣಯ್ಯ ಎಂದು ವ್ಯಸನಪಟ್ಟರು.

ನಮ್ಮವರೇ ಆದ ನಿವೃತ್ತ ಅಸಿಸ್ಟೆಂಟ್ ಕಮೀಷನರ್ ಒಬ್ಬರಿಗೂ ಮಲ್ಲಿಪ್ಪನವರಿಗೂ ವಿದ್ಯಾರ್ಥಿ ದೆಸೆಯಿಂದಲೂ ಅಷ್ಟಕ್ಕಷ್ಟೆ. ಆ ನಮ್ಮವರಿಗೆ ನಮ್ಮ ಸಂಘದ ಅಧ್ಯಕ್ಷರಾಗಬೇಕೆನ್ನುವ ಆಸೆ. ಆದರೆ ಶ್ರಮಿಸಿ ಜನ ಒಲಿಸಿಕೊಳ್ಳುವುದು ಗೊತ್ತಿಲ್ಲ. ನಾನೂ ನಿವೃತ್ತ ಅಸಿಸ್ಟೆಂಟ್ ಕಮಿಷನರ್, ಮಲ್ಲಿಪ್ಪನವರೂ ನಿವೃತ್ತ ಅಸಿಸ್ಟೆಂಟ್ ಕಮಿಷನರ್ ಇಬ್ಬರೂ ಸಮ ಎಂದುಕೊಂಡರೇನೋ. ಸರಿ. ಒಂದಿಷ್ಟು ಆಕ್ಷೇಪಣೆಗಳನ್ನು ಅಚ್ಚುಮಾಡಿಸಿ ಹಂಚಿಬಿಟ್ಟರೆ ತಾನು ಸಂಘದ ಗಾದಿ ಏರಬಹುದೆಂದುಕೊಂಡರೆಂದು ಕಾಣಿಸುತ್ತದೆ. ಮಲ್ಲಪ್ಪನವರು ಕಾಳಿದಾಸ ವಿದ್ಯಾವರ್ಧಕ ಸಂಘದಿಂದ ದುಡ್ಡು ತಿಂದವರೆ, ಮಗನಿಗೆ ಕೆಲಸ ಕೊಡಿಸಲು ಸಂಘವನ್ನು ಬಳಸಿಕೊಂಡವರೆ ಒಟ್ಟಾರೆ ಜನಾಂಗಕ್ಕೆ ಇವರಿಂದ ಅನ್ಯಾಯವಾಗಿದೆ ಎಂದು ದೂರಿ ಪ್ರಿಂಟು ಮಾಡಿಸಿ ರಾಜ್ಯದ ಶಾಸಕರು, ಮಂತ್ರಿಗಳು, ಮುಖ್ಯ ಮಂತ್ರಿಗಳು. ಜನಾಂಗದ ಮುಖಂಡರಿಗೆಲ್ಲ ಅಂಚೆ ಮೂಲಕ ರವಾನೆ ಮಾಡಿದ್ದರು. ಸುಳ್ಳನ್ನು ಅಚ್ಚುಹಾಕಿಸಿ ಕೋಲಾಹಲವನ್ನೆ ಎಬ್ಬಿಸಿದರು. ಕೂಡಲೇ ಸಂಘದ ಎಲ್ಲ ಸದಸ್ಯರೂ ಒಮ್ಮುಖವಾಗಿ ಪ್ರಿಂಟುಮಾಡಿಸಿ ಹಂಚಿದ ಆ ಮಹನೀಯರನ್ನು ಬರಹೇಳಿ ಅವರು ಎತ್ತಿದ ಆಕ್ಷೇಪಣೆಗಳನ್ನು ಒಂದೊಂದಾಗಿ ಸಾಧಿಸಿ ತೋರಿಸಲು ಕೇಳಿದೆವು. ಆ ನಿವೃತ್ತರು ಒಂದೇ ಒಂದು ಆಕ್ಷೇಪಣೆಯನ್ನೂ ನಿಜವೆಂದು ಉತ್ತರಿಸಲು ಸಾಧ್ಯವಾಗಲಿಲ್ಲ. ತುಂಬಿದ ಸಭೆಯಲ್ಲಿ ಸಂಘದ ಕಟ್ಟಡದಲ್ಲಿ ಜನ ಅವರನ್ನು ತರಾಟೆಗೆ ತೆಗೆದುಕೊಳ್ಳಲು ಜಳಜಳನೆ ಬೆವೆತುಹೋಗಬೇಕಾಯಿತು. ಇಂಥ ಹೊತ್ತಿನಲ್ಲಿಯೇ ಆಗಲಿ ಇನ್ನಿತರೆ ಸಂದರ್ಭಗಳಲ್ಲಿಯೇ ಆಗಲಿ ಸಲ್ಲದವರು ದೂರಿದಾಗಲೇ ಆಗಲಿ ಮಲ್ಲಪ್ಪನವರು ವಿಚಲಿತರಾದದ್ದು ಕಾಣೆ. ಎಲ್ಲಕ್ಕೂ ಧೀರರಾಗಿ ನಿಂತು ಉತ್ತರ ಕೊಡುವುದೇ ಅವರಿಗೆ ಒಪ್ಪು.

ಬೆಳಗಿನ ಹೊತ್ತು ವಾಯು ವಿಹಾರಕ್ಕೆ ಹೋಗುತ್ತಿದ್ದಾಗ ರಿಕ್ಷಾ ಪುಟಾರಿ ಒಂದು ಸಾರ್ವಜನಿಕ ನಲ್ಲಿಯ ಕಂಬಕ್ಕೆ ಹೊಡೆದು ಇವರ ಮೇಲೆ ಬಿದ್ದು ಕಾಲಿನ, ಸೊಂಟದ ಮೂಳೆಗೆ ಈಗ್ಗೆ 4–5 ವರ್ಷದ ಹಿಂದೆ ಜಖಂ ಆಯಿತು. ಆಗಲೂ ಜಗ್ಗದವರು, ಮಧುಮೇಹ ಖಾಯಿಲೆಗೂ ಜಗ್ಗದವರು. ತಮ್ಮ ಪತ್ನಿಯು ಕ್ಯಾನ್ಸರ್ ಬೇನೆಯಿಂದ ಬೇಯುವುದನ್ನು ನೋಡಿ ತುಂಬು ಜೀವನದ ಎಪ್ಪತ್ತೇಳರಲ್ಲಿ ಸ್ವಲ್ಪ ಕುಗ್ಗಿದಂತೆ ಕಾಣುವುದು ಸಹಜವೇ ಆಗಿದೆ.

ಸರ್ಕಾರಿ ಅಧಿಕಾರಿಯಾಗಿ ನಾನಾ ಹುದ್ದೆಗಳಲ್ಲಿ ವಿಶೇಷ ತರದ ಜವಾಬ್ದಾರಿಯನ್ನು ಅವರು ನಿರ್ವಹಿಸಿದ್ದಾರೆ. ಅವರು ಮನಸ್ಸು ಮಾಡಿದ್ದರೆ ನಮ್ಮ ರಾಜಕಾರಣಿಗಳಂತೆ, ದೇಶದ ಭ್ರಷ್ಟ ಇತರೆ ಅಧಿಕಾರಿಗಳಂತೆ ಲಕ್ಷಗಟ್ಟಲೆ ಹಣ ಕೂಡಿಹಾಕಿಕೊಳ್ಳಬಹುದಾಗಿತ್ತು. ಎಂದೂ ಅವರು ಹಣದ ಆಮಿಷಕ್ಕೆ ಒಳಗಾಗಲಿಲ್ಲ. ಕೈಯಿ, ಬಾಯಿ, ಕಚ್ಚೆಗಳನ್ನು ಹರಕು ಮಾಡಿಕೊಳ್ಳಲಿಲ್ಲ. ಆದ್ದರಿಂದಲೇ ಅವರಲ್ಲಿ ಅಸಾಧಾರಣವಾದ ನೈತಿಕ ಕೆಚ್ಚು ಉಳಿದಿದೆ. ಜನರಲ್ಲಿಯೂ ಸರ್ಕಾರದಲ್ಲಿಯೂ ಹೊಡೆದಾಡಿ ಆಗಬೇಕಾದ್ದನ್ನು ಮಾಡಿಸಿಕೊಂಡು ಬರಲು ನೆರವು ಕೊಟ್ಟಿದೆ.

ನಾನೂ ಅವರೂ ಸಂಘದ ಯಾವುದೋ ಕೆಲಸದ ನಿಮಿತ್ತ ತುಮಕೂರು ಜಿಲ್ಲಾ ಕಛೇರಿ ಸಮೀಪದಲ್ಲಿ ಹೋಗುತ್ತಿದ್ದಾಗ ಅವರ ಎರಡನೇ ಮಗ ಡಾ॥ ಶಂಕರ್ ಬಸ್ ಅಪಘಾತದಲ್ಲಿ ಪೆಟ್ಟಾಗಿ ತುಮಕೂರು ಜನರಲ್ ಆಸ್ಪತ್ರೆಯಲ್ಲಿ ಇರುವುದು ಗೊತ್ತಾಯಿತು. ಆಗ ತಾನೆ ಆತ ಎಂ.ಬಿ.ಬಿ.ಎಸ್. ಮುಗಿಸಿ ಮಧುಗಿರಿಯ ಆಸ್ಪತ್ರೆಯಲ್ಲೋ, ಮಿಡಿಗೇಶಿ ಹೆಲ್ತ್ ಸೆಂಟರ್‌ನಲ್ಲೋ ಹೊಸದಾಗಿ ನೇಮಕಗೊಂಡಿದ್ದರು. ಸಂಚಾರ ಮಾಡುವಾಗ ರಾತ್ರಿ ಹೊತ್ತಿನಲ್ಲಿ ಅಪಘಾತ ಸಂಭವಿಸಿತ್ತು.

ಗಾಬರಿಯಿಂದ ಆಸ್ಪತ್ರೆಗೆ ಓಡಿದೆವು. ಬಹಳಕಡೆ ಸಣ್ಣ ಹೊಲಿಗೆ ಹಾಕಿದ್ದರು. ಅಲ್ಲಲ್ಲೇ ಮೂಗೇಟುಗಳು. ಜೀವಾಪಾಯವೇನೂ ಇರಲಿಲ್ಲ. ಎಲ್ಲಿ ಘಟನೆ ನಡೆಯಿತೆಂದು ಮಗನನ್ನು ಕೇಳಿ ಮಲ್ಲಪ್ಪನವರು ತಿಳಿದುಕೊಂಡರು. ಮಧುಗಿರಿ ಪಾವಗಡ ತಾಲ್ಲೂಕುಗಳು ಅವರಿಗೆ ಚಿರಪರಿಚಿತ ಆತ್ಮೀಯ ಭಾಗಗಳು. ಅವರ ನಡುಹರೆಯದ ನಿಸ್ಪೃಹ ಸೇವೆಯನ್ನು ಪೂರ್ಣ ಪ್ರಮಾಣದಲ್ಲಿ ಪಡೆದುಕೊಂಡ ನಮ್ಮ ಜಿಲ್ಲೆಯ ಹಿಂದುಳಿದ ತಾಲ್ಲೂಕುಗಳು. ಸ್ಥಳಕ್ಕೆ ಅದೇ ಬೇಕೆಂತ ಹೋಗಿ ನೋಡಿಬಂದ ಅವರು ತಮ್ಮ ಮಗ ಆ ದುರ್ಘರ ಘಟನೆಯಿಂದ ಪಾರಾದದ್ದು ತಮ್ಮ ತಂದೆ ಮಾಡಿದ ಪುಣ್ಯದಿಂದಾಗಿಯೇ ಹೊರತು ಮಿಕ್ಕ ಯಾವುದರಿಂದಲೂ ಅಲ್ಲ ಎಂದು ನನ್ನಲ್ಲಿ ಖಡಾಖಂಡಿತವಾಗಿ ಹೇಳಿದರು. ಯಾವುದಾದರೂ ಎತ್ತು ಓಸಗಲಿನಲ್ಲಿ ಭರ್ತಿಗಾಡಿಯಲ್ಲಿ ಸಿಗೆ ಹಾಕಿಕೊಂಡು ಕಣ್ಣು ಹಾಕಿ ಚಂಡಿ ಹೂಡಿದರೆ ಅವುಗಳ ಜೀವ ತೆಗೆಯಬೇಡಿರೆಂದು ಇವರ ತಂದೆ ಸೋತ ಎತ್ತುಗಳನ್ನು ಬಿಡಿಸಿ ಮನೆಯಲ್ಲಿದ್ದ ತಮ್ಮ ಎತ್ತು ತರಿಸಿ ಗಾಡಿ ಆಚೆಗೆ ಬಿಟ್ಟುಕೊಡುತ್ತಿದ್ದರಂತೆ. ತಂದೆಯನ್ನೇ ಕಾಣದ ಇವರು ಹಿಂದಿನದನ್ನೆಲ್ಲ ನೆನಪುಮಾಡಿಕೊಂಡರು. ತಾಯಿಯಿಂದ ಕೇಳಿದ ತಂದೆಯ ಗುಣಗಾನ ಮಾಡಿದ್ದು ಕೇಳಿ ನಾನೂ ಸಂತಸಪಟ್ಟೆ.

ಒಮ್ಮೆ ನನಗೆ ಕೇವಲ ವಿಶ್ವಾಸವಿರುವ ಕಾಲೇಜು ಪ್ರೊಫೆಸರೊಬ್ಬರಲ್ಲಿ ಮಾತಾಡುತ್ತಿದ್ದಾಗ ಒಬ್ಬ ಮಠಾಧೀಶರು ಹೆಣ್ಣಿನ ಸಂಪರ್ಕ ಮಾಡಿಲ್ಲದ್ದನ್ನು ಒಂದು ಗುಣವೆಂಬಂತೆ ನಾನು ಪ್ರಸ್ತಾಪಿಸುತ್ತಿದ್ದೆ. "ಅದೇನು ಮಹಾ ಅಂತ ಕೊಂಡಾಡ್ತೀರಿ ಬಿಡರಿ. ನಿಮ್ಮ ಮಲ್ಲಪ್ಪನವರು, ಜಿ. ರಾಮಚಂದ್ರಾಚಾರ್ ಅವರು ಹೆಣ್ಣಿನ ವಿಷಯದಿಂದ ಹಿಡಿದು ಹಣಕಾಸು ವಿಷಯದವರೆಗೆ ಮಠಾಧಿಪತಿಗಳಿಗಿಂತ ಉತ್ತಮರಲ್ಲವೆ ಎಂದು ಸವಾಲು ಹಾಕಿದರು." ನನ್ನ ಬಾಯಿ ಕಟ್ಟಿ ಮಠಾಧೀಶರನ್ನು ಸಮರ್ಥಿಸುವುದನ್ನು ಅಲ್ಲಿಗೆ ಬಿಟ್ಟುಬಿಟ್ಟೆ.

ಯಾವುದೋ ಕೆಲಸದ ನಿಮಿತ್ತ ಬೆಂಗಳೂರಿನ ನ್ಯೂ ಪಬ್ಲಿಕ್ ಆಫೀಸಿನಲ್ಲಿ ಅಡೀಷನಲ್ ಡೈರೆಕ್ಟರ್ ಕೆ. ಮಲ್ಲಪ್ಪನವರ ಕೊಠಡಿಗೆ ನಾನೂ ಕೆ. ಸಿ. ರಾಮಯ್ಯನವರೂ ಹೋಗಿದ್ದೆವು. ಆಗ ಮಾತು ಎನ್. ಮಲ್ಲಪ್ಪನವರ ಕಡೆಗೆ ಹೊರಳಿತು. ಕೆ. ಮಲ್ಲಪ್ಪನವರು ನಮ್ಮವರು ನಡೆಸುವ ಹಾಸ್ಟೆಲ್ಲು, ಶಾಲಾ ಕಾಲೇಜುಗಳನ್ನು ರಾಜ್ಯದಲ್ಲಿ ನೋಡಿದ್ದೇನೆ. ಬೇರೆಕಡೆ ಎಲ್ಲಿಯೂ ನೆಟ್ಟಗೆ ನಡೆಯುತ್ತಿಲ್ಲ. ಈ ಮಲ್ಲಪ್ಪ ಕೈ ಇಟ್ಟವು ಚೆನ್ನಾಗಿ ನಡೆಯುತ್ತಿವೆ. ಎಲ್ಲ ರೀತಿಯಿಂದಲೂ ನನಗೆ ತೃಪ್ತಿಯಾಗಿದೆ ಎಂದರು. ಇದನ್ನು

ಕೇಳಿದ ನಮಗೆ ಬೇಕಾದವರು ಬೆನ್ನು ತಟ್ಟಿದಂತಾಯಿತು. ಜೀವನದಲ್ಲಿ ಧನ್ಯತೆಯುಂಟಾಗುವುದು ಈ ರೀತಿಯಲ್ಲೇ ಅಲ್ಲವೆ ?

ಮಲ್ಲಪ್ಪನವರು ಶಿಸ್ತಿನ ಸಿಪಾಯಿ. ಬೇಕಾಬಿಟ್ಟಿತನವನ್ನು ಸಹಿಸುವವರಲ್ಲ. ಅಂಥಾದ್ದು ಕಂಡರೆ ಫಟಾರನೆ ಏನಾರಾ ಅಂದುಬಿಡುತ್ತಾರೆ. ಅವರ ಜೊತೆಯಲ್ಲಿ ಹಗಲು ಅವರ ಹೆಂಡತಿ ಮಕ್ಕಳಿಗೂ ಕೆಲವು ಸಲ ಕಠಿಣವಾಗಿರಬಹುದೆಂದು ನನ್ನ ಭಾವನೆ. ಪ್ರತಿಯೊಬ್ಬ ನಿಯಮಬದ್ಧ ದೊಡ್ಡ ಮನುಷ್ಯರ ಜೊತೆ ಬದುಕುವುದೆಂದರೆ ಅಸಿಧಾರಾವ್ರತದಂತೆ ಕಷ್ಟಕರವೇ. ಅಚ್ಚುಕಟ್ಟು ಅವರ ಜೀವನದ ಮೊದಲ ಕಟ್ಟುಪಾಡು. ಸದಾ ಹೆಗಲಮೇಲೆ ಚೊಕ್ಕಟವಾದ ಮಡಚಿದ ಉತ್ತರೀಯ. ಇಸ್ತ್ರಿ ಮುರಿಯದ ಖಾದಿ ಜುಬ್ಬ. ಖಾದಿ ಪಂಚೆಯ ಕಚ್ಚೆ. ಲಯಬದ್ಧವಾಗಿ ಎತ್ತಿಡುವ ಹೆಜ್ಜೆ. ನೀಳವಾದ ದನಿ. ಎದುರಾಳಿಯನ್ನು ಮರುಳು ಮಾಡುವ ವಾದ ಸಾಮರ್ಥ್ಯ. ಅವರ ಜೊತೆಯಲ್ಲಿ ಓಡಾಡುವುದೇ ನಿಜವಾಗಿಯೂ ಗೌರವಾಸ್ಪದ ಸಂಗತಿ. ನಾವು ಜೀವನದ ಸಂಕಷ್ಟಗಳಿಂದ ಎಷ್ಟೋ ತ್ರಸ್ತರಾಗಿ ಅವರ ಬಳಿಗೆ ಹೋದಾಗಲೂ ಅದೆಲ್ಲ ಮರೆತುಹೋಗುವಂತೆ ಮಾಡಿ ನಾವು ತಿಳಿದುಕೊಂಡದ್ದೆಲ್ಲ ಸರಿಯಲ್ಲ, ಮಲ್ಲಪ್ಪನವರು ಹೇಳುವುದೇ ಸರಿ ಎನ್ನಿಸಿಬಿಡುತ್ತದೆ.

ರಾಜ್ಯ ಉಣ್ಣೆ ನೇಕಾರರ ಅಪೆಕ್ಸ್ ಸೊಸೈಟಿಯ ಅಧ್ಯಕ್ಷರಾಗಿದ್ದಾಗ ಲಕ್ನೋದಲ್ಲಿರುವ ಕೇಂದ್ರವಾದಿ ಬೋರ್ಡಿನ ಅಧ್ಯಕ್ಷರನ್ನು ಭೇಟಿ ಮಾಡಿ ತಮ್ಮ ಸೊಸೈಟಿಗೆ ಹಿಂದೆ ಬೋರ್ಡಿನಿಂದ ಕೊಟ್ಟಿದ್ದ ಸಾಲದಲ್ಲಿ ಕೆಲವನ್ನೂ ಅದಕ್ಕೆ ಕಟ್ಟಬೇಕಾದ ಸುಸ್ತಿಬಡ್ಡಿಯ ಮೊತ್ತವನ್ನೂ ವಜಾ ಮಾಡಿಕೊಡಲು ಕೇಳಬೇಕಾಗಿತ್ತಂತೆ. ಮಲ್ಲಪ್ಪನವರು ಲಕ್ನೋಕ್ಕೆ ಹೋದರು. ಬೋರ್ಡಿನ ಅಧ್ಯಕ್ಷರೆದುರು ಸಮರ್ಥವಾಗಿ ತಮ್ಮ ವಾದವನ್ನು ಮಂಡಿಸಿದರು. ಎಲ್ಲವನ್ನೂ ಸಾವಧಾನದಿಂದ ಕೇಳಿದ ಅವರು Are you a Lawyer ಎಂದು ಪ್ರಶ್ನಿಸಿದರಂತೆ. ಅದಕ್ಕೆ ಇವರ ಉತ್ತರ No, I am a born Nekar (weaver).

ರಾಜ್ಯ ಉಣ್ಣೆ ಉದ್ಯಮ ಮತ್ತು ಕುರಿ ಅಭಿವೃದ್ಧಿ ಬೋರ್ಡಿನ ಅಧ್ಯಕ್ಷರಾಗಿದ್ದಾಗ ನಾನು ಅವರ ವಿಶೇಷ ಆಹ್ವಾನದ ಮೇಲೆ ಬೋರ್ಡಿನ ಒಂದು ಸಭೆಯಲ್ಲಿ ಭಾಗವಹಿಸಿದ್ದೆ. ಅಲ್ಲಿನ ಸದಸ್ಯರ ವರ್ತನೆ ತೀರ ಬಾಲಿಶವಾಗಿತ್ತು. ಕುರಿಯನ್ನು ಪ್ರೀತಿಯಿಂದ ಎಂದೂ ಮೈಸವರದವರು, ಉಣ್ಣೆ ಉದ್ಯಮದ ಬಗ್ಗೆ ಮಾಹಿತಿಯೇ ಇಲ್ಲದ ಬಹುಮಂದಿ ಸದಸ್ಯರು ಅದರಲ್ಲಿ ಸೇರಿರುವುದು ಕಂಡೆ. ಅವರನ್ನೆಲ್ಲ ಕಟ್ಟಿಕೊಂಡು ಏನು ಸಾಧಿಸುತ್ತೀರಿ ಎಂದು ಆಮೇಲೆ ಪ್ರಶ್ನೆಯನ್ನು ಹಾಕಿದೆ. ಏನು ಮಾಡೋದು, ನೀನು ಹೇಳೋದೆಲ್ಲ ನಿಜ. ಈ ನಡುವನೇ ಏನಾರ ಸಾಧಿಸಬೇಕೂಂತ ಪ್ರಯತ್ನ ಮಾಡ್ತಿದ್ದೀನಿ. ಉಣ್ಣೆ ನೇಕಾರರ ರಾಜ್ಯ ಸಮ್ಮೇಳನ ನಡೆಸೋದು, ಬೋರ್ಡಿಗೊಂದು ನಿಯಮಾವಳಿ ರೂಪಿಸೋದು. ಯೋಜನೆ ತಯಾರಿಸಿ ರಾಜ್ಯ, ಕೇಂದ್ರ ಹಾಗೂ ವಿಶ್ವ ಬ್ಯಾಂಕಿನಿಂದ 35 ಕೋಟಿ ರೂ.ನ ನೆರವು ಪಡೆದು ಕಾರ್ಯಗತಗೊಳಿಸೋದು ಹೀಗೆ ವಿವರಿಸಿದರು. ಅವರ ಅವಧಿಯಲ್ಲಿ ಅವುಗಳನ್ನೆಲ್ಲ ರೂಪಿಸಿಯೂ ರೂಪಿಸಿದರು. ಈಚೆಗೆ ಕಾರ್ಯಗತವಾದ್ದು ಮಾತ್ರ ಇಲ್ಲ. ಏಕೆಂದರೆ, ಕುರಿ ಸಾಕಣೆ, ಉಣ್ಣೆ ಉದ್ಯಮದ ಆಧುನಿಕ ಮಾಹಿತಿ ಇವಾವೂ ಇಲ್ಲದವರೇ ಅಲ್ಲಿ ಅಧ್ಯಕ್ಷರಾಗಿ ಕೂಡುತ್ತಾ ಬಂದರು.

ಬೋರ್ಡಿನ ವತಿಯಿಂದ ರಾಜಧಾನಿಯಲ್ಲಿ ನಡೆಸಿದ ಉಣ್ಣೆ ನೇಕಾರರ ಸಮ್ಮೇಳನದಲ್ಲಿ ಅದರ ಮೊದಲ ಅಧ್ಯಕ್ಷರಾಗಿ ಅವರು ಮಾಡಿದ ಭಾಷಣ ಹೃದಯವಿರುವವರು ಮರೆಯಲು ಸಾಧ್ಯವೇ ಇಲ್ಲ. ಉಣ್ಣೆ ನೇಕಾರರ ಕಷ್ಟ ಸಂಕಟಗಳನ್ನೆಲ್ಲ ಹೇಳಿ ಉಣ್ಣೆಗೆ ಜಗತ್ತಿನ ಮಾರುಕಟ್ಟೆಯಲ್ಲಿ ಚಿನ್ನ ಬೆಳ್ಳಿಗೆ ಎಂತಹ ಮಹತ್ವ ಇದೆಯೋ ಅದೇ ಬಗೆಯ ಮಹತ್ವ ಜಗತ್ತಿನಾದ್ಯಂತ ಇರುವುದನ್ನು ಎತ್ತಿ ಹೇಳಿದರು. ಕುರಿಯ ಆಧುನಿಕ

ತಳಿಗಳನ್ನು ಊರ್ಜಿತಪಡಿಸುವುದು, ಉತ್ತಮ ಮಾಂಸ ಬರುವಂತೆ ಅವುಗಳ ಸಾಕಣೆ, ಉಣ್ಣೆ ಉದ್ಯಮದಲ್ಲಿ ಹೊಸತನ ಪಡೆಯುವ ಬಗ್ಗೆ ಬೋರ್ಡಿನ ಜವಾಬ್ದಾರಿ, ಸರ್ಕಾರದ ಆರ್ಥಿಕ ನೆರವು ಕೇಳಿಕೆ ಅವರ ಬಾಯಿಂದ ಬರುವಾಗ ಪರಿಣಾಮಕಾರಿಯಾಗಿರುತ್ತವೆ. ಆದರೆ ಸರ್ಕಾರಕ್ಕೆ ಬಹಳಸಾರಿ ಕಾರ್ಯಸಾಧಕರು ಬೇಕಾಗುವುದಿಲ್ಲ. ಸಮಯ ಸಾಧಕರು ಹತ್ತಿರವಾಗುತ್ತಾರೆ. ಯಾವುದೋ ಒಂದು ಕೆಟ್ಟ ಗಳಿಗೆಯಲ್ಲಿ ಅವರಿಗೆ ಸುಳಿವನ್ನೂ ಕೊಡದೆ ಸರ್ಕಾರ ಬೋರ್ಡಿನ ಅಧ್ಯಕ್ಷರಾಗಿ ರಾಜಕಾರಣಿಯೊಬ್ಬರನ್ನು ನೇಮಿಸಿತು. ಇದು ಗೊತ್ತಾಗಿ ರಾಜೀನಾಮೆ ಕೊಟ್ಟು ಹೊರ ಬಂದರು. ಇದರಿಂದ ಮಲ್ಲಪ್ಪನವರಿಗೇನೂ ನಷ್ಟವಾಗಲಿಲ್ಲ. ನಷ್ಟವಾದದ್ದು ಬಡ ಉಣ್ಣೆ ನೇಕಾರರಿಗೆ, ಉಣ್ಣೆ ಉದ್ಯಮಕ್ಕೆ, ಕುರಿಗಳನ್ನೇ ನೆಚ್ಚಿ ಬದುಕು ಸಾಗಿಸುವವರಿಗೆ ಎಂದು ಹೇಳದೆ ವಿಧಿಯಿಲ್ಲ.

ಮಲ್ಲಪ್ಪನವರಿಗೆ ಶ್ರೀಯುತ ಆರ್. ಭರಣಯ್ಯನವರನ್ನು ಕಂಡರೆ ಬಲು ಪ್ರೀತಿ. ಗೌರವ. ಅವರು ಸಾರ್ವಜನಿಕ ಸೇವಾ ಆಯೋಗದ ಸದಸ್ಯರಾಗಿದ್ದಾಗ ನಮ್ಮ ವಿದ್ಯಾರ್ಥಿ ಸಂಘದ ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಅವರನ್ನು ಕರೆದಿದ್ದರು. ಆ ವೇಳೆಗೆ ಮಲ್ಲಪ್ಪನವರಿಗೆ ವಿಪರೀತ ಚಳಿ ಜ್ವರ ಬಂದು ಆರೋಗ್ಯ ವಿಲ್ಲದಂತಾಯಿತು. ಸಂಘದ ಕಾರ್ಯದರ್ಶಿಗಳಾಗಿ ಟಿ. ಎಚ್. ಕಿಕ್ಕೇರಯ್ಯನವರಿದ್ದರು. ದೊಡ್ಡವರನ್ನು ಕರೆದಿದ್ದೇವೆ. ಹಿಂದುಳಿದವರಿಗೆ ನಿಮ್ಮ ವರ್ಗದವರಿಗೆ ಬಹಳ ಉಪಕಾರ ಮಾಡಿರುವವರು ಭರಣಯ್ಯ. ಅವರಿಗೆ ಒಂದು ಒಳ್ಳೆಯ ಊಟ ಟಿ.ಬಿ.ಯಲ್ಲಿ ಏರ್ಪಡಿಸಿ ಅವರ ಜೊತೆಯಲ್ಲಿ ಸಹಪಂಕ್ತಿ ಕೊಡಲು ಕಾರ್ಯದರ್ಶಿ ಯವರಿಗೆ ತಿಳಿಸಲಾಗಿ ನಿಮ್ಮ ವರ್ಗದವರ ಜೊತೆ ಊಟ ಮಾಡುವುದಿಲ್ಲವೆಂದು ಕಿಕ್ಕೇರಯ್ಯ ಹಟ ಹಿಡಿದರು. ನಾನೂ ಕೆ. ಸಿ. ರಾಮಯ್ಯನವರೂ, ನೀವು ಆರೋಗ್ಯದ ಕಡೆ ಗಮನಕೊಡಿ. ನಾವೆಲ್ಲ ಮಿಕ್ಕದ್ದು ನೋಡಿ ಕೊಂಡು ಸಮಾರಂಭ ಯಶಸ್ವಿಯಾಗುವಂತೆ ಮಾಡುತ್ತೇವೆ. ಜೊತೆಯಲ್ಲಿದ್ದು ಅವರ ಮನಸ್ಸಿಗೆ ಏನೂ ಬೇಸರವಾಗದಂತೆ ಊಟ ಉಪಚಾರ ಮಾಡುತ್ತೇವೆ ಎಂದು ಭರವಸೆ ಕೊಟ್ಟೆವು. ಆದರೆ ಬರಲು ಸಾಧ್ಯ ವಿಲ್ಲದಂತಹ ಅನಾರೋಗ್ಯದಲ್ಲಿಯೂ ಮಲ್ಲಪ್ಪನವರು ಅಂದು ಬಂದು ಅಧ್ಯಕ್ಷತೆ ವಹಿಸಿ ಸಮಾರಂಭ ನಡೆಸಿದ್ದನ್ನು ಮರೆಯಲು ಸಾಧ್ಯವೇ ? ಸಂತೋಷದ ಸಮಾಚಾರವೆಂದರೆ ಭರಣಯ್ಯನವರು ಸಭೆಯಲ್ಲಿ ಮಾತಾಡಿದ್ದನ್ನು ಕೇಳಿದ ಕಾರ್ಯದರ್ಶಿಗಳು ಸಂಪೂರ್ಣವಾಗಿ ಬದಲಾಗಿ ಅವರ ವ್ಯಕ್ತಿತ್ವದ ಬಗ್ಗೆ ಅಪಾರ ಗೌರವ ತಳೆದು ಟಿ.ಬಿ ಗೆ ಅವರ ಜೊತೆಯಲ್ಲಿ ಬಂದು ಊಟ ಮಾಡಿದ್ದು. ಅಂಥ ಹಿರಿಯ ವ್ಯಕ್ತಿಗಳನ್ನು ಗುರುತಿಸಿ ವಿದ್ಯಾರ್ಥಿಗಳಿಗೆ ಅವರಿಂದ ಪ್ರಯೋಜನವಾಗುವಂತೆ ಮಾಡುವುದು ಮಲ್ಲಪ್ಪನವರಿಗೆ ಬಲು ಪ್ರಿಯವಾದ ಹವ್ಯಾಸ, ಅಂಥವರನ್ನು ಸನ್ಮಾನಿಸಬೇಕೆನ್ನುವ ತವಕ, ಅವರ ಬಗ್ಗೆ ಎಲ್ಲಿಲ್ಲದ ಆದರ, ಆಸಕ್ತಿ.

ಈಗ್ಗೆ 23–24 ವರ್ಷಗಳ ಹಿಂದೆ ನನಗೆ ಮಲ್ಲಪ್ಪನವರಿಂದ ಕರೆ ಬಂದಿತು. ಹೋದೆ. ನೀನು ನೋಡು ನಮ್ಮ ಹುಡುಗ, ಇಂಥ ಪುರಸಭಾ ಸದಸ್ಯನ ಜೊತೆ ವಿಪರೀತ ಓಡಾಡುತ್ತೀಯ ಎಂದು ಸುದ್ದಿ. ಆತನ ನಡತೆ ಮಾನ ತರುವಂಥದ್ದಲ್ಲ. ಬಾಯಲ್ಲಿ ಹೇಳುವುದೇ ಒಂದು, ಕೈಯಲ್ಲಿ ಮಾಡುವುದೇ ಒಂದು. ಮನುಷ್ಯ ಅಪ್ರಾಮಾಣಿಕ. ಕೆಟ್ಟದು ತುಳಿಸ್ಯಾನು. ಆದ್ದರಿಂದ ಹುಷಾರಾಗಿರು ಎಂದು ಸಕಾಲಕ್ಕೆ ಎಚ್ಚರಿಸಿದರು. ನಾನು ಆಗತಾನೆ ಸಾರ್ವಜನಿಕ ಕ್ಷೇತ್ರಕ್ಕೆ ಬಂದಿದ್ದೆ. ಜನಗಳ ಮರ್ಜಿ ಬೇಗ ತಿಳಿಯುತ್ತಿರಲಿಲ್ಲ. ನಾನು ಅವರ ಹಿತೋಕ್ತಿಯನ್ನು ತಪ್ಪದೆ ಪಾಲಿಸಿದೆ. ಸಾರ್ವಜನಿಕ ಕ್ಷೇತ್ರದಲ್ಲಿ ಕೆಲಸ ಮಾಡಲು ಆ ಮಾತುಗಳು ಮಾರ್ಗದರ್ಶಕವಾದುವು.

ಮಲ್ಲಪ್ಪನವರು ದೇವರು ಅನ್ನೋನು ಎಲ್ಲಡಗಿ ಕುಳಿತವ್ನೋ ನಾನವನ್ನ ಕಂಡಿಲ್ಲ. ಆದರೆ ಅವನ ಪ್ರತಿನಿಧಿಗಳ್ನ ನಿಶ್ಚಯವಾಗಿಯೂ ಕಂಡಿದ್ದೀನಿ. ನನ್ನ ತಾಯಿ. ನನ್ನ ಅಕ್ಕ. ಸಿ. ನರಸಯ್ಯ ಇವರ ರೂಪದಲ್ಲಿ ನಾನು ಅವನನ್ನು ಚೆನ್ನಾಗಿ ಬಲ್ಲೆ. ಆದ್ದರಿಂದ ನನಗೆ ತೀರ ಆದ ಹೋದ ಇವರನ್ನು ನೆನೆಯದೆ

ಒಂದು ದಿನವೂ ಇರಲಾರೆ ಎನ್ನುತ್ತಾರೆ. ಸಾಮಾನ್ಯವಾಗಿ ಕವಿ, ಸಾಹಿತಿ, ಕಲಾವಿದರು, ದಾರ್ಶನಿಕರು ಮುಂತಾದವರ ಸ್ಥಾನವನ್ನು ಎತ್ತರದಲ್ಲಿ ಪರಿಗಣಿಸುವ ವಾಡಿಕೆಯೊಂದು ಲೋಕದಲ್ಲಿ ಇದೆ. ಆದರೆ ಅವರೆಲ್ಲರಿಗಿಂತಲೂ ಜನ ಸಾಮಾನ್ಯರ ನಡುವೆ ಜನ ಸಾಮಾನ್ಯರಂತೆಯೇ ಇದ್ದು ಅವರ ಏಳಿಗೆಗಾಗಿ, ಅವರಲ್ಲಿನ ಮೌಢ್ಯದ ನಿವಾರಣೆಗಾಗಿ, ಅವರನ್ನು ಸಂಕಷ್ಟಗಳಿಂದ ಪಾರು ಮಾಡಲು, ಅವರ ಬದುಕನ್ನು ಪರಿವರ್ತಿಸಲು ಹೆಣಗುವ ಸಮಾಜ ಸೇವಾಕರ್ತರ, ಸುಧಾರಕರ ಸ್ಥಾನ ಎಲ್ಲರದಕ್ಕಿಂತ ಮೇಲ್ಮಟ್ಟದ್ದೆಂದು ನಾನು ನಂಬುತ್ತೇನೆ. ಇಂಥವರ ಶ್ರೇಣಿಗೆ ಮಲ್ಲಪ್ಪನವರೂ ಸೇರುತ್ತಾರೆ.

ಕೇವಲ ಸರ್ಕಾರದಲ್ಲಿ ಉನ್ನತ ಹುದ್ದೆ, ಸಂಘ, ಸಂಸ್ಥೆ, ಬೋರ್ಡುಗಳಿಗೆ ಸೀಮಿತವಾದ ಪರಿಪಾಟಿಗೆ ಮಾತ್ರ ಹೇಳಿ ಮಾಡಿಸಿದ ವಿಕ್ಷಿಪ್ತ ವ್ಯಕ್ತಿತ್ವ ಮಲ್ಲಪ್ಪನವರದಲ್ಲ. ಕಾಲಕೂಡಿ ಬಂದಿದ್ದರೆ ಕರ್ನಾಟಕ ರಾಜ್ಯದ ಕಂದಾಯ ಅಥವಾ ಸಹಕಾರ ಮಂತ್ರಿ ಖಾತೆಯನ್ನು ಅತ್ಯಂತ ದಕ್ಷತೆ ಪ್ರಾಮಾಣಿಕತೆಯಿಂದ ನಿರ್ವಹಿಸಬಲ್ಲವರಾಗಿದ್ದರು.

1967–68 ರಲ್ಲಿರಬಹುದು. ಈ ಎಲ್ಲ ಆಲೋಚನೆ ಇರಿಸಿಕೊಂಡೇ ನಾವು ಕೆಲವರು ಅವರನ್ನು ಒಪ್ಪಿಸಿ ಮೇಲ್ಮನೆಗೆ ಸ್ಥಳೀಯ ಸಂಸ್ಥೆಗಳ ತುಮಕೂರು ಕ್ಷೇತ್ರದಿಂದ ಸ್ವತಂತ್ರ ಉಮೇದುವಾರರನ್ನಾಗಿ ಅರ್ಜಿ ಹಾಕಿಸಿದ್ದೆವು. ಒಂದು ಸುತ್ತು ತುಮಕೂರು ಮಧುಗಿರಿ ಸಬ್‌ಡಿವಿಜನ್ನುಗಳಲ್ಲಿ ಸುತ್ತಿದ್ದೂ ಆಗಿತ್ತು. ಅಭ್ಯರ್ಥಿಯಾಗಿ ಚುನಾವಣೆ ಎದುರಿಸಿದ್ದರೆ ಗೆಲ್ಲುವುದರಲ್ಲಿ ಯಾವ ಅನುಮಾನವೂ ಇರಲಿಲ್ಲ. ವ್ಯಕ್ತಿಯಾಗಿ, ಆಡಳಿತಗಾರರಾಗಿ ಎಲ್ಲರಿಗೂ ಅವರ ಪರಿಚಯವಿತ್ತು. ಉಮೇದುವಾರಿಕೆ ಹಿಂತೆಗೆದುಕೊಳ್ಳುವ ಅವಧಿಯ ವರೆಗೂ ನಾನೂ ಅವರೂ ಜೊತೆಯಲ್ಲೇ ಇದ್ದೆವು. ಎಂತಹ ಪ್ರಭಾವ ಒತ್ತಡಗಳು ಬಂದರೂ ಮನಸ್ಸು ಬದಲಿಸಬಾರದೆಂದು ಅವರಲ್ಲಿ ಹೇಳಿ ಮನೆಗೆ ಕಳಿಸಿ ಬಂದೆ. ಮಾರನೆಯ ಮಧ್ಯಾಹ್ನ ನನಗೆ ಮುಚ್ಚಿದ ಲಕ್ಕೋಟೆಯನ್ನು ವಿದ್ಯಾರ್ಥಿನಿಲಯದ ಕೆಲಸಗಾರ ತಂದ. ಒಡೆದು ಓದಿದರೆ ಚುನಾವಣೆಯಿಂದ ನಿವೃತ್ತಿ ಹೊಂದಿರುವುದಾಗಿಯೂ ಇದಕ್ಕೆ ಗೃಹಕೃತ್ಯದ ಅನಿವಾರ್ಯಗಳೇ ಕಾರಣವೆಂದೂ ನಿಮ್ಮೆಲ್ಲರ ಸಹಕಾರಕ್ಕೆ ವಂದನೆಗಳು ಎಂದು ಬರೆದು ಸಹಿ ಹಾಕಿದ್ದರು.

ಅದನ್ನು ನೋಡಿದ ನನಗೆ ಅತೀವ ದುಃಖವಾಯಿತು. ಏಕೆ ಹೀಗೆ ಮಾಡಿದರೋ ತಿಳಿಯದು. ಮನೆಯವರೆಲ್ಲ ರಾಜಕೀಯ ಬೇಡವೆಂದು ಹಟ ಮಾಡಿದರೆಂದು ಆಮೇಲೆ ತಿಳಿದುಬಂತು. ಆಮೇಲೂ ಅವರು ಸಹಕಾರ ಸಂಘಗಳ ಅಪೆಕ್ಸ್ ಸೊಸೈಟಿಯ ಅಧ್ಯಕ್ಷರಾಗಿದ್ದದ್ದು ನಿಜ.

ಆದರೆ ಕಾರಣವೇನೇ ಇರಲಿ ಮಲ್ಲಪ್ಪನವರು ಅಂದು ತೆಗೆದುಕೊಂಡ ನಿರ್ಧಾರವಂತೂ ಮುತ್ಸದ್ದಿತನದ್ದಲ್ಲವೆಂದು ಈಗಲೂ ನನಗೆ ಅನ್ನಿಸಿದೆ. ಈ ಮಾತನ್ನು ನಾನು ಆಕ್ಷೇಪಣೆಗಾಗಿ ಎತ್ತುತ್ತಿಲ್ಲ. ಸ್ಪರ್ಧಿಸಿದ್ದರೆ ಗೆಲ್ಲುತ್ತಿದ್ದದ್ದು ಖಂಡಿತ. ಗೆದ್ದಿದ್ದರೆ ಮಂತ್ರಿಯಾಗುತ್ತಿದ್ದುದರಲ್ಲಿ ಅನುಮಾನವೇ ಇರಲಿಲ್ಲ. ಅದಾದ ಮೇಲೆ ಮಿಂಚಿನ ವೇಗದಲ್ಲಿ ಘಟನೆಗಳು ಕೇಂದ್ರ, ರಾಜ್ಯಗಳಲ್ಲಿ ನಡೆದು ನಿರೀಕ್ಷೆಗೂ ಮೀರಿದ ಬದಲಾವಣೆಗಳಾಗಿ ಹೋದುವು. ಏಕಶಿಲೆಯಂತೆ ಸುಭದ್ರವಾದದ್ದೆಂದು ಹೇಳಿಕೊಳ್ಳುತ್ತಿದ್ದ ವೀರೇಂದ್ರ ಪಾಟೀಲರ ಮಂತ್ರಿಮಂಡಲ 71 ರ ಪಾರ್ಲಿಮೆಂಟ್ ಚುನಾವಣೆಯ ಅನಂತರ ಪತನವಾಗಿ ಅರಸುರವರ ಮಂತ್ರಿಮಂಡಲ ರಾಜ್ಯದಲ್ಲಿ ಅಸ್ತಿತ್ವಕ್ಕೆ ಬಂದಿತು. ಹೀಗಾಗಿ ಅವರು ಮಂತ್ರಿಯಾಗಿ ಕಾರ್ಯನಿರ್ವಹಿಸುವುದನ್ನು ಕಣ್ಣಾರೆ ಕಾಣಬೇಕೆನ್ನುವ ನನ್ನ ನನ್ನಂಥವರ ಆಸೆ ಮಣ್ಣುಪಾಲಾಯಿತು. ನಾವಾಗಿಯೇ ಹುಡುಕಿಕೊಂಡು ಹೋದರೂ ಅವಕಾಶಗಳು ಸಿಕ್ಕುವುದು ಅಪರೂಪ. ಅಂಥಾದ್ದರಲ್ಲಿ ಬಂದ ಅವಕಾಶಗಳನ್ನು ಸರಿಯಾಗಿ ಉಪಯೋಗಿಸಿಕೊಳ್ಳದೆ ಹೋದರೆ ಜಾರಿಹೋದ ಅವಕಾಶಗಳು ಮರಳಲಾರವು.

ಸಾಮರ್ಥ್ಯವಿದ್ದೂ ಮಂತ್ರಿಯಾಗಲಿಲ್ಲ ಎನ್ನುವ ಕೊರತೆಯನ್ನು ಬಿಟ್ಟರೆ ಮಿಕ್ಕಂತೆ ಅವರಿಗೆ ಏನೂ ಕಡಮೆಯಾಗಲಿಲ್ಲ. ಬಹು ನಿಡಿದಾದ ತುಂಬು ಜೀವನವನ್ನವರು ಬಾಳಿದ್ದಾರೆ. 77 ಕ್ಕೂ ಮಿಕ್ಕು ವಸಂತಗಳನ್ನು ಕಂಡಿದ್ದಾರೆ. ಹೆಣ್ಣುಮಕ್ಕಳು ಒಳ್ಳೆಯ ಹುದ್ದೆಯಲ್ಲಿರುವ ಗಂಡಂದಿರ ಜೊತೆಗಿದ್ದಾರೆ. ಗಂಡುಮಕ್ಕಳು ಅವರ ಪಾಡಿಗೆ ಅವರು ಸುಖವಾಗಿದ್ದಾರೆ. ಮನಸ್ಸು ಮಾಡಿದ್ದರೆ ಅವರು ಕಾರಿನಲ್ಲೇ ಓಡಾಡಬಹುದಾಗಿತ್ತು. ಆದರೂ ಅಂತಹ ಆಡಂಬರಕ್ಕೆ ಎಂದೂ ಒಳಗಾಗಲಿಲ್ಲ. ಹೊಟ್ಟೆಗಿಲ್ಲದೆ ಬಟ್ಟೆಗಿಲ್ಲದೆ ಜನ ನರಳುತ್ತಿರುವಾಗ ನಾವು ಅವರೆದುರಿಗೆ ಮೈಮರೆಯಬಾರದೆನ್ನುವುದು ಅವರ ತಿಳುವಳಿಕೆಯಾಗಿದೆ.

ಘನವಾದ ವ್ಯಕ್ತಿತ್ವವನ್ನೂ ಪ್ರಾಮಾಣಿಕ ಕರ್ತೃತ್ವ ಶಕ್ತಿಯನ್ನೂ ಪಡೆದ ಮಲ್ಲಪ್ಪನವರು ನಮ್ಮವರು ನಮ್ಮ ಕಡೆಯವರು, ನಮ್ಮ ಬಂಧು, ನಮ್ಮ ನೆಲದ ಮಣ್ಣಿನ ಮಗ ಎಂದು ಹೇಳಿಕೊಳ್ಳುವ ಭಾಗ್ಯ, ನನ್ನದಾಗಿದೆ. ಅವರು ನೂರುಕಾಲ ಬಾಳಲಿ. ಅವರಿಗೆ ಸಕಲ ಸೌಭಾಗ್ಯಗಳೂ ಒದಗಿ ಬರಲಿ.

ವರ್ಗ ಹೋರಾಟದ ಆಚೆಗಿದ್ದು ಪ್ರಿಯರಾದ ಮಲ್ಲಪ್ಪನವರು

ಕೆ. ಆರ್. ನಾಯಕ್

ಹಳೇ ಮೈಸೂರಿನಲ್ಲಿ ಮುಂದುವರಿದ ಬ್ರಾಹ್ಮಣರಿಗೆ ಇದ್ದ ವಿದ್ಯಾ ಸೌಕರ್ಯ, ಸರ್ಕಾರಿ ಉನ್ನತ ಹುದ್ದೆಗಳ ಸೌಲತ್ತು ಇತರೆ ಹಿಂದುಳಿದ ಯಾವ ಜಾತಿಯವರಿಗೂ ಇರಲಿಲ್ಲ. ಸರ್ಕಾರಿ ಹುದ್ದೆಗಳನ್ನು ಕೊಡುವಾಗ ಹುದ್ದೆಗಳಲ್ಲಿದ್ದು ನಿವೃತ್ತರಾದವರ ಮಕ್ಕಳನ್ನು ಮಾತ್ರ ಆಯ್ಕೆ ಮಾಡಿಕೊಳ್ಳುತ್ತಿದ್ದ ಕಾಲ ಅದಾಗಿತ್ತು. ಇದನ್ನೆಲ್ಲ ಮನಗಂಡಂಥ ಹಿಂದುಳಿದ ಜಾತಿಗಳ ಮುಖಂಡರು ಸಂಘಟಿತರಾಗಿ ಆಡಳಿತ ನಡೆಸುತ್ತಿದ್ದಂತಹ ಆಗಿನ ಮಹಾಪ್ರಭುಗಳ ಒಲವು ಸಂಪಾದಿಸಿ ಸರ್ಕಾರಿ ಹುದ್ದೆಗಳನ್ನೂ ವಿದ್ಯಾ ಸೌಕರ್ಯಗಳನ್ನೂ ಪಡೆದುಕೊಳ್ಳುವುದಕ್ಕೆ ಪ್ರಯತ್ನಗಳನ್ನು ನಡೆಸುತ್ತಿದ್ದರು. ಈ ರೀತಿ ನಡೆದ ಸಂಘಟನೆಯು ಹಲವು ವರ್ಷಗಳಲ್ಲಿ ಬ್ರಾಹ್ಮಣೇತರ ಜಾತಿಗಳಲ್ಲೇ ಶುರುವಾಯಿತು. ಒಕ್ಕಲಿಗರು ಮತ್ತು ಲಿಂಗಾಯಿತ ಜನಾಂಗದವರಲ್ಲಿ ಜಮೀನು, ವ್ಯಾಪಾರ ಇತರೆ ಆರ್ಥಿಕ ಸ್ವಾಮ್ಯವನ್ನು ಹೊಂದಿದ್ದವರಿಗೇ ಈ ಸೌಲತ್ತುಗಳೆಲ್ಲ ಅನಂತರ ಲಭ್ಯವಾಗತೊಡಗಿದುವು. ಇದಕ್ಕೆ ಕಾರಣ ಮುಂಚೂಣಿಯಲ್ಲಿದ್ದವರೆಲ್ಲ ಅವರೇ ಆಗಿದ್ದರು. ಇದನ್ನು ಮನಗಂಡು ಲಿಂಗಾಯಿತ, ಒಕ್ಕಲಿಗ ಜಾತಿಗಳನ್ನುಳಿದು ಇತರೆ ಅತ್ಯಂತ ಹಿಂದುಳಿದ ಕುರುಬ, ನಾಯಕ, ಉಪ್ಪಾರ, ಕುಂಬಾರ, ತಿಗಳ ಮುಂತಾದ ಜಾತಿಗಳ ಮುಖಂಡರುಗಳು ಈ ವೈರುಧ್ಯದಿಂದ ಕೆರಳಿ ತಮಗೂ ಬ್ರಾಹ್ಮಣ, ಲಿಂಗಾಯಿತ, ಒಕ್ಕಲಿಗರ ಜಾತಿಗಳಿಗೆ ಸಿಕ್ಕುತ್ತಿರುವ ಸೌಲಭ್ಯಗಳು ದೊರಕಬೇಕೆಂದು ಕೇಳತೊಡಗಿದರು. ಆಗಿನ ಕಾಲಕ್ಕೆ ಇದು ನ್ಯಾಯಸಮ್ಮತವೂ ಆಗಿದ್ದಿತು. ಆದರೆ ಇದು ವರ್ಗದ ಆಧಾರದ ಮೇಲೆ ನಡೆದ ಹೋರಾಟವಲ್ಲವೆಂಬುದನ್ನು ಇಲ್ಲಿ ನೆನಪಿನಲ್ಲಿ ಇಟ್ಟುಕೊಳ್ಳಬೇಕು.

ಇಲ್ಲಿ ಲಿಂಗಾಯಿತ ಒಕ್ಕಲಿಗೇತರ ಜಾತಿಗಳ ಮುಖಂಡರುಗಳಾದ ಶ್ರೀ ಟಿ. ಮರಿಯಪ್ಪ, ಶ್ರೀ ಎ. ಭೀಮಪ್ಪ ನಾಯಕ ಇಂತಹ ಕೆಲವೇ ಕೆಲವು ಮುಖಂಡರುಗಳು ತಮ್ಮ ತಮ್ಮ ಜಾತಿಗಳನ್ನು ಕಟ್ಟಿಕೊಂಡು ಮುಂದುವರಿದ ಬ್ರಾಹ್ಮಣೇತರ ಹಿಂದುಳಿದ ವರ್ಗಗಳೊಡನೆ ಸ್ಪರ್ಧೆಗಿಳಿಯುವ ಸಾಹಸಮಾಡಿದರು. ಇಂತಹ ಒಂದು ಒಳಗುದಿ ಹಳೆಯ ಮೈಸೂರಿನ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಕ್ಷೇತ್ರಗಳಲ್ಲಿ ನಡೆಯುತ್ತಿದ್ದಾಗ ಶ್ರೀ ಮಲ್ಲಪ್ಪನವರು ಇದನ್ನೆಲ್ಲ ಗಮನಿಸುತ್ತಾ ತಮ್ಮ ಪದವಿ ಪರೀಕ್ಷೆಯನ್ನು ಪೂರೈಸಿದರೆಂದು ಕಾಣಿಸುತ್ತದೆ. ಅನಂತರ ಅವರು ಮೈಸೂರು ಸರ್ಕಾರದ ಸೇವೆಯನ್ನು ಸೇರಲು ಕೂಡ ಯಾವ ಅಂತಹ ಉನ್ನತ ಮನೆತನದ ಹಿನ್ನೆಲೆಯಿಲ್ಲದಿರುವುದೇ ಅವರಿಗೆ ಬಹುಕಾಲ ಅಡ್ಡಿಯಾಯಿತೆಂದೂ ಕೇಳಿದ್ದೇನೆ. ಹಿಂದುಳಿದ ಜಾತಿಗಳ ಮುಖಂಡರುಗಳು ಆಗಿನ ಕಾಲಕ್ಕೆ ತಮ್ಮ ಜಾತಿಯ ವಿದ್ಯಾರ್ಥಿಗಳಿಗೆ ಊಟ, ವಸತಿ ಸೌಕರ್ಯ ಹಾಗೂ ಸ್ಕಾಲರ್‌ಷಿಪ್ ದೊರಕಿಸಿಕೊಡುವುದಕ್ಕಾಗಿ ಆಳುವ ಪ್ರಭುಗಳಿಗೆ ಹಲವು ರೀತಿಯ ಸಲಾಮು ಸಲ್ಲಿಸಬೇಕಾಗುತ್ತಿತ್ತು. ಅಲ್ಲದೆ ಸರ್ಕಾರಿ ಸೇವೆಯಲ್ಲಿ ಹಿಂದುಳಿದ ತಮ್ಮ ಜಾತಿಯ ಪದವೀಧರರಿಗೆ ಸಣ್ಣ ಪುಟ್ಟ ನೌಕರಿ ಕೊಡಿಸಿಕೊಟ್ಟು ಕೃತಾರ್ಥ ಭಾವನೆ ತಳೆಯುತ್ತಿದ್ದರು.

ಬ್ರಾಹ್ಮಣ, ಲಿಂಗಾಯಿತ, ಒಕ್ಕಲಿಗೇತರ ಹಿಂದುಳಿದವರ ದುಸ್ಥಿತಿ ಮಲ್ಲಪ್ಪನವರು ಮತ್ತು ಮಲ್ಲಪ್ಪನವರಂಥ ಪ್ರಜ್ಞಾವಂತ ಯುವಕರ ಮೇಲೆ ಗಾಢವಾದ ಪರಿಣಾಮ ಮಾಡಿರಲಿಕ್ಕೆ ಸಾಕು. ಇಂತಹ ಪರಿಣಾಮವನ್ನು ಮಲ್ಲಪ್ಪನವರ ತಲೆಮಾರಿನ ಹೆಚ್ಚಿನ ಹಿಂದುಳಿದ ಪ್ರಜ್ಞಾವಂತ ನೌಕರರಲ್ಲಿಯೂ ಕಾಣಬಹುದಾಗಿದೆ.

1960–61 ರ ಸುಮಾರು. ತುಮಕೂರಿನಲ್ಲಿ ವಾಲ್ಮೀಕಿ ವಿದ್ಯಾವರ್ಧಕ ಸಂಘ ಆಗಲೇ ಸ್ಥಾಪನೆಯಾಗಿತ್ತು. ಅದರ ಸ್ಥಾಪಕ ಸದಸ್ಯರಾದ ಆರ್. ಸಿದ್ಧಯ್ಯನವರೂ ಅದರ ಕಾರ್ಯದರ್ಶಿಯಾದ ನಾನೂ ಮಲ್ಲಪ್ಪನವರನ್ನು ಹೋಗಿ ಕಂಡೆವು. ನಮಗೆ ತೋಟಗಾರಿಕೆ ಇಲಾಖೆ ಪಕ್ಕದ ಜಾಗವನ್ನು ತುಮಕೂರು ಪೌರಸಭೆಯವರು ವಿದ್ಯಾರ್ಥಿನಿಲಯ ಕಟ್ಟಲು ಮಂಜೂರು ಮಾಡಿದ್ದರು. ಮಂಜೂರು ಮಾಡುವಾಗ ಕೆಲವು ಮುಂದುವರಿದ ಜಾತಿಯ ಸದಸ್ಯರು ಇವರೆಲ್ಲಿ ಹಾಸ್ಟೆಲ್ ಕಟ್ತಾರೆ, ಮಾರಿಕೊಳ್ತವೆ ಎಂದೂ ಹಾಸ್ಯವನ್ನು ಮಾಡಿದ್ದುಂಟು. ಇದನ್ನೆಲ್ಲ ಮಲ್ಲಪ್ಪನವರಲ್ಲಿ ತಿಳಿಸಿದಾಗ ಏನಪ್ಪಾ ನಿಮಗೆ ಇರ್ತಾ ಇರ್ತಾ ಏಳಾಳುದ್ದ ಹಳ್ಳ ಕೊಟ್ಟವ್ರೆ. ಹೆಂಗಪ್ಪ ಕಟ್ತೀರಾ. ಆದ್ರೂ ನೀವು ಕಟ್ಲೇಬೇಕು. ಒಳ್ಳೆ ಜಾಗ ಎಲ್ಲಾ ಲಿಂಗಾಯಿತ್ರು ಒಕ್ಕಲಿಗ್ರು ಬ್ರಾಂಬ್ರ ಪಾಲು. ನಿಮಗೆ ನಮಗೆ ಇಂಥದೆ ಗತಿ, ಆದ್ರೂ ನಿಮ್ಮ ಸಮ್ಕೆ ನಾವು ಬತ್ತೀವಿ ಅನ್ನೋದನ್ನ ತೋರ್ಸಕೆ ನೀವು ಕಟ್ಲೇಬೇಕು ಏನಾದ್ರೂ ಆಗ್ಲಿ ಕಟ್ಲೇಬೇಕು ಎಂದು ಶಾಸನ ಬರೆದಂತೆ ಹೇಳಿದರು. ಆಗ ಅವರು ತೋರಿದ ಆತ್ಮೀಯತೆ ಅಂತಃಕರಣ ಬೇರೆ ಯಾವ ಜಾತಿಯವರಲ್ಲೂ ಕಾಣದೆ ಇದ್ದದ್ದು ಎಂದು ಹೇಳದೆ ಇರಲಾರೆ. ಆಗಿನ್ನೂ ಅವರು ಸರ್ಕಾರಿ ಹುದ್ದೆಯಲ್ಲೇ ಇದ್ದರು. ಅವರು ಅಂದು ಆಡಿದ ಮಾತುಗಳನ್ನು 20–25 ವರ್ಷ ಕಳೆದು ಹೋದ ಮೇಲೂ ಮರೆಯಲು ಸಾಧ್ಯವಾಗಿಲ್ಲ. ನಿಜವಾದ ಹಿಂದುಳಿದ ಜಾತಿಗಳ ಹಿತೈಷಿಯ ಮಾತನ್ನು ಮರೆಯುವುದಾದರೂ ಹೇಗೆ ? ಇದೇ ನನ್ನ ಅವರ ಪ್ರಥಮ ಪರಿಚಯ ಕೂಡ ಆಗಿತ್ತು.

ಇದಾದ ಮೇಲೆ ಹಾವನೂರರು ತಮ್ಮ ವರದಿಯನ್ನು ದೇವರಾಜ ಅರಸುರವರ ಸರ್ಕಾರಕ್ಕೆ ಒಪ್ಪಿಸಿದ್ದ ಸಮಯ. ಅದನ್ನು ಜಾರಿಗೆ ಕೊಡಕೂಡದೆಂದು ಮುಂದುವರಿದ ಲಿಂಗಾಯಿತರು ಮತ್ತು ಬ್ರಾಹ್ಮಣರು ಹುಯಿಲೆಬ್ಬಿಸುತ್ತಿದ್ದರು. ಹೇಗಾದರೂ ಮಾಡಿ ವರದಿ ಜಾರಿಯಾಗದಂತೆ ತಡೆಗಟ್ಟಬೇಕೆನ್ನುವುದು ಅವರ ಕುಟಿಲೋಪಾಯವಾಗಿತ್ತು. ಆ ಸಂದರ್ಭದಲ್ಲಿ ಕೆ. ಎಲ್. ನರಸಿಂಹಯ್ಯನವರಿಂದ ಸ್ಥಾಪನೆಯಾದ ತುಮಕೂರು ತಾಲ್ಲೂಕಿನ ವ್ಯವಸಾಯೋತ್ಪನ್ನ ಮಾರುಕಟ್ಟೆ ಸಹಕಾರ ಸಂಘದ ಸಭಾಂಗಣದಲ್ಲಿ ಹಿಂದುಳಿದ ಜಾತಿಗಳವರ ಒಂದು ಸಭೆ ಕರೆಯಲಾಗಿತ್ತು. ಹಾವನೂರರ ವರದಿಯನ್ನು ಜಾರಿಗೆ ಕೊಡುವುದರಿಂದ ಹಿಂದುಳಿದವರಿಗಾಗುವ ಅಲ್ಪಸ್ವಲ್ಪ ಅನುಕೂಲಗಳನ್ನು ಅಲ್ಲಿ ಮಾತಾಡಿದವರೆಲ್ಲ ಎತ್ತಿ ಹೇಳುತ್ತಿದ್ದರು. ಆ ಸಮಾರಂಭದ ಅಧ್ಯಕ್ಷತೆಯನ್ನು ಶ್ರೀಮಾನ್ ಮಲ್ಲಪ್ಪನವರು ವಹಿಸಿದ್ದರು. ಆಗ ನಾನೂ ಆ ಸಭೆಯನ್ನು ಕುರಿತು ಮಾತಾಡುವಂತೆ ಮಲ್ಲಪ್ಪನವರೂ ಸಭೆಯಲ್ಲಿನ ಕೆಲವರೂ ಒತ್ತಾಯ ಮಾಡಿದರು. ಆ ವೇಳೆಗೆ ನಾನು ಪೂರ್ಣವಾಗಿ ಹಾವನೂರರ ವರದಿಯನ್ನು ಓದಿದ್ದೆ. ಅದು ಈಗಿರುವುದಕ್ಕಿಂತ ಎಡಪಂಥೀಯವಾಗಿರಬೇಕಾಗಿದ್ದದ್ದರ ಅಗತ್ಯವನ್ನು ಒತ್ತಿ ಹೇಳಿ ಅದರಲ್ಲಿನ ಬಲಪಂಥೀಯ ಧೋರಣೆಗಳನ್ನು ಎತ್ತಿ ತೋರಿಸಿದೆ. ಆದರೂ ವರದಿ ತುಂಬ ಅಭ್ಯಾಸ ಯೋಗ್ಯವಾಗಿದ್ದು ಈಗಿರುವ ಸ್ಥಿತಿಯಲ್ಲಿ ಅದರ ಯೋಗ್ಯತೆಯೇನು ಎನ್ನುವುದನ್ನೂ ಅದನ್ನು ಜಾರಿಗೆ ಕೊಡುವುದರಿಂದ ಆಗುವ ಪ್ರಯೋಜನವನ್ನೂ ಸಭೆಗೆ ತಿಳಿಸಿದೆ.

ಇದನ್ನೆಲ್ಲ ಸಾವಧಾನದಿಂದ ಕೇಳಿದ ಮಲ್ಲಪ್ಪನವರು, ನಾಯಕರನ್ನ ಆಗಾಗ ನೋಡುತ್ತಿದ್ದೆ. ಆದರೆ ಇಷ್ಟೆಲ್ಲ ಉದ್ದನೆ ಸರಕು, ತಿಳುವಳಿಕೆಯ ಬಂಡವಾಳ ಅವರಲ್ಲಿದೆ ಎನ್ನುವುದು ಗೊತ್ತಾದದ್ದು ಈ ದಿನ ಮಾತ್ರ ಎಂದು ನನ್ನ ಅಭಿಪ್ರಾಯದ ಬಗ್ಗೆ ಮೆಚ್ಚುಗೆ ಸೂಚಿಸಿದರು. ಎಷ್ಟೋ ವರದಿಯ ಬಗ್ಗೆ ನನಗೆ ಗೊತ್ತಿಲ್ಲದ ಸಂಗತಿಗಳು ನಾಯಕ್‌ರವರ ಮಾತಿನಿಂದ ತಿಳಿದುಬಂದುವೆಂದು ಹೇಳಿದರು. ಏನೇ ಆಗಲಿ ಇಂತಹ ಒಂದು ಐತಿಹಾಸಿಕ ವರದಿ ಬಂದಿರುವಾಗ ನಾವೆಲ್ಲ ಛಲತೊಟ್ಟು ಅದನ್ನು ಜಾರಿಗೆ ಕೊಡುವಂತೆ ಸರ್ಕಾರವನ್ನು ಆಗ್ರಹಪಡಿಸೋಣ. ಅವೆಲ್ಲವನ್ನೂ ದೃಷ್ಟಿಯಲ್ಲಿರಿಸಿಕೊಂಡು ಸಮಿತಿ ಮಾಡಿಕೊಳ್ಳೋಣ. ಅದಕ್ಕಾಗಿ ಇದೋ ನನ್ನ ವಂತಿಗೆ ಎಂದು ತಮ್ಮ ಚಂದಾ ತೆಗೆದು ಮೊದಲಿಗೆ ಮೇಜಿನ ಮೇಲಿರಿಸಿದರು.

ಹಿಂದುಳಿದ ಜಾತಿಯಲ್ಲಿ ಯಾರಾದರೂ ತಿಳುವಳಿಕೆಯಿರುವವರು ಮಲ್ಲಪ್ಪನವರ ಕಣ್ಣಿಗೆ ಬಿದ್ದರೆ ಅವರನ್ನು ಹುರಿದುಂಬಿಸುವ ರೀತಿ ಇದಾಗಿತ್ತು.

ಇದಾದ ಕೆಲವು ದಿನಗಳ ಮೇಲೆ ಮಂಡಲ್ ಆಯೋಗದ ವರದಿಯನ್ನು ಕೇಂದ್ರ ಜಾರಿಗೆ ಕೊಡುವಂತೆ ಒತ್ತಾಯಿಸಲು ಹಿಂದುಳಿದವರ ಒಂದು ಸಭೆಯನ್ನು ಮಲ್ಲಪ್ಪನವರು ಕರೆದಿದ್ದರು. ಆ ಸಭೆಗೆ ಅವರೇ ಅಧ್ಯಕ್ಷರು. ಆ ಸಭೆಯನ್ನು ಕುರಿತು ಅವರು ಮಾತಾಡುತ್ತಾ ಕೀಳು ಜಾತಿಯಲ್ಲಿ ಹುಟ್ಟಿದರೂ ಯಾರೂ ದಡ್ಡರಾಗಿರುವುದಿಲ್ಲ. ಮೇಲು ಜಾತಿಯಲ್ಲಿ ಹುಟ್ಟಿದ ಕೂಡಲೇ ಬುದ್ಧಿವಂತರಾಗಲು ಸಾಧ್ಯವಿಲ್ಲ. ವ್ಯಕ್ತಿಯ ಪರಿಸರ ಅನುಕೂಲ ವಿದ್ಯಾ ಸೌಕರ್ಯಗಳು ಒಬ್ಬನನ್ನು ರೂಪಿಸುವ ನಿಜವಾದ ಅಂಶಗಳು. ನನ್ನನ್ನೇ ಉದಾಹರಣೆಗೆ ನೀವು ತೆಗೆದುಕೊಳ್ಳುವುದಾದರೆ ನಮ್ಮ ತಂದೆ ತಾಯಿ ತಾತ ಅವರೆಲ್ಲ ವಿದ್ಯೆಯ ಮುಖ ಕಾಣದ ಹಳ್ಳಿಯೋರು. ದನ ಕುರಿ ಮೇಯಿಸುತ್ತಿದ್ದಂಥ ಜನ. ನಾನೊಬ್ಬ ಹೇಗೊ ಭಂಗ ಬಡತನದಲ್ಲಿ ಹೊಟ್ಟೆಕಟ್ಟಿ ಬಟ್ಟೆಕಟ್ಟಿ ಬಿ.ಎ. ಮುಗಿಸಿದೆ. ಗತಿಯಿಲ್ಲದ್ದಕ್ಕೆ ನೌಕರಿಗೆ ಸೇರಿದೆ. ಈಗ ನನ್ನ ಮಕ್ಕಳೆಲ್ಲ ಬಿ.ಇ., ಎಂ.ಬಿ.ಬಿ.ಎಸ್., ಬಿ.ಎ. ಮಾಡಿದರು. ಅವರ ಮಕ್ಕಳು ಇನ್ನೂ ಚೆನ್ನಾಗಿ ಓದಿ ಮೇಲಕ್ಕೆ ಬಂದಾವು. ಅಲ್ಲಿನ ತನಕ ವಿದ್ಯಾಹಂತದಲ್ಲಿ ನೌಕರಿ ಆಯ್ಕೆಯಲ್ಲಿ ಮೀಸಲಾತಿ ಪದ್ಧತಿ ಇರಲೇಬೇಕು. ಇಲ್ದಿದ್ರೆ ಬಡ ಮನೆಗಳಿಂದ ಬಂದ ಮಕ್ಕಳ ಗತಿ ಏನಾಗಬೇಕು ? ಎಂದು ವಿವರಿಸಿದರು. ಹುಟ್ಟಿನಿಂದ ಒಬ್ಬ ವ್ಯಕ್ತಿ ಸಕಲ ವಿದ್ಯಾಗುಣಗಳನ್ನೂ ಪಡೆದುಕೊಂಡು ಬರುವುದಿಲ್ಲ. ಪರಿಸರ ಅವನ್ನ ರೂಪಿಸುತ್ತದೆ ಎನ್ನುವ ಮಲ್ಲಪ್ಪನವರ ಅಭಿಪ್ರಾಯ ಕೇಳಿ ನಾನು ಸಂತೋಷಪಟ್ಟೆ. ಸೌಲಭ್ಯಗಳು ಸುಮ್ಮಸುಮ್ಮನೆ ನಾವು ಕುಳಿತಲ್ಲಿಗೆ ಹುಡಿಕಿಕೊಂಡು ಬರುವುದಿಲ್ಲ. ಹೋರಾಟ ಮಾಡಿ ಪಡೆದುಕೊಳ್ಳ ಬೇಕಾದಂಥವು ಎಂದೂ ಸೇರಿಸಿದರು. ಇದೂ ನನಗೆ ಬಹಳ ಇಷ್ಟವಾಯಿತು. ಆ ಸಭೆಗೆ ಬಹಳ ಕಷ್ಟಪಟ್ಟು ಮಲ್ಲಪ್ಪನವರು ಕುರುಬರು, ಅಗಸರು, ನಾಯಕರು, ಕುಂಬಾರರು, ನಾಯಿಂದರು, ಬಣಜಿಗರು ಇಂಥ ತೀರ ಯಾರೂ ಕ್ಯಾರೇ ಎನ್ನದ ಜಾತಿಯವ ರನ್ನೆಲ್ಲ ಒಂದೆಡೆ ಸೇರಿಸಿದ್ದು ನೋಡಿ ನನಗೆ ಹಿಡಿಸಲಾಗದ ಮೆಚ್ಚಿಗೆ ಮಲ್ಲಪ್ಪನವರ ಬಗ್ಗೆ ಮೂಡಿತು.

ತಮ್ಮ ಜಾತಿಯ ಬಗ್ಗೆಯೇ ಅಲ್ಲ, ತಮ್ಮಂತೆ ತುಳಿತಕ್ಕೊಳಗಾದ ಇತರೆ ಎಲ್ಲ ಜಾತಿಗಳ ಬಗ್ಗೆಯೂ ಅವರಿಗೆ ಬಹು ವಿಧವಾದ ಕಾಳಜಿಯುಂಟು ಎನ್ನುವುದಕ್ಕೆ ಒಂದು ಉದಾಹರಣೆ. ಮೊನ್ನೆ ವೆಂಕಟಸ್ವಾಮಿ ಆಯೋಗ ಮನವಿಗಳನ್ನು ಸ್ವೀಕರಿಸಲು, ಹಿಂದುಳಿದವರ ಅಹವಾಲು ಕೇಳಲು ತುಮಕೂರಿಗೆ ಬಂದಿತ್ತು. ಆಗ ನಾಯಕ ಜಾತಿಯ ಪರವಾಗಿ ಹೇಳಬೇಕಾದ್ದು ಹೇಳಲು ನಾನೂ ನಮ್ಮ ಜಾತಿಯ ಮುಖಂಡರೂ ಹೋಗಿದ್ದೆವು. ನಾನು ಹೋಗುವಾಗ್ಗ ಮಲ್ಲಪ್ಪನವರು ಒಳಗಿನಿಂದ ಹೊರಬರುತ್ತಿದ್ದರು. ನಾನು ಕೀಟಲೆಗೆ ಏನು ಸ್ವಾಮಿ ಎಲ್ಲ ನೀವೇ ತಗೊಂಬಿಟ್ಟಿರೋ ನಮಗೇನಾದರೂ ಸ್ವಲ್ಪ ಉಳಿಸಿದ್ದೀರೋ ಎಂದು ನಗುನಗುತ್ತಾ ಕೇಳಿದೆ. ಏನಪ್ಪ ಇಂಥಾ ಮಾತಾಡ್ತೀಯಾ, ನಾವೆಲ್ಲ ಅಣ್ಣತಮ್ಮಂದಿರಲ್ಲವೇ, ಹೆಗಲೆಣೆ ಬಗಲುದಾರರು. ಹೋಗಿ ಕೇಳು ನಿಮ್ಮ ವಿಷಯಾನೆ ಹೆಚ್ಚಾಗಿ ಹೇಳಿ ಬಂದಿದ್ದೇನೆ; ನಮ್ಮವರದ್ದು ಹೇಳೋದು ಇದ್ದೇ ಇದೆ ಎಂದರು. ಇದು ಅವರ ಮನಸ್ಸಿನ ಆಳದಿಂದಲೂ ಹೊಮ್ಮುವ ಹಿಂದುಳಿದವರ ಬಗೆಗಿನ ಅಕೃತಕವಾದ ಪ್ರೀತಿಯನ್ನು ಸೂಚಿಸುತ್ತದೆ.

ತಮ್ಮ ಸಮಾಜದಲ್ಲಿ ಯಾರು ಸಹಕಾರ ಕೊಡಲಿ ಕೊಡದೆ ಇರಲಿ ಮಲ್ಲಪ್ಪನವರು ಸದಾ ಎದೆ ಗುಂದದೆ ಈ ಜಿಲ್ಲೆಯಲ್ಲಿ ಕಾಳಿದಾಸ ವಿದ್ಯಾವರ್ಧಕ ಸಂಘವನ್ನು ಒಂದು ತಪಸ್ಸಿನಂತೆ ಕಟ್ಟಿ ಬೆಳೆಸಿದ್ದಾರೆ. ಅವರು ಕಟ್ಟಿರುವ ಸಂಸ್ಥೆಗಳಲ್ಲಿ ಅವರ ಜಾತಿಗೆ ಮಾತ್ರವಲ್ಲ, ಎಲ್ಲ ಹಿಂದುಳಿದವರಿಗೂ ಅಲ್ಲಿ ಆದ್ಯತೆಯಿದೆ. ಜಿಲ್ಲಾ ಕೇಂದ್ರ ತುಮಕೂರಿನಲ್ಲಿ ಕಾಳಿದಾಸ ವಿದ್ಯಾರ್ಥಿನಿಲಯ ಸುವ್ಯವಸ್ಥಿತವಾಗಿ ಬಡಹುಡುಗರ ಕೈಗೆಟಕುವ

ರೀತಿಯಲ್ಲಿ ನಡೆಯುತ್ತಿದೆ. ನಿರ್ಗತಿಕ ಹುಡುಗರಿಗೂ ಈಚೆಗೆ ಊಟ ವಸತಿ ಸೌಲಭ್ಯ ಏರ್ಪಡಿಸಿರುವುದಾಗಿ ಕೇಳಿದ್ದೇನೆ. ಅವರ ಕಾಳಿದಾಸ ಪ್ರೌಢಶಾಲೆ ಕಿರಿಯ ಕಾಲೇಜಾಗಿ ಪರಿವರ್ತನೆ ಹೊಂದಿ ಇಡೀ ರಾಜ್ಯದಲ್ಲೇ ಖ್ಯಾತಿಗಳಿಸಿದೆ. ಗುಬ್ಬಿ ತಾಲ್ಲೂಕಿನ ಬಿದರೆಯಲ್ಲಿನ ಹೈಸ್ಕೂಲು ಚೆನ್ನಾಗಿ ನಡೆಯುತ್ತಿದೆ ಎಂದು ಬಲ್ಲೆ. ಶಿರಾದಲ್ಲಿನ ಹೈಸ್ಕೂಲು, ಅದೇ ತಾಲ್ಲೂಕಿನ ದ್ವಾರನಕುಂಟೆಯಲ್ಲಿನ ಹೈಸ್ಕೂಲು ಈಗೀಗ ಸುವ್ಯವಸ್ಥಿತ ಗೊಳ್ಳುತ್ತಿವೆ. ಮಲ್ಲಪ್ಪನವರು ಅತಿ ದುರ್ಬಲ ವರ್ಗದವರಿಗೆಲ್ಲ ನಂಬಿಕೆ ಹುಟ್ಟಿಸುವ ಸ್ಫೂರ್ತಿದಾಯಕ ವ್ಯಕ್ತಿತ್ವ ಉಳ್ಳವರು. ತೀರ ಶೋಷಿತ ಜಾತಿಗಳನ್ನೆಲ್ಲ ಒಂದೆಡೆ ಸೇರಿಸಿ ಅವರ ಏಳಿಗೆಗಾಗಿ ಹೋರಾಡುವ ಧ್ಯೇಯದಡಿಯಲ್ಲಿ ಒಂದು ಶಾಶ್ವತವಾದ ಸಂಘಟನೆ ಸ್ಥಾಪಿಸಬೇಕೆನ್ನುವ ಅಭಿಪ್ರಾಯವನ್ನು ಒಮ್ಮೆ ಅವರು ನನ್ನೆದುರಿಗಿಟ್ಟರು. ಅದಿನ್ನು ಕಾರ್ಯರೂಪಕ್ಕೆ ಬಂದಹಾಗಿಲ್ಲ. ಅದು ಬೇಗ ಕಾರ್ಯರೂಪಕ್ಕೆ ಬರಲೆಂದು ಹಾರೈಸುತ್ತೇನೆ. ಬರುವಾಗ ವರ್ಗದ ಅರಿವಿನ ಆಧಾರ ಅದಕ್ಕಿರಲೆಂದು ನಾನು ಇಲ್ಲಿ ಸೂಚಿಸಬಯಸುತ್ತೇನೆ.

ವಂದನೆ

ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ
ಎಲ್ಲ ಮಾನವರ ಆಶೋತ್ತರ ಒಂದೇ
ಎಲ್ಲ ದೇಶಗಳ ಎಲ್ಲ ಭಾಷೆಗಳ
ಎಲ್ಲ ದಲಿತರ ಎಲ್ಲ ದುರ್ಬಲರ
ತನ್ನವರಂತೆ ಪ್ರೀತಿಸಿದ ನಮ್ಮ ಬಲ ಭೀಮ
ಛಲದಂಕಮಲ್ಲ ಶರಣು !

ಕಾಲೇ ಕಂಬ
ದೇಹವೇ ದೇಗುಲ
ಜೀವಾತ್ಮನೇ ಪರಮಾತ್ಮನೆಂದು ನಂಬಿ
ಪರೋಪಕಾರಕ್ಕೆ ತನುವ ಸವೆಸಿದ
ಕೈ ಬಾಯಿ ಕಚ್ಚೆ ಶುದ್ಧಿ ಪ್ರತೀಕ
ದಾರಿ ದೀಪ ಶರಣು !

ಮರ ಮುಟ್ಟು ಕೊಂಡಾಕ್ಷಣ ಮನೆಯಾಗುವುದೇ
ಅಕ್ಕಿ ಬೇಳೆ ಕೊಂಡಾಕ್ಷಣ ಅನ್ನವಾಗುವುದೇ
ಸಮಾಜದ ಉದ್ಧಾರ ಬಾಯಲ್ಲಿ ಜಪಿಸಿದರೆ
ಅಭಿವೃದ್ಧಿಯಾಗುವುದೇ
ಸಂಘದುಸಿರಾಗಿ ತನು ಮನ ಧನವೆರೆಯೆ
ನೆರವೇರಿತಷ್ಟಿಷ್ಟು
ಕುಲಕೋಟಿ ಧನ್ಯ ಮಲ್ಲಪ್ಪ ಶರಣು !

—ಎಸ್. ಕಂಬಣ್ಣ

ಶ್ರೀಮಾನ್ ಎಸ್. ಮಲ್ಲಪ್ಪನವರ ಮತ್ತು ನನ್ನ ಮೈತ್ರಿ

ಜಿ. ವಿ. ನಾ.

ಶ್ರೀಮಾನ್ ಎಸ್. ಮಲ್ಲಪ್ಪನವರ ಮತ್ತು ನನ್ನ ಮೈತ್ರಿ ಅರವತ್ತು ಅರವತ್ತೆರಡು ವರ್ಷಗಳ ಹಿಂದೆ ಘನೀಕೃತವಾಯಿತು. ಅಲ್ಲಿಂದ ಇಲ್ಲಿನವರೆಗೆ ಅವ್ಯಾಹತವಾಗಿ ನಡೆದು ಬಂದಿದೆ : ಅದಕ್ಕೆ ಯಾವ ಉಪಹತಿಯೂ ಇಲ್ಲ. ವರ್ಷ ವರ್ಷಗಳು ಕಳೆದಂತೆ, ಅದರ ಹರಿವು ಎದ್ದು ಬಿದ್ದು ಸಾಗಿದೆ ; ಎದ್ದು ಸಾಗಿದಾಗ ಸರಾಗ ; ಬಿದ್ದು ಸಾಗಿದೆ ಎಂದರೆ ಅಗೋಚರವಾಗಿ ಸಾಗಿದೆ ; ಅದು ಬೀಳು ಅಲ್ಲ.

ಇಬ್ಬರದೂ ಕಾಲೇಜಿನವರೆಗೂ ಒಂದು ರೀತಿಯಲ್ಲಿ ಸಮ ನೆಲದಲ್ಲಿ ಪಯಣ. ಆಮೇಲೆ ಜಾಡು ಬದಲಾಯಿತು : ನನ್ನದು ಒಂದು ರೀತಿ ; ಅವರದು ಮೂವತ್ತು ಮೂವತ್ತೆರಡು ವರ್ಷಗಳು ಸರಕಾರೀ ನೊಗಕ್ಕೆ ಕಟ್ಟಿದ ಸೇವೆ : ಪ್ರಾಮಾಣಿಕ ಸೇವೆ. ಅನಂತರ ವಿಶ್ರಾಂತಿ ಜೀವನ. ವಿಶ್ರಾಂತ ಜೀವನ ಹೆಚ್ಚು ಪ್ರಾಮಾಣಿಕ ಸೇವೆಗೆ ಸ್ವಯಂ ಅರ್ಪಿಸಿಕೊಂಡರು. ವಿಶ್ರಾಂತ ಜೀವನದ ವಿವಿಧ ಕಾರ್ಯಗಳಿಗೆ ಆಗಲೇ ಹಿನ್ನೆಲೆಯನ್ನು ಕಲ್ಪಿಸಿಕೊಂಡಿದ್ದರು. ಅದು—ಕಾಳಿದಾಸ ವಿದ್ಯಾರ್ಥಿನಿಲಯವನ್ನು ತುಮಕೂರಿನಲ್ಲಿ ಸ್ಥಾಪಿಸಿ ಯಶಸ್ವಿಯಾಗಿ ನಡೆಸಿಕೊಂಡು ಬಂದಿದ್ದರು. ಕಾಳಿದಾಸ ವಿದ್ಯಾರ್ಥಿನಿಲಯ ಅವರ 'ಮಾನಸಿಕ ಕೂಸು'. ಅದು ಇಪ್ಪತ್ತೈದು ವರ್ಷಗಳು ಕಳೆದು ಯೌವನಕ್ಕೆ ಕಾಲಿಟ್ಟಿದೆ. ಸಹಸ್ರಾರು ವಿದ್ಯಾರ್ಥಿಗಳಿಗೆ ಅನ್ನ, ನಿಲಯ ಸೌಲಭ್ಯವನ್ನು ಕಲ್ಪಿಸುವ ಏರ್ಪಾಟು ಮಾಡಿದೆ. ತುಮಕೂರು ಜಿಲ್ಲೆಯಲ್ಲಿ ಇದರ ಶಾಖಾ ಸಂಸ್ಥೆಗಳೂ, ಅವುಗಳ ಆಶ್ರಯದಲ್ಲಿ ಪ್ರೌಢಶಾಲೆಗಳೂ ಸೇವೆ ಸಲ್ಲಿಸುತ್ತಿವೆ. ತುಮಕೂರಿನಲ್ಲಿ ಕಾಳಿದಾಸ ಜೂನಿಯರ್ ಕಾಲೇಜು ಆರಂಭವಾಗಿ ಪ್ರಥಮ ದರ್ಜೆ ಕಾಲೇಜೊಂದರ ಪ್ರಾರಂಭಕ್ಕೆ ಏರ್ಪಾಟು ನಡೆಯುತ್ತಿದೆ.

ಇದೆಲ್ಲದರ ಹಿಂದೆ ಒಂದು ನಿಗೂಢ ಹಂಬಲ ಕಂಡುಬಂದಿದೆ. ಅದು ಸೇವಾ ಮನೋಭಾವ ; ಪ್ರತಿಫಲಾಪೇಕ್ಷೆಯಿಲ್ಲದ ಸೇವೆ : ನಿಷ್ಕಾಮ ಕರ್ಮ ; ಸೇವೆಗಾಗಿ ಸೇವೆ. ಈ ಭಾವನೆ ಅವರ ಚೇತನಕ್ಕೆ ಆಪ್ಯಾಯಮಾನ. ತಾನು ವಿದ್ಯಾಭ್ಯಾಸ ಮಾಡುವಾಗ ಇದ್ದ ತೊಂದರೆಗಳು, ಅವುಗಳ ನೆನಪು ಮುಂದಿನ ಪೀಳಿಗೆಗೆ ಇರಬಾರದೆಂಬ ಸತ್ಯ ನಿಷ್ಠೆ, ಆದಷ್ಟು ಉಪಕಾರವಾಗಬೇಕೆಂಬ ಚಿಂತೆ.

ದಿವಂಗತ ಸಚಿವ ಶ್ರೀ ಟಿ. ಮರಿಯಪ್ಪನವರು ಮೈಸೂರಿನಲ್ಲಿ ಒಂದು ವಿದ್ಯಾರ್ಥಿನಿಲಯ ಆರಂಭ ಮಾಡಿದ್ದರು. ಅವರು ಒಬ್ಬ ಸೇವಾ ಜೀವಿ. ಆ ವಿದ್ಯಾರ್ಥಿನಿಲಯದಲ್ಲಿ ತುಮಕೂರಿನ ವಿದ್ಯಾರ್ಥಿಗಳೇ ಬಹಳ. ಎಲ್ಲ ಮೊದಲನೆಯ ವರುಷದ ಬಿ.ಎ. ಅಥವಾ ಎರಡನೆಯ ವರುಷದ ಬಿ.ಎ. ತರಗತಿಯಲ್ಲಿ ಓದುತ್ತಿದ್ದರು. ಅಧ್ಯಾಪಕರೋ ಒಬ್ಬರಿಗಿಂತ ಒಬ್ಬರು ಆದರ್ಶಪ್ರಾಯರಾಗಿದ್ದರು. ಅವರೆಲ್ಲ ವಿದ್ಯಾರ್ಥಿಗಳಿಗೆ ಆದರ್ಶ ನೀಡುತ್ತಿದ್ದರು. ಆ ವಿದ್ಯಾರ್ಥಿನಿಲಯದಲ್ಲಿ ಸ್ನೇಹಿತರಿದ್ದದ್ದರಿಂದ ನನಗೆ "ಮಾತೃ ಮಂದಿರ" ದಂತಿತ್ತು. ಮೊದಲನೆ ವರ್ಷದ ಒಂದೆರಡು ತಿಂಗಳು, ಶನಿವಾರ ಅಲ್ಲೇ ಭೋಜನ ಮಾಡಿಸುತ್ತಿದ್ದರು. ಭೋಜನಕ್ಕೆ ಮುಂಚೆ ಒಂದು ಗಂಟೆ ಕಾಲ ನಾನು ಶ್ರಾವ್ಯವಾಗಿ ಹಾಡುತ್ತಿದ್ದೆ. ರಾಷ್ಟ್ರ ಗೀತೆಗಳು, ದೇವರ ನಾಮವನ್ನು ಹೇಳುತ್ತಿದ್ದೆ. ಎಲ್ಲ ಸ್ನೇಹಿತರೂ ಕುಳಿತು ಆನಂದದಿಂದ ಕೇಳುತ್ತಿದ್ದರು. ಹೀಗೆ ಆ ವಿದ್ಯಾರ್ಥಿನಿಲಯ ನನಗೆ ಪ್ರಸಾದವನ್ನಿತ್ತು ಕೆಲವು ತಿಂಗಳ ಕಾಲ ನನ್ನನ್ನು ಸಲಹಿತು. ನಾನು ಬ್ರಾಹ್ಮಣ. ನನ್ನ ಸ್ನೇಹಿತರೂ ಬ್ರಾಹ್ಮಣರಂತೆಯೇ ವರ್ತಿಸುತ್ತಿದ್ದರು. ಹೆಸರಿಗೆ ಎಲ್ಲರೂ "ಕುರುಬರು".

ಈ ಜಾತ್ಯತೀತ ಭಾವನೆ ನನ್ನಲ್ಲಿ ಚೆನ್ನಾಗಿ ಬೇರೂರಿತು. ಇದಕ್ಕೆ ನಾನು ನನ್ನ ಸ್ನೇಹಿತರಿಗೆ ಮುಖ್ಯವಾಗಿ ಶ್ರೀ ಮಲ್ಲಪ್ಪನವರಿಗೆ ಕೃತಜ್ಞನಾಗಿದ್ದೇನೆ. ಈ ಪ್ರಸಂಗವನ್ನು ನಾನು ಉಲ್ಲೇಖಿಸಲು ಕಾರಣ

ಅವರ ಸದ್ಭಾವ. ಈ ಭಾವನೆಯಿಂದಲೇ ಶ್ರೀ ಮಲ್ಲಪ್ಪ ತಾವೂ ಪ್ರೇರಿತರಾಗಿ ವಿದ್ಯಾರ್ಥಿನಿಲಯಗಳನ್ನು ಆರಂಭಿಸಲು, ಅವುಗಳನ್ನು ನಡೆಸಲು ಕೃತನಿಶ್ಚಯರನ್ನಾಗಿ ಮಾಡಿರಬೇಕು.

ಕಾಲೇಜು ಶಿಕ್ಷಣ ಮುಗಿಯಿತು. ಒಬ್ಬೊಬ್ಬರದೂ ಒಂದೊಂದು ದಾರಿ. ನಾನು ಶಿಕ್ಷಣ ಮುಗಿಯದೆ ಹಾಗೇ ಮನೆಗೆ ಬಂದೆ. ನನಗೆ ಮದುವೆಯೂ ಆಯಿತು. ಚಿಕ್ಕನಾಯಕನಹಳ್ಳಿ ನನಗೆ ಆಶ್ರಯ ಕೊಟ್ಟಿತು. ನಾನು ಕಾಂಗ್ರೆಸ್ ಕಾರ್ಯ, ವಯಸ್ಕರ ಶಿಕ್ಷಣ ಕಾರ್ಯದಲ್ಲಿ ನಿಮಗ್ನನಾದೆ. (ವಯಸ್ಕರ ಶಿಕ್ಷಣ ಸಮಿತಿ ಇನ್ನೂ ಹುಟ್ಟಿರಲಿಲ್ಲ.)

ಆಗ ಸಹಕಾರ ತತ್ವ ಪ್ರಚಾರವಾಗುತ್ತಿದ್ದ ಕಾಲ. ಶ್ರೀ ಮಲ್ಲಪ್ಪನವರೂ ನಮ್ಮೂರಿಗೆ ವರ್ಗವಾಗಿ ಬಂದರು. ಇಬ್ಬರೂ ಮಿತ್ರರ ಸಮಾಗಮ! ಸಂಘಗಳ ಮಹಾಸಭೆಗಳೆಷ್ಟು, ಹೊಸ ಸಂಘಗಳ ಸ್ಥಾಪನೆ ಎಷ್ಟು, ಬಳಕೆದಾರರ ಸಂಘಗಳೆಷ್ಟು! ನನ್ನದೇ ಅಧ್ಯಕ್ಷತೆ. ಅವರು ಬೈಸಿಕಲ್ ಸವಾರಿ, ನಾನು ಹಿಂದುಗಡೆ ಕೂರುತ್ತಿದ್ದೆ. ತಾಲ್ಲೂಕಿನ ಬಹುತೇಕ ಸಂಘಗಳು ಮೂಲೆಗುಂಪಾಗಿದ್ದವು. ಎಲ್ಲಕ್ಕೂ ಸಂಚಲನ ಶೀಲ ಶಕ್ತಿ ಕೊಡುತ್ತಿದ್ದೆವು. ಕಾಂಗ್ರೆಸ್ ಕಾರ್ಯಕರ್ತನಾಗಿ ನನಗೆ ಭಾಷಣ ಮಾಡುವ ಕಲೆ ಬರುತ್ತಿತ್ತು. ಅವರದು ಭಾಷಣ—"ಜನತಾ ಭಾಷೆಯಲ್ಲೇ" ಇರುತ್ತಿತ್ತು.

ಒಂದು ಸಹಕಾರ ಸಂಘದ ಮಹಾಸಭೆ ಉಲ್ಲೇಖನೀಯ. ಚರ್ಮ ಹದಮಾಡಿ ಪಾದರಕ್ಷೆ ಮಾಡುವ ಸಂಘ. ಎಲ್ಲರೂ ಆದಿಕರ್ನಾಟಕರು. ಮಾವ ಮತ್ತು ಅಳಿಯ ಸಂಘದ ಅಧ್ಯಕ್ಷ ಮತ್ತು ಕಾರ್ಯದರ್ಶಿ. ಮೊದಲು ಮೊದಲು ಎಲ್ಲ ಚೆನ್ನಾಗಿತ್ತು. ಮಹಾಸಭೆಯ ವೇಳೆಗೆ ಎಲ್ಲವೂ ಹಳಸಿಕೊಂಡಿತ್ತು. ಮಧ್ಯಾಹ್ನ 12 ಗಂಟೆ ಆಗಿತ್ತು. ಊಟ ಮಾಡಲು ಮಗುಟ ಉಟ್ಟುಕೊಂಡು ಸಿದ್ಧವಾಗಿದ್ದೆ. ಅಷ್ಟು ಹೊತ್ತಿಗೆ ಬಾಗಿಲಲ್ಲಿ ಶಬ್ದ. 'ಯಾರು' ಎಂದೆ. "ನಾನು" ಎಂದು ಉತ್ತರ ಬಂದಿತು. ನಾನು ಹೋಗಿ ಬಾಗಿಲು ತೆಗೆದೆ. "ಅತಿ ಮುಖ್ಯ, ಒಂದು ಮಹಾಸಭೆ ಆಗಬೇಕಾಗಿದೆ. ಜಾಗ್ರತೆ ಬಂದು ಬಿಡೋಣ," "ಊಟ ಮಾಡಿಕೊಂಡು ಬರುತ್ತೇನೆ" ಎಂದೆ ನಾನು. "ವ್ಯವಧಾನವಿಲ್ಲ, ಬಂದು ಮಾಡೋಣ. ನಾನೂ ಬರುತ್ತೇನೆ". ನನಗೆ ಉತ್ತರ ತೋಚಲಿಲ್ಲ. "ಸರಿ" ಎಂದು ಬೇಗ ಬೇಗನೆ ಉಡುಪನ್ನು ಹಾಕಿಕೊಂಡು, ಇಬ್ಬರೂ ಹೊರಟೆವು.

ಆದಿಕರ್ನಾಟಕರ ಶಾಲೆಯ ಹತ್ತಿರ ಹೋದೆವು. ಶಾಲೆ ಬಾಗಿಲು ತೆರೆದಿತ್ತು. ಕುರ್ಚಿ, ಮೇಜು ಇದೆ. ಮಾವಿನ ಸೊಪ್ಪಿನ ತೋರಣ ಬೇಕೋ ಬೇಡವೋ ಎಂಬಂತೆ ಕಟ್ಟಿದೆ. ಯಾರೂ ಇಲ್ಲ. ಐದು ನಿಮಿಷ ಕಾದೆವು, "ಸರಿ, ನಾನೇ ಹೋಗಬೇಕು." ಅನತಿದೂರದಲ್ಲಿ ಹಟ್ಟಿ, ಸುಮಾರು ಅರವತ್ತು ಮನೆಗಳು. ಇಬ್ಬರೂ ಹೊರಟೆವು. ಎರಡು ಗಂಟೆಗಳ ಪಂಚಾಯಿತಿ ಆಯಿತು. ಮೂರರ ವೇಳೆಗೆ 50—60 ಜನ ಸದಸ್ಯರೊಂದಿಗೆ ಆದಿಕರ್ನಾಟಕರ ಶಾಲೆಯ ಬಳಿಗೆ ಬಂದೆವು. ಎಲ್ಲ ಮೌನ; ಪ್ರಾರ್ಥನೆ ಆಯಿತು. ಕಾರ್ಯದರ್ಶಿಯ ಸ್ವಾಗತ! ಅಷ್ಟು ಇಷ್ಟು ಎನ್ನುವ ಹೊತ್ತಿಗೆ ಹಿಂದಿನ ವರ್ಷದ ಆಯ—ವ್ಯಯ ಪಟ್ಟಿ ಪಠನ. ಅಲ್ಲೇ ತಸಕಲು. ಕಾರ್ಯದರ್ಶಿ ಏನೋ ಎತ್ತಲು ಹೋದ. ಶ್ರೀ ಮಲ್ಲಪ್ಪನವರಿಗೆ "ವ್ಯಾಘ್ರ ಕೋಪ" ಬಂದಿತು. "ಆಗಲೇ ಪಂಚಾಯಿತಿ ಆಗಿ ಎಲ್ಲ ತೀರ್ಮಾನವಾಗಿದೆ. ಮತ್ತೆ ಪ್ರಸ್ತಾಪಿಸುತ್ತೀಯಲ್ಲ" ಎಂದರು. ಅವನು ಸುಮ್ಮನಾದ. ಉಳಿದ ಮಹಾಸಭೆ ಸರಾಗವಾಗಿ ರಾತ್ರಿ ಒಂಭತ್ತು ಗಂಟೆಗೆ ಮುಕ್ತಾಯ. ಈ ಪ್ರಸಂಗ ನನಗೆ ಪ್ರಥಮ ಸಹಕಾರ ಸಂಘಗಳ ರಿಜಿಸ್ಟ್ರಾರ್ ದಿವಂಗತ ಶ್ರೀ ಕೆ. ರಾಮಯ್ಯನವರ ನೆನಪನ್ನು ತಂದಿತು. ಅವರ ಭಾಷಣದ ವೈಖರಿ ಹಾಗಿತ್ತು.

ಹೀಗೆ ನಿಸ್ಪೃಹ ಸೇವೆಯ ಪರಿಣಾಮ ಅಮೋಘವಾಗಿತ್ತು. "ನೂಲುವವರ ಸಂಘ", "ಉಣ್ಣೆ ಕಂಬಳಿಗಳ ಸಂಘ" ಇವನ್ನೆಲ್ಲಾ ಮಾಡಿದರು. ಇವುಗಳ ಇತಿಹಾಸ ಬೇರೆ. ಅವರಿಗೆ ಬಡ್ತಿಸಿಕ್ಕಿ ವರ್ಗವಾಗಿ ಮುಂದಕ್ಕೆ ಹೋದರು.

ಚಿಕ್ಕನಾಯಕನಹಳ್ಳಿಯಲ್ಲಿ ಇನ್ನೊಂದು ಪ್ರಸಂಗ ನಡೆಯಿತು. ಅವರಿಗೆ ಮಕ್ಕಳಿರಲಿಲ್ಲ. ಅವರ ಶ್ರೀಮತಿ ಗರ್ಭಿಣಿಯಾಗಿದ್ದರು. ಇಬ್ಬರಿಗೂ ಸಂತೋಷ. ಇನ್ನೇನು ತುಮಕೂರಿಗೆ ಹೋಗಬೇಕು ಎನ್ನುವಷ್ಟರಲ್ಲಿ ಊರಿಗೆ ಉಗ್ರ ಪ್ಲೇಗು ಬಂದಿತು. ಇಬ್ಬರೂ ಅನತಿದೂರದಲ್ಲೇ ಗುಡಿಸಿಲುಗಳನ್ನು ಹಾಕಿಕೊಂಡೆವು. ನಮ್ಮ ಗುಡಿಸಿಲಿಗೆ ಹೋಗಿ ಒಂದೆರಡು ದಿನ ಕಳೆದಿರಲಿಲ್ಲ. ಶ್ರೀ ಮಲ್ಲಪ್ಪ ಮನೆಗೆ ಬಂದರು. ಆಸ್ಪತ್ರೆಯಲ್ಲಿ ಎಲ್ಲಾ ರಜಾ ಹೋಗಿದ್ದಾರೆ. "ನೋವು! ನನ್ನ ಹೆಂಡತಿಗೆ ನೋವು! ಎಂದರು." ನನಗೆ "ಸಮಯದಲ್ಲಿ ಯಾರೂ ಇಲ್ಲವಲ್ಲ" ಎಂದು ಮನಸ್ಸಿನಲ್ಲಿ ಕೊರೆಯುತ್ತಿತ್ತು. ಸ್ವಲ್ಪ ಹೊತ್ತಾದ ಮೇಲೆ ನಮ್ಮಮ್ಮನ ಮುಂದೆ ತೋಡಿಕೊಂಡೆ. ಅವರು ಕೂಡಲೇ "ಇದಕ್ಕಿಂತ ಪುಣ್ಯದ ಕೆಲಸ ಇಲ್ಲಪ್ಪ" ಎನ್ನುತ್ತಲೇ ಅವರ ಗುಡಿಸಿಲಿಗೆ ಹೋದರು. ನಸು ವೇಳೆ ಕಳೆಯಿತು. ನಗು ನಗುತ್ತ ನಮ್ಮಮ್ಮ ಗುಡಿಸಿಲಿಗೆ ಬಂದರು. ಅವರ ಪ್ರಥಮ ಪುತ್ರ ಜನಿಸಿದ್ದ!

ಮುಂದೆ ಮೈಸೂರಿನಲ್ಲಿ 'ಗಾಂಧೀ ಗ್ರಂಥಮಾಲೆ'ಯ ಸಂಪಾದಕನಾದೆ. ಒಂದು ದಿನ ಬೆಳಗ್ಗೆ ಕಾರ್ಯಾಲಯದಲ್ಲಿ ಕೆಲಸ ಮಾಡುತ್ತ ಕುಳಿತಿದ್ದೆ. ಹಲವು ವರ್ಷ ಕಳೆದಿದ್ದವು. ಶುದ್ಧ ಖಾದೀ ಧಾರಿ ಶ್ರೀ ಮಲ್ಲಪ್ಪನವರ ಬರುವಿಕೆ. ಯಾರೆಂದು ಕಣ್ಣರಳಿಸಿ ನೋಡುತ್ತಿರುವಲ್ಲಿ "ಗುರುತು ಇದೆಯೇ" ಎಂದರು. ನಾನು "ಗುರುತು ಇಲ್ಲದೆ ಏನು? ಇದೆಲ್ಲ ಬದಲಾವಣೆ?" ಎಂದೆ. "ನಾನೀಗ ಕರ್ನಾಟಕ ಖಾದೀ ಬೋರ್ಡಿನ ಕಾರ್ಯದರ್ಶಿ. ಕಾರ್ಯದ ಮೇಲೆ ಬಂದಿದ್ದೇನೆ." ಅವರನ್ನು ಆತ್ಮೀಯವಾಗಿ ತಬ್ಬಿಕೊಂಡೆ. ಇಬ್ಬರಿಗೂ ವ್ಯತ್ಯಾಸವಿರಲಿಲ್ಲ. ಅಷ್ಟು ಐಕ್ಯ! "ಏನಮ್ಮ, ಯಾರ್ ದುಡ್ಡು ಅಂತ ಲಕ್ಷಗಟ್ಟಲೆ ಪಡೆದಿದ್ದಾರೆ. ಒಂದು ಕಾಸೂ ಪಾವತಿ ಇಲ್ಲ. ಇವರಿಗೆ ಬೋರ್ಡಿನ ವತಿಯಿಂದ ಒಬ್ಬ ಗುಮಾಸ್ತ ಬೇರೆ! ನೋಟೀಸು ಕೊಡಿಸುತ್ತೇನೆ" ಎಂದು ಅವಸರವಾಗಿ ಹೇಳಿದರು. ನನಗೆ ಅರ್ಥಂಬರ್ಥ ಗೊತ್ತಾಗಿತ್ತು. ಮುಂದೆ ಮಂತ್ರಿಗಳಿಗೆ ಫೋನು! ನಿಸ್ಪೃಹ ಶ್ರೀ ಮಲ್ಲಪ್ಪ "ನನ್ನನ್ನು ಸ್ವಂತ ಇಲಾಖೆಗೆ ಕಳಿಸಿ ಬಿಡಿ" ಎಂದರು. ಅವರ ಸ್ವಂತ ಇಲಾಖೆ ರೆವಿನ್ಯೂ ಇಲಾಖೆ. "ಒಂದು ವರ್ಷ ಇರಿ, ನಿಮ್ಮಂತಹ ಪ್ರಾಮಾಣಿಕರು ವಿರಳ" ಎಂದು ಮಾರುತ್ತರ ಬಂದಿತು.

ಎಂಟು ಹತ್ತು ವರುಷ ಕಳೆಯಿತು. ನಾನೂ ಮೈಸೂರಿನಲ್ಲಿ ಕೆಲಸ ಮುಕ್ತಾಯವಾದ ಮೇಲೆ ಊರಿಗೆ ಬಂದಿದ್ದೆ. ಅವರು ವಿಶ್ರಾಂತರಾಗಿ ತುಮಕೂರಿಗೆ ಬಂದು ನೆಲಸಿದ್ದರು "ಜಿಲ್ಲಾ ಪ್ರೌಢಶಾಲೆಗಳ ಒಂದು ಸಂಯುಕ್ತ ಸಂಘ" ರಚನೆ ಮಾಡೋಣ ಎಂದು ಪತ್ರ ಬಂದಿತು ನಾನೂ ಮೂರು ಪ್ರೌಢಶಾಲೆಗಳನ್ನು ಕಟ್ಟಿದ್ದೆ. "ಆಗಲಿ" ಎಂದು ಬರೆದೆ. ನನ್ನ ಆಶೆಯೂ ಅದೇ ಆಗಿತ್ತು. 1943 ರಲ್ಲಿಯೇ ಒಂದು ಸಮ್ಮೇಳನ ಕರೆದು, ಆಗ ಪ್ಲೇಗಿನ ನಿಮಿತ್ತ ಅದು ಮುಂದಕ್ಕೆ ಹೋಗಿತ್ತು. ಆ ಸಂಸ್ಥೆಗೆ ಒಂದು ಸಂವಿಧಾನ ರಚಿಸಿದೆ. 130 ಶಾಲೆಗಳು ಸದಸ್ಯತ್ವ ಪಡೆದವು. ಶಿಕ್ಷಣ ಸಚಿವ ಶ್ರೀ ಮಲ್ಲಿಕಾರ್ಜುನಸ್ವಾಮಿಗಳ ಬಳಿಗೆ ಹೋಗಿ ಕೇಳಿಕೊಂಡೆವು. ಅವರು ಸಂತೋಷದಿಂದ ಬರಲು ಒಪ್ಪಿದರು. ಸಮ್ಮೇಳನ ಯಶಸ್ವಿಯಾಗಿ ನಿರ್ಣಯಗಳೂ ಒಮ್ಮತದಿಂದ ಅಂಗೀಕೃತವಾದವು. ಅಷ್ಟಿಷ್ಟು ಕಾರ್ಯಗತವಾಗಿದೆ ಎಂಬ ಸಂತೃಪ್ತಿ ಇದೆ.

ಈ ವ್ಯಕ್ತಿಯ ಜೀವನಕ್ಕೆ ವಿಶಾಲ ಹರಿವು. ಅವರ ಅದಮ್ಯ ಉತ್ಸಾಹಕ್ಕೆ ಮೇರೆ ಇಲ್ಲ. "ಕುರುಬರ ಬ್ಯಾಂಕ್" ಸ್ಥಾಪಿಸಿದ್ದಾರೆ. ಕುರುಬ ಜನಾಂಗದ ಏಳ್ಗೆಯ ಬಗೆಗೆ ಸದಾ ಚಿಂತನೆ. ರಾಜ್ಯದ "ಉಲ್ಲನ್ ಸಹಕಾರ ಸಂಘ"ಗಳ ಪ್ರಥಮ ಅಧ್ಯಕ್ಷ. ಕಾರ್ಯ ನಿಮಿತ್ತ ಅವರು ವಿಶ್ರಾಂತರಾಗಿದ್ದಾರೆ. ಅವರ ಜೀವನದಲ್ಲಿ "ವಿಶ್ರಾಂತಿ ಎಂದರೆ, ವೃತ್ತಿ ಬದಲಾವಣೆ" ಎಂಬ ಸರ್ ಎಂ.ವಿ.ಯವರ ವಾಕ್ಯ ಹೆಗ್ಗುರುತಾಗಿದೆ ಎಂದು ಹೇಳಿದರೆ ಅತಿಶಯೋಕ್ತಿಯೇನಲ್ಲ.

ಗೆಳೆಯ ಶ್ರೀ ಮಲ್ಲಪ್ಪ ಆರೋಗ್ಯವಾಗಿರಲಿ. ಅವರ ಶ್ರೀಮತಿಯವರೂ ದೀರ್ಘಕಾಲ ನರಳಿ ಈಗ ಸ್ವಲ್ಪ ಉತ್ತಮ ಕಂಡುಬಂದಿದೆ. ಇಬ್ಬರಿಗೂ ಶ್ರೀ ಹರಿಯ ಕೃಪೆ ಸದಾ ಇರಲಿ.

ದುರ್ಬಲ ವರ್ಗದ ದನಿ ಶ್ರೀ ಎನ್. ಮಲ್ಲಪ್ಪನವರು

ಎಸ್. ಜಿ. ಸಿದ್ಧರಾಮಯ್ಯ

1965 ನೇ ಇಸವಿ. ತುಮಕೂರಿನ ಸರ್ಕಾರಿ ಕಾಲೇಜಿನಲ್ಲಿ ಮೊದಲ ವರ್ಷದ ಬಿ.ಎ. ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದ ನಾನು, ಕಾಳಿದಾಸ ಸಾರ್ವಜನಿಕ ವಿದ್ಯಾರ್ಥಿನಿಲಯದ ವಾಸಿಯಾಗಿದ್ದೆ. ಹಳ್ಳಿಯ ಮಧ್ಯಮ ವರ್ಗದ ಕುಟುಂಬವೊಂದರಿಂದ ಬಂದಿದ್ದ ನನಗೆ ಪಟ್ಟಣ ಹೊಸತು. ಆ ಸಿಮೆಂಟು ಕಟ್ಟಡಗಳು, ಆ ವಾಹನಗಳು, ಆ ಪ್ಯಾಂಟು ಮಿಡಿ ಮ್ಯಾಕ್ಸಿಯ ಅರೆಬರೆ ಇಂಗ್ಲೀಷ್ ಕನ್ನಡ ದನಿಯ ಸಮೂಹ ಸನ್ನಿಗಳು ಎಲ್ಲ ಎಲ್ಲದೂ ನನ್ನಲ್ಲಿ ದಂಗು ಹುಟ್ಟಿಸಿದವು. ಕೀಳರಿಮೆಯ ಪಾತಾಳಕ್ಕೆ ತಳ್ಳಿ ನನ್ನನ್ನು ಮೂಕನನ್ನಾಗಿಸಿದ್ದವು. ನನ್ನವರು ಎನ್ನುವವರನ್ನು ಬಿಟ್ಟು ಮೊದಲಬಾರಿಗೆ ಇಷ್ಟು ದೊಡ್ಡ ಪಟ್ಟಣಕ್ಕೆ ಬಂದಿದ್ದ ನನಗೆ ಎಲ್ಲಿಲ್ಲದ ಒಂಟಿತನ. ನನಗಿದ್ದ ಆಗಿನ ಮನಸ್ಥಿತಿಯಲ್ಲಿ ಈ ಒಂಟಿತನದ ನಡುವೆ ದೊರಕಿದ್ದ ಒಂದೇ ಒಂದು ಸಮಾಧಾನವೆಂದರೆ ನಮ್ಮವರದೇ ಆದ ಹಾಸ್ಟಲಿನಲ್ಲಿ ನಾನಿದ್ದೇನೆ ಎನ್ನುವುದು. ಈಗ ಇದನ್ನೆಲ್ಲ ನೆನಪಿಸಿಕೊಂಡರೆ ನಗು ಬರುತ್ತದೆ. ಎಂಥ ಸಣ್ಣ ಭಾವನೆ ಅನ್ನಿಸಿ ನಾಚಿಕೆಯಾಗುತ್ತದೆ. ಆದರೆ ನನ್ನ ಆಗಿನ ಸ್ಥಿತಿ ಈ ದೇಶದ ದುರ್ಬಲ ವರ್ಗದ ನನ್ನಂಥ ಹಳ್ಳಿ ಹುಡುಗರ ದುರಂತ ಸ್ಥಿತಿಯನ್ನೇ ಪ್ರತಿನಿಧಿಸುತ್ತದೆ.

ಹಾಸ್ಟಲಿಗೆ ಸೇರಿ ಹತ್ತು ಹದಿನೈದು ದಿನಗಳಾಗಿದ್ದವು. ಆ ಹಾಸ್ಟಲನ್ನು ಕಟ್ಟಿಸುವುದಕ್ಕೆ ಶ್ರಮಿಸಿದ ವ್ಯಕ್ತಿಯ ಬಗ್ಗೆ ಹಾಸ್ಟಲಿನ ಅಡಿಗೆಯವರಿಂದ ಹಿಡಿದು ಹಾಸ್ಟಲ್ ವಾಸಿ ಹಲವು ವಿದ್ಯಾರ್ಥಿಗಳೂ ಸೇರಿ ಆಡುತ್ತಿದ್ದ ಗೌರವಮಿಶ್ರಿತ ಮೆಚ್ಚುಗೆಯ ಮಾತುಗಳನ್ನು ಕೇಳಿದ್ದೆ. ಆದರೆ ಆ ವ್ಯಕ್ತಿಯನ್ನು ನೋಡಿರಲಿಲ್ಲ.

ಒಂದು ದಿನ ಮಧ್ಯಾಹ್ನದ ಹೊತ್ತು. ಬೆಳಗ್ಗೆ ಎದ್ದ ತಕ್ಷಣ ಕಣ್ಣಿಗೆ ಕಾಣುವಂತಿರಲಿ ಎಂದು ದೇವರ ಪಟವೊಂದನ್ನು ಕೊಠಡಿಯ ಗೋಡೆಗೆ ನೇತುಹಾಕಲು ಮೊಳೆ ಹೊಡೆಯುತ್ತಿದ್ದೆ. ‘ಲೇ ಯಾವೋನೋ ಅವನು ಮೊಳೆ ಹೊಡೆದು ಗೋಡೆ ತೂತು ಮಾಡ್ತಾ ಇರೋನು’—ಎಂದು ಧಾವಿಸುತ್ತಾ ನನ್ನ ಕೊಠಡಿಯತ್ತಲೇ ಬರುತ್ತಿರುವ ಕೂಗೊಂದು ಕೇಳಿಸಿತು. ಈ ಜೋರಿಗೆ ಭೀತನಾದ ನಾನು ತುದಿನೆಟ್ಟ ಮೊಳೆಯನ್ನು ಗೋಡೆಯಲ್ಲಿ ಹಾಗೇ ಬಿಟ್ಟು ಕಲ್ಲನ್ನು ಕೈಯಲ್ಲಿ ಹಿಡಿದು ಹಿಂತಿರುಗಿ ನೋಡಿದೆ. ಖಾದಿ ಸೂಟು ತೊಟ್ಟ ವ್ಯಕ್ತಿಯೊಬ್ಬರು ‘ಇಳಿಯಯ್ಯ ಮೊದಲು ಕೆಳಗಿಳಿಯೋ’ ಎನ್ನುತ್ತ ಬಾಗಿಲಲ್ಲೇ ನಿಂತಿದ್ದರು. ಹೆದರಿದ ನಾನು ಟೇಬಲ್ಲಿನಿಂದ ಕೆಳಕ್ಕಿಳಿದೆ. ಬೆಪ್ಪಾಗಿ ನಿಂತೆ, ‘ಲೇ ಅಯ್ಯಾ ಯಾರೋ ನೀನು ? ಯಾವೂರೊ ? ಮೊಳೇನ ಗೋಡೆಗೆ ಹೊಡಿತಾ ಇಲ್ಲವೋ ನೀನು, ನನ್ನೆದೆ,...ನನ್ನೆದೆಗೇ ಹೊಡಿತಾ ಇದ್ದೀಯೋ !’ ಎಂದು ವ್ಯಗ್ರವಾಗಿ ನೋಡಿದರು. ನನ್ನ ಹೆದರಿಕೆ ಸಹಜವಾಗಿಯೇ ಜಾಸ್ತಿಯಾಯಿತು. ಮಾತು ತೊದಲಾಗಿ ‘ದೇವರ ಪಟ ತಗಲಾಕ ಬೇಕಾಗಿತ್ತು ಸಾ’ ಎಂದು ಬಡಬಡಿಸಿದೆ. ‘ನಿನ್ನ ದೇವರಿಗೆ ನನ್ನ ಈ ಗೋಡೇನೇ ಬೇಕೇನಯ್ಯಾ? ಯಾಕೆ ಟೇಬಲ್ ಮ್ಯಾಲಿಟ್ಕಂಡ್ರೆ ಆಗಲ್ಲವಾ ? ಯಾವೂರು ನಿಂದು ? ಎಂದರು. ನಾನು ನನ್ನ ಹಳ್ಳಿ ಚಿಕ್ಕನಾಯಕನಹಳ್ಳಿಗೆ ಸಮೀಪದ್ದು ಎಂದು ಹೇಳಿದಾಗ ‘ಓಹೋ ನೀನ್ ಚಿಕ್ಕನಾಯಕನಹಳ್ಳಿ ತಾಲ್ಲೂಕಿನವನಾ ನಾನೂ ಅಲ್ಲಿ ಕೆಲ ದಿವ್ಸ ಇದ್ದೆ ಬಾ ಇಲ್ಲಿ’ ಎಂದು ಆಫೀಸ್ ಕೊಠಡಿಗೆ ಕರೆದುಕೊಂಡು ಹೋದರು. ಅಲ್ಲಿ ಹಾಸ್ಟಲ್ ಗೋಡೆಗೆ ಮೊಳೆ ಹೊಡಿಬಾರದು ಎಂಬುದರಿಂದ ಹಿಡಿದು ಹಾಸ್ಟಲಿನಲ್ಲಿ ಹೇಗೆ ಶಿಸ್ತಿನಿಂದ ವರ್ತಿಸಬೇಕು. ವಿದ್ಯಾಭ್ಯಾಸದ ಬಗ್ಗೆ ಹೇಗೆ ಆಸಕ್ತಿ ವಹಿಸಬೇಕು, ಹಣವನ್ನು ದುಂದು ವ್ಯಯ ಮಾಡಬಾರದು

ಎಂಜಿತ್ಯಾದಿ ಬಗ್ಗೆ ಆತ್ಮೀಯ ತಿಳುವಳಿಕೆಯನ್ನು ದಪ್ಪ ದನಿಯಲ್ಲೇ ಹೇಳಿ ಕಳಿಸಿದರು. ಆಗಲೇ ನನಗೆ ಗೊತ್ತಾದದ್ದು ಇವರೇ ಈ ಹಾಸ್ಟಲಿನ ನಿರ್ಮಾಣಕ್ಕೆ ಶ್ರಮಿಸಿದ ಜೀವಿ ಶ್ರೀ ಎನ್. ಮಲ್ಲಪ್ಪನವರು ಎಂದು. ಅಂದು ನನ್ನನ್ನು ಭಯಬೀಳಿಸಿದ್ದ ಅವರ ಆ ಕೂಗು ಹಾಸ್ಟಲಿನ ಬಗೆಗಿನ ಅವರ ಪ್ರೀತಿಯ ಎಚ್ಚರದ ದನಿಯಾಗಿ ಈಗಲೂ ಆ. ಹಾಸ್ಟಲನ್ನು ನೋಡಿದಾಗ ನನ್ನಲ್ಲಿ ಮಾರ್ದನಿಗೊಳ್ಳುತ್ತದೆ.

ಹಾಸ್ಟಲಿನಲ್ಲಿ ಬರುತ್ತಿದ್ದ ಮೆಸ್ ಬಿಲ್ ಬಗ್ಗೆ ಒಂದು ಮಾತು. ಸ್ವಲ್ಪ ಹಣ ಓಡಾಡುವ ತುಂಬುಗೈ ಹುಡುಗರ ಹಾವಳಿಯಿಂದಾಗಿ ಆಗಾಗ ಮೆಸ್ ಬಿಲ್ ಜಾಸ್ತಿಯಾಗುವುದು ಡಿವೈಡಿಂಗ್ ಪದ್ಧತಿ ಇರುವ ಹಾಸ್ಟಲ್‌ಗಳಲ್ಲಿ ಸಹಜ. ನಮ್ಮ ಹಾಸ್ಟಲಿನಲ್ಲಿ ಹಾಗೇನಾದರೂ ಮೆಸ್ ಬಿಲ್ ನಿಗದಿತ ರೇಖೆಗಿಂತ ಜಾಸ್ತಿ ಬಂದ ತಕ್ಷಣವೇ ಮಲ್ಲಪ್ಪನವರು ಹಾಜರಾಗುತ್ತಿದ್ದರು. ಬಡ ಹುಡುಗರ ವಿದ್ಯಾಭ್ಯಾಸಕ್ಕೆ ಎಲ್ಲಿ ಆ ಬಿಲ್ಲು ಹೊರೆಯಾಗುತ್ತದೆಯೋ ಎಂಬ ಕಳಕಳಿ ಹೆದರಿಕೆ ಅವರ ಆಗಿನ ಪ್ರತಿ ನುಡಿಯಲ್ಲೂ ವ್ಯಕ್ತವಾಗುತ್ತಿತ್ತು.

ಹಣ ಅಧಿಕಾರದ ಹೆಗ್ಗಳಿಕೆಯಲ್ಲಿ ಮೇಲ್ಜಾತಿಯ ಜನ ತಮ್ಮ ಜನಾಂಗದ ಮುಂದುವರಿಕೆಗೆ ಅಗತ್ಯ ಬೇಕಿರುವ ಎಲ್ಲ ಸವಲತ್ತುಗಳನ್ನು ಮಾಡಿಕೊಂಡಿದ್ದಾರೆ. ಇಂಥವರ ಈ ನಡವಳಿಕೆಯಿಂದಾಗಿಯೇ ಇಂದು ಈ ದೇಶ ಚೇತರಿಸಿಕೊಳ್ಳಲಾರದ ಪಾಪಕೂಪಕ್ಕೆ ಬಿದ್ದಿದೆ. ದೇಶದ ತುಂಬ ಜಾತಿಯ ವಿದ್ಯಾಸಂಸ್ಥೆಗಳು ಹಾಸ್ಟಲುಗಳು ಮಠಗಳು ಪೀಠಗಳು ತುಂಬಿ ವಾತಾವರಣ ಉಸಿರು ಕಟ್ಟಿಸುತ್ತಿದೆ. ಈ ಹಳವಂಡ ಎಷ್ಟು ಕ್ರೂರವಾಗಿದೆ ಎಂದರೆ, ದನಿ ಇಲ್ಲದ ದುರ್ಬಲ ವರ್ಗದಿಂದ ಬಂದ ಪ್ರಜ್ಞಾವಂತ ವ್ಯಕ್ತಿಗೆ ಈ ಜಾತಿ ಬುದ್ಧಿ ತಪ್ಪು ಎನ್ನಿಸಿದರೂ ವಿಧಿ ಇಲ್ಲದೆ ತಾನೂ ಅದನ್ನೇ ಅನಿವಾರ್ಯವಾಗಿ ಮಾಡಬೇಕಾಗುತ್ತದೆ: ತನ್ನ ಜನಾಂಗದ ಮೇಲೆ ನಡೆಯುತ್ತಿದ್ದ ಸಾಮೂಹಿಕ ಹತ್ಯೆಯನ್ನು ನೋಡಲಾಗದೆ ಇಷ್ಟವಿಲ್ಲದಿದ್ದರೂ ಜನಾಂಗವಾದಿ ಅರ್ಥ ಬರುವ ಮಾತನ್ನಾಡಬೇಕಾಗಿ ಬಂದ ಐನ್‌ಸ್ಟೀನ್‌ರ ರೀತಿ. ಇಲ್ಲಿ ಐನ್‌ಸ್ಟೀನರಿಂದ ಈ ಅರ್ಥದ ಮಾತುಗಳನ್ನಾಡಿಸಿದ ಪ್ರೇರಣೆ ಜನಾಂಗವಾದಿ ಸಣ್ಣತನವಲ್ಲ, ಮಾನವೀಯ ಪ್ರೇಮ. ನೀತಿ ಹೇಳಲು ಹೋಗಿ ಬರಿಮೈಯಾದ ಬದುಕಿನ ಸ್ಥಿತಿ ದುರ್ಬಲ ಜಾತಿಗಳಿಗೆ ಬರುವುದು ಬೇಡ. ಮೇಲ್ಜಾತಿಯ ಹಾಸ್ಟಲು ಗಳಲ್ಲಿದ್ದುಕೊಂಡು ವಿದ್ಯಾಭ್ಯಾಸ ಮಾಡಬೇಕಾಗಿ ಬಂದಾಗ, ಮೇಲ್ಜಾತಿಯ ಆಡಳಿತ ಸಂಸ್ಥೆಗಳಲ್ಲಿ ಮೇಲ್ಜಾತಿಯ ಅಧಿಕಾರಿಗಳ ಕೈಕೆಳಗೆ ಕೆಲಸ ಮಾಡಬೇಕಾಗಿ ಬಂದಾಗ ಅದರಲ್ಲೂ ಅಂಥ ಸಂಸ್ಥೆ ವ್ಯಕ್ತಿಗಳು ಜಾತ್ಯಂಧರಾಗಿದ್ದಾಗ ಅನುಭವಿಸಬೇಕಾದ ಹಿಂಸೆ ನೋವು ಮೂಕ ಯಾತನಾಶಿಬಿರ. ನೊಂದ ನೋವ ನೋಯದವರೆತ್ತ ಬಲ್ಲರು? ಕುವೆಂಪು ಅವರು ಸಂಸ್ಕೃತ ಭೂಯಿಷ್ಟವಾಗಿ ಬರೆಯಲು ಕಾರಣವಾದ ಐತಿಹಾಸಿಕ ಅನಿವಾರ್ಯತೆಯನ್ನು ಅವರ ಪ್ರಿಯ ಶಿಷ್ಯರು ಒತ್ತಿಒತ್ತಿ ಹೇಳುತ್ತಾರೆ. ಮೂಕ ಯಾತನಾಶಿಬಿರದ ಐತಿಹಾಸಿಕತೆಯಲ್ಲಿ ವಿದ್ಯಾಭ್ಯಾಸ ಸೇವಾ ಜೀವನಗಳನ್ನು ಸಾಗಿಸಿ ಬಂದ ಶ್ರೀ ಎನ್. ಮಲ್ಲಪ್ಪನವರು ತಮ್ಮ ಜನಾಂಗದ ಮತ್ತು ತಮ್ಮಂತೆ ದನಿ ಸತ್ತ ಇತರ ದುರ್ಬಲ ಜನಾಂಗಗಳ ಮಕ್ಕಳು ತಮ್ಮಂತೆ ಮಾನಸಿಕ ಯಾತನೆ ಅನುಭವಿಸುವುದು ಬೇಡ ಎಂಬ ಸದಿಚ್ಛೆಯಿಂದ ಕಾಳಿದಾಸ ವಿದ್ಯಾರ್ಥಿನಿಲಯ ಮತ್ತು ಕಾಳಿದಾಸ ವಿದ್ಯಾಸಂಸ್ಥೆಗಳನ್ನು ಸ್ಥಾಪಿಸಿದ್ದಾರೆ. ಈ ಸಂಸ್ಥೆಗಳು ಅವರ ಸ್ವಾಭಿಮಾನದ ಪ್ರತೀಕಗಳು. ಅವರು ಆಗಾಗ ಹಿಂದುಳಿದ ವರ್ಗಗಳ ವಿದ್ಯಾರ್ಥಿ ಗಳನ್ನು ಕುರಿತು ತುಂಬಾ ಆತ್ಮೀಯವಾಗಿ ಅಷ್ಟೇ ಆಗ್ರಹವಾಗಿ ಬುದ್ಧಿಮಾತುಗಳನ್ನು ಹೇಳುತ್ತಿದ್ದರು. 'ಅಲ್ರೋ ನೀವೆಲ್ಲ ಎಲ್ಲಿದ್ದೀರ್ರೋ........,ಕರಿಯ ಕೆಂಚ ನಿಂಗ ಮಾದ ಬೀರ ಈರ ಚಿಕ್ಕ ನೀವೆಲ್ಲ ಎಲ್ಲಿದೀರ್ರೋ ಮುಂದೆ.....ಮುಂದೆ ಬರ್ರೋ ಆಗೋ ಅಲ್ಲಿ ನೋಡ್ರೋ ಶೀನಿ ನಾಣಿ ಸುಬ್ಬು ಅಪ್ಪಿ ಹೇಗೆ ಐಎಎಸ್ಸು ಐಪಿಎಸ್ಸುಗಳಾಗ್ತಿದಾರೆ. ಅವರ್ನ ಮೇಲಕ್ಕೆ ತರೋಕೆ ಅವರ ಜನ ಇದಾರ್ರೋ. ನಿಮಗೆ ಯಾರಿದಾರೆ? ನಿಮಗೆ ಯಾರೂ ಇಲ್ಲ ಕಣ್ರೋ....ನಿಮಗೆ ನೀವೇ ದಿಕ್ಕು....ಛಲ ಇರಬೇಕ್ರೋ.... ಅವರಿಗಿಂತ ನಾವು ಯಾವ ಶಕ್ತೀಲೂ ಕಡಿಮೆ ಇಲ್ಲ ಅನ್ನ ಛಲ ಇರಬೇಕ್ರೋ....ಸೋಂಭೇರಿತನ ಬಿಟ್ಟು

ಓದ್ರೋ....' ಈ ಇತ್ಯಾದಿ ಅವರ ಮಾತುಗಳು ಈಗಲೂ ನನ್ನ ಕಿವಿಗಳಲ್ಲಿ ಅನುರಣಿತವಾಗುತ್ತಿವೆ. ಅವರಲ್ಲೂ ದುರ್ಬಲ ವರ್ಗದ ನಿರುದ್ಯೋಗಿ ಹಪಾಹಪಿ ಹುಡುಗರನ್ನು ಕಂಡಾಗ ಈ ಅನುರಣನ ಧುತ್ತನೆ ಸುತ್ತುತ್ತದೆ. ಇವು ನೋವಿನ ಮಾತುಗಳು. ಜಾತಿ, ಹಣ, ಅಧಿಕಾರದ ಅಗ್ಗಳಿಕೆಯ ಹಳವಂಡದಲ್ಲಿ ಪ್ರತಿಭೆ ಇದ್ದೂ ವಂಚಿತರಾಗುತ್ತಿರುವ ದುರ್ಬಲ ಶಕ್ತಿಗಳನ್ನು ಕಂಡು ಕರಗಿ ಹರಿದ ಹೃದಯದ ಮಿಡಿತಗಳು.

ಶ್ರೀ ಮಲ್ಲಪ್ಪನವರ ನೇರ ನಿಷ್ಠುರ ನಡೆ ನುಡಿಗಳನ್ನು ಕೇಳಿದ ಕಂಡ ಜನ ಅವರನ್ನು ದರ್ಪಿಷ್ಟ ಜಾತಿವಾದಿ ಎಂದು ತೀರ್ಪು ನೀಡಬಹುದು. ದುರ್ಬಲ ಜಾತಿಗಳ ಬವಣೆ ಕುರಿತ ಮಲ್ಲಪ್ಪನವರ ಕಳಕಳಿಗೆ ಅವರ ನೋವಿನ ಪ್ರೀತಿಯ ನುಡಿ ನಡೆಗೆ ಈ ಸಮಾಜ ಕೊಟ್ಟ ಬಳುವಳಿ ಈ ಕುರುಡು ತೀರ್ಪು ಎಂದು ಭಾವಿಸುತ್ತೇನೆ. ಕಾರಣ ಮಾತಿನಲ್ಲಿ ಬೆಣ್ಣೆ ಕಂಕುಳಲ್ಲಿ ದೊಣ್ಣೆ ಎಂಬ ಪ್ರವೃತ್ತಿಯ ಮುಖವಾಡದ ವ್ಯಕ್ತಿಯಲ್ಲ ಮಲ್ಲಪ್ಪನವರು.

ಎಸ್. ಮಲ್ಲಪ್ಪನವರು

ಹುಟ್ಟು ಉಣ್ಣೆ ನೇಕಾರ
ಬಯ್ಯಿ, ಹೊಯ್ಯಿ, ಹಂಗಿಸಿದರು
ನೀನೆ ನಮ್ಮ ಹೆಮ್ಮೆ.

ಮುಲಾಜಿರದೆ ಮಾತು
ಮನಸ್ಸಿಟ್ಟು ಕೆಲಸ
ಇಂಥ ಕ್ರಿಯಾಶುದ್ಧಿಯನ್ನು
ಬೇರೆ ಎಡೆಗೆ ಕಾಣೆ
ಎಂಟು ದಶ ವಸಂತಗಳಲಿ
ಗ್ರೀಷ್ಮವೆನಿತೊ ತಿಳಿಯೆ.

ನೀನು ಒರಟು, ನೀನು ಮೃದು,
ಇಷ್ಟೆ ಸಾಕು ನಿಷ್ಠೆಗೆ
ಕನಕ ಕಾಳಿದಾಸರಲ್ಲಿ
ನಿನಗೆ ಮಿಗಿಲು ಒಲವು
ಇಲ್ಲಿ ನಿಲಯ ಅಲ್ಲಿ ಶಾಲೆ
ತುಂಬು ತನದ ಫಲವು.

ಮಹಾಮೇರು ಹಟದವನೆ
ಹಳ್ಳಿಗಾಡ ದಿಟದವನೆ
ನೂರು ಕಾಲ ಬಾಳು
ಜಡ್ಡುಗಟ್ಟಿ ನಿಂತ ಜನಕೆ
ತಿವಿದು ಬುದ್ಧಿ ಹೇಳು.

—ವೀಚಿ

ಶ್ರೀಮಾನ್ ಎನ್. ಮಲ್ಲಪ್ಪನವರ ಸಮಾಜ ಸೇವೆ

ಟಿ. ರಂಗದಾಸಪ್ಪ

ಎನ್. ಮಲ್ಲಪ್ಪನವರು ತುಮಕೂರು ಜಿಲ್ಲೆಯ ಕುರುಬ ಜನಾಂಗದಲ್ಲಿ ಜನಿಸಿ, ಬಿ.ಎ. ಪದವೀಧರರಾಗಿ ಮೈಸೂರು ಸರ್ಕಾರದ ಸಹಕಾರ ಇಲಾಖೆಯಲ್ಲಿ ಇನ್‌ಸ್ಪೆಕ್ಟರಾಗಿ ಕೆಲಸ ಆರಂಭಿಸಿದರು. 1946 ರಲ್ಲಿ ಅದೇ ಇಲಾಖೆಯಲ್ಲಿ ಪ್ರೊಬೇಷನರಿ ಅಸಿಸ್ಟೆಂಟ್ ರಿಜಿಸ್ಟ್ರಾರ್ ಆಗಿ ನಾನು ನೇಮಕವಾದ ಸಂದರ್ಭದಲ್ಲಿ ಮಲ್ಲಪ್ಪನವರ ಪರಿಚಯವಾಯಿತು. ಆದರೆ ನಮ್ಮ ಸಂಪರ್ಕ ಬಹುಕಾಲ ಉಳಿಯಲಿಲ್ಲ. ಕಾರಣ ಅವರು ಸಹಕಾರ ಇಲಾಖೆಯಿಂದ ರೆವಿನ್ಯೂ ಇಲಾಖೆಗೆ ವರ್ಗಾವಣೆಯಾಗಿ ಅಮಲ್ದಾರ್ ಹುದ್ದೆಯನ್ನು ಸ್ವೀಕರಿಸಿದರು. ಆಗಿನ ಕಾಲದಲ್ಲಿ ಅಮಲ್ದಾರ್ ಹುದ್ದೆಗೆ ಆಯ್ಕೆಯಾಗಬೇಕಾದರೆ ವಿದ್ಯಾರ್ಹತೆ, ದಕ್ಷತೆ ಮತ್ತು ಹಿರಿಯ ಅಧಿಕಾರಿಗಳ ಕೃಪಾಕಟಾಕ್ಷ ಇವೆಲ್ಲಾ ಬೇಕಾಗಿತ್ತು. ಮಲ್ಲಪ್ಪನವರ ಸೇವಾಹಿರಿತನ, ಕಾರ್ಯದಕ್ಷತೆ ಮತ್ತು ನಿಸ್ಪೃಹತೆ ಇವುಗಳನ್ನು ಗುರ್ತಿಸಿ ಅವರನ್ನು ಅಮಲ್ದಾರ್ ಹುದ್ದೆಗೆ ಏರಿಸಿದರು. ಮಧುಗಿರಿ, ಪಾವಗಡ ಈ ತಾಲ್ಲೂಕುಗಳಲ್ಲಿ ಅಮಲ್ದಾರರಾಗಿ ಕೆಲಸಮಾಡಿ ತುಂಬಾ ಜನಾನುರಾಗಿಗಳಾಗಿದ್ದರೆಂದು ಕೇಳಿದ್ದೇನೆ. ಬಡವರ ಕೆಲಸ, ಹಿಂದುಳಿದ ಜನಾಂಗದವರ ಕಲ್ಯಾಣ, ವಿದ್ಯಾಭ್ಯಾಸ, ಸಹಕಾರ ಮತ್ತು ಗ್ರಾಮೋದ್ಯೋಗಗಳು ಹಾಗೂ ಕುರಿ ಪೋಷಣೆ ಮತ್ತು ಉಣ್ಣೆ ಕೈಗಾರಿಕೆಯ ಅಭಿವೃದ್ಧಿ ಈ ಕ್ಷೇತ್ರಗಳಲ್ಲಿ ಆಸಕ್ತಿ ವಹಿಸಿ ಕೆಲಸ ಮಾಡಿ ಅಪಾರ ಅನುಭವ ಪಡೆದಿದ್ದರು.

ಮಲ್ಲಪ್ಪನವರು ಸಹಕಾರ ಇಲಾಖೆಯಲ್ಲಿ ಇನ್‌ಸ್ಪೆಕ್ಟರಾಗಿ ಕೆಲಸ ಮಾಡುವ ಒಂದು ಸಂದರ್ಭದಲ್ಲಿ ಮೇಲಧಿಕಾರಿಗಳ ಅಧಿಕಾರಷಾಹಿ ಮನೋಭಾವವನ್ನು ಸಹಿಸದೆ, ಅವರ ಅನುಚಿತ ಟೀಕೆ, ಆಕ್ಷೇಪಣೆಗಳನ್ನು ಖಂಡಿಸಿ ರಾಜೀನಾಮೆ ಪತ್ರವನ್ನು ರಿಜಿಸ್ಟ್ರಾರ್ ಅವರಿಗೆ ಕಳುಹಿಸಿದರು. ಆದರೆ ರಿಜಿಸ್ಟ್ರಾರ್‌ರವರು ಅವರ ರಾಜೀನಾಮೆಯನ್ನು ಅಂಗೀಕರಿಸದೆ, ಅವರ ಪ್ರಾಮಾಣಿಕತೆ ಮತ್ತು ದಕ್ಷತೆಗಳನ್ನು ಮೆಚ್ಚಿ, ಅಂಥಾ ಪ್ರಸಂಗಗಳಿಗೆ ಅವಕಾಶ ಕೊಡಬಾರದೆಂದು ತಿಳಿಸಿದರು.

ನಮ್ಮಿಬ್ಬರ ಸಂಪರ್ಕ ನಿಕಟವಾದದ್ದು 1954 ರಿಂದ ಎಂದರೆ ತಪ್ಪಾಗಲಾರದು. ನಾನು ಆಗ ಗ್ರಾಮಾಂತರ ಕೈಗಾರಿಕೆಯಲ್ಲಿ ದಿವಂಗತ ಸರ್ ಎಂ. ವಿಶ್ವೇಶ್ವರಯ್ಯ ಯೋಜನೆಯನ್ವಯ ಸ್ಥಾಪಿತವಾದ ಕೈಗಾರಿಕಾ ಸಹಕಾರ ಬ್ಯಾಂಕಿನ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದೆನು. ಡೈರೆಕ್ಟರ್‌ರವರಾದ ದಿವಂಗತ ಬಿ. ಬೀರಪ್ಪನವರು ಮಲ್ಲಪ್ಪನವರ ಸೇವೆಯನ್ನು ಮೆಚ್ಚಿ, ತುಮಕೂರು ಜಿಲ್ಲೆಯ ಸೂಪರಿಂಟೆಂಡೆಂಟ್ ಆಫ್ ಇಂಡಸ್ಟ್ರೀಸ್ ಆಗಿ ಅವರ ಸೇವೆಯನ್ನು ಪಡೆದರು. ಇದರಿಂದ ವಿಶ್ವೇಶ್ವರಯ್ಯ ಯೋಜನೆಯು ಯಶಸ್ವಿಯಾಗಿ ಕಾರ್ಯಗತವಾಗಲು ಸಾಧ್ಯವಾಯಿತು. ತುಮಕೂರು ಜಿಲ್ಲೆಯಿಂದ ಸಾವಿರಾರು ಸಾಲದ ರಿಕಾರ್ಡುಗಳು ನಮ್ಮ ಬ್ಯಾಂಕಿಗೆ ಬಂದು ಅನೇಕ ಗ್ರಾಮೋದ್ಯೋಗಗಳನ್ನು ಮಾಡುವ ಕಸಬುದಾರರಿಗೆ ಹಣಕಾಸಿನ ನೆರವು ದೊರಕುವಂತಾಯಿತು. ಇವರ ಕಾರ್ಯ ತತ್ಪರತೆ, ಶ್ರದ್ಧೆ, ಉತ್ಸಾಹ ಮತ್ತು ಬಡವರ ವಿಚಾರದಲ್ಲಿ ಅನುಕಂಪ ಎಲ್ಲರೂ ಮೆಚ್ಚುವಂಥದು. ಇಷ್ಟೇ ಅಲ್ಲ ; ಈ ಅವಕಾಶವನ್ನು ಮಲ್ಲಪ್ಪನವರು ಉಪಯೋಗಿಸಿಕೊಂಡು ಸಮಾಜ ಸೇವೆಯನ್ನು ಮುಂದುವರಿಸಿದರು. ಇದೇ ಸಮಯದಲ್ಲಿ ಕಾಳಿದಾಸ ವಿದ್ಯಾವರ್ಧಕ ಸಂಘವನ್ನು ತುಮಕೂರಿನಲ್ಲಿ ಸ್ಥಾಪಿಸಿ, ವಿದ್ಯಾಶಾಲೆಗಳು ಮತ್ತು ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಿ ಬಡ ವಿದ್ಯಾರ್ಥಿಗಳು ಮುಂದುವರೆಯಲು ನೆರವಾದರು.

ಮಲ್ಲಪ್ಪನವರು ಅನೇಕ ಹಿರಿಯ ಅಧಿಕಾರಿಗಳು ಮತ್ತು ಸಾರ್ವಜನಿಕ ಮುಖಂಡರ ಮೆಚ್ಚುಗೆಯನ್ನು ಸಂಪಾದಿಸಿದ್ದರು. ಈ ಪೈಕಿ ಮಾಜಿ ಮಂತ್ರಿಗಳಾದ ದಿವಂಗತ ಹೆಚ್. ಸಿದ್ದವೀರಪ್ಪನವರು ಪ್ರಮುಖರು. ಇವರು ಖಾದಿ ಗ್ರಾಮೋದ್ಯೋಗ ಮಂಡಲಿಯ ಅಧ್ಯಕ್ಷರಾದ ಕೂಡಲೆ ಮಲ್ಲಪ್ಪನವರ ಸೇವೆಯನ್ನು ಪಡೆದು ಮಂಡಲಿಯ ಕಾರ್ಯದರ್ಶಿಯ ಹುದ್ದೆಗೆ ಅವರನ್ನು ಪಡೆದರು. ಉಣ್ಣೆ ಖಾದಿ ಅಭಿವೃದ್ಧಿಗಾಗಿ ಸ್ಥಾಪಿಸಲ್ಪಟ್ಟ ಉಣ್ಣೆನೇಕಾರರ ರಾಜ್ಯ ಮಟ್ಟದ ಸಹಕಾರ ಸಂಘ ಮತ್ತು ಪ್ರಾಥಮಿಕ ಉಣ್ಣೆ ನೇಕಾರರ ಸಹಕಾರ ಸಂಘಗಳ ಪುನರುಜ್ಜೀವನಕ್ಕೆ ಶ್ರೀಮಾನ್ ಮಲ್ಲಪ್ಪನವರು ಶ್ರಮಿಸಿದರು. ಅನಂತರ ಅಸಿಸ್ಟೆಂಟ್ ಕಮಿಷನರ್ ಹುದ್ದೆಗೆ ಬಡ್ತಿಪಡೆದು ಮೈಸೂರಿನಲ್ಲಿ ಡಿವಿಷನಲ್ ಕಮಿಷನರ್ ಅವರಿಗೆ ಸಹಾಯಕ ಕಮಿಷನರ್ ಆಗಿ ಕೆಲಸಮಾಡಿ ನಿವೃತ್ತರಾದರು.

ಮಲ್ಲಪ್ಪನವರು ಸರ್ಕಾರಿ ಸೇವೆಯಿಂದ ನಿವೃತ್ತರಾದ ನಂತರ ಸಾರ್ವಜನಿಕ ಸೇವಾ ಕಾರ್ಯಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ನಿರತರಾದರು. ತುಮಕೂರು ಜಿಲ್ಲೆಗೆ ಮಾತ್ರ ಅವರ ಕಾರ್ಯಕ್ಷೇತ್ರ ಸೀಮಿತವಾಗಲಿಲ್ಲ. ಇಡೀ ಕರ್ನಾಟಕ ರಾಜ್ಯಕ್ಕೆ ವಿಸ್ತಾರವಾಯಿತು. ಉಣ್ಣೆನೇಕಾರರ ರಾಜ್ಯ ಮಟ್ಟದ ಸಹಕಾರ ಸಂಘದ ಅಧ್ಯಕ್ಷರಾಗಿ ಇತ್ತೀಚಿನವರೆಗೂ ಕೆಲಸ ಮಾಡಿ ಆ ಸಂಘವು ನಷ್ಟವನ್ನನುಭವಿಸಿ ಮುಚ್ಚುವ ಸ್ಥಿತಿಗೆ ಬಂದಿದ್ದು, ಇವರ ಸತತ ಪ್ರಯತ್ನದಿಂದ ಲಾಭದಾಯಕವಾಗಿ ಕೆಲಸ ಮಾಡುವಂತಾಯಿತು. ಈ ಸಂಘಕ್ಕೆ ಅಖಿಲ ಭಾರತ ಕೈಮಗ್ಗ ಮಂಡಲಿಯವರು ಒಂದು ತೀವ್ರ ಉಣ್ಣೆ ಕೈಮಗ್ಗ ಅಭಿವೃದ್ಧಿ ಯೋಜನೆಯನ್ನು ಮಂಜೂರು ಮಾಡಿ ಸುಮಾರು ಎರಡು ಕೋಟಿ ರೂಪಾಯಿ ಅಂದಾಜು ವೆಚ್ಚದ ಮೊಬಲಗನ್ನು ಬಿಡುಗಡೆ ಮಾಡಿರುವರು. ಚಿತ್ರದುರ್ಗ, ಧಾರವಾಡ, ಬಳ್ಳಾರಿ, ತುಮಕೂರು ಮತ್ತು ಬಿಜಾಪುರ ಜಿಲ್ಲೆಗಳಲ್ಲಿರುವ ಉಣ್ಣೆ ನೇಕಾರರ ಕಸಬು ಬಹುಮುಖವಾಗಿ ಬೆಳೆಯಲು ಈ ಯೋಜನೆಯಿಂದ ಸಾಧ್ಯವಾಗುವುದು.

ಮಲ್ಲಪ್ಪನವರ ಇನ್ನೊಂದು ಪ್ರಮುಖ ಸಾಧನೆಯೆಂದರೆ ಕುರಿ ಮತ್ತು ಕುರಿ ಉತ್ಪನ್ನಗಳ ಮಂಡಲಿಯ ಸ್ಥಾಪನೆ. ಈಗಿನ ಲೋಕಸಭಾ ಸದಸ್ಯರು, ಮಾಜಿ ಸಚಿವರಾದ ಶ್ರೀ ನಾಯ್ಕರ್ ಅವರ ಕಾಲದಲ್ಲಿ ಮಲ್ಲಪ್ಪನವರು ಒಂದು ಮಸೂದೆಯನ್ನು ತಯಾರು ಮಾಡಿ, ವಿಧಾನ ಸಭೆಯ ಮಂಜೂರಾತಿ ಪಡೆದು ಒಂದು ಸ್ವಾಯತ್ತ ಮಂಡಲಿಯ ಸ್ಥಾಪನೆಗೆ ತುಂಬಾ ಶ್ರಮಿಸಿದರು. ಆದರೆ ಅದರ ಅಧ್ಯಕ್ಷರಾಗಿ ಒಬ್ಬ ರಾಜಕಾರಣಿಯನ್ನು ನೇಮಕ ಮಾಡಿದ ವರದಿಯನ್ನು ಪತ್ರಿಕೆಗಳಲ್ಲಿ ಓದಿದ ಕೂಡಲೆ ಮಲ್ಲಪ್ಪನವರು ತಮ್ಮ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಕೊಟ್ಟರು.

ಈ ರೀತಿ ಮಲ್ಲಪ್ಪನವರ ಸಮಾಜ ಸೇವೆ ಬಹುಮುಖವಾದುದು. ಮೇಲಾಗಿ ಶ್ರೀಯುತರು ಸ್ನೇಹಪರರು, ನಿರಾಡಂಬರ ಜೀವನ ನಡೆಸುವವರು, ಹಿಂದುಳಿದ ಜನಾಂಗ ಹಾಗೂ ನೇಕಾರ ಜನಗಳ ಪ್ರೀತಿ ವಿಶ್ವಾಸಗಳಿಸಿರುವವರು ; ದೇಹಾಲಸ್ಯವನ್ನೂ ಲೆಕ್ಕಿಸದೆ, ಈ ಇಳಿವಯಸ್ಸಿನಲ್ಲೂ ಸಮಾಜ ಸೇವೆಗಾಗಿ ದುಡಿದು, ದಿಟ್ಟ ಹೋರಾಟ ಮಾಡುವ ಮಹನೀಯರು. ಇವರ ಬಹುಮುಖ ಸೇವೆಯನ್ನು ಸ್ಮರಿಸಿ. ಅಭಿನಂದನಾ ಗ್ರಂಥವನ್ನು ಪ್ರಕಟಿಸಿ ಸಾರ್ವಜನಿಕರ ಮೆಚ್ಚುಗೆ ಪಡೆಯುವ ಸಮಿತಿ ಕಾರ್ಯಕ್ರಮವು ಯಶಸ್ವಿಯಾಗಲಿ ಎಂದು ಹಾರೈಸುತ್ತೇನೆ. ಶ್ರೀಯುತರಿಗೆ ಭಗವಂತನು ದೀರ್ಘ ಆಯಸ್ಸು, ಆರೋಗ್ಯಗಳನ್ನು ಅನುಗ್ರಹಿಸಲಿ.

ಹಿರಿಯರೂ ನನ್ನ ಆದರ್ಶಪ್ರಾಯರೂ

ಕೆ. ದಾಸಪ್ಪ

ಶ್ರೀಮಾನ್ ಎನ್. ಮಲ್ಲಪ್ಪನವರು ನನ್ನ ಸ್ಮೃತಿಪಟಲಕ್ಕೆ ಪರಿಚಯವಾಗಿದ್ದು ನಾನು ಲೋಯರ್ ಸೆಕೆಂಡರಿ ತರಗತಿಗೆ ಬಂದಾಗ. ನನ್ನ ಅಪ್ಪ, ಚಿಕ್ಕಪ್ಪಂದಿರು "ನೀನು ಮಲ್ಲಪ್ಪನವರು ಓದಿದ ಹಾಗೆ ಓದಬೇಕು. ಅವರು ಮಾವಿನ ತೋಪಿಗೆ ಬಂದು ಮರದ ಮೇಲೆ ಕೂತು ಓದುತ್ತಿದ್ದರು, ಬಿ.ಎ. ಪಾಸು ಮಾಡಿದರು. ನೀನೂ ಅವರಂತೆ ಓದಿ ಬಿ.ಎ. ಪಾಸು ಮಾಡಬೇಕು. ಇಲ್ಲದಿದ್ದರೆ ಬಿಸಿಲು ಮಳೆ ಎನ್ನದೆ ನೀನು ಹೊಲ ಕೆರೀಬೇಕು" ಎಂದು ಎಚ್ಚರಿಸುತ್ತಿದ್ದರು.

ನನ್ನ ವಿದ್ಯಾಭ್ಯಾಸಕ್ಕೆ ಸ್ಫೂರ್ತಿದಾಯಕ ವ್ಯಕ್ತಿಯನ್ನು ಪ್ರತ್ಯಕ್ಷ ನೋಡಿದ್ದು 1939 ನೇ ಸಂವತ್ಸರದಲ್ಲಿ ನಡೆದ ಅವರ ಮದುವೆಯಲ್ಲಿ. ಅವರು ಮದುವೆ ಮಾಡಿಕೊಂಡದ್ದು ನಮ್ಮ ಕುರುಬ ಸಮಾಜಕ್ಕೆ ಒಂದು ಮಾದರಿಯಾಗಿ ಈಗ್ಯೂ ಉಳಿದಿದೆ.

ನನ್ನ ಜ್ಞಾಪಕದಂತೆ ಅವರ ಮದುವೆ ದಿವಸ ಸಮೃದ್ಧಿ ಮಳೆ. ಆ ದಿನದ ಮಳೆ ಅವರ ಜೀವನ ಸಮೃದ್ಧಿಯ ಸೂಚಕವಾಗಿತ್ತು ಎಂದು ನನ್ನ ಈಗಿನ ಭಾವನೆ. ಬೆಳಗ್ಗೆ ಮುಹೂರ್ತ, ಸಾಯಂಕಾಲ ಹಟ್ಟಿಹಸೆ (ಈಗಿನ ಆರತಿ ಅಕ್ಷತೆ) ಆದಮೇಲೆ ಮಾರನೆ ದಿವಸ ಹೆಂಡತಿಯನ್ನು ಕರೆದುಕೊಂಡು ಸಂಸಾರ ಹೂಡಿ, ಸರ್ಕಾರಿ ಡ್ಯೂಟಿಯ ಮೇಲೆ ಹಾಜರಾದರಂತೆ. ಇವರ ಮದುವೆ ನಡಾವಳಿಕೆ ನಮ್ಮ ಸಮಾಜಕ್ಕೆ ಒಂದು ಸುದ್ದಿಯಾಯಿತು. ಕಾರಣ, ಮದುವೆ ಗಂಡು ಒಂದು ತಿಂಗಳು ಅರಿಸಿನದ ಮೈಯಲ್ಲಿರುವುದರಿಂದ ಹೊರಗೆ ಒಬ್ಬರೇ ಹೋಗಕೂಡದೆಂದು ಒಂದು ಆಚಾರವಿತ್ತು. ಮಲ್ಲಪ್ಪನವರು ಈ ಸಂಪ್ರದಾಯವನ್ನು ಮುರಿದರು.

ಇವರದು ಹಾಲಿನಂಥ ಸಂಸಾರ. ಮೂರು ಗಂಡುಮಕ್ಕಳು. ಮೊದಲನೆಯವರು ಇಂಜಿನಿಯರ್, ಎರಡನೆಯವರು ವೈದ್ಯರು, ಮೂರನೆಯವರು ಉನ್ನತ ವಿದ್ಯಾಧಿಕಾರಿ. ನಾಲ್ಕು ಹೆಣ್ಣುಮಕ್ಕಳು. ಒಳ್ಳೆಯ ಕಡೆ ಸಂಬಂಧಕ್ಕೆ ಮದುವೆ ಮಾಡಿಕೊಟ್ಟಿದ್ದಾರೆ. ಎಲ್ಲಾ ಮಕ್ಕಳೂ ಮಹಾನವಮಿ ಹಬ್ಬಕ್ಕೆ ತಮ್ಮ ಮಕ್ಕಳೊಂದಿಗೆ ತುಮಕೂರಿನಲ್ಲಿ ಸೇರಿದರೆ. ನೋಡುವವರಿಗೆ ನಂದಗೋಕುಲಕ್ಕೆ ಪ್ರವೇಶಿಸಿದಂತೆ ಅನುಭವ. ಈ ಅನುಭವಕ್ಕೆ ಸ್ಫೂರ್ತಿ ಮಲ್ಲಪ್ಪನವರ ಮತ್ತು ಅವರ ಅರ್ಧಾಂಗಿಯ ಅನ್ಯೋನ್ಯತೆ ಮತ್ತು ಅವಿನಾಭಾವ. ಈ ದಿವ್ಯ ಗುಣಗಳು ನನಗೆ ಕಂಡದ್ದು ಅವರ ಜೀವನದ ಉತ್ತರಾರ್ಧದಲ್ಲಿ. ಈ ಸಂಗತಿಗಳನ್ನು ಮುಂದಿನ ಪುಟಗಳಲ್ಲಿ ಸಾಕ್ಷೀಕರಿಸಿದ್ದೇನೆ.

ಮತ್ತೆ ಮಲ್ಲಪ್ಪನವರನ್ನು ನಾನು ಸಂಧಿಸಿದ್ದು ಮೈಸೂರು ಕುರುಬರ ಹಾಸ್ಟೆಲ್‌ನಲ್ಲಿ ಬಿ.ಎ. ಓದಲು ಹೋದಾಗ. "ತುಮಕೂರಿನ ಹುಡುಗರು ಎಷ್ಟು ಮಂದಿ ಇದ್ದಾರೆ?" ಎಂದು ಕೇಳಿದರಂತೆ. ಆಗ ದೊಡ್ಡವೀರಯ್ಯನವರೂ, ನಾನೂ ಹೋಗಿ ಅವರನ್ನು ಕಂಡೆವು. ದೊಡ್ಡವೀರಯ್ಯನವರು ಅವರ ಸಂಬಂಧಿಗಳಾದ್ದರಿಂದ, ನನ್ನನ್ನೇ ಹೆಚ್ಚು ವಿಚಾರಿಸಿಕೊಂಡರು. ಬೆನ್ನುತಟ್ಟಿ "ಚೆನ್ನಾಗಿ ಓದಿ ಪಾಸು ಮಾಡು" ಎಂದು ಹೇಳಿದ ಮಾತು ನನಗೆ ಇನ್ನೂ ಚೆನ್ನಾಗಿ ನೆನಪು. ನಮ್ಮ ಅಪ್ಪನ ಆಸೆ, ಮಲ್ಲಪ್ಪನವರ ಪ್ರೋತ್ಸಾಹ ಈ ಎರಡೂ ನನ್ನ ಶ್ವಾಸಕೋಶಗಳಾಗಿ ಪ್ರಥಮ ಪ್ರಯತ್ನದಲ್ಲೇ ಉತ್ತೀರ್ಣನಾದೆ.

ಶೀಘ್ರವಾಗಿಯೇ ತುಮಕೂರು ಡಿಸ್ಟ್ರಿಕ್ಟ್ ಆಫೀಸಿನಲ್ಲಿ (ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆ) ಹೆಡ್ ಕ್ಲಾರ್ಕ್ ಆಗಿ ನೌಕರಿ ಸಿಕ್ಕಿತು. ಮಲ್ಲಪ್ಪನವರು ಮೊದಲು ಪಾವಗಡದಲ್ಲೂ ಅನಂತರ ಮಧುಗಿರಿಯಲ್ಲೂ ಅಮಲ್ದಾರ್ ಆಗಿದ್ದರು. ಒಂದು ಬಾರಿ ಮಧುಗಿರಿ ತಾಲ್ಲೂಕು ಆಫೀಸಿನಿಂದ ಒಂದು ತುರ್ತು ವರದಿಯನ್ನು ತರಲು ನನ್ನನ್ನು ಕಳುಹಿಸಿದ್ದರು. ಮಧುಗಿರಿ ನನಗೆ ಹೊಸತಾದುದರಿಂದ ಬಸ್ ಇಳಿದು ತಾಲ್ಲೂಕು ಆಫೀಸನ್ನು ಹುಡುಕಿ ಫುಡ್ ಸೆಕ್ಷನ್ನನ್ನು ಪತ್ತೆಮಾಡಿದೆ. ಅಕೌಂಟೆಂಟರಾಗಿದ್ದ ಲಕ್ಷ್ಮೀನರಸಿಂಹಯ್ಯನವರಿಂದ ವರದಿ ತಯಾರು ಮಾಡಿಸುತ್ತಿದ್ದೆ. ಸಾಯಂಕಾಲ ಸುಮಾರು ಐದು ಗಂಟೆ ಸಮಯ. ಸಾಹೇಬರ ಮನೆ ಜವಾನ ಬಂದು ನನ್ನನ್ನು "ಸಾಹೇಬರು ಊಟಕ್ಕೆ ಬರಬೇಕೆಂದು ಹೇಳಿ ಕಳುಹಿಸಿದ್ದಾರೆ" ಎಂದು ಸುದ್ದಿ ತಿಳಿಸಿದ. ಇವರಿಗೆ ಹೇಗೆ ನಾನು ತಾಲ್ಲೂಕು ಆಫೀಸಿಗೆ ಬಂದದ್ದು ಗೊತ್ತಾಯಿತು ? ಮೇಲಾಗಿ ನಾನು ಅಮಲ್ದಾರರ ಮನೆಗೆ ಊಟಕ್ಕೆ ಕರಯಿಸಿಕೊಳ್ಳುವಷ್ಟು ಗೌರವಾನ್ವಿತನೇ ? ಇವರು ನನ್ನ ಸಂಬಂಧಿಕರಂತೂ ಅಲ್ಲವೇ ಅಲ್ಲ ಎಂದುಕೊಂಡು ಮನಸ್ಸಿನಲ್ಲೇ ಲೆಕ್ಕಾಚಾರ ಹಾಕುತ್ತಾ ಹೋದೆ. ಊಟವಾದ ಮೇಲೆ "ನೀನು ಈ ಊರಿನಲ್ಲಿರುವವರೆವಿಗೂ ಇಲ್ಲೇ ಬಂದು ಊಟ ಮಾಡಿಕೊಂಡು ಹೋಗು. ಇನ್ನೆಲ್ಲೂ ಊಟ ತಿಂಡಿಗೆ ಹೋಗಬೇಡ" ಎಂದು ಹೇಳಿದರು.

ಇವರ ಈ ವಾತ್ಸಲ್ಯ ಎಲ್ಲೂ ಬಾಡದೆ ಈ ಪರ್ಯಂತವೂ ಚಿಗುರುತ್ತಲೇ ಬಂದಿದೆ. ನಾನು ಬೇರೆ ಜಿಲ್ಲೆಗಳಲ್ಲಿ ಕೆಲಸ ಮಾಡುತ್ತಿದ್ದಾಗಲೂ ತಪ್ಪದೇ ಇವರ ಮಕ್ಕಳ ಮದುವೆಯ ಕರೆಯೋಲೆಗಳು ಬರುತ್ತಿದ್ದವು. ನನ್ನ ಜೀವನದಲ್ಲೇನಾದರೂ ಕಷ್ಟಕಾರ್ಪಣ್ಯಗಳು ಬಂದರೆ, ಅದು ಹ್ಯಾಗೋ ತಿಳಿದುಕೊಂಡು, ಸಮಾಧಾನ ಮಾತುಗಳನ್ನು ಆಡಿ, ಒಂದು ಪತ್ರ ಬರೆಯುತ್ತಿದ್ದರು. 1976 ನೇ ಇಸವಿಯಲ್ಲಿ ಮಾನಸಿಕ ಒತ್ತಡದಿಂದ ವಿಕ್ಟೋರಿಯ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಸೇರಿದ್ದಾಗ ನನ್ನ ಹತ್ತಿರದ ಸಂಬಂಧಿಗಳೂ ನನ್ನನ್ನು ನೋಡಲು ಬಂದಿರಲಿಲ್ಲ. ಆದರೆ ಇವರು ಬಂದು, ಹಣ್ಣನ್ನು ತಂದು, ಕೆಲವಾರು ಗಂಟೆಗಳ ಕಾಲ ಸಮಾಧಾನಕರವಾದ ಮಾತುಗಳನ್ನಾಡಿ ಹೋದರು. ಡ್ಯೂಟಿ ಡಾಕ್ಟರ್ ಮತ್ತು ಸಿಸ್ಟರ್ಸ್ ಪ್ರತಿ ದಿನವೂ ಸಮಾಧಾನ ಹೇಳಿದರೂ ರುಚಿಸುತ್ತಿರಲಿಲ್ಲ. ಮಲ್ಲಪ್ಪನವರು ಹೇಳಿದ ಮಾತುಗಳು ಬೆಲ್ಲ ಬಾಯಿಗೆ ಹಾಕಿಕೊಂಡ ಹಾಗೆ ಇರುತ್ತಿದ್ದುವು.

ಇವರು ಸರ್ಕಾರಿ ಅಧಿಕಾರಿಯಾಗಿದ್ದಾಗ ತಮ್ಮ ಮಕ್ಕಳ ಜೊತೆಗೆ ನಮ್ಮ ಸಮಾಜದ ದುರದೃಷ್ಟಕರ ಮಕ್ಕಳನ್ನು ತಂದು ಊಟ ಹಾಕಿ ವಿದ್ಯಾದಾನ ಮಾಡುತ್ತಿದ್ದುದು ನಮ್ಮ ಹಳ್ಳಿಗಳಲ್ಲಿ ಆಡುಮಾತಾಗಿತ್ತು. ವಿದ್ಯಾದಾನ ಮತ್ತು ಅನ್ನದಾನ ಎಂಬವು ಅವರಿಗೆ ಎರಡು ಕಣ್ಣುಗಳಿದ್ದಂತೆ. ಇದನ್ನು ನನ್ನ ಮೂವತ್ತೈದು ವರ್ಷದ ಅನುಭವದಲ್ಲಿ ಕಂಡುಕೊಂಡಿದ್ದೇನೆ. ಅವರ ವಯಸ್ಸು ಎಂಟು ದಶಕಗಳನ್ನು ಸಮೀಪಿಸುತ್ತಿದ್ದರೂ ಆ ಎರಡು ಕಣ್ಣುಗಳು ಮಾತ್ರ ದೇದೀಪ್ಯಮಾನವಾಗಿಯೇ ಇವೆ.

ಇವರು ಮಧುಗಿರಿ ತಾಲ್ಲೂಕಿನಲ್ಲಿ ಸಲ್ಲಿಸಿದ ಸರ್ಕಾರಿ ಸೇವೆ, ಜನಸೇವೆಯಾಗಿ ಈಗಲೂ ಜನಗಳ ಮನಸ್ಸಿನಲ್ಲಿ ಅಚ್ಚೊತ್ತಿದಂತೆ ನಿಂತಿದೆ. ಈ ಅವಧಿಯಲ್ಲಿ ತುಮಕೂರು ಜಿಲ್ಲಾಧಿಕಾರಿಯಾಗಿದ್ದ ಶ್ರೀ ಬಿ. ಟಿ. ಕೆಂಪಣ್ಣನವರು ತಮ್ಮ ಸರ್ಕಾರಿ ಸೇವೆಯಿಂದ ಇಲ್ಲೇ ನಿವೃತ್ತರಾದರು. ಜಿಲ್ಲಾ ಕಛೇರಿಯ ಅಧಿಕಾರಿಗಳು ಅವರಿಗೆ ಒಂದು ಬೀಳ್ಕೊಡಿಗೆ ಸಮಾರಂಭವನ್ನು ಏರ್ಪಡಿಸಿದ್ದ ಸಂದರ್ಭದಲ್ಲಿ ಮಾತನಾಡುತ್ತ "ನಾನು ಈ ಜಿಲ್ಲೆಯಲ್ಲಿ ಅಧಿಕಾರ ವಹಿಸಿಕೊಂಡಾಗ, ಜಿಲ್ಲೆಯಲ್ಲೆಲ್ಲಾ ಬರಗಾಲ, ಅದರಲ್ಲೂ ಮಧುಗಿರಿ ಸಬ್ ಡಿವಿಷನ್ ತಾಲ್ಲೂಕುಗಳಲ್ಲಿ ಬಹು ಪ್ರಖರವಾಗಿ ವ್ಯಾಪಿಸಿತ್ತು. ಈ ಬರಗಾಲವನ್ನು ಅಮಲ್ದಾರರುಗಳಾದ ಮಲ್ಲಪ್ಪನವರ (ಮಧುಗಿರಿ), ಮುಪ್ಪಿನಯ್ಯನವರ (ಶಿರಾ) ಪ್ರಾಮಾಣಿಕತೆ ಮತ್ತು ದಕ್ಷತೆಯಿಂದ ಯಶಸ್ವಿಯಾಗಿ ಎದುರಿಸಿದೆನು" ಎಂದು ಹೇಳಿದರು. (ಆ ಕೂಟದಲ್ಲಿ ಮಲ್ಲಪ್ಪನವರಾಗಲಿ, ಮುಪ್ಪಿನಯ್ಯನವರಾಗಲಿ

ಇರಲಿಲ್ಲ). ಜಿಲ್ಲಾಧಿಕಾರಿ ಬಿ. ಟಿ. ಕೆಂಪಣ್ಣನವರು, ಮಲ್ಲಪ್ಪನವರ ದಕ್ಷತೆ ಪ್ರಾಮಾಣಿಕತೆಗೆ ಮೆಚ್ಚಿ ಇವರಿಗೆ ಕೂಡಲೇ ಅಸಿಸ್ಟೆಂಟ್ ಕಮಿಷನರ್ ಆಗಿ ಬಡ್ತಿ ಕೊಡಬೇಕೆಂದು ಬರೆದಿದ್ದು ನನಗೆ ಗೊತ್ತಿಪ್ಪ ವಿಚಾರ.

ನಾನು ಶಿರಾ ತಾಲ್ಲೂಕಿನಲ್ಲಿ ತಾಲ್ಲೂಕು ಶಿರಸ್ತೆದಾರ್/ತಹಶೀಲ್ದಾರ್ ಆಗಿದ್ದಾಗ ಇವರು ಭೂಪಿತರಣಾ ವಿಶೇಷ ಆಸಿಸ್ಟೆಂಟ್ ಕಮಿಷನರ್ ಆಗಿ ಮಂಜೂರು ಮಾಡಿದ ರಿಕಾರ್ಡುಗಳನ್ನು ಆಳೆತ್ತರದ ಎರಡು ಪೆಟ್ಟಿಗೆಗಳಲ್ಲಿ ತುಂಬಿದ್ದರು. "ಮಲ್ಲಪ್ಪನವರ ಜಾತ್ರೆ ದರಖಾಸ್ತು ರಿಕಾರ್ಡುಗಳು" ಎಂದು ನಾಮಕರಣ ಮಾಡಿದ್ದರು. ಇವರ ಈ ಜಾತ್ರೆಯಲ್ಲಿ ಜಮೀನು ಪಡೆದುಕೊಳ್ಳದವನು ಪಾಪಿ ಎನ್ನುವ ಮಾತು ಜನಜನಿತವಾಗಿತ್ತು. ಇವರು ಜಮೀನು ಹಂಚಿದ ವೈಖರಿ ತಿಳಿದುಕೊಳ್ಳಬೇಕಾದ ವಿಷಯವೇ.

ಅರ್ಜಿದಾರರೆಲ್ಲಾ ಸರತಿಯ ಸಾಲಿನಲ್ಲಿ (ಕ್ಯೂ) ಅರ್ಜಿ ಒಡಿದು ನಿಲ್ಲಬೇಕು. ಅರ್ಜಿಯನ್ನು ಕ್ರಮವಾಗಿ ಇವರು ತೆಗೆದುಕೊಂಡು ಅದರ ಮೇಲೆ ಮಂಜೂರಿ ಅಪ್ಪಣೆ ಮಾಡುತ್ತಿದ್ದರು. ಅರ್ಜಿದಾರನು ಮಂಜೂರಾದ ಅರ್ಜಿಯನ್ನು ತೆಗೆದುಕೊಂಡು ಪಕ್ಕದಲ್ಲೇ ಕುಳಿತಿದ್ದ ಗುಮಾಸ್ತೆಗೆ ಕೊಟ್ಟರೆ ಅಲ್ಲೆ ಸಾಗುವಳಿ ಚೀಟಿಯನ್ನು ಕೊಟ್ಟುಬಿಡುತ್ತಿದ್ದರು. ಈ ಕ್ರಮದ ಜಮೀನು ವಿತರಣೆಯಲ್ಲಿ ಒಂದು ಕ್ರಾಂತಿಯಾಯಿತು. ಹಿಂದೆ ಎಂದೂ ಈ ರೀತಿ ಸರ್ಕಾರಿ ಸಾಗುವಳಿ ಜಮೀನನ್ನು ಹಂಚಿರಲಿಲ್ಲ. ಕಂದಾಚಾರದ ಪದ್ಧತಿಯಲ್ಲಿ ನಾಲ್ಕು ಎಕರೆ ಜಮೀನು ಪಡೆಯಬೇಕಾಗಿದ್ದರೆ, ರಿಕಾರ್ಡು ಕೊನೆಯ ಪಕ್ಷ ನೂರುಸಾರಿಯಾದರೂ ರೆವಿನ್ಯೂ ಇನ್‌ಸ್ಪೆಕ್ಟರ್ ಮತ್ತು ತಾಲ್ಲೂಕು ಆಫೀಸಿಗೆ ಸುತ್ತಾಡಬೇಕಾಗಿತ್ತು. ಅರ್ಜಿದಾರನಿಗೆ ಮುಪ್ಪಡರಿದರೂ, ರಿಕಾರ್ಡಿಗೆ ಮಾತ್ರ ಹೊಸ ಹೊಸ ಅನುಮಾನದ ಕೊಂಬೆಗಳು ಚಿಗುರಿಕೊಳ್ಳುತ್ತಿದ್ದವು. ಎಷ್ಟೋ ರಿಕಾರ್ಡುಗಳು ಅಪ್ಪನ ಕಾಲದಲ್ಲಿ ಜನಿಸಿ ಮಕ್ಕಳ ಕಾಲಕ್ಕೆ ತೀರ್ಮಾನವಾಗದೆ ಉಳಿದದ್ದು ಉಂಟು.

ನಾನು ಕೊಡಗಿನ ಸೋಮವಾರಪೇಟೆಯಲ್ಲಿ ತಹಸೀಲ್ದಾರನಾಗಿದ್ದಾಗ ಮತ್ತು ಕೋಲಾರ ಜಿಲ್ಲೆಯಲ್ಲಿ ವಿಶೇಷ ಅಸಿಸ್ಟೆಂಟ್ ಕಮಿಷನರ್ ಆಗಿದ್ದಾಗ ಇವರು ತೋರಿಸಿಕೊಟ್ಟ ದಾರಿಯಲ್ಲೇ ಹೋದೆ. ಜನಗಳು ನನ್ನ ನವೀನ ಮಾದರಿಯನ್ನು ಬಹಳ ಮೆಚ್ಚಿಕೊಂಡರು. ಅತಿ ಹೆಚ್ಚಿನ ಕೆಲಸವನ್ನು ಮಿತ ಅವಧಿಯಲ್ಲಿ ಪೂರೈಸಿದ್ದರಿಂದ ನನಗೂ ಸಮಾಧಾನವಾಯಿತು.

ಸರ್ಕಾರಿ ಸೇವೆಯಿಂದ ವಿಶ್ರಾಂತನಾಗಿ ನಾನು ತುಮಕೂರಿನಲ್ಲಿ ನೆಲೆನಿಂತೆ. ನನ್ನನ್ನು ಬಲವಂತ ಮಾಡಿ ಕಾಳಿದಾಸ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿಯನ್ನಾಗಿ, ಅಧ್ಯಕ್ಷರಾಗಿರುವ ಮಲ್ಲಪ್ಪನವರು ಆರಿಸಿಕೊಂಡರು. ಅಂದಿನಿಂದ ಇಂದಿನವರೆವಿಗೂ ನನ್ನಲ್ಲಿ ಅಸ್ಖಲಿತ ನಂಬಿಕೆ ಇಟ್ಟಿದ್ದಾರೆ. ನನ್ನ ಸಲಹೆಗಳಿಗೆ ಯಾವತ್ತೂ ಪುರಸ್ಕರಿಸಿದ್ದಾರೆ. ಕಳೆದ ಆಗಸ್ಟ್ 1983 ರಲ್ಲಿ ಉಪಾಧ್ಯಾಯರುಗಳ ಆಯ್ಕೆ ಸಮಿತಿಯ ಸಭೆಯು ಇವರ ಅಧ್ಯಕ್ಷತೆಯಲ್ಲಿ ನಡೆಯುತ್ತಿತ್ತು. ಉಪಾಧ್ಯಾಯರ ಆಯ್ಕೆ ಸರ್ಕಾರಿ ಆರ್ಡರ್ ಪ್ರಕಾರ 'ರೋಸ್ಟರ್'ನಂತೆ ಆಯ್ಕೆ ಆಗಬೇಕೆಂದು ಹಟ ಹಿಡಿದೆ. ಕೆಲವು ಸದಸ್ಯರುಗಳು ನಾನು ಹಿಡಿದಿರುವ ಪಟ್ಟನ್ನು ಬಿಡುವಂತೆ ಹೇಳಿ ಎಂದು ಅಧ್ಯಕ್ಷರಿಗೆ ಸೂಚನೆ ಕೊಟ್ಟರು. ಅವರಿಗೆ ಉತ್ತರವಾಗಿ "ದಾಸಪ್ಪ ನನ್ನನ್ನು ಗಾವು ಸಿಗಿದುಬಿಡುತ್ತಾನೆ" ಎಂದು ಹೇಳಿ, ಸದಸ್ಯರಿಗೆ ಸಮಾಧಾನ ಹೇಳಿದರು. ಅವರ ನನ್ನ ಸಂಬಂಧ ಹೀಗೆಯೇ ಮಧುರವಾಗಿ ಬಂದಿದೆ.

ಕಳೆದ ಮೇ 1983 ರಲ್ಲಿ ಬೆಳ್ಳಿಹಬ್ಬದ ಸ್ಮಾರಕ ಕಟ್ಟಡ ಕಟ್ಟಲು ಅಧ್ಯಕ್ಷರು ಪ್ರಾರಂಭಮಾಡಿದರು. ಆಗ ನಮ್ಮ ಸಂಘದಲ್ಲಿದ್ದುದು ಕೇವಲ ಐವತ್ತು ಸಾವಿರ ರೂಪಾಯಿ ಮಾತ್ರ. ಅದರಲ್ಲಿ ಮುವತ್ತುಮೂರು ಸಾವಿರ ರೂಪಾಯಿಯನ್ನು ಕೊರಿಯಾ ಸಿಮೆಂಟ್ ತರಲು ಎಂ.ಎಸ್.ಐ.ಎಲ್. ಕಂಪನಿಗೆ ಕಟ್ಟಿದೆವು. ಉಳಿದದ್ದು ಹದಿನೇಳು ಸಾವಿರ ಮಾತ್ರ. ಇಷ್ಟು ಅಲ್ಪ ಹಣದಲ್ಲಿ ಹೇಗೆ ಒಂದುವರೆ ಲಕ್ಷದ ಅಂದಾಜು ವೆಚ್ಚದ ಕಟ್ಟಡ ಕಟ್ಟಿಸುತ್ತಾರೆ? ಇದೇನು ಹುಚ್ಚು ಸಾಹಸ ಇವರದು ಎಂದುಕೊಂಡೆ. ಈ ಕಳವಳವನ್ನು

ಅವರಲ್ಲಿ ಹೇಳಿದೆ. "ಅಯ್ಯಾ ಬಿಡಯ್ಯ ದೇವರಿದ್ದಾನೆ" ಎಂದರು. ಕೆಲಸ ಪ್ರಾರಂಭವಾದ ಒಂದೆರಡು ತಿಂಗಳುಗಳು ಕಳೆದ ಮೇಲೆ ಮಲ್ಲಪ್ಪನವರ ಪತ್ನಿಯವರಿಗೆ ಕ್ಯಾನ್ಸರ್ ಕಾಣಿಸಿಕೊಂಡಿತು. ಈ ಸಮಾಚಾರ ತಿಳಿದು ನನಗೆ ಜಂಘಾಬಲವೇ ಅಡಗಿಹೋಯಿತು. ಬೆಳ್ಳಿಹಬ್ಬದ ಕಟ್ಟಡ ಎಲ್ಲಿ ಅರ್ಧಕ್ಕೆ ನಿಂತುಹೋಗುತ್ತದೋ ಎಂದು ನನಗೆ ತಲೆಯ ಮೇಲೆ ಆಕಾಶವೇ ಬಿದ್ದ ಹಾಗಾಯಿತು. ಆದರೆ ಯಾವತ್ತೂ ಧೃತಿಗೆಟ್ಟ ಭಾವನೆ ಅವರ ಮುಖದ ಮೇಲೆ ಮೂಡಲಿಲ್ಲ. ಮಾಮೂಲಿನಂತೆ ನನಗಿಂತ ಮೊದಲೇ ಕಟ್ಟಡದ ಬಳಿ ಬಂದು ಕೆಲಸಕ್ಕೆ ಬೇಕು, ಬೇಡಗಳನ್ನು ತಿಳಿದು ಆಯಾ ಸಾಮಾನುಗಳನ್ನು ಪೂರೈಸುತ್ತಿದ್ದರು. 1981 ರಲ್ಲಿ ಅವರಿಗೆ ಸಂಭವಿಸಿದ ರಿಕ್ಷಾ ಆಘಾತದಿಂದ ಅವರ ಸೊಂಟದ ಮತ್ತು ಮೊಳಕಾಲು ಮೂಳೆಗಳಿಗೆ ಜಖಂ ಆಗಿತ್ತಂತೆ. ಈ ಎರಡೂ ಅಂಗಗಳಲ್ಲಿ ಆಗಾಗ್ಗೆ ನೋವು ಕಾಣಿಸಿಕೊಳ್ಳುತ್ತಿದ್ದರೂ, ಕಟ್ಟಡದ ಮೇಲಕ್ಕೆ ಏಣಿಯ ಮೇಲೆ ಹತ್ತಿಹೋಗಿ ಕಾಂಕ್ರೀಟ್ ಸರಿಯಾಗಿ ಹಾಕಿದ್ದಾರೆಯೋ ಇಲ್ಲವೋ ಎಂದು ನೋಡುತ್ತಿದ್ದರು. ಆದರೆ ನನಗೆ ಧೂಳು, ತಂಡಿಯಲ್ಲಿದ್ದರೆ ಕೆಮ್ಮು ಬರುತ್ತಿದ್ದುದರಿಂದ ಸಂಜೆಯಾಗುತ್ತಲೇ ಬಲವಂತ ಮಾಡಿ ಮನೆಗೆ ಕಳುಹಿಸಿ ಕೊಡುತ್ತಿದ್ದರು.

ಮಲ್ಲಪ್ಪನವರ ಪುಣ್ಯವೋ ಅಥವಾ ಅವರ ಪತ್ನಿಯ ಸುಕೃತವೋ, ಕ್ಯಾನ್ಸರ್ ಖಾಯಿಲೆ ರಂಗಮ್ಮನವರ ಮುಂದೆ ಸಲಾಮು ಹೊಡೆದು ಬಿಟ್ಟಿದೆ. ಆಹಾರವನ್ನು ಕೃತಕ ಅನ್ನನಾಳದಿಂದ ತೆಗೆದುಕೊಳ್ಳುತ್ತಿದ್ದಾರೆ. ಎರಡು ತಿಂಗಳಿಗೊಮ್ಮೆ ತಮ್ಮ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳುಗಳಲ್ಲಿ ಸಂಚಿತವಾಗಿಟ್ಟಿರುವ ರಕ್ತವನ್ನು ತಮ್ಮ ಜೀವನ ನಿರ್ವಹಣೆಗೆ ಬೇಕಾದಷ್ಟನ್ನು ತೆಗೆದುಕೊಂಡು ಯಾರಿಗೂ ಯಾವ ತೊಂದರೆ ಕೊಡದೆ, ಲವಲವಿಕೆಯಾಗಿ ಪರಾವಲಂಬಿಯಾಗದೆ ತನ್ನ ಗಂಡನೊಡನೆ ಪರೋಪಕಾರಿಯಾಗಿಯೇ ಬಾಳುತ್ತಿದ್ದಾರೆ. 1984 ನೇ ಆಗಸ್ಟ್ 28 ನೇ ತಾರೀಖು, ತಮ್ಮ ಗಂಡ ಮಲ್ಲಪ್ಪನವರು ಊಟ ಮಾಡಿ ಮಧ್ಯಾಹ್ನ ಮಲಗಿಕೊಂಡಾಗ "ಬಹಳ ಸುಸ್ತಾಗ್ತಾ ಇದೆ" ಎಂದು ಹೇಳಿದರಂತೆ. ಕೂಡಲೇ ತಾವೇ ಹಾಸಿಗೆಯಿಂದ ಎದ್ದು ಆಟೋರಿಕ್ಷಾ ತರಿಸಿ ತಮ್ಮ ಯಜಮಾನರನ್ನು ಚೈತನ್ಯ ನರ್ಸಿಂಗ್ ಹೋಮ್‌ಗೆ ಸೇರಿಸಿದ್ದರು. ಗುಬ್ಬಿಯಲ್ಲಿನ ಮಗಳು–ಅಳಿಯ, ಬೆಂಗಳೂರಿನಲ್ಲಿನ ಮಗ–ಸೊಸೆಗೆ ಸುದ್ದಿ ಕೊಟ್ಟು ಅವರು ಬರುವವರೆಗೂ ಗಂಡನ ಪಕ್ಕದಲ್ಲಿ ಕುಳಿತು ಅವರಿಗೆ ಸಮಾಧಾನ ಹೇಳುತ್ತಿದ್ದರು. ವಿಷಯ ತಿಳಿದು ನರ್ಸಿಂಗ್ ಹೋಮ್‌ಗೆ ಹೋದ ನಮಗೆ ಆಶ್ಚರ್ಯ ಮತ್ತು ನಾಚಿಕೆ ಒಟ್ಟಿಗೆ ಆಯಿತು. ಶ್ರೀಮತಿ ರಂಗಮ್ಮನವರ ಶುಶ್ರೂಷೆಗೇ ಒಬ್ಬರು ಬೇಕಾಗಿರುವಾಗ ಅವರೇ ತಮ್ಮ ನಿರ್ಬಲತೆಯನ್ನು ನಿರ್ಲಕ್ಷಿಸಿ ತನ್ನ ಗಂಡನ ಸೇವೆ ಮಾಡಿದ್ದಾರೆ. ಚೇತರಿಸಿಕೊಂಡ ಮೇಲೆ ಮಲ್ಲಪ್ಪನವರು ಹೆಂಡತಿಗೆ "ನಮ್ಮಪ್ಪ ನೀನು ಮೊದಲು ಮನೆಗೆ ಹೋಗಿ ಸುಧಾರಿಸಿಕೊ, ನಿನಗೆ ಕೈ ಮುಗಿಯುತ್ತೇನೆ" ಎಂದು ಹೇಳಿದರು.

ವೈದ್ಯರು ಮಲ್ಲಪ್ಪನವರಿಗೆ ಬೆಡ್ ರೆಸ್ಟ್ ತೆಗೆದುಕೊಳ್ಳಿ ಎಂದು ಹೇಳಿದ್ದಾರೆ. ಇಷ್ಟಾದರೂ ವಿದ್ಯಾರ್ಥಿನಿಲಯದ ಪ್ರತಿ ನಿತ್ಯದ ಆಗು ಹೋಗು, ಶ್ರೀ ಲಕ್ಷ್ಮೀದೇವರ ದೇವಸ್ಥಾನದ ಸೈಟಿನ ವಿಚಾರದ ಪ್ರಗತಿ, ದ್ವಾರನಕುಂಟೆ, ಬಿದರೆ ಪ್ರೌಢಶಾಲೆಗಳ ಉಪಾಧ್ಯಾಯರ ನೇಮಕಾತಿಗಳ ಮಂಜೂರಿ ಬಂತೇ ಇಲ್ಲವೇ ಈ ವಿಷಯಗಳನ್ನು ಮೇನೇಜರ್, ಕಾರ್ಯದರ್ಶಿಯವರೊಂದಿಗೆ ಪ್ರತಿ ದಿನ ಮಲಕು ಹಾಕಲೇಬೇಕು.

ಈ ದಿವಸ ಬೆಳ್ಳಿಹಬ್ಬದ ಕಟ್ಟಡ ಯಶಸ್ವಿಯಾಗಿ ಪೂರ್ಣಗೊಂಡಿದ್ದರೆ, ಅದರಿಂದ ಶಾಶ್ವತ ಆದಾಯ ಬರುವಂತಾಗಿದ್ದರೆ ಮಲ್ಲಪ್ಪನವರ ಸ್ವಪ್ರಯತ್ನದಿಂದಲೇ. ಅವರು ಆಗಾಗ್ಗೆ "ಬಡ, ಅನಾಥ, ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಉಚಿತ ಊಟದ ವ್ಯವಸ್ಥೆ ಮಾಡುವುದು ನನ್ನ ಜೀವನದ ಗುರಿ. ಅದನ್ನು ಸಾಧಿಸಿದರೆ ನನ್ನ ಜೀವನದ ಗುರಿಯನ್ನು ಬಹುಮಟ್ಟಿಗೆ ಸಾಧಿಸಿದಂತೆ" ಎಂದು ಹೇಳುತ್ತಿದ್ದರು. ಪ್ರಸ್ತುತ ವರ್ಷದಲ್ಲಿ ಸುಮಾರು ಹದಿನೈದು ವಿದ್ಯಾರ್ಥಿಗಳಿಗೆ ಉಚಿತ ಊಟದ ವ್ಯವಸ್ಥೆ ಮಾಡಲಾಗಿದೆ. ಅವರ ಬಯಕೆ ರೂಪುಗೊಂಡು ಅಸ್ತಿತ್ವಕ್ಕೆ ಬಂದಿದೆ, ಇದು ಅವರ ಪುಣ್ಯಫಲ, ನಮ್ಮ ಸಮಾಜದ ಅದೃಷ್ಟ.

ನಾ ಕಂಡಂತೆ

ಆರ್. ತಿಮ್ಮಯ್ಯ

1952 ನೇ ಇಸವಿ. ಪ್ರೌಢ ಶಿಕ್ಷಣದ ಪೂರ್ವಪರೀಕ್ಷೆಯನ್ನು ಮುಗಿಸಿ ತುಮಕೂರು ಜಿಲ್ಲೆಯ ಮಧುಗಿರಿಯ ಸರ್ಕಾರಿ ಪ್ರೌಢಶಾಲೆಯಲ್ಲಿ ಒಂದನೇ ತರಗತಿಗೆ ಹಾಜರಾಗಲು ದಾಖಲಾತಿ ಪಡೆದಿದ್ದೆ. ಭಾರತಕ್ಕೆ ಸ್ವಾತಂತ್ರ್ಯ ಲಭಿಸಿ ಐದನೇ ವರ್ಷ ನಡೆಯುತ್ತಿತ್ತು. "ಭಾರತೀಯರು ನಾವು ಎಲ್ಲರೂ ಒಂದೇ" ಎಂಬ ರಾಷ್ಟ್ರೀಯ ಭಾವನೆ ಸ್ವಾತಂತ್ರ್ಯ ಬಂದ ಆ ಮೊದಲ ವರ್ಷಗಳಲ್ಲಿ ಜನರ ಮನದಲ್ಲಿ ಮೂಡಿ "ಭಾರತೀಯರು ನಾವು ಎಂದೆಂದಿಗೂ ಒಂದೇ" ಎಂಬ ಸುಸ್ವರವು ಜನರ ಕಿವಿಗಳಲ್ಲಿ ಇನ್ನೂ ಮಾರ್ದನಿಸಿ ನವ ಭಾರತದ ನಿರ್ಮಾಣ ಪ್ರಾರಂಭವಾಗಬೇಕೆಂದು ಅಧಿಕಾರಿಗಳೂ, ಶಿಕ್ಷಕರೂ, ವಿದ್ಯಾರ್ಥಿಗಳೂ. ಸಮಾಜ ಮುಖಂಡರೂ ಹೊಸ ಹುರುಪಿನಲ್ಲಿ ಭಾಷಣಗಳನ್ನು ಮಾಡುತ್ತಿದ್ದರು. ಸಂದರ್ಭ 1952 ನೇ ಆಗಸ್ಟ್ 15 ರಂದು. ಅಂದು ಮಧುಗಿರಿಯ ಪುರಸಭಾ ಕಛೇರಿಯ ಸಭಾಂಗಣದಲ್ಲಿ ನಮ್ಮ ಪ್ರೌಢಶಾಲೆಯ ವಿದ್ಯಾರ್ಥಿಗಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳ ಪ್ರದರ್ಶನ. ಸಭೆಯಲ್ಲಿ ಹಾಜರಿದ್ದ ಪ್ರಮುಖರು ಉತ್ಸಾಹದಿಂದ ಭಾಷಣಗಳನ್ನು ಮಾಡಿದರು. ಭಾಷಣ ಮಾಡಿದ ಪ್ರಮುಖರು ಮಾನ್ಯ ಮಾಲಿ ಮರಿಯಪ್ಪ ನವರು. ಶ್ರೀ ಗೋವಿಂದಶೆಟ್ಟರು. ಅನಂತರ ಅಧ್ಯಕ್ಷರ ಭಾಷಣ. ಅಂದಿನ ಸಮಾರಂಭದ ಅಧ್ಯಕ್ಷರು ಮಧುಗಿರಿ ತಾಲ್ಲೂಕಿನ ತಹಸೀಲ್ದಾರರಾದ ಶ್ರೀ ಎಸ್. ಮಲ್ಲಪ್ಪನವರು. ಅವರು ಭಾಷಣಕ್ಕೆ ನಿಂತ ತಕ್ಷಣ ಪ್ರೇಕ್ಷಕರಿಂದ ಚಪ್ಪಾಳೆಗಳ ಮೂಲಕ ಮೆಚ್ಚಿಗೆ, ಸಭೆಯಲ್ಲಿ ಗಂಭೀರವಾದ ವಾತಾವರಣ ಮೂಡಿತು. ಅಂದು ವಿದ್ಯಾರ್ಥಿಯಾಗಿದ್ದ ನನಗೆ ಎಲ್ಲರ ಭಾಷಣಗಳನ್ನೂ ಕೇಳುವ ಕುತೂಹಲ. ತಹಸೀಲ್ದಾರರ ವೈಖರಿ ಚೆನ್ನಾಗಿತ್ತು. ಗ್ರಾಮ್ಯಭಾಷೆ, ಭಾಷಣದ ಮಧ್ಯೆ ನುಸುಳಿ ಬಂದು ಪ್ರೇಕ್ಷಕರನ್ನು ರಂಜಿಸಿ ಅವರ ಮನಸ್ಸನ್ನು ಸೆರೆಹಿಡಿಯುತ್ತಿತ್ತು. "ಸ್ವಾತಂತ್ರ್ಯವನ್ನು ಸರಿಯಾಗಿ ಅರ್ಥಮಾಡಿಕೊಂಡು ನಾಡಿನ ಪ್ರಗತಿಯನ್ನು ಸಾಧಿಸ ಬೇಕು. ಭಾರತದ ನವ ನಿರ್ಮಾಣವಾಗಬೇಕು. ಒಮ್ಮತ, ಒಂದೇ ಮನಸ್ಸು, ಭಾರತೀಯರಾದ ನಮಗೆ ಇರಬೇಕು. ಮಕ್ಕಳು ವೈವಿಧ್ಯಮಯವಾದ ಸುಪ್ತಚೇತನಗಳನ್ನು ಪ್ರದರ್ಶಿಸಿರುವಿರಿ, ತುಂಬಾ ಸಂತೋಷ. ಬಡ ಹುಡುಗರು ಹೆಚ್ಚು ಅವಕಾಶಗಳನ್ನು ಕಲ್ಪಿಸಿಕೊಂಡು ಮುಂದುವರಿಯಬೇಕು. ಬಡ ವಿದ್ಯಾರ್ಥಿಗಳನ್ನು ಕಂಡರೆ ನನಗೆ ಅನುಕಂಪ–ದಯೆ–ಕರುಣೆ. ಅವರಿಗೆ ಸಹಾಯ ಮಾಡಬೇಕು. ಸ್ವಾತಂತ್ರ್ಯದ ಫಲ ಅವರಿಗೆ ಹೆಚ್ಚು ಸಿಗಬೇಕು" ಎಂದು ಮುಂತಾಗಿ ಸ್ವಾತಂತ್ರ್ಯ ಯೋಧರನ್ನು ಸ್ಮರಿಸುತ್ತಾ ಅವರ ಜೀವನದ ಘಟನೆ ಗಳನ್ನು ಉಲ್ಲೇಖಿಸುತ್ತಾ ಭಾಷಣ ಮಾಡಿದರು. ಅವರ ಧ್ವನಿ ದೃಢವಾಗಿತ್ತು. ಅವರ ಸ್ಫುಟವಾದ ಭಾಷಣವನ್ನು ಕೇಳಿದ ನಾನು ಶ್ರೀ ಮಲ್ಲಪ್ಪನವರ ಮಾತುಗಳನ್ನು ಒಮ್ಮೆ ಮೆಲುಕು ಹಾಕಿದೆ. "ಬಡವರನ್ನು ಕಂಡರೆ ನನಗೆ ಅನುಕಂಪ–ದಯೆ–ಕರುಣೆ, ಅವರಿಗೆ ಸಹಾಯ ಮಾಡಬೇಕು" ಈ ಮಾತುಗಳು ನನ್ನ ಅಂತರಾಳವನ್ನು ಮುಟ್ಟಿ ಎಚ್ಚರಿಸಿದುವು. ಪ್ರೌಢಶಾಲೆಯಲ್ಲಿ ಓದಲು ಕಡುಬಡತನವು ನನ್ನನ್ನು ಹಿಂದಕ್ಕೆ ಎಳೆಯುತ್ತಿರುವಾಗ ಅವರ ಮಾತುಗಳಿಂದ ಪ್ರೇರೇಪಿಸಲ್ಪಟ್ಟ ನನ್ನ ಅಂತರಾತ್ಮದ ಚಕ್ಷುಗಳು ಅವರನ್ನು ನೋಡಲು ಬಯಸಿದುವು. ಅಂತರಾತ್ಮದಲ್ಲಿ ಅವರನ್ನು ಕಾಣುವ ಹಂಬಲವಿದ್ದರೂ ಅವರನ್ನು ನೋಡಲು ಅಂಜಿಕೆ. ಪ್ರೌಢಶಾಲೆಯ ಆವರಣದ ಗೋಡೆಯ ಪಕ್ಕದಲ್ಲಿಯೇ ಅವರ ಮನೆ. ಮನೆಯ ಮುಂಭಾಗದಲ್ಲಿ ಓಡಾಡಿ ಅವರು ಮನೆಯಲ್ಲಿರುವುದನ್ನು ಖಚಿತ ಮಾಡಿಕೊಂಡೆನು. ಅನಂತರ ಧೈರ್ಯದಿಂದ ಅವರ ಮನೆಯ ಮುಂಭಾಗದಲ್ಲಿ ನಿಂತಿದ್ದ ಸೇವಕನೊಬ್ಬನನ್ನು ಕುರಿತು "ಸಾಹೇಬರನ್ನು ನೋಡಬೇಕಾಗಿದೆ" ಎಂದು

ಹೇಳಿದೆನು. ಸೇವಕನು ಮತ್ತು ನಾನು ಮಾತನಾಡುತ್ತಿದ್ದ ಧ್ವನಿಯನ್ನು ಆಲಿಸಿ ಸಾಹೇಬರೇ ವರಾಂಡಕ್ಕೆ ಬಂದರು. "ಯಾರೋ ನೀನು" ಎಂದು ನನ್ನತ್ತ ನೋಡಿ ಗುಡುಗಿದರು. ಅವರ ಗಡಸು ಧ್ವನಿಯಿಂದ ನಾನು ತತ್ತರಿಸಿದೆ. ನನ್ನ ಅಸಹಾಯಕತೆಯನ್ನು ಗಮನಿಸಿದ ಅವರು "ಬಾರಯ್ಯ, ಯಾರು ಬೇಕು ? ಏನಾಗ ಬೇಕಿತ್ತು" ಎಂದು ತುಸು ಕಡಿಮೆ ಧ್ವನಿಯಲ್ಲಿ ಕೇಳಿದರು. "ಸಾರ್, ನಾನು ಹೈಸ್ಕೂಲು ವಿದ್ಯಾರ್ಥಿ, ನಮ್ಮ ತಂದೆ ತುಂಬಾ ಬಡತನದಲ್ಲಿದ್ದಾರೆ" ಎಂದು ಅಂಜುತ್ತಾ, ಅಳುಕುತ್ತಾ ಅವರ ಕಡೆ ನೋಡಿ ಭಯ ದಿಂದ ಮಾತು ನಿಲ್ಲಿಸಿದೆ. ನನ್ನ ಸ್ಥಿತಿ ಅವರಿಗೆ ಅರ್ಥವಾಗಿರಬಹುದೋ ಏನೋ, "ನಿನಗೇನು ಸಹಾಯ ಬೇಕು ? ಏಕೆ ಬಂದೆ ?" ಎಂದು ಕೇಳಿದರು. "ಸಾರ್, ನನಗೆ ಸ್ಕಾಲರ್‌ಷಿಪ್ ಬೇಕು, ಇಲ್ಲಿ ಸರ್ವೋದಯ ಹಾಸ್ಟಲಿನಲ್ಲಿ ಊಟಕ್ಕೆ ಅನುಕೂಲ ಮಾಡಿಕೊಡಿ" ಎಂದು ವಿನಯದಿಂದ ಬೇಡಿಕೆಗಳನ್ನು ಮುಂದಿಟ್ಟು ನಿವೇದಿಸಿಕೊಂಡೆನು. ಸಾಹೇಬರಿಗೆ ನನ್ನ ಎರಡು ಬೇಡಿಕೆಗಳನ್ನು ಒಂದೇಸಾರಿ ಮಂಡಿಸಿದ್ದರಿಂದ ಚಕಿತರಾಗಿ ಹೌಹಾರಿದರು.

"ಎಲೇ ಎಲೇ ಸ್ಕಾಲರ್‌ಷಿಪ್.......ಸ್ಕಾಲರ್‌ಷಿಪ್—ಅನಂತರ ಊಟ......." ಎಂದು ರೇಗಿದರು. ನಾನು ಸುಮ್ಮನಿದ್ದುದನ್ನು ನೋಡಿ "ಫಸ್ಟ್ ಕ್ಲಾಸ್ ಬಂದಿದ್ದೀಯೇನೋ ?" ಎಂದು ನಿಷೇದಾರ್ಥದಲ್ಲಿ ಕೇಳಿದರು. ಅಂದರೆ ಬಡ ಹುಡುಗರು ಫಸ್ಟ್ ಕ್ಲಾಸ್ ಬರುವುದೆಲ್ಲಿ ಎಂದು ಯೋಚಿಸಿರಬಹುದು.

"ಹೌದು ಸಾರ್, ನಾನು ಎಲ್.ಎಸ್. ಪಬ್ಲಿಕ್ ಪರೀಕ್ಷೆಯಲ್ಲಿ ಫಸ್ಟ್‌ಕ್ಲಾಸಿನಲ್ಲಿ ಬಂದಿರುತ್ತೇನೆ" ಎಂದು ತಕ್ಷಣ ಉತ್ತರಿಸಿದೆ. ಚಕಿತರಾಗಿ "ಹೌದೇನೋ......." ಎಂದು ಶಾಂತಚಿತ್ತರಾದರು. ಸ್ವಲ್ಪ ಹೊತ್ತು ಯೋಚಿಸಿದ ಅನಂತರ "ಸರಿ, ಇನ್ನೂ ಚೆನ್ನಾಗಿ ಓದು, ಅನಂತರ ಬಾ, ಉ್ಹಂ ಹೊರಡು" ಎಂದು ಗತ್ತಿನಿಂದ ಹೇಳಿ ನನ್ನ ಹೆಸರು, ನನ್ನ ತಂದೆಯ ಹೆಸರು ಮತ್ತು ನಮ್ಮ ಊರಿನ ಹೆಸರನ್ನು ಬರೆದುಕೊಂಡು ಕಳುಹಿಸಿದರು.

ಅವರ ಮಾತುಗಳಲ್ಲಿ ಯಾವ ಭರವಸೆಯೂ ಇಲ್ಲದೆ ಇದ್ದುದನ್ನು ಕಂಡು ಖಿನ್ನನಾಗಿ ನಮ್ಮೂರಿನ ಕಡೆ ಹೊರಟೆನು. ಆಗಲೇ ಸಾಯಂಕಾಲವಾಗುತ್ತಿತ್ತು. ದಾರಿಯಲ್ಲಿ ನಡೆದು ಹೋಗುವಾಗ ಅವರು ಸ್ವಾತಂತ್ರ್ಯ ದಿನದಂದು ಮಾಡಿದ ಭಾಷಣ ಸ್ಮೃತಿಗೆ ಬಂದಿತು. "ಬಡವರು–ವಿದ್ಯಾರ್ಥಿಗಳು ಎಂದರೆ ನನಗೆ ಅನುಕಂಪ–ದಯೆ–ಕರುಣೆ........" ಈ ಎಲ್ಲಾ ಮಾತುಗಳು ನನ್ನ ಕಿವಿಯಲ್ಲಿ ಮಾರ್ದನಿಸಿದುವು. ನುಡಿಯಲ್ಲಿ, ನಡೆಯಲ್ಲಿರಬೇಕಾದ ಪರಸ್ಪರ ಹೊಂದಾಣಿಕೆಗಳನ್ನು ವಿಮರ್ಶಿಸಲು ನನಗಂದು ಸಾಮರ್ಥ್ಯವಿರಲಿಲ್ಲ. 'ದೇವರೇ ದಿಕ್ಕು' ಎಂದು ನಿಟ್ಟುಸಿರಿನಿಂದ ನಡೆದು ದಾರಿಯಲ್ಲಿ ಸುಧಾರಿಸಿಕೊಳ್ಳಲು ರಸ್ತೆ ಪಕ್ಕದಲ್ಲಿ ಆಲದ ಮರದಡಿ ಯಲ್ಲಿದ್ದ ಕಲ್ಲುಬೆಂಚಿನ ಮೇಲೆ ಕುಳಿತುಕೊಂಡೆನು.

ಜೀವನದ ಬೆಳಗಿನ ಹಾದಿಯನ್ನು ಸಹ ಸವೆಸದಿದ್ದ ನಾನು ನಮ್ಮೂರಿನ ಹಾದಿಯನ್ನು ನಡೆದು ದಣಿವನ್ನು ದೂರೀಕರಿಸಲು ಕುಳಿತುಕೊಂಡಿದ್ದೆನು.

ಇದ್ದಕ್ಕಿದ್ದಂತೆ ಒಂದು ಜೀಪು ಬಂದಿತು. ತಕ್ಷಣವೇ ನಾನು ಕುಳಿತಿದ್ದ ಕಲ್ಲುಬೆಂಚಿನ ಹತ್ತಿರಕ್ಕೆ ಬಂದು ನಿಂತಿತು. ನನಗೆ ಭಯ. ಜೀಪಿನಿಂದ ಒಬ್ಬರು ಇಳಿದರು. "ಇವನೇ ಕಣ್ರಿ ಆ ಹುಡುಗ ಇವನೇ" ಎಂದು ಜೀಪಿನೊಳಗಡೆ ಇದ್ದವರನ್ನು ಕುರಿತು ಇಳಿದವರು ಹೇಳಿದರು. ಹೀಗೆ ಹೇಳಿದವರು ಯಾರೂ ಅಲ್ಲ; ತಹಸೀಲ್ದಾರರಾಗಿದ್ದ ಶ್ರೀ ಎನ್. ಮಲ್ಲಪ್ಪನವರು. ಜೀಪಿನೊಳಗಡೆ ಇದ್ದವರು ಶ್ರೀ ಮಾಲಿ ಮರಿಯಪ್ಪ ನವರು. ಅನಂತರ ನನ್ನನ್ನು ಹತ್ತಿರ ಕರೆದು "ನೋಡಯ್ಯ ಇವರು ಸ್ಕಾಲರ್‌ಷಿಪ್ ಕಮಿಟಿ ಅಧ್ಯಕ್ಷರು. ಸ್ಕಾಲರ್‌ಷಿಪ್ ಕೊಡುತ್ತಾರೆ. ಸರ್ವೋದಯ ಹಾಸ್ಟಲಿನಲ್ಲಿ ಊಟ ಕೊಡುವಂತೆ ಹಾಸ್ಟಲಿನ ಕಾರ್ಯದರ್ಶಿ ಯವರಿಗೆ ಹೇಳಿರುತ್ತಾರೆ. ನಾಳೆಯಿಂದಲೇ ಹಾಸ್ಟಲಿಗೆ ಹೋಗು" ಎಂದು ಹೇಳಿದರು. ಅನಂತರ ಜೀಪು ಹತ್ತಿ ಇಬ್ಬರೂ ಮಧುಗಿರಿಯ ಕಡೆ ಮರು ಪ್ರಯಾಣ ಮಾಡಿದರು.

ಈ ಅನಿರೀಕ್ಷಿತ ಘಟನೆಯಿಂದ ಚಕಿತನಾದ ನಾನು ಪುಲಕಿತನಾದೆ. ಮೈ ರೋಮಾಂಚನವಾಯಿತು. ದೇವರೇ ಶ್ರೀ ಎನ್. ಮಲ್ಲಪ್ಪನವರ ರೂಪದಲ್ಲಿ ಬಂದು ಮಾರ್ಗದರ್ಶನ ಮಾಡಿರುವುದಾಗಿ ಒಂದು ದೃಷ್ಟಾಂತವಾಗಿ ಪರಿಣಮಿಸಿದೆಯೆಂದು ಅಂತರಾತ್ಮಕ್ಕೆ ಚೇತನವುಂಟಾಗಿ ವಿದ್ಯುತ್ ಸಂಚಾರವಾದಂತಾಯಿತು. ಊರಿನ ಹಾದಿಯನ್ನು ನಡೆಯಲು ಸುಧಾರಿಸಿಕೊಳ್ಳುತ್ತಿದ್ದ ನನಗೆ ಜೀವನದ ಹಾದಿ ಎಷ್ಟು ದೂರವಿದ್ದರೂ ಸುರಕ್ಷಿತವಾಗಿ ಪ್ರಯಾಣ ಮಾಡುವನೆಂಬ ಧೈರ್ಯ, ಹುರುಪುಗಳು ಮೈಗೂಡಿ ಮಾರ್ಗದರ್ಶನವನ್ನು ಪಡೆದೆನು. "ವಿವೇಕಿಗಳು, ದೊಡ್ಡವರು ಯಾವಾಗಲೂ ನುಡಿದಂತೆ ನಡೆಯುತ್ತಾರೆ" ಈ ಮಾತುಗಳು ಅವರ ವ್ಯಕ್ತಿತ್ವಕ್ಕೆ ನಿಜವಾದುವು. ಅವರ ಭಾಷಣ ಮತ್ತೊಮ್ಮೆ ಸ್ಮೃತಿಗೆ ಬಂದಿತು. "ಬಡವರನ್ನು ಕಂಡರೆ ಅನುಕಂಪ-ದಯೆ-ಕರುಣೆ........" ವ್ಯಕ್ತಿ ಬಾಹ್ಯದಲ್ಲಿ ಒರಟಾಗಿ ಕಂಡರೂ ಅಂತರಂಗದಲ್ಲಿ ದಯಾಮಯರೂ ಹೃದಯ ಶ್ರೀಮಂತಿಕೆಯುಳ್ಳವರೂ ಆಗಿರುತ್ತಾರೆ.

ಮೇಲ್ಕಂಡ ಘಟನೆಯು ನನ್ನ ಜೀವನದಲ್ಲಿ ಒಂದು ಮುಖ್ಯವಾದ ಮೈಲಿಗಲ್ಲು. ಅವರ ಸಮಯೋಚಿತವಾದ ಸಹಾಯ ನನ್ನ ಜೀವನದ ಪಥವನ್ನೇ ಬದಲಾಯಿಸಿ ಸುಗಮವನ್ನಾಗಿ ಮಾಡಿತು.

ಗತಿ ವಿಹೀನರಿಗಾರು ನೀನೆ
ಗತಿ ಕಣಾ ಪತಿಕರಿಸಿ ಕೊಡು ಸ
ದ್ಗತಿಯ ನೀನೆಲೆ ದೇವ ನಿನಗಪರಾಧಿ ನಾನಲ್ಲ।
ಶೃತಿ ವಚನವಾಡುವುದು ಶರಣಾ
ಗತನ ಸೇವಕನೆಂದು ನಿನ್ನನು
ಮತಿವಿಡಿದು ನಂಬಿದೆನು ರಕ್ಷಿಸು ನಮ್ಮನನವರತ॥

ಎಂದು ಕನಕದಾಸರು ಹೇಳಿರುವಂತೆ ನಿಸ್ಸಹಾಯಕರಿಗೆ, ದೀನರಿಗೆ, ದಲಿತರಿಗೆ ಮತಿಯನ್ನು ನೀಡಿ ಬಾಳಿನ ಪಥದಲ್ಲಿ ನಡೆಸಲು ಭಗವಂತನು ವಿವಿಧ ರೂಪಗಳಲ್ಲಿ ಬಂದು ಮಾರ್ಗದರ್ಶನ ಮಾಡುವಂತೆ ಭಗವತ್ಸ್ವರೂಪಿ ಶ್ರೀ ಎನ್. ಮಲ್ಲಪ್ಪನವರು ಅನೇಕ ಬಡ ವಿದ್ಯಾರ್ಥಿಗಳಿಗೆ ವಿವಿಧ ರೂಪಗಳಲ್ಲಿ ಸಹಾಯ ಮಾಡಿ ಅವರ ಜೀವನದ ಹಾದಿಯಲ್ಲೂ ಬೆಳಕನ್ನು ನೀಡಿ ಮಾರ್ಗಧರ್ಶಕರಾಗಿರುತ್ತಾರೆ. ಅವರು ಸ್ಥಾಪಿಸಿರುವ ಕಾಳಿದಾಸ ವಿದ್ಯಾವರ್ಧಕ ಸಂಘ ಮತ್ತು ಸಂಘದ ಆಶ್ರಯದಲ್ಲಿ ನಡೆಯುತ್ತಿರುವ ವಿದ್ಯಾಸಂಸ್ಥೆಗಳೂ, ವಿದ್ಯಾರ್ಥಿ ನಿಲಯಗಳೂ ಅವರ ನಿಸ್ವಾರ್ಥ ಸೇವೆಯ ಪ್ರತೀಕಗಳಾಗಿ ಅವರ ಸೇವಾ ಹಿರಿತನಕ್ಕೆ ಸಾಕ್ಷಿಭೂತವಾಗಿರುತ್ತವೆ. ದೀನ ದಲಿತರಿಗೆ ಅವರು ಮಾರ್ಗದರ್ಶಕರು ಮಾತ್ರವಲ್ಲದೆ ಪ್ರವರ್ತಕರೂ ಆಗಿರುತ್ತಾರೆ.

ಸರ್ಕಾರದ ನಾನಾ ಇಲಾಖೆಗಳಲ್ಲಿ ಮುಖ್ಯ ಹುದ್ದೆಗಳಲ್ಲಿ, ಸಮಿತಿಗಳಲ್ಲಿ, ನಿಗಮಗಳಲ್ಲಿ ಅಧಿಕಾರಿಯಾಗಿ, ಅಧ್ಯಕ್ಷರಾಗಿ, ಸದಸ್ಯರಾಗಿ ಪ್ರಾಮಾಣಿಕ ಸೇವೆಯನ್ನು ಸಲ್ಲಿಸಿರುವ ಒಬ್ಬ ದಕ್ಷ ಅಧಿಕಾರಿಗಳು. ಯಾವ ಆಸೆ, ಆಕಾಂಕ್ಷೆ, ಆಮಿಷಗಳಿಗೆ ಮಣಿಯದ ಧೀರೋದಾತ್ತ ವ್ಯಕ್ತಿಗಳು. ಕರ್ತವ್ಯಪ್ರಜ್ಞೆ, ನಿಷ್ಠಾವಂತ ಸೇವೆ, ದಕ್ಷತೆಗಳನ್ನು ಅನುಕರಣೆ ಮಾಡಲು ಮೇಲ್ಪಂಕ್ತಿಯಂತೆ ಇವರ ಜೀವನ ಆದರ್ಶವಾದ ಉದಾಹರಣೆಯಾಗಿರುತ್ತದೆ.

ಕಾಳಿದಾಸ ವಿದ್ಯಾವರ್ಧಕ ಸಂಘ, ತುಮಕೂರು, ಈ ಸಂಸ್ಥೆಯನ್ನೂ, ಸಂಸ್ಥೆಯ ಆಶ್ರಯದಲ್ಲಿ ನಡೆಯುವ ವಿದ್ಯಾಸಂಸ್ಥೆಗಳನ್ನೂ ಇನ್ನೂ ಬೃಹದಾಕಾರವಾಗಿ ಬೆಳಸಿ ಅವರ ಶ್ರಮಕ್ಕೆ ಅಪಾರ ಕೀರ್ತಿ ಸಂದಾಯವಾಗಲಿ ಎಂದು ಆಶಿಸಿ ಶ್ರೀ ಎನ್. ಮಲ್ಲಪ್ಪನವರಿಗೆ ಮತ್ತು ಅವರಿಗೆ ಸದಾ ಸ್ಫೂರ್ತಿಯನ್ನು ನೀಡುತ್ತಿರುವ ಶ್ರೀಮತಿಯವರಾದ ಮಾತೃಶ್ರೀ ರಂಗಮ್ಮನವರಿಗೆ ಮತ್ತು ಅವರ ಕುಟುಂಬವರ್ಗದವರೆಲ್ಲರಿಗೂ ಆಯುರಾರೋಗ್ಯ ಐಶ್ವರ್ಯ ಸಕಲ ಸಂಪತ್ತುಗಳನ್ನು ಭಗವಂತನು ದಯಪಾಲಿಸಿ ಇನ್ನೂ ಹೆಚ್ಚಿನ ಸೇವೆಯು ಜನತೆಗೆ ಅವರಿಂದ ಸಂದಾಯವಾಗಲೆಂದು ಸರ್ವಶಕ್ತನನ್ನು ಪ್ರಾರ್ಥಿಸುತ್ತೇನೆ.

ಆದರ್ಶವಾದಿ

ಡಾ|| ಸಿ. ರಾಜಪ್ಪ

ನುಡಿದಂತೆ ನಡೆಯುವವರು ಜಗತ್ತಿನಲ್ಲಿ ಬಹಳ ವಿರಳ. ಆದರೂ ಆಕಾಶದಲ್ಲಿ ಮಿನುಗುವ ಕೋಟಿ ನಕ್ಷತ್ರ ಮಧ್ಯದ ಒಬ್ಬ ಚಂದ್ರನಂತೆ ಇಂಥವರು ಅಪರೂಪವೆ. ಈ ಪೈಕಿ ಶ್ರೀಮಾನ್ ಮಲ್ಲಪ್ಪನವರೂ ಒಬ್ಬರು.

1952 ನೇ ಇಸವಿ. ಆಗ ಅವರು ಹರಿಹರದಲ್ಲಿ ಅಮಲ್ದಾರರಾಗಿದ್ದ ಸಮಯ. ಬ್ರಿಟಿಷರ ಆಡಳಿತ ವೈಖರಿಯಲ್ಲಿ ನುರಿತ ಕಾರ್ಯನಿಪುಣರಾದ ಅವರು ಸತ್ಯನಿಷ್ಠುರ ದಕ್ಷ ಅಧಿಕಾರಿ. ಅವರ ಆಡಳಿತ ನಿಷ್ಠೆಯ ಪೂರ್ಣಾನುಭವ ನನಗಾದದ್ದು 1954 ರಲ್ಲಿ. ಆ ವರ್ಷ ಎಂ.ಬಿ.ಬಿ.ಎಸ್. ವ್ಯಾಸಂಗದ ಸದವಕಾಶ ನನಗೆ ಲಭ್ಯವಾಯಿತು. ಆದರೆ ಆಗ ನನ್ನದು ತುಂಬಾ ಸಂದಿಗ್ಧದ ಸ್ಥಿತಿ. ಎಂ.ಬಿ.ಬಿ.ಎಸ್. ಸೀಟು ಸಿಕ್ಕ ಸಂತೋಷ ಒಂದು ಕಡೆಯಾದರೆ, ಆರ್ಥಿಕ ದುಸ್ಥಿತಿ ಮತ್ತೊಂದು ಕಡೆ. ಶುಲ್ಕ ಕಟ್ಟಿ ಸೀಟನ್ನು ದೊರಕಿಸಿ ಕೊಳ್ಳಲು ನನಗಿದ್ದ ಕಾಲಾವಕಾಶ ಕೇವಲ 48 ಗಂಟೆಗಳು ಮಾತ್ರ.

ಇಂಥ ಇಕ್ಕಟ್ಟಿನ ಸ್ಥಿತಿಯಲ್ಲಿ ಮಲ್ಲಪ್ಪನವರು ನನಗೆ ಮಾಡಿದ ಸಹಾಯ ನನ್ನ ಭಾವೀ ವೈದ್ಯ ಜೀವನದ ಭದ್ರ ಬುನಾದಿಯಾಗಿ, ನನ್ನ ಬಾಳ ದೇಗುಲದ ನಿತ್ಯ ನೆನಪಿನ ಬುತ್ತಿಯಾಗಿ ಅಚ್ಚಳಿಯದೇ ಉಳಿದಿದೆ. ನಮ್ಮ ವಿನಂತಿಗೆ ಒಪ್ಪಿಕೊಂಡು ನಮ್ಮ ಹೆಸರಿನಲ್ಲಿದ್ದ ಜಮೀನನ್ನು ಅಡವಿಟ್ಟು ತಕಾವಿ ಸಾಲ ಪಡೆಯಲು ಅವರು ನೀಡಿದ ಸಹಾಯ, ಸಹಕಾರ ಎಂದಿಗೂ ಮರೆಯಲಾಗದ್ದು. ಎಂಟು ಮೈಲಿ ದೂರದ ಜಮೀನಿಗೆ ತಾವೇ ಸ್ವತಹ ಸೈಕಲ್ ಮೇಲೆ ಹೋಗಿ ಪರಿಶೀಲಿಸಿ 48 ಗಂಟೆಯೊಳಗಾಗಿ ನನಗೆ ಹಣ ಲಭಿಸುವಂತೆ ಮಾಡಿದರು. ಜಾತಿ ಭೇದ ತೋರದೆ ಒಬ್ಬ ವಿದ್ಯಾರ್ಥಿಯ ಏಳ್ಗೆಗಾಗಿ ಇಷ್ಟು ಶ್ರಮವಹಿಸುವ ಪರೋಪಕಾರ ಬುದ್ಧಿ ಯಾವ ಹಿರಿಯ ಆಡಳಿತಗಾರರಲ್ಲಿದ್ದೀತು ? ಈ ಸಹಾಯ ಮಾಡದೇ ಇದ್ದಲ್ಲಿ ಇಂದು ವೈದ್ಯನಾಗಿ ಜನಸೇವೆ ಸಲ್ಲಿಸುವ ಸೌಭಾಗ್ಯ ನನ್ನದಾಗುತ್ತಿರಲಿಲ್ಲ. ಮಲ್ಲಪ್ಪನವರು ಆಡಳಿತದಲ್ಲಿ ಹೇಗೆ ದಕ್ಷರೋ, ತಮ್ಮ ವೈಯಕ್ತಿಕ ಜೀವನದಲ್ಲಿ ಅಷ್ಟೇ ನಿಷ್ಠಾವಂತರು. ಸ್ವಚ್ಛ ಮನಸ್ಸಿನ ಸತ್ಯಸಂಧತೆ ಅವರ ವ್ಯಕ್ತಿತ್ವಕ್ಕೆ ವಿಶಿಷ್ಟ ಮೆರಗು ನೀಡಿತ್ತು. ಅವರು ಅಮಲ್ದಾರರಾಗಿದ್ದ ಸಮಯದಲ್ಲಿ ಹಾಲು-ಹೈನದ ಕೊರತೆ ನೀಗಲು ಮನೆಯಲ್ಲಿಯೇ ಒಂದು ಹಸುವನ್ನು ಸಾಕುವ ಇಚ್ಛೆ ಅವರಿಗಿತ್ತು. ಅವರ ಮನದಾಶೆಯನ್ನು ಅದು ಹೇಗೋ ತಿಳಿದುಕೊಂಡು ಒಬ್ಬ ವ್ಯಕ್ತಿ ತನ್ನ ಬಳಿಯ ಹಸುವೊಂದನ್ನು ತಾನಾಗಿಯೇ ಅವರ ಮನೆಗೆ ಕಳುಹಿಸಿಕೊಟ್ಟ. ಆದರೆ ಪರರ ವಸ್ತುವನ್ನು ಎಂದೂ ಬಯಸದ ಮಲ್ಲಪ್ಪನವರು ಆ ಹಸುವಿಗೆ ಸಲ್ಲಬೇಕಾದ ಯೋಗ್ಯಬೆಲೆಯ ಮೊತ್ತವನ್ನು ಕಳುಹಿಸಿಕೊಟ್ಟದ್ದಲ್ಲದೇ ಹಣ ತೆಗೆದುಕೊಳ್ಳದಿದ್ದರೆ ಹಸುವನ್ನು ವಾಪಸು ಕಳುಹಿಸುವುದಾಗಿ ತಿಳಿಸಿದರು.

ಇಂದಿನ ಜನಜೀವನದ, ಸರಕಾರೀ ಆಗುಹೋಗುಗಳ ಅವಿಭಾಜ್ಯವಾದ ಅಂಗವೆಂಬಂತೆ ಇರುವ ಭ್ರಷ್ಟಾಚಾರದ ವಿರುದ್ಧ ಅವರದು ಸದಾ ಸಿಡಿದೇಳುವ ಪ್ರವೃತ್ತಿ. ತಮ್ಮ ವೃತ್ತಿ ಜೀವನದಲ್ಲಿ ಎಂಥ ಕಠಿಣ ಸಂದರ್ಭದಲ್ಲೂ ಅವರು ಪರಧನಕ್ಕೆ ಆಶೆಪಡದೇ, ಭ್ರಷ್ಟಾಚಾರಕ್ಕೆಡೆಗೊಡದೇ ಪ್ರಾಮಾಣಿಕ ಜೀವನದ ಮಧ್ಯೆ ಅನುಕರಣೀಯ ಆದರ್ಶ ವ್ಯಕ್ತಿಗಳಾದರು. ಹೊಲಸು ತುಂಬಿದ ಅಧಿಕಾರ ವರ್ಗದಲ್ಲಿ "ಕೆಸರಿನ ಕಮಲ"ದಂತೆ ಕಂಗೊಳಿಸಿದರು. ಈ ವಿಷಯವನ್ನು ಈಗಲೂ ನಾಗೇನಹಳ್ಳಿಯ ಶ್ರೀ ಚೆನ್ನಯ್ಯ ಒಡೆಯರು ಅತ್ಯಂತ

ಸೊಗಸಾದ ಸುಂದರ ಶೈಲಿಯಲ್ಲಿ ಪುರಾಣ ಪ್ರವಚನದ ಸಂದರ್ಭದಲ್ಲಿ ಸಮಯೋಚಿತವಾಗಿ ಹೇಳುವರು ಹಸುವಿನ ಪ್ರಕರಣವನ್ನು.

ಸದಾ ಸಮರಶೀಲವೆನ್ನಬಹುದಾದ ನಿತ್ಯ ಜೀವನದಲ್ಲಿ ಸತ್ಯ–ನಿಷ್ಠೆಗಳಿಗೆ ಅವರು ಕೊಟ್ಟ ಅಗ್ರಸ್ಥಾನವನ್ನು ಕಣ್ಣಾರೆ ಕಾಣುವ ಸದವಕಾಶ ಮೈಸೂರಿನಲ್ಲಿ ವೈದ್ಯನಾಗಿ ಕೆಲಸ ಮಾಡುತ್ತಿದ್ದಾಗ ನನಗೆ ಮತ್ತೆ ದೊರಕಿತು. ಒಮ್ಮೆ ಅವರು ಹೃದಯರೋಗದ ಚಿಕಿತ್ಸೆಗಾಗಿ ಮೈಸೂರಿನ ಕೆ.ಆರ್. ಆಸ್ಪತ್ರೆಯಲ್ಲಿ ಸೇರಿದ್ದರು. ಹಾಸಿಗೆ ಬಿಟ್ಟು ಏಳಲೇಬಾರದೆಂದು ವೈದ್ಯರು ಕಟ್ಟುನಿಟ್ಟಾಗಿ ಹೇಳಿದ್ದರು. ಅವರ ಆಗಿನ ಕರುಣಾಜನಕ ಸ್ಥಿತಿಯಲ್ಲಿ ಯಾರನ್ನೂ ಎಂದಿಗೂ ಸಹಾಯಕ್ಕಾಗಿ ಯಾಚಿಸದ ಮನೋಭಾವವನ್ನು ಬಲ್ಲ ಅವರ ಹಿತೈಷಿಗಳೊಬ್ಬರು ಅವರಿಗೆ ಹೇಗಾದರೂ ಹಣ ಸಹಾಯ ಮಾಡುವ ಉದ್ದೇಶದಿಂದ ಅವರು ಮಲಗಿರುವಾಗ ಅವರ ಮೇಜಿನ ಮೇಲೆ ಹಣವಿಡಲು ಬಂದರು. ಅವರ ಉದ್ದೇಶವನ್ನರಿತ ಮಲ್ಲಪ್ಪನವರು ನಿಷ್ಠುರವಾಗಿ ಬೈದು, ಅವರನ್ನು ಹೊರಗೆ ಕಳುಹಿಸಿದ್ದನ್ನು ನೋಡಿ ನಾನು ಆಶ್ಚರ್ಯಭರಿತನಾದೆನು.

ಹಿರಿಯ ಕಂದಾಯ ಅಧಿಕಾರಿಗಳಾಗಿ ಬಹಳ ವರ್ಷಗಳ ಕಾಲ ಸೇವೆ ಸಲ್ಲಿಸಿದ ಶ್ರೀ ಮಲ್ಲಪ್ಪನವರು ಗಾಂಧೀ ತತ್ವದ ಅಪ್ಪಟ ಅನುಯಾಯಿಗಳು. ಮೇಲು ಸಂಪಾದನೆಯ ಆಮಿಷಕ್ಕೆ ಅವರೆಂದಿಗೂ ಒಳಗಾಗಲಿಲ್ಲ. ದಿಢೀರ್ ಧನಿಕರಾಗಬಹುದಾದ ಕಂದಾಯ ಇಲಾಖೆಯಲ್ಲಿ ಎಂದೂ ಅವರು ದಾರಿ ತಪ್ಪಲಿಲ್ಲ. ಅವರು ಅನುಸರಿಸಿದ ಸತ್ಯ ಮಂತ್ರದ ಗಾಂಧೀ ತತ್ವದಿಂದ ಗಳಿಸಿದ್ದು ಶ್ರೀಮಂತಿಕೆಯನ್ನಲ್ಲ! ಆಧ್ಯಾತ್ಮ ಜೀವನದ ನಿತ್ಯ ಸತ್ಯದ "ಶೂನ್ಯ ಸಂಪಾದನೆಯನ್ನು."

ಅವರ ಮಗಳ ಮದುವೆಯನ್ನು ನನ್ನ ಬಳಿ ಕೆಲಸಮಾಡುತ್ತಿದ್ದ ಕಿರಿಯ ವೈದ್ಯನೊಂದಿಗೆ ನೆರವೇರಿಸಲು ಅವರು ಊರಲ್ಲಿಲ್ಲದಾಗ ಮಾತುಕತೆ ನಡೆಸಿ ನಿರ್ಧರಿಸಲಾಗಿತ್ತು. ಅವರು ಈ ನಿರ್ಧಾರಕ್ಕೆ ಒಪ್ಪಿದ್ದಲ್ಲದೇ ಮೈಸೂರಿನಲ್ಲಿದ್ದ ತಮ್ಮದೊಂದು ಮನೆಯನ್ನೇ ಮಾರಿ ಮದುವೆಯ ಮಂಗಳ ಕಾರ್ಯವನ್ನು ಜರುಗಿಸಿದ್ದು ನನಗಿನ್ನೂ ಹಚ್ಚಹಸುರಾಗಿ ನೆನಪಿನಲ್ಲಿದೆ. ಈ ಮದುವೆಗೆ ಮಾಜಿ ಮುಖ್ಯಮಂತ್ರಿ ದಿ॥ ದೇವರಾಜ ಅರಸು ಮತ್ತು ಅವರ ಸಹೋದ್ಯೋಗಿ ಸಚಿವರುಗಳು ಸಹ ಆಗಮಿಸಿದ್ದರು.

ಮಲ್ಲಪ್ಪನವರು ಕರ್ನಾಟಕ ಉಣ್ಣೆ ನಿಗಮದ ಅಧ್ಯಕ್ಷರಾಗಿದ್ದಾಗ ಒಮ್ಮೆ ಒಂದು ಹಸು ಕೆಳಕ್ಕೆ ತಳ್ಳಿ ಗಾಯಗೊಳಿಸಿತು. ಆಡಳಿತ ನಿರ್ವಹಣೆಯನ್ನು ಅತ್ಯಂತ ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದ ಅವರು ಈ ಘಟನೆಯಿಂದ ತಾವು ನಿರ್ಬಲರಾಗಿರುವುದರಿಂದ ಕೆಲಸ ಕಾರ್ಯಗಳನ್ನು ಸಮರ್ಥವಾಗಿ ನಿರ್ವಹಿಸಲಾರೆನೆಂದು ಮನಗಂಡರು. ತಮ್ಮಲ್ಲಿ ಚೈತನ್ಯ ಉಡುಗಿರಬಹುದಾದ್ದರಿಂದ ತಮ್ಮ ಪಾಲಿನ ಕೆಲಸಕ್ಕೆ ಧಕ್ಕೆಯುಂಟಾಗಬಹುದೆಂದುಕೊಂಡು, ಯಾರು ಎಷ್ಟೇ ಹೇಳಿದರೂ ಕೇಳದೇ ತಮ್ಮ ಕೆಲಸಕ್ಕೆ ರಾಜೀನಾಮೆ ಸಲ್ಲಿಸಿಬಿಟ್ಟರು. ಈ ಮನೋಭಾವದ, ಇಂತಹ ಶ್ರೇಷ್ಠಮಟ್ಟದ ವ್ಯಕ್ತಿತ್ವವನ್ನು ನಾನು ಇನ್ನಾರಲ್ಲಿಯೂ ಕಂಡಿಲ್ಲ.

ನಾಗಮಂಗಲದಲ್ಲಿ ಬಡವರಿಗೆ ಭೂಮಿ ವಿತರಣೆ ಮಾಡುವ ಕಾರ್ಯದಲ್ಲಿ ಶ್ರೀ ಮಲ್ಲಪ್ಪನವರು ವಹಿಸಿದ ಪಾತ್ರ ಮಹತ್ತರವಾದದ್ದು. ತುಮಕೂರಿನ 'ಕಾಳಿದಾಸ ಹಾಸ್ಟಲ್' ಕಟ್ಟುವಾಗ ಅವರು ಸಲ್ಲಿಸಿದ ಕರಸೇವೆ ವಿಶಿಷ್ಟವೂ, ಅನುಕರಣೀಯವೂ ಆಗಿತ್ತು. ಈ ಎರಡು ಅವಿಸ್ಮರಣೀಯ ಘಟನೆಗಳು ನನ್ನ ನೆನಪಿನಲ್ಲಿ ಅಚ್ಚಳಿಯದೆ ಉಳಿದಿವೆ.

ಎಲ್ಲರಿಗೂ ಮಾರ್ಗದರ್ಶಿಯಾಗಬಲ್ಲ ರೀತಿಯಲ್ಲಿ ಆಡಳಿತ ನಿರ್ವಹಿಸಿ, ಆದರ್ಶ ವ್ಯಕ್ತಿತ್ವದ 'ಮೇರು ರತ್ನ'ವಾಗಿ ಶೋಭಿಸುತ್ತಿರುವ ಈ ಮಹಾನುಭಾವರಿಗೆ ಈಗ ಎಂಭತ್ತು ವರ್ಷಗಳು ತುಂಬುತ್ತಿವೆ ಎಂದು ತಿಳಿದು ನನಗೆ ಅತೀವ ಆನಂದವಾಗಿದೆ. ಇದು ಅವರ ತುಂಬು ಜೀವನದ ಒಂದು ಮೈಲಿಗಲ್ಲು. ಆ ಕರುಣಾಮಯ ಭಗವಂತ ಇವರಿಗೆ ಆಯುರಾರೋಗ್ಯ ಭಾಗ್ಯಗಳನ್ನು ದಯಪಾಲಿಸಲೆಂದು, ಇವರ ಬಾಳ ಬೃಂದಾವನದಲ್ಲಿ ನೂರು ವಸಂತಗಳು ಅರಳಲೆಂದು ಪ್ರಾರ್ಥಿಸುತ್ತೇನೆ.

ಬಿ. ಬೀರಪ್ಪನವರ ಪರಂಪರೆಯುವರು

ಎಸ್. ಎನ್. ಈಶ್ವರಪ್ಪ

ತುಮಕೂರು ಜಿಲ್ಲೆಯು ಪ್ರಸಿದ್ಧ (1) ಸಿದ್ಧಗಂಗಾ, (2) ಶಿವಗಂಗಾ, (3) ಸಿದ್ಧಲಿಂಗೇಶ್ವರ, (4) ಸಿದ್ಧರಬೆಟ್ಟ ಇತ್ಯಾದಿ ಪವಿತ್ರ ಪುಣ್ಯಕ್ಷೇತ್ರಗಳನ್ನೂ, ಶ್ರೇಷ್ಠ ಸೇವಾ ಗುರುಪರಂಪರೆಯನ್ನೂ ಹೊಂದಿದ್ದು ಶಿಕ್ಷಣ, ಕೈಗಾರಿಕೆ, ವಾಣಿಜ್ಯ, ಕಲೆ, ಸಾಹಿತ್ಯ, ಧಾರ್ಮಿಕ ಕ್ಷೇತ್ರಗಳಲ್ಲಿ ಮೊದಲಿನಿಂದಲೂ ಮುಂದುವರಿದ ಜಿಲ್ಲೆ. ಹೂ ಜೊತೆಗೆ ನಾರೂ ಸ್ವರ್ಗ ಸೇರುತ್ತದೆಂಬ ಉಕ್ತಿಯಂತೆ, ಈ ಜಿಲ್ಲೆಯ ಮುಂದುವರಿದ ಪ್ರಗತಿಪರ ಸಮಾಜಗಳ ಜೊತೆ ಹಿಂದುಳಿದ ಕುರುಬ ಸಮಾಜವೂ ಸಹ ಅಲ್ಪ ಸ್ವಲ್ಪವಾದರೂ ಪ್ರಗತಿ ಹೊಂದಬೇಕಾಗಿತ್ತು. ಆದರೆ ಅದು ಆಗಲಿಲ್ಲ.

ನಮ್ಮ ಸಮಾಜದ ಹಿರಿಯರಾದ ದಿ॥ ಬಿ. ಮಲ್ಲಪ್ಪನವರು, ದಿ॥ ಪಿ. ಎಸ್. ಮಲ್ಲಯಪ್ಪನವರು ಮುಂತಾದವರು ತಮ್ಮ ಶಕ್ತ್ಯಾನುಸಾರ ಸಮಾಜ ಸೇವೆ ಸಲ್ಲಿಸಿದರೂ, ನಮ್ಮ ಸಮಾಜವು ಸಾಕಷ್ಟು ಪ್ರಗತಿ ಹೊಂದಲಾಗಲಿಲ್ಲ. ನಮ್ಮಲ್ಲಿ ರಾಜಕೀಯ, ಸಾಮಾಜಿಕ ಹಾಗೂ ಸಾರ್ವಜನಿಕ ಕ್ಷೇತ್ರಗಳಲ್ಲಿ ಮುನ್ನುಗ್ಗಿದ ಅನೇಕರು ಸಮಾಜದ ಪ್ರಗತಿ ಬಗ್ಗೆ ಚಿಂತನೆ ಮಾಡುತ್ತಿದ್ದ ಕಾಲಕ್ಕೆ ಶ್ರೀ ಎನ್. ಮಲ್ಲಪ್ಪನವರು ಪ್ರವೇಶಿಸಿ ಎಲ್ಲರನ್ನೂ ಕೂಡಿಸಿ, ಹಾಲಿ ಇರುವ ಸಂಘವನ್ನು ಸ್ಥಾಪಿಸಿ ಕಾರ್ಯಪ್ರವರ್ತರಾದರು.

1958 ನೇ ಇಸವಿ ಅಂತ್ಯಭಾಗದಲ್ಲಿ ಹಾಲಿ ಇರುವ ಕಾಳಿದಾಸ ಕುರುಬರ ಸಾರ್ವಜನಿಕ ಹಾಸ್ಟಲ್ ಭವ್ಯ ಕಲ್ಲುಕಟ್ಟಡದ ಶಂಕುಸ್ಥಾಪನೆಯು ಆಗ ಸಚಿವರಾಗಿದ್ದ ದಿ॥ ಟಿ. ಮರಿಯಪ್ಪನವರಿಂದ ನೆರವೇರಿಸಲ್ಪಟ್ಟ ಅನಂತರ, ಬೆಂಗಳೂರಿಗೆ ಹೋಗುವಾಗ ದಿ॥ ಟಿ. ಮರಿಯಪ್ಪನವರ ಕಾರಿನಲ್ಲಿ ನಾನೂ ಪ್ರಯಾಣ ಬೆಳಸುವ ಅವಕಾಶ ದೊರೆಯಿತು. ಕಾರಿನಲ್ಲಿ ಹೋಗುವಾಗ ದಿ॥ ಟಿ. ಮರಿಯಪ್ಪನವರು ಶ್ರೀ ಎನ್, ಮಲ್ಲಪ್ಪನವರ ಬಗ್ಗೆ ಈ ರೀತಿ ಹೇಳಿದರು. "ಈ ಮನುಷ್ಯನಿಗೆ ನಾನೇನೋ ಅಲ್ಪ ಸಹಾಯ ಮಾಡಿದ್ದೆ. ಆತ ನನ್ನ ಬಗ್ಗೆ ತೋರಿಸುವ ಗೌರವ, ಅಭಿಮಾನ ಬಹಳವಾಗಿದೆ. ಒಳ್ಳೆಯ ದಕ್ಷ ಆಫೀಸರೆಂದು ಹೆಸರು ಗಳಿಸಿದ್ದಾರೆ. ಕೃತಜ್ಞತಾ ಮನುಷ್ಯ" ಎಂದು ನನ್ನೊಡನೆ ಹೇಳಿದರು.

ಶ್ರೀ ಎನ್. ಮಲ್ಲಪ್ಪನವರು ದಿ॥ ಬಿ. ಬೀರಪ್ಪನವರ ಶಿಷ್ಯರೂ ಹೌದು. ದಿ॥ ಬಿ. ಬೀರಪ್ಪನವರು ತಹಸೀಲ್ದಾರ್ ಹುದ್ದೆಯಿಂದ ಡಿವಿಜನಲ್ ಕಮಿಷನರ್ (ಐ.ಎ.ಎಸ್.) ಸರ್ಕಾರದ ಕಾರ್ಯದರ್ಶಿ ಹುದ್ದೆಯವರೆಗೆ ಸರ್ಕಾರಿ ಸೇವೆಯಲ್ಲಿದ್ದ ಪರ್ಯಂತ, ಮುಂದುವರಿದ ಕೋಮಿನವರಿಗೂ ಅನ್ಯಾಯವಾಗದಂತೆ, ಹಿಂದುಳಿದ ದುರ್ಬಲ ಕೋಮಿನವರಿಗೂ ನ್ಯಾಯ ದೊರೆಯುವಂತೆ ಸರ್ವಸಮನ್ವಯ ದೃಷ್ಟಿಯಿಂದ ಪ್ರಾಮಾಣಿಕ ಸೇವೆ ಸಲ್ಲಿಸಿದ ದಕ್ಷ ಅಧಿಕಾರಿಯೆಂದು ಹೆಸರು ಪಡೆದಿದ್ದರು. ದೇವರ ಬ್ಯಾಂಕಿನಲ್ಲಿ ಲೆಖ್ಖ ತೆರೆದು ಪುಣ್ಯದ ಜಮಾ ಮಾಡಬೇಕೆಂದು ದಿ॥ ಬೀರಪ್ಪನವರು ಹೇಳುತ್ತಿದ್ದರು.

ಶ್ರೀ ಎನ್. ಮಲ್ಲಪ್ಪನವರೂ ಸಹ ಸರ್ಕಾರಿ ಸೇವೆಯಲ್ಲಿದ್ದಾಗ ಎಲ್ಲಾ ವಿಷಯಗಳಲ್ಲೂ ದಿ॥ ಬೀರಪ್ಪನವರ ಮಾರ್ಗವನ್ನೇ ಅನುಸರಿಸಿದವರು. ಆದ್ದರಿಂದಲೇ ಇವರನ್ನು ನಮ್ಮ ಸಮಾಜದವರು ಬೀರಪ್ಪ ನವರ ಪರಂಪರೆಯವರೆಂದೇ ಗುರುತಿಸುತ್ತಾರೆ. ಸರ್ಕಾರಿ ಸೇವೆಯಲ್ಲಿದ್ದೂ, ಈ ರೀತಿ ಸಮಾಜಸೇವೆ ಮಾಡಿದ

ವ್ಯಕ್ತಿಗಳು ಕೆಲವರೇ ಮಾತ್ರವಿದ್ದು, ಆ ಪೈಕಿ ಶ್ರೀ ಎಸ್. ನಂಜುಂಡಯ್ಯ, ಐ.ಎ.ಎಸ್. (ನಿವೃತ್ತ). ಡಾ॥ ಎಂ. ಆರ್. ರಾಮಣ್ಣ, ಬೆಂಗಳೂರು ಮತ್ತು ರೈಲ್ವೆ ಇಲಾಖೆಯಲ್ಲಿ ನೌಕರರಾಗಿದ್ದು ಮೈಸೂರಿನಲ್ಲಿ ಒಂದು ದೇವಸ್ಥಾನ, ಒಂದು ಕಲ್ಯಾಣ ಮಂದಿರ, ಒಂದು ವಿದ್ಯಾರ್ಥಿನಿಲಯವನ್ನು ಕನಕದಾಸರ ಹೆಸರಿನಲ್ಲಿ ಒಟ್ಟಿಗೆ ಕಟ್ಟಿಸುತ್ತಿರುವ ಶ್ರೀ ಪುಟ್ಟಯ್ಯನವರು ಇವರುಗಳು ಈ ಸಾಲಿಗೆ ಸೇರುತ್ತಾರೆ. ನಮ್ಮ ನೌಕರರೆಲ್ಲಾ ಇದೇ ರೀತಿ ಕಿಂಚಿತ್ ಸೇವೆ ಮಾಡಿದ್ದ ಪಕ್ಷದಲ್ಲಿ ನಮ್ಮ ಸಮಾಜ ಎಷ್ಟೋ ಪ್ರಗತಿ ಹೊಂದಬಹುದಾಗಿತ್ತು. ದುರಾದೃಷ್ಟಕ್ಕೆ ನಮ್ಮ ಅಧಿಕಾರಿಗಳು ನಮ್ಮ ಸಮಾಜದವರನ್ನು ಹತ್ತಿರವೂ ಬಿಟ್ಟುಕೊಳ್ಳದೆ, ತಾವು ಈ ಸಮಾಜಕ್ಕೆ ಸೇರಿದವರೆಂದು ಹೇಳಿಕೊಳ್ಳಲೂ ಹಿಂಜರಿಯುತ್ತಾರೆ.

ಶ್ರೀ ಎನ್. ಮಲ್ಲಪ್ಪನವರು ಖಾದಿ ಬೋರ್ಡಿನಲ್ಲಿ ಸೇವೆ ಸಲ್ಲಿಸಿ, ನಿವೃತ್ತರಾದ ಮೇಲೆ, ಇವರಿಗೆ ಉಣ್ಣೆ, ಖಾದಿ, ರಿಬೇಟ್ ವ್ಯವಹಾರ ಇತ್ಯಾದಿಯೆಲ್ಲ ತಿಳಿದಿದ್ದರಿಂದಲೂ, ಇವರ ಪ್ರಾಮಾಣಿಕತೆ ಮತ್ತು ದಕ್ಷತೆಯನ್ನು ಅರಿತಿದ್ದರಿಂದಲೂ, ಕೇಂದ್ರ ಉಣ್ಣೆ ಸೊಸೈಟಿ ಅಧ್ಯಕ್ಷರಾಗಿದ್ದ ಶ್ರೀ ಕೊಲೂರು ಮಲ್ಲಪ್ಪನವರು ಮತ್ತು ಕಾರ್ಯಕಾರಿ ಮಂಡಲಿಯವರು ಸದರಿ ಸೊಸೈಟಿಗೆ ಇವರ ಸೇವೆಯ ಅವಶ್ಯಕತೆ ಇದೆಯೆಂದು ಭಾವಿಸಿ ಇವರನ್ನು ಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸಲು ವಿನಂತಿ ಮಾಡಿದರು. ಆದರೆ ಶ್ರೀ ಮಲ್ಲಪ್ಪನವರ ಆರೋಗ್ಯ ಆಗ ಸ್ವಲ್ಪ ಕಾಲ ಚೆನ್ನಾಗಿಲ್ಲದ ಪ್ರಯುಕ್ತ ಇವರು ಒಪ್ಪಲಿಲ್ಲ. ಆದರೆ ಅನಂತರ ಇವರು ಇದೇ ಸೊಸೈಟಿಗೆ ಚುನಾಯಿತ ಡೈರೆಕ್ಟರಾಗಿ ಬಂದು, ಮೂರು ಸಲ ಅದರ ಅಧ್ಯಕ್ಷರಾಗಿ ಚುನಾಯಿತರಾಗಿ ಸುಮಾರು ಏಳು ವರ್ಷಗಳ ಕಾಲ ದಕ್ಷ ಸೇವೆ ಸಲ್ಲಿಸಿದರು. ಕಂಬಳಿ ನೇಕಾರರಿಗೆ ನಾನಾ ರೀತಿ ಪ್ರೋತ್ಸಾಹ ಕೊಟ್ಟು ಸೊಸೈಟಿಯ ವ್ಯಾಪಾರವನ್ನು ಅಭಿವೃದ್ಧಿ ಪಡಿಸಿದರು. ಲುಕ್ಸಾನಿನಲ್ಲಿದ್ದ ಸೊಸೈಟಿಯನ್ನು ಅಭಿವೃದ್ಧಿಗೆ ತಂದರು. ಇವರ ಅನಂತರ ಹಾಲಿ ಸೊಸೈಟಿಯ ಅಧ್ಯಕ್ಷರಾಗಿರುವ ಗುರು ಒಡೆಯರ್ ಶ್ರೀ ಚೆನ್ನಯ್ಯ ಸ್ವಾಮಿಗಳು ಶ್ರೀ ಮಲ್ಲಪ್ಪನವರ ನಾನಾಮುಖ ಸೇವೆಯನ್ನು ಸ್ಮರಿಸುತ್ತಾ ಮುಕ್ತ ಕಂಠದಿಂದ ಹೊಗಳಿದ್ದಲ್ಲದೆ ಇವರ ಸನ್ಮಾನಕ್ಕೆ ತಾವೇ ಮೊದಲಿಗರಾಗುವುದಾಗಿ ನನ್ನೊಡನೆ ಪ್ರಾಸ್ತಾವಿಕವಾಗಿ ಮಾತನಾಡುತ್ತಾ ತಿಳಿಸಿದರು.

ಅದೇ ಕಾಲದಲ್ಲಿ ಕರ್ನಾಟಕ ರಾಜ್ಯದ ಮುಖ್ಯ ಮಂತ್ರಿಯಾಗಿದ್ದ ದಿ॥ ಡಿ. ದೇವರಾಜ ಅರಸುರವರು ಕುರುಬರ ಬಹು ಕಾಲದ ಬೇಡಿಕೆಯಾಗಿದ್ದ "ಉಣ್ಣೆ ಬೋರ್ಡು" (ಕುರಿ ಮತ್ತು ಕುರಿ ಉತ್ಪನ್ನಗಳ ಬಗ್ಗೆ ಒಂದು ನಿಗಮ–ಉಲ್ ಬೋರ್ಡು) ರಚಿಸಲು ತೀರ್ಮಾನಿಸಿ, ಇದಕ್ಕೆ ಶ್ರೀ ಎನ್. ಮಲ್ಲಪ್ಪನವರೆ ಯೋಗ್ಯ ವ್ಯಕ್ತಿಯೆಂದು, ಇವರಿಗೆ ಸದರಿ ಬೋರ್ಡು ಬಗ್ಗೆ ಸೂಕ್ತ ನಿಬಂಧನೆಗಳು, ರೂಲ್ಸ್‌ಗಳು, ಅಂಗರಚನೆ–ಆಕ್ಟ್ ರಚಿಸಲು ಆಹ್ವಾನಿಸಿ, ಸದರಿ ಬೋರ್ಡನ್ನು ರಚಿಸಿದ್ದಲ್ಲದೆ, ಅದಕ್ಕೆ ಇವರನ್ನೇ ಸ್ಥಾಪಕ ಅಧ್ಯಕ್ಷರನ್ನಾಗಿ ನೇಮಿಸಿದರು. ಶ್ರೀ ಎನ್. ಮಲ್ಲಪ್ಪನವರು ಸದರಿ ಬೋರ್ಡು ಅಧ್ಯಕ್ಷರಾಗಿ ಕೆಲವು ಯೋಜನೆಗಳನ್ನು ತಯಾರಿಸಿ ದಕ್ಷತೆಯಿಂದ ಕೆಲಸ ಮಾಡುತ್ತಾ ಕುರಿ ಉದ್ಯಮದಲ್ಲಿ ತೊಡಗಿರುವವರಿಗೆ ನಾನಾ ರೀತಿಯಲ್ಲಿ ಸಹಾಯಕರಾಗಿ, ಮುಖ್ಯ ಮಂತ್ರಿಗಳಿಗೂ ಅವರ ಸರ್ಕಾರಕ್ಕೂ ಒಳ್ಳೆಯ ಹೆಸರು ತಂದರು. ಈ ಬಗ್ಗೆ ದಿ॥ ದೇವರಾಜ ಅರಸುರವರು ಮುಕ್ತಕಂಠದಿಂದ ಒಂದು ಸಮಾರಂಭದಲ್ಲಿ ಶ್ರೀ ಎನ್. ಮಲ್ಲಪ್ಪನವರನ್ನು ಪ್ರಶಂಶಿಸಿದ್ದುಂಟು.

ಕಾಳಿದಾಸ ಕುರುಬರ ಕೋ-ಆಪರೇಟಿವ್ ಬ್ಯಾಂಕನ್ನು ಬೆಂಗಳೂರಿನಲ್ಲಿ ಸ್ಥಾಪಿಸುವುದರಲ್ಲಿ ಮತ್ತು ಚಾಲೂ ಮಾಡಿ ಪ್ರಗತಿಪಥದಲ್ಲಿ ನಡೆಸುವುದರಲ್ಲಿ ಶ್ರೀ ಹೆಚ್. ಚಿಕ್ಕಣ್ಣ ಮತ್ತು ಇತರರೊಂದಿಗೆ ಶ್ರೀ ಎನ್. ಮಲ್ಲಪ್ಪನವರು ಪ್ರಮುಖ ಪಾತ್ರವಹಿಸಿದರು. ತುಮಕೂರು ಜಿಲ್ಲೆಯಿಂದ ಹೆಚ್ಚು ಷೇರು ಹಣ ಸಂಗ್ರಹಿಸಿದರು. ಈ ಬ್ಯಾಂಕಿನ ಅಧ್ಯಕ್ಷರಾಗಿಯೂ ಸಹ ಸೇವೆ ಸಲ್ಲಿಸಿದರು.

ಶ್ರೀಯುತರು ತುಮಕೂರಿನಲ್ಲಿ ಕಾಳಿದಾಸ ವಿದ್ಯಾವರ್ಧಕ ಸಂಘ ಸ್ಥಾಪಿಸಿ ತನ್ಮೂಲಕ ನಗರದಲ್ಲಿ ಹಾಲಿ ವಿದ್ಯಾರ್ಥಿನಿಲಯವಿರುವ ಭವ್ಯ ಕಲ್ಲುಕಟ್ಟಡ, ಇದರ ಮುಂಭಾಗದಲ್ಲಿ ಸಾವಿರಾರು ರೂಪಾಯಿ ಬಾಡಿಗೆ ತರುವ ಮಳಿಗೆಗಳನ್ನು ಕಟ್ಟಿಸಲೂ, ತುಮಕೂರು ಉತ್ತರ ಬಡಾವಣೆಯಲ್ಲಿ ಕಾಳಿದಾಸ ಕಿರಿಯ ಕಾಲೇಜು, ಶಿರಾ ತಾಲ್ಲೂಕಿನಲ್ಲಿ ಎರಡು ಹೈಸ್ಕೂಲುಗಳು, ಗುಬ್ಬಿ ತಾಲ್ಲೂಕು ಬಿದರೆ ಗ್ರಾಮದಲ್ಲಿ ಒಂದು ಹೈಸ್ಕೂಲು ಸ್ಥಾಪಿಸುವುದರ ಮೂಲಕ ನಮ್ಮ ಸಮಾಜದಲ್ಲಿ ವಿದ್ಯಾಭಿವೃದ್ಧಿಗೆ ತಮ್ಮ ಅಭಿಮಾನಿಗಳೊಂದಿಗೆ ಕಾರಣ ಕರ್ತರಾಗಿದ್ದಾರೆ. ಇವು ಸಣ್ಣ ಕೆಲಸವೇನೂ ಅಲ್ಲ. ನಮ್ಮ ಸಮಾಜದ ಮಟ್ಟದಲ್ಲಿ ಬೃಹತ್ ಸಾಧನೆ. ನಮ್ಮ ಸಮಾಜದಲ್ಲಿ ಯಾರೂ ಯಾವ ಜಿಲ್ಲೆಯಲ್ಲೂ ಈವರೆಗೆ ಇಷ್ಟು ಸಾಧನೆ ಮಾಡಿಲ್ಲ. ಮುಂದೆ ಯಾರಾದರೂ ಮಾಡಬಹುದೇ ಎಂಬುದೂ ಬಹಳ ಅನುಮಾನ. ಏಕೆಂದರೆ ನಮ್ಮಲ್ಲಿ ಶಾಂತಿ, ಸಮಾಧಾನ, ಸಹಕಾರ, ಒಬ್ಬರಿಗೊಬ್ಬರು ಪರಸ್ಪರ ಗೌರವ ಕೊಟ್ಟು ವಿಶ್ವಾಸ ತೋರಿಸುವ ಒಗ್ಗಟ್ಟಿನ ಗುಣಗಳೇ ಇಲ್ಲ. ಪರಸ್ಪರ ನಿಂದೆ, ಅಸೂಯೆ, ಅಸಹನೆ, ಅಸಹಕಾರಗಳೇ ಹೆಚ್ಚಾಗಿವೆ. ತಾನೂ ಮಾಡುವುದಿಲ್ಲ, ಮಾಡುವವರನ್ನು ಸುಮ್ಮನೆ ಬಿಡುವುದೂ ಇಲ್ಲ. ಒಂದು ತೃಣದಷ್ಟು ಸಾಧನೆ ಮಾಡಲಾರದ ಅಶಕ್ತನೂ ತನ್ನನ್ನು ಕೇಳಿ, ಅಪ್ಪಣೆ ಪಡೆದು ಯಾರಾದರೂ ಮಾಡಬೇಕೆನ್ನುತ್ತಾನೆ. ಒಬ್ಬರು ಏನೋ ಸಾಧನೆ ಮಾಡುತ್ತಿದ್ದಾರೆ ತನಗೆ ಸಾಧ್ಯವಾದರೆ ಸ್ಪರ್ಧಾತ್ಮಕವಾಗಿ ಇನ್ನೂ ಹೆಚ್ಚಿನ ಸಾಧನೆಯನ್ನು ಬೇರೊಂದರ ಮೂಲಕ ಮಾಡೋಣ ಎನ್ನದೆ. ಗೆದ್ದಲು ಕಟ್ಟಿದ ಹುತ್ತದಲ್ಲಿ ಹಾವು ಸೇರಿದಂತೆ, ಅಡಿಗೆ ಮಾಡಿದವನಿಗಿಂತ ಒಗ್ಗರಣೆ ಹಾಕಿದವ ಅಥವಾ ಊಟಕ್ಕೆ ಬಡಿಸುವವನ ಕೈಮೇಲು ಎಂಬಂತೆ, ಮೆಹನತ್ ಪಡಾ ಮುರುಗಿ ಅಂಡೇ ಖಾಯ ಫಕೀರ್ ಎಂಬಂತೆ ಒಬ್ಬರು ಕಟ್ಟಿದ ಸಂಸ್ಥೆಯಲ್ಲಿ ನುಗ್ಗಿ ತಮ್ಮ ಸ್ವಾರ್ಥ ಹಾಗೂ ಹೆಚ್ಚುಗಾರಿಕೆ ತೋರಿಸಲು ಗುಂಪು, ಪಂಗಡ ಕಟ್ಟಿ, ಸಾಧನೆಯನ್ನು ಒಡೆಯುವುದು ಹೆಚ್ಚು. ತುಮಕೂರು ಜಿಲ್ಲಾ ಸಮಾಜ ಬಾಂಧವರ ಬಗ್ಗೆ ಇದು ಅನ್ವಯಿಸದಿರಬಹುದು. ಇವರು ಬುದ್ಧಿವಂತರಾದ್ದರಿಂದಲೇ ಶ್ರೀ ಮಲ್ಲಪ್ಪನವರಿಗೆ ಇಷ್ಟು ಸಾಧನೆ ಮಾಡಲು ಸಾಧ್ಯವಾಯಿತು. ಸ್ವಾಭಾವಿಕವಾಗಿ ನಮ್ಮ ಸಮಾಜ ಬಾಂಧವರಲ್ಲಿ ಮೇಲಿನ ನ್ಯೂನತೆಗಳು ಇವೆ. ಬ್ರಾಹ್ಮಣರು, ಲಿಂಗಾಯಿತರು ಇವರುಗಳೊಡನೆ ಹೋಲಿಸುವುದು ಸಾಧ್ಯವಿಲ್ಲ. ಆದರೆ ನಮ್ಮಂತೆಯೇ ಹಿಂದುಳಿದಿದ್ದ ಒಕ್ಕಲಿಗ ಸಮಾಜದವರು ಈಚಿನ 25 ವರ್ಷಗಳಲ್ಲಿ ಎಷ್ಟು ಸಂಸ್ಥೆಗಳನ್ನು ಕಟ್ಟಿ, ಎಷ್ಟು ವಿದ್ಯಾಸಂಸ್ಥೆ ಮತ್ತು ಹಾಸ್ಟೆಲ್ ವಗೈರೆ ಸ್ಥಾಪಿಸಿ ಸಾಮಾಜಿಕವಾಗಿ, ರಾಜಕೀಯವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ ಪ್ರಗತಿ ಹೊಂದಿರುತ್ತಾರೆ ಎಂಬುದನ್ನಾದರೂ ಗಮನಿಸಿ. ಅವರಂತೆ ನಾವೂ ನಮ್ಮಲ್ಲಿರುವ ನ್ಯೂನತೆಗಳನ್ನು ತೊರೆದು ಒಗ್ಗಟ್ಟಾಗಿ ಪ್ರಗತಿ ಸಾಧಿಸಲು ಪಣ ತೊಡಲೆಂಬ ಸದುದ್ದೇಶದಿಂದ ಶ್ರೀ ಮಲ್ಲಪ್ಪನವರ ಸಾಧನೆಗಳನ್ನು ಸ್ಮರಿಸುವ ಸಂಬಂಧವಲ್ಲಿ, ಮೇಲಿನ ವಿಷಯ ನಮೂದಿಸಲ್ಪಟ್ಟಿದ್ದೇ ವಿನಾ ಅನ್ಯಥಾ ಅಲ್ಲ. ಈ ರೀತಿ ಶ್ರೀ ಮಲ್ಲಪ್ಪನವರು ಒಬ್ಬ ವ್ಯಕ್ತಿಯಲ್ಲ, ಆದರೆ ಅವರು ಒಂದು ಶಕ್ತಿ ಮತ್ತು ಸಂಸ್ಥೆಯಾಗಿದ್ದಾರೆ. ಅವರ ಮೂಲಕ ಸಾಧಿಸಿ ಸ್ಥಾಪಿಸಲ್ಪಟ್ಟಿರುವ ಸಂಸ್ಥೆಗಳನ್ನು ಮುಂದೆ ಇನ್ನೂ ಹೆಚ್ಚಿನ ದಕ್ಷತೆ ಮತ್ತು ಸುವ್ಯವಸ್ಥೆಯಿಂದ ಉಳಿಸಿ, ಬೆಳೆಸಿಕೊಂಡು ಹೋಗುವ ಜವಾಬ್ದಾರಿ ಯುವ ಪೀಳಿಗೆ ಮೇಲೆ ಇದ್ದು, ಶ್ರೀ ಮಲ್ಲಪ್ಪನವರ ಮಾರ್ಗದರ್ಶನದಲ್ಲೇ ಮುಂದುವರಿಯತಕ್ಕದ್ದು ಸೂಕ್ತ.

ಇನ್ನು ಶ್ರೀ ಮಲ್ಲಪ್ಪನವರ ನಡೆ, ನುಡಿ, ಆಚಾರ, ವಿಚಾರ, ವ್ಯಕ್ತಿತ್ವದ ಬಗ್ಗೆ ನಾನು ಕಂಡದ್ದನ್ನು ಹೇಳಲೇಬೇಕು. ಶ್ರೀಯುತರು ಮಧ್ಯಮ ವರ್ಗದ ಕುಟುಂಬದಿಂದ ಬಂದವರೆಂಬುದು ನನ್ನ ಅನಿಸಿಕೆ. ಶ್ರೀಮಂತರಾಗಿರಲಿ, ಬಡವರಾಗಿರಲಿ, ನೌಕರನಾಗಿರಲಿ, ಕೂಲಿಯವನಾಗಿರಲಿ, ಅಧಿಕಾರಿಯಾಗಿರಲಿ, ಮುಖಂಡನಾಗಿರಲಿ ಎಲ್ಲರೊಡನೆಯೂ ಏಕೀಭಾವನೆಯಿಂದ ಬೆರೆತು ವಿವೇಚನೆಯಿಂದ ವ್ಯವಹರಿಸುವ ಚಾಕಚಕ್ಯತೆಯುಳ್ಳ ಹಾಗೂ ಧೈರ್ಯಸ್ಥೈರ್ಯಗಳುಳ್ಳ ವ್ಯಕ್ತಿ. ಶ್ರೀಮದ್ ಗಾಂಭೀರ್ಯ, ಆಡಂಬರ, ಡಾಂಭಿಕತನ. ಪಣಪ್ರತಿಷ್ಠೆ ಇಲ್ಲದ ಸರಳ, ಸದರವಾದ ಸಹೃದಯಿ. ಆಚಾರ, ವಿಚಾರ, ಊಟ, ಉಪಹಾರ, ಉಪಚಾರ ಮತ್ತು ಉಡಿಗೆ ತೊಡಿಗೆಗಳಲ್ಲೂ ಬಹಳ ಸರಳತೆ. "ಬಿಟ್ಟಂ ಜಿಟ್ಟಂ ಕೆಟ್ಟಂ" ಎನ್ನುವವರು.

ಕುಯುಕ್ತಿಯಿಲ್ಲದ, ಗುಂಡು ಹೊಡೆದಂತೆ ಸಾಫ್‌ಸೀದಾ ನೇರ ಮಾತು. ಇವರ ಮಾತು ಸ್ವಲ್ಪ ಒರಟು ಎನ್ನಿಸಿದರೂ ವಿಷದ ಹಿನ್ನೆಲೆ ಇಲ್ಲದ್ದು. ಹೃದಯ ಮೃದು. ತಮ್ಮನ್ನು ವಿರೋಧಿಸಿದವರ ಬಗ್ಗೆ ಚಕಾರ ಎತ್ತುವವರಲ್ಲ. ಅವರಿಗೆ ಆಸೆ, ಆಕಾಂಕ್ಷೆಗಳು ಇನ್ನೂ ವಯಸ್ಸು ಇದ್ದಾಗ ಇರಬಹುದಾದರೂ, ದುರಾಸೆ ಹೊಂದಿರುವ, ಎಲ್ಲವೂ ತಮಗೇ ತಮ್ಮವರಿಗೇ ಬೇಕೆಂಬ ಮಲ್ಲಪ್ಪ ಇವರಲ್ಲ.

ಇವರು ವಿಭಾಗಾಧಿಕಾರಿಗಳ ಸಹಾಯಕಾಧಿಕಾರಿಗಳಾಗಿದ್ದಾಗ, ನಮ್ಮವರೊಬ್ಬರನ್ನು ಬಡ್ತಿ ಕೊಟ್ಟು ಶಿವಮೊಗ್ಗ ನಗರಸಭೆಗೆ ವರ್ಗಮಾಡಿದರು. ಆದರೆ ಅಧ್ಯಕ್ಷರಾಗಿದ್ದ ನಮ್ಮವರೇ ಸದರಿ ಅಧಿಕಾರಿಯನ್ನು ಕೆಲಸದ ಮೇಲೆ ತೆಗೆದುಕೊಳ್ಳದಿದ್ದಾಗ, ನಮ್ಮವರು ಹೀಗೆಯೇ ಎಂದು ವ್ಯಥೆಪಟ್ಟರು. ಒಮ್ಮೆ ಇವರು ಕೇಂದ್ರ ಉಣ್ಣೆ ಸೊಸೈಟಿಯಲ್ಲಿ ಒಂದು ವಿಶೇಷ ಔತಣ ಏರ್ಪಡಿಸಿ, ಆಗ ಸಚಿವರಾಗಿದ್ದ ಶ್ರೀ ನಾಯ್ಕರ್ ಮತ್ತು ಅವರ ಆಪ್ತಕಾರ್ಯದರ್ಶಿಯವರನ್ನು ವಿಧಾನಸೌಧಕ್ಕೆ ಬಂದು ಆಹ್ವಾನಿಸಿದರು. ಹಿಂದೆ ಇವರು ಸದರಿ ಸೊಸೈಟಿ ಅಧ್ಯಕ್ಷರಾಗಲು ಕಾರಣಕರ್ತನೂ, ಈ ಕಾಲಕ್ಕೆ ಮಾಜಿ ಡೈರೆಕ್ಟರ್ ಆಗಿದ್ದ ನಾನು ಅಲ್ಲೇ ಇದ್ದರೂ ನನ್ನನ್ನು ಆಹ್ವಾನಿಸಲಿಲ್ಲ. ಒಂದು ಸಂದರ್ಭ ಬಂದಾಗ ಈ ವಿಷಯವನ್ನು ಇವರಿಗೆ ತಿಳಿಸಿದ್ದಕ್ಕೆ ಇವರು "ನಾನು ನೋಡಲಿಲ್ಲಪ್ಪ, ಕ್ಷಮಿಸು" ಎಂದರು. ತಪ್ಪನ್ನು ಒಪ್ಪಿಕೊಳ್ಳುವ ದೊಡ್ಡ ಗುಣ ಇವರದ್ದು. ಕರ್ನಾಟಕ ಕುರುಬರ ಸಂಘದ ಕಾರ್ಯಕಾರಿ ಸಮಿತಿ ಸಭೆಗೆ, ಒಮ್ಮೆ ಆಗಿನ ಅಧ್ಯಕ್ಷರಾಗಿದ್ದ ಡಾ॥ ನಟರಾಜ್ ನಿಗದಿಯಾದ ವೇಳೆಗೆ ಒಂದು ಗಂಟೆ ಮೀರಿದರೂ ಬರದಿದ್ದಾಗ, ಇವರು ತಮ್ಮ ಸ್ವಾಭಾವಿಕ ಧಾಟಿಯಲ್ಲಿ "ಎಂತಹ ಪ್ರೆಸಿಡೆಂಟ್, ಎಂಥ ಮೀಟಿಂಗ್, ತಗಿಯಪ್ಪ" ಎಂದರು. ಆಗ ಕೆಲವರು ಇವರ ಮೇಲೆ ಆಕ್ಷೇಪ ಮಾಡಿದರು. ಕೂಡಲೇ ನಾನು ಹೇಳಿದೆ "ಶ್ರೀ ಎನ್. ಮಲ್ಲಪ್ಪನವರು ಯಾವ ದುರುದ್ದೇಶ ವಿಲ್ಲದೆ ಸ್ವಾಭಾವಿಕವಾಗಿ ತಮ್ಮಷ್ಟಕ್ಕೆ ತಾವೇ ಹೇಳಿದರೇ ವಿನಾ ಬೇರೆ ಇಲ್ಲ" ಎಂದು. ಶ್ರೀ ಮಲ್ಲಪ್ಪನವರು ಸಹ ಕೂಡಲೇ "ನನಗೆ ಯಾರ ಮೇಲೂ ಯಾವ ದುರುದ್ದೇಶವೂ ಇಲ್ಲದೆ ಹೇಳಿದೆನಪ್ಪ. ನನ್ನನ್ನು ಶ್ರೀ ಈಶ್ವರಪ್ಪ ಚೆನ್ನಾಗಿ ಅರ್ಥಮಾಡಿಕೊಂಡಿದ್ದಾರೆ" ಎಂದು ಹೇಳಿದರು. ಅನಂತರ ಅನೇಕ ಸದಸ್ಯರು ಶ್ರೀ ಮಲ್ಲಪ್ಪನವರು ಹೇಳಿದ ಮಾತನ್ನು ನಾವೂ ಹೇಳುತ್ತೇವೆಂದು ಅರ್ಭಟಿಸಿದರು. ಈ ರೀತಿ ಶ್ರೀ ಮಲ್ಲಪ್ಪ ನವರು ಸಂಸ್ಕಾರ ಹೊಂದಿದ, ಪ್ರತಿಫಲಾಪೇಕ್ಷೆ ಇಲ್ಲದೆ ಸೇವೆಮಾಡುವ, ಕಷ್ಟ ಬಂದಾಗ ಕುಗ್ಗದೆ, ಸುಖ ಬಂದಾಗ ಹಿಗ್ಗದೆ ಸಮನ್ವಯ ಜೀವನದ ಸ್ಥಿತಪ್ರಜ್ಞರಾಗಿದ್ದಾರೆ. ಇವರು ಇತರೆ ಸಮಾಜದಲ್ಲಿ ಹುಟ್ಟಿದ್ದರೆ ಹಾಡಿ, ಹೊಗಳಿ ಆನೆಯ ಮೇಲೆ ಮೆರವಣಿಗೆ ಮಾಡುತ್ತಿದ್ದರು. ಕುರುಬ ಕೇಸರಿ ಡಾ॥ ಎಂ. ಆರ್. ರಾಮಣ್ಣ ನವರು ಈ ಹಿಂದೆ ಮದ್ರಾಸ್ ಉಡ್ ಲ್ಯಾಂಡ್ಸ್ ಹೋಟೆಲಿನಲ್ಲಿ, ಆಗಿನ ಮಂತ್ರಿಗಳ ಸಮ್ಮುಖದಲ್ಲಿ ನಮ್ಮ ಸಮಾಜಕ್ಕೆ ಸೇವೆ ಸಲ್ಲಿಸಿದ ಹಲವಾರು ಮಹನೀಯರನ್ನು ಸನ್ಮಾನಿಸಲು ಒಂದು ಭರ್ಜರಿ ಸಮಾರಂಭವನ್ನು ಏರ್ಪಡಿಸಿದ್ದರು. ಸನ್ಮಾನಿತರ ಪಟ್ಟಿಯಲ್ಲಿ ಶ್ರೀ ಎನ್. ಮಲ್ಲಪ್ಪನವರ ಹೆಸರನ್ನು ಸೇರಿಸಲು ರಾಮಣ್ಣನವರು ಎಷ್ಟು ಕೇಳಿದರೂ ಇವರು ಒಪ್ಪಲಿಲ್ಲ. ಆದರೆ ಆ ಸಮಾರಂಭಕ್ಕೆ ಇವರೂ ನನ್ನೊಡನೆ ಹಾಜರಿದ್ದು ನಾನು ಕೇಳಿದ್ದಕ್ಕೆ ತಮ್ಮ ಸ್ವಾಭಾವಿಕ ಧಾಟಿಯಲ್ಲಿ "ಎಂಥಾ ಸನ್ಮಾನ, ಏನು ಸೇವೆ ಮಾಡಿದ್ದೀವಿ ಬಿಡ್ರಿ" ಎಂದು ದೈನ್ಯದಿಂದ ಹೇಳಿದರು. ಈಗ ಸನ್ಮಾನಕ್ಕೆ ಅವರು ಹೇಗೆ ಒಪ್ಪಿದರೋ ಗೊತ್ತಿಲ್ಲ. ಇಂತಹ ಸನ್ಮಾನಗಳಿಂದ ಕೃತಜ್ಞತೆ ಸೂಚಿಸಲು ಮತ್ತು ಇದೇ ರೀತಿ ಸಮಾಜಸೇವೆ ಮಾಡುವವರು, ಸಮಾಜ ತಮ್ಮ ಬೆಂಬಲಕ್ಕೆ ಇವೆ ಯೆಂದು ಉತ್ಸಾಹದಿಂದ ಸೇವೆಮಾಡಲು ಪ್ರೋತ್ಸಾಹ ಕೊಟ್ಟಂತೆ ಸಹ ಆಗುತ್ತದೆ. ಹಾಗೂ ವಿದ್ಯಾ ಸಂಸ್ಥೆಗಳನ್ನು ಸ್ಥಾಪಿಸುವುದರ ಬಗ್ಗೆ ಸಮಾಜದಲ್ಲಿ ಒಂದು ರೀತಿ ನವ ಚೈತನ್ಯವನ್ನು ಹುಟ್ಟುಹಾಕಿದಂತೆ ಆಗುತ್ತದೆ. ಈ ಸನ್ಮಾನ ಸಮಾರಂಭದಲ್ಲಿ ಇವರಿಗೆ ಒಂದು ಬಿರುದನ್ನು ಕೊಡಬೇಕು. ಬೀರಪ್ಪನವರ ಪರಂಪರೆಯ ಶ್ರೀ ಎನ್. ಮಲ್ಲಪ್ಪನವರಿಗೆ ಶುಭ ಹಾರೈಕೆಯೊಂದಿಗೆ ಅಭಿನಂದನೆಗಳು. ಜೈ ಹಿಂದ್ !

ಮಗಳು ಕಂಡ ಮಲ್ಲಪ್ಪನವರು

ಚಿಕ್ಕತಾಯಿ ಗಂಗಯ್ಯ

ಯಾವುದೇ ವ್ಯಕ್ತಿಯ ಶ್ಲಾಘನೀಯ ಕೆಲಸದ ಬಗ್ಗೆ ಗುರುತು ಹಾಕಿಕೊಂಡು ಬರೆಯಬಹುದು. ಆದರೆ ಆ ವ್ಯಕ್ತಿ ಸ್ವಂತ ತಂದೆಯೇ ಆದಾಗ ಬರೆಯುವುದು ಕಷ್ಟಸಾಧ್ಯ. ಒಬ್ಬ ವ್ಯಕ್ತಿಯ ವಿಷಯ ಮಾತನಾಡುವಾಗ ಆ ವ್ಯಕ್ತಿ ಮಾಡಿದ ದಾನ ಧರ್ಮದಿಂದ ಆತನನ್ನು ಅಳೆಯುವುದು ಕಷ್ಟ. ಏಕೆಂದರೆ ಕೆಲವರು ತಮ್ಮ ಸ್ವಾರ್ಥ ಸಾಧನೆಗೋಸ್ಕರ ದಾನ ಧರ್ಮ ಮಾಡಿರಬಹುದು. ಕೆಲವರು ಆತ್ಮ ತೃಪ್ತಿಗಾಗಿ ಮಾಡಿರುವವರು ಇರುತ್ತಾರೆ. ನಾನು ಇದನ್ನೆಲ್ಲ ಏತಕ್ಕೋಸ್ಕರವಾಗಿ ಬರೆದೆನೆಂದರೆ ತನ್ನ ಸ್ವಾರ್ಥಕ್ಕಲ್ಲದೇ ಜನಾಂಗದ ಏಳಿಗೆಗೆ ದುಡಿದ, ದುಡಿಯುತ್ತಿರುವ ಕುರುಬ ಜನಾಂಗದ ಮುಖ್ಯಸ್ಥರಲ್ಲಿ ಶ್ರೀ ಎಚ್. ಮಲ್ಲಪ್ಪನವರು ಒಬ್ಬರು. ಅವರು ನನ್ನ ಪೂಜ್ಯ ತಂದೆ ಕೂಡ.

ಇವರು ನನ್ನ ಜೀವನದ ಮೇಲೆ ಬಹಳಷ್ಟು ಪ್ರಭಾವಬೀರಿದಂತಹ ವ್ಯಕ್ತಿ. ಇವರು ನನ್ನ ತಂದೆ ಅನ್ನುವ ಒಂದು ಕಾರಣದಿಂದ ಹೇಳುತ್ತಿಲ್ಲ. ತುಂಬಾ ಖಂಡಿತವಾದಿ, ಹಾಗೇ ಆದರ್ಶವಾದಿ ಕೂಡ. ಅವರಿಗೆ ನಮ್ಮ ಕುರುಬ ಜನಾಂಗದ ಏಳಿಗೆಗಾಗಿ ತುಂಬಾ ಕಳಕಳಿ. ಮನೆಯಲ್ಲಿ ನಾವು ಈ ವಯಸ್ಸಿನಲ್ಲಿ ನಿಮಗೇಕೆ ಈ ಚಿಂತೆ, ಸುಮ್ಮನೆ ಮನೆಯಲ್ಲಿರಿ ಅಂದರೆ ಎಲ್ಲರೂ ಸುಮ್ಮನೆ ಮನೆಯಲ್ಲಿದ್ದರೆ, ನಮ್ಮ ಜನಾಂಗ ಮುಂದುವರಿಯುವುದು ಹೇಗೆ ? ಅನ್ನುತ್ತಾರೆ ; ಅದಕ್ಕೆ ನಮ್ಮ ಉತ್ತರವಿಲ್ಲ, ಬಾಯಿ ಕಟ್ಟಿಹೋಗುತ್ತದೆ.

ಅವರು ಜಿಲ್ಲಾ ಹಿಂದುಳಿದ ಜನಾಂಗದ ಅಧ್ಯಕ್ಷರೂ ಮತ್ತು ಶ್ರೀ ಕಾಳಿದಾಸ ವಿದ್ಯಾವರ್ಧಕ ಸಂಘದ ಸಂಸ್ಥಾಪಕರೂ ಆಗಿದ್ದಾರೆ. ಈ ಸಂಘವನ್ನು ಮುಂದೆ ತರಬೇಕಾದರೆ ಅದೆಷ್ಟು ಕಷ್ಟಪಟ್ಟಿದ್ದಾರೆ ಅಂದರೆ ಅದನ್ನು ನೋಡಿದವರಿಗೆ ಮಾತ್ರ ವೇದ್ಯವಾಗುತ್ತದೆ. ತಮ್ಮ ಜೀವನವನ್ನೇ ಅದಕ್ಕೆ ಮುಡಿಪಾಗಿಟ್ಟಿದ್ದಾರೆ. ಅದರ ಬಗ್ಗೆ ಬಹಳ ಹೆಮ್ಮೆ ಎನಿಸುತ್ತದೆ.

ಅವರು ದಿನ ನಿತ್ಯದ ಕೆಲಸ ಮುಗಿಸಿ ಬೆಳಗ್ಗೆ 8–30 ಕ್ಕೆಲ್ಲ ಹಾಸ್ಟಲ್‌ಗೆ ಹೊರಟು ಹೋಗುತ್ತಾರೆ. ದಿನವೂ ಸ್ವಲ್ಪ ಕೂಡ ವ್ಯತ್ಯಾಸವಾಗಬಾರದು. ಅವರಿಗೆ ಸಮಯದ ಬಗ್ಗೆ ಬಹಳ ಕಾಳಜಿ. ನಾವು ಬೇಕಾದರೆ ಕಾಯಬಹುದು, ಆದರೆ ಬೇರೆಯವರನ್ನು ಕಾಯಿಸುವುದು ಬಹಳ ತಪ್ಪು ಎನ್ನುವುದು ಅವರ ಅಭಿಪ್ರಾಯ. ಮನೆಯಲ್ಲಿ ನನ್ನ ಕೊನೆಯ ಅಣ್ಣ (ಶ್ರೀ ಕುಮಾರ್) ನಮ್ಮ ತಾಯಿಯ ಹತ್ತಿರ ನಾವು ಆಫೀಸಿಗೂ ಇಷ್ಟು ಸಮಯಕ್ಕೆ ತಯಾರಾಗಿ ಹೊರಡುವುದು ಕಷ್ಟ ಅಂತ ರೇಗಿಸುತ್ತಾನೆ.

ನಮ್ಮ ತಂದೆಯವರು ಬಹಳ ಹಟವಾದಿ ಕೂಡ. ಏಕೆಂದರೆ ಯಾವುದೇ ಕೆಲಸವಾಗಿರಲಿ ಇವರು ಹೇಳಿದ ಸಮಯಕ್ಕೆ ಸರಿಯಾಗಿ ಮುಗಿಯಬೇಕು. ಇಲ್ಲದಿದ್ದರೆ ಬಹಳ ಕೋಪ. ಪದೇ ಪದೇ ಒತ್ತಡ ತಂದು ಮುಗಿಯುವ ತನಕ ಬಿಡುವುದಿಲ್ಲ.

ಅವರು ಯಾವ ಸಮಾರಂಭಕ್ಕೆ ಹೋಗುವಾಗಲೂ ವಿಷಯದ ಬಗ್ಗೆ ಸಾಕಷ್ಟು ತಯಾರಾಗಿ ಹೊರಡುವುದು ರೂಢಿ. ನನಗೆ ಮೊದಲಿನಿಂದಲೂ ಅವರ ಭಾಷಣವೆಂದರೆ ಇಷ್ಟ.

ಅವರು ಊಟದ ಬಗ್ಗೆಯೂ ಅಷ್ಟೇ ಕಟ್ಟುನಿಟ್ಟು. ಅವರ ಕಟ್ಟುನಿಟ್ಟು ಜೀವನ ನಮಗೆಲ್ಲಾ ತುಂಬಾ ಆಶ್ಚರ್ಯಕರ. ಡಾಕ್ಟರು ನಮ್ಮ ತಂದೆಯವರಿಗೆ ಕೆಲವು ಖಾದ್ಯವನ್ನು ತಿನ್ನಕೂಡದೆಂದು ನಿಷೇಧಿಸಿದ್ದಾರೆ. ಇದುವರೆಗೂ ಅವರು ತಿಂದುದನ್ನು ನೋಡಿಲ್ಲ. ಊಟದ ಬಗ್ಗೆ ಅವರಿಗೆ ರುಚಿ ಮತ್ತು ಶುಚಿ ಎರಡೂ ಇರಬೇಕು. ಅದಂತೂ ನಮ್ಮ ತಾಯಿಯವರಿಗೆ ಕರಗತವಾಗಿದೆ. ಕಾರಣಾಂತರದಿಂದ ನಾವೇನಾದರೂ ರಾಗಿ ಮುದ್ದೆ ಮಾಡುವಾಗ ಸ್ವಲ್ಪ ವ್ಯತ್ಯಾಸವಾದರೂ 'ಇವನ್ನು ಕಟ್ಟಿಕೊಂಡವನು ಎಲ್ಲಾ ಕೈಲೂ ಉಣ್ಣುತ್ತಾನೆ' ಅಂತ ನಮ್ಮ ಎದುರೇ ಹೇಳಿಬಿಡುತ್ತಿದ್ದರು. ಅವರು ಹಿಂದು ಮುಂದು ನೋಡುತ್ತಲೇ ಇರಲಿಲ್ಲ. ಯಾವುದನ್ನೂ ಎದುರೆದುರೇ ಮಾತನಾಡುತ್ತಾರೆ. ಕೈಲಿ ಶರಣಾರ್ಥಿ ಕಂಕುಳಲ್ಲಿ ದೊಣ್ಣೆ ಅವರ ಜಾತಕದಲ್ಲಿ ಇಲ್ಲ.

ಅವರಿಂದ ಬೇಕಾದಷ್ಟು ಜನ ಸಹಾಯ ಪಡೆದಿದ್ದಾರೆ ಮತ್ತು ಪಡೆಯುತ್ತಿದ್ದಾರೆ. ಸಹಾಯಪಡೆದ ವ್ಯಕ್ತಿಯೇ ಮುಂದೆ ಬಂದು ತಮ್ಮ ಪರಿಚಯ ಹೇಳಿಕೊಂಡರೆ ಮಾತ್ರ ಗೊತ್ತಾಗುತ್ತದೆ. ನಾನೇ ಸಹಾಯ ಮಾಡಿದ್ದೆ ಅನ್ನುವ ನೆನಪೇ ಇರುವುದಿಲ್ಲ. ನಾವು ಮಾಡಿದ್ದು ನೆನಪಿಟ್ಟುಕೊಂಡು ಏನು ಪ್ರಯೋಜನ. ಜನಗಳಿಗೆ ಉಪಯೋಗವಾದರೆ ಸಾಕು ಅನ್ನುತ್ತಿರುತ್ತಾರೆ.

ನನ್ನ ಮನಸ್ಸಿನ ಮೇಲೆ ಅತ್ಯಂತ ಪರಿಣಾಮ ಬೀರಿದ ಪ್ರಭಾವಶಾಲಿ ಘಟನೆಯೆಂದರೆ ಆಗ ಇನ್ನೂ ನನ್ನ ಮದುವೆಯಾಗಿ ಒಂದು ವರ್ಷವಾಗಿತ್ತು. ಕಾರಣಾಂತರದಿಂದ ನಾನು ತವರು ಮನೆಯಲ್ಲೇ ಇರುವ ಪ್ರಸಂಗ ಬಂದಿತ್ತು. ಹಳ್ಳಿಯಿಂದ ನಮ್ಮ ಮಾವನವರು ಬಂದಿದ್ದರು. ಅವರು ಬಂದಿದ್ದನ್ನು ಅಷ್ಟಾಗಿ ನಾನು ಗಮನಿಸದೆ ಮಾತನಾಡಿಸಲಿಲ್ಲ. ನಮ್ಮ ತಂದೆಯವರಿಗೆ ನನ್ನ ಮೇಲೆ ಬಹಳಷ್ಟು ಸಿಟ್ಟು ಬಂದು ಪೆಟ್ಟನ್ನು ಕೊಟ್ಟರು. ಅಷ್ಟು ಸಿಟ್ಟುಮಾಡಿಕೊಂಡದ್ದನ್ನು ನಾನು ನೋಡಿರಲೇ ಇಲ್ಲ. ನನಗೆ ಅವರು ಕೊಟ್ಟಂತಹ ಪೆಟ್ಟು ಹೆಚ್ಚೆನಿಸದೆ ಅವರು ಹೇಳಿದಂತಹ ಮಾತು ಬಹಳ ಮುಖ್ಯವೆನಿಸಿತು. "ನಮ್ಮ ಮನೆಯಿಂದ ಹೋದ ಮೇಲೆ ನಿನ್ನ ಅತ್ತೆ ಮಾವನೇ ತಾಯಿ ತಂದೆಗಿಂತ ಹೆಚ್ಚು. ಅವರನ್ನು ಆದರಿಸಿ ಅವರ ಸೇವೆ ಮಾಡಬೇಕು" ಅಂದರು. ಇಂಥ ತಂದೆ ಸಿಗುವುದು ಅಪರೂಪ. ಈಗಲೂ ಅವರ ಮಾತು ನನ್ನ ಹೃದಯ ತುಂಬಿದೆ.

ಅವರ ಕಾರ್ಯದಕ್ಷತೆ, ನಿಯತ್ತು ನಮ್ಮ ಅಣ್ಣಂದಿರ ಮೇಲೆ ಪ್ರಭಾವ ಬೀರಿದೆ ಅಂದರೆ ತಪ್ಪಾಗಲಾರದು. ಅವರು ಕೂಡ ಅದೇ ಒಳ್ಳೆಯ ಹೆಸರನ್ನು ತೆಗೆದುಕೊಂಡರೆ ತಂದೆಯಂತೆ ಮಕ್ಕಳು ಅನ್ನುವುದು ಸಿದ್ಧವಾಗುತ್ತದೆ. ನಮ್ಮ ತಂದೆ ತಮ್ಮ ಮಕ್ಕಳನ್ನು ಆದರ್ಶಪ್ರಾಯವಾಗಿ ಬೆಳೆಸಿದರೆ ನನ್ನ ಕರ್ತವ್ಯ ಮುಗಿಯಿತು ಎಂದು ಸುಮ್ಮನಾಗದೆ ಹಳ್ಳಿಯಿಂದ ಬಂದಂತಹ ಮಕ್ಕಳಿಗೆ ಅನುಕೂಲವಾಗಲೆಂದು ಕಾಳಿದಾಸ ಹಾಸ್ಟಲ್ ಮೂಲಕ ಎಲ್ಲಾ ವಿಧದ ಅನುಕೂಲತೆ ಮಾಡಿಕೊಟ್ಟಿದ್ದಾರೆ.

ಇದೇ ಈಗ ಅನಾರೋಗ್ಯದಿಂದ ಚೇತರಿಸಿಕೊಳ್ಳುತ್ತಿದ್ದಾರೆ. ಆದಷ್ಟು ಬೇಗ ಅನಾರೋಗ್ಯದಿಂದ ಚೇತರಿಸಿಕೊಂಡು ಇನ್ನೂ ಉತ್ತಮ ಸೇವೆಯನ್ನು ಮಾಡಲು ದೇವರು ಅವರಿಗೆ ಆರೋಗ್ಯ ಆಯುಸ್ಸನ್ನು ಕೊಡಲೆಂದು ಆಶಿಸುತ್ತೇನೆ.

ನಮ್ಮ ಸಮಾಜದ ಅಮೌಲ್ಯ ಆಸ್ತಿ

ಕೆ. ಬಿ. ಕಲ್ಲಂಣವರ

ಶ್ರೀ ಎಸ್. .ಮಲ್ಲಪ್ಪನವರ ತುಂಬು ಜೀವನದ ಸವಿನೆನಪಿಗಾಗಿ ಒಂದು ಅಭಿನಂದನ ಗ್ರಂಥ ಬಿಡುಗಡೆ ಮಾಡುತ್ತಿರುವುದನ್ನು ತಿಳಿದು ನನಗೆ ಅತ್ಯಂತ ಆನಂದವಾಯಿತು. ಅದರ ಜೊತೆಗೆ ಅವರ ಬಗ್ಗೆ ನನ್ನ ಸಿಹಿ ನೆನಪಿನ ಕೆಲವು ಅನಿಸಿಕೆಗಳನ್ನು ಬರೆದು ನನ್ನ ಕೃತಜ್ಞತೆಗಳನ್ನು ಅರ್ಪಿಸಬಯಸುವುದೇ ಈ ಲೇಖನದ ಉದ್ದೇಶ.

ಶ್ರೀ ಮಲ್ಲಪ್ಪನವರು ನನಗಿಂತ ಸುಮಾರು 20 ವರ್ಷ ಹಿರಿಯರು. ಅಂದಮೇಲೆ ಅವರ ಬಾಲ್ಯ ಜೀವನವಾಗಲಿ, ವಿದ್ಯಾರ್ಥಿ ಜೀವನವಾಗಲಿ ಅಥವಾ ಅನಂತರ ಅವರು ಅನೇಕ ಸರಕಾರಿ ಹುದ್ದೆಗಳಲ್ಲಿ ಸೇವೆ ಸಲ್ಲಿಸಿ "ಸೈ" ಅನ್ನಿಸಿಕೊಂಡ ಸಂಗತಿಯಾಗಲಿ ನನಗೆ ಸ್ವಂತಕ್ಕೆ ಗೊತ್ತಿಲ್ಲ. ಆದರೆ ಕೇಳಿ ಗೊತ್ತು. ಆ ಕಾರಣ ಆ ವಿಷಯಗಳ ಬಗ್ಗೆ ಅವರ ಸಮವಯಸ್ಕರು, ಸಹಪಾಠಿಗಳು, ಸಹೋದ್ಯೋಗಿಗಳು ಬರೆದರೆ ಒಳ್ಳೆಯದು ಎಂದು ಭಾವಿಸಿ ಆ ವಿಷಯಗಳ ಬಗ್ಗೆ ಇಲ್ಲಿ ಬರೆಯಲು ಹೋಗಿಲ್ಲ.

ಇಂದಿಗೆ ಸುಮಾರು 15-20 ವರ್ಷಗಳ ಹಿಂದೆ ಮೈಸೂರಿನಲ್ಲಿ ಅಖಿಲ ಕರ್ನಾಟಕ ಕುರುಬರ ಮಹಾ ಸಮ್ಮೇಳನ ಕೂಡುವದಿತ್ತು. ಆ ಸಂದರ್ಭದಲ್ಲಿ ಉತ್ತರ ಕರ್ನಾಟಕದ ಸಮಾಜ ಬಾಂಧವರಿಂದ ದೇಣಿಗೆ, ವಂತಿಗೆ ವಗೈರೆ ಸಂಗ್ರಹಿಸುವುದರ ಜೊತೆಗೆ ಆ ಮಹಾ ಸಮ್ಮೇಳನಕ್ಕೆ ಅವರನ್ನು ಆಮಂತ್ರಿಸಲು ಹಳೆಯ ಮೈಸೂರು ಭಾಗದ ಕೆಲವು ಹಿರಿಯರು ಬಂದಿದ್ದರು. ಶ್ರೀ ಎಸ್. ಎಲ್. ಒಡಿಯರ ವಕೀಲರ ಆಫೀಸಿನಲ್ಲಿ ಕೂಡಿದ್ದರು. ಆಗ ಸಮ್ಮೇಳನದ ಬಗ್ಗೆ ಮಾತುಕತೆ ಆದ ಮೇಲೆ ಅವರಲ್ಲಿ ಒಬ್ಬರು "ಏನ್ರಿ ವಕೀಲರೇ, ಧಾರವಾಡ ವಿದ್ಯಾಕೇಂದ್ರ, ಜಿಲ್ಲಾ ಸ್ಥಳವೂ ಹೌದು. ಇಂಥಾ ಸ್ಥಳದಲ್ಲಿ ನಮ್ಮ ಸಮಾಜದ ಬಡ ವಿದ್ಯಾರ್ಥಿಗಳಿಗೆ ಒಂದು ಬೋರ್ಡಿಂಗ್ ಸಹ ಇಲ್ಲವಲ್ಲ! ಎಂಥ ವಿಷಾದದ ವಿಷಯ ಇದು!!" ಎಂದು ಬಹು ನೊಂದ ಮನಸ್ಸಿನಿಂದ ಅಂದರು. ಅದರ ಜೊತೆಗೆ "ಈ ಕೂಡಲೇ ನೀವು ಯಾಕೆ ಒಂದು ಬೋರ್ಡಿಂಗ್ ಸ್ಟಾರ್ಟ್ ಮಾಡಬಾರದು ? Please take it as a challenge" ಅಂತಾ ಮರ್ಮಸ್ಥಳಕ್ಕೆ ಚುಚ್ಚಿದರು ಎಚ್ಚರವಾಗುವ ರೀತಿಯಲ್ಲಿ, ಅದೂ ಅತ್ಯಂತ ವಿನಮ್ರವಾಗಿ ಹೇಳಿದರು. ಅವರು ಹೇಳುವ ರೀತಿ, ಅವರಲ್ಲಿರುವ ಸಮಾಜದ ಕಳಕಳಿ ನಮಗೆ ಅಗಾಧ ಸ್ಫೂರ್ತಿಯನ್ನಿತ್ತಿತು. ಅಂಥ ಸ್ಫೂರ್ತಿಯನ್ನಿತ್ತ ಮಹಾನುಭಾವರೇ ಶ್ರೀ ಮಲ್ಲಪ್ಪನವರು. ನಾನು ಅವರನ್ನು ಕಂಡದ್ದೂ ಅದೇ ಮೊದಲ ಸಲ.

ಅನಂತರ ಕೆಲದಿನಗಳಲ್ಲಿಯೇ ನಾನು ಮತ್ತು ಧಾರವಾಡದಲ್ಲಿಯ ಕೆಲವರು ಹಿರಿಯರು ಹಾಗೂ ಕಿರಿಯರು ಕೂಡಿ "ಶ್ರೀ ಕಾಳಿದಾಸ ವಿದ್ಯಾವರ್ಧಕ ಸಂಘ, ಧಾರವಾಡ" ಎಂಬ ಸಂಸ್ಥೆಯನ್ನು ಕಟ್ಟಿ ಅದರ ಮುಖಾಂತರ ಎಲ್ಲಾ ಕೋಮುಗಳ ಬಡ ವಿದ್ಯಾರ್ಥಿಗಳಿಗಾಗಿ ಒಂದು ಬೋರ್ಡಿಂಗ್. "ಶ್ರೀ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಯುವಕ ಮಂಡಳ", "ಶಿಶು–ವಿಹಾರ", "ಬೀರೇಶ್ವರ ವಾಚನಾಲಯ", "ಮಹಿಳಾ ಮಂಡಳ" ವಗೈರೆ ಸಂಸ್ಥೆಗಳನ್ನು ಸ್ಥಾಪಿಸಿದೆವು. ಅವು ಈ ಭಾಗದ ಸಮಾಜದ ಪ್ರಗತಿಗೆ ಕಾರಣವಾದುವು. ಈ ಅವಧಿಯಲ್ಲಿ ಶ್ರೀ ಮಲ್ಲಪ್ಪನವರು ಅನೇಕ ಸಲ ಸಂದರ್ಶನವನ್ನು ನಮ್ಮ "ಶ್ರೀ ಕಾಳಿದಾಸ ವಿದ್ಯಾವರ್ಧಕ ಸಂಘಕ್ಕೆ" ಇತ್ತು ಎಲ್ಲಾ ಕೋಮುಗಳ ನೂರಾರು ಬಡ ವಿದ್ಯಾರ್ಥಿಗಳು ಬೋರ್ಡಿಂಗ್‌ನಲ್ಲಿ ಇದ್ದು ತಮ್ಮ

ವಿದ್ಯಾರ್ಜನೆಯನ್ನು ಮುಂದುವರಿಸಿದ್ದನ್ನು ಮತ್ತು ಸಂಘದ ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಚಟುವಟಿಕೆಗಳನ್ನು ಕಣ್ಣಾರೆ ಕಂಡು ಅತ್ಯಂತ ಸಂತೋಷಪಟ್ಟಿದ್ದಾರೆ. ಅಂದಿನ ನಮ್ಮ ಪ್ರಸಾದ ನಿಲಯದ ಬಡ ವಿದ್ಯಾರ್ಥಿಗಳು ಇಂದು ಪ್ರಸಿದ್ಧ ವಕೀಲರಾಗಿ, ಪ್ರೊಫೆಸರರಾಗಿ, ಡಾಕ್ಟರರಾಗಿ, ಇಂಜಿನಿಯರರಾಗಿ ನಾಡಿನ ನಾನಾ ಭಾಗಗಳಲ್ಲಿ ತಮ್ಮ ತಮ್ಮ ಪಾಲಿನ ಸೇವೆ ಸಲ್ಲಿಸುತ್ತಿದ್ದಾರೆ ಎಂದು ಹೇಳಲು ಬಹಳ ಸಂತೋಷ.

ಈ ವಿಷಯದ ಪ್ರಸ್ತಾಪವನ್ನು ಇಲ್ಲಿ ಮಾಡುವ ಕಾರಣ ಇಷ್ಟೆ: ಶ್ರೀ ಮಲ್ಲಪ್ಪನವರು ಅಂದು ಅತ್ಯಂತ ಕಳಕಳಿಯಿಂದ ಮಾಡಿದ ಮನವಿ, ಕೊಟ್ಟ ಪ್ರೋತ್ಸಾಹ ಮತ್ತು ಇತ್ತ ಸ್ಫೂರ್ತಿಯಿಂದಲೇ ಧಾರವಾಡದಲ್ಲಿ “ಶ್ರೀ ಕಾಳಿದಾಸ ವಿದ್ಯಾವರ್ಧಕ ಸಂಘ” ನೆಲೆಯೂರಿ ನಿಂತಿತು. ಅವರು ಧಾರವಾಡಕ್ಕೆ ಬಂದಾಗೊಮ್ಮೆ ಈ ಸಂಸ್ಥೆಗೆ ತಪ್ಪದೇ ಭೇಟಿಕೊಟ್ಟಿದ್ದಾರಲ್ಲದೇ ಅದಕ್ಕೆ ತಮ್ಮಿಂದಾದಷ್ಟು ತನು-ಮನ-ಧನದಿಂದ ಸಹಾಯ ಮಾಡಿದ್ದಾರೆ. ಅಂಥ ಮಹಾನುಭಾವರನ್ನು ಈ ಸಂದರ್ಭದಲ್ಲಿ ನೆನೆಯುವುದು, ಅವರಿಗೆ ಕೈಜೋಡಿಸಿ ವಂದಿಸುವುದು ನಮ್ಮ ಮೊದಲ ಕರ್ತವ್ಯ ಎಂದು ನಾನು ಭಾವಿಸಿದ್ದೇನೆ.

ಶ್ರೀ ಮಲ್ಲಪ್ಪನವರನ್ನು ನಾನು ಮೊದಲು ಕಂಡಂದಿನಿಂದ ಹಿಡಿದು ಇಂದಿನವರೆಗೆ ಅನೇಕ ಸಲ ಕಂಡಿದ್ದೇನೆ. ಕಾಣುತ್ತಲೂ ಇದ್ದೇನೆ. ಅವರ ಊರಾದ ತುಮಕೂರಿಗೆ ಅನೇಕ ಸಲ ನಾನು ಹೋಗಿ ಅಲ್ಲಿ ಅವರು ಕಟ್ಟಿದ ಮತ್ತು ಕಟ್ಟುತ್ತಿರುವ ಅನೇಕ ಸಂಘ, ಸಂಸ್ಥೆಗಳನ್ನು ಕಣ್ಣಾರೆ ಕಂಡಿದ್ದೇನೆ. ಈ ಇಳಿವಯಸ್ಸಿನಲ್ಲಿಯೂ ಅವರು ಕೈಗೊಳ್ಳುತ್ತಿರುವ ಚಟುವಟಿಕೆಗಳನ್ನು ನೋಡಿ, ಕೇಳಿ ಅತ್ಯಂತ ಆನಂದಪಟ್ಟಿದ್ದೇನೆ. ಅವರೊಬ್ಬ ನಮ್ಮ “ಸಮಾಜದ ಅಮೌಲ್ಯ ಆಸ್ತಿ” ಎಂದು ಮನಗಂಡಿದ್ದೇನೆ. ಅವರು ಕಟ್ಟಿದ ಪ್ರಸಾದ ನಿಲಯಗಳಾಗಲಿ, ಶಾಲೆ ಕಾಲೇಜುಗಳಾಗಲಿ ಅಥವಾ ಇತರೆ ಸಂಘ ಸಂಸ್ಥೆಗಳಾಗಲಿ ಬಲು "ಗಟ್ಟಿಮುಟ್ಟು". ಅವರು ಇಂದು ಕೈಗೊಳ್ಳುವ ಎಲ್ಲ ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಕಾರ್ಯಕ್ರಮಗಳು ನಮ್ಮಂಥವರಿಗೆ ಮಾದರಿಯವಾಗಿವೆ. ಸದಾ ಮಾರ್ಗದರ್ಶಕವಾಗಿವೆ. ಅವರ ಚಿತ್ತಕ್ಕೆ ಸದಾ ಸಮಾಜದ ಏಳ್ಗೆಯದೇ ಚಿಂತೆ.

ನಮ್ಮ ಸಮಾಜದ ದುರ್ದೈವವೋ ಏನೋ! ಶ್ರೀ ಮಲ್ಲಪ್ಪನವರಂಥ ಮಹಾನುಭಾವರು ಕಣ್ಣಲ್ಲಿ ಕಣ್ಣಿಟ್ಟು ಹುಡುಕಿದರೂ ಸಿಗುವುದು ಬಲು ಕಷ್ಟ. ಅವರಂಥ ಬುದ್ಧಿ ಇದ್ದ, ಕಳಕಳಿ ಇದ್ದ ನಿಸ್ವಾರ್ಥ ಸಮಾಜ ಸೇವಕರು ನಾಡಿನ ನಾಲ್ದೆಸೆಗಳಲ್ಲಿ ಹುಟ್ಟಿಬರಬೇಕಾಗಿದೆ. ಸಮಾಜದ ಜನತೆ ಅಂತಹ ವ್ಯಕ್ತಿಗಳನ್ನು ಗುರ್ತಿಸಿ, ಪೋಷಿಸಿ ಪ್ರೋತ್ಸಾಹಿಸಬೇಕು. ಏಕೆಂದರೆ ಯಾವುದೇ ಸಮಾಜದ ಪ್ರಗತಿ ಸ್ಥಿರವಾಗಿ ನಿಂತಿರುವುದು ನಿಲ್ಲುವುದು ಶ್ರೀ ಮಲ್ಲಪ್ಪನವರಂಥ ಮಹಾನುಭಾವರಿಂದ. ಅಂಥ ವ್ಯಕ್ತಿಗಳೇ ಸಮಾಜದ ಶಕ್ತಿ ಮತ್ತು ಅದರ ಭದ್ರಬುನಾದಿ. ಯಾವುದೇ ಸಂಘ ಸಂಸ್ಥೆಗಳನ್ನು ಕಟ್ಟುವಾಗ, ಬೆಳೆಸುವಾಗ ಸಮಾಜದ ಏಳ್ಗೆಯ ವಿಚಾರದಲ್ಲಿ ಯಾವುದೇ ಕಾರ್ಯಕ್ರಮ ಹಮ್ಮಿಕೊಂಡಾಗ ಅದಕ್ಕೆ ಅಡ್ಡಿ, ಆತಂಕ, ಅಸಹನೆ, ಅಪಹಾಸ್ಯ ಅದರಲ್ಲಿಯೂ ಅದೇ ಸಮಾಜ ಬಾಂಧವರೇ 'ಏನಕೇನ' ಕಾರಣಗಳಿಂದ ವಿರೋಧಿಸುವುದು ವಿಧಿಯ ಆಟ. ಈ ಆಟದಲ್ಲಿ ಶ್ರೀ ಮಲ್ಲಪ್ಪನವರು ನಾವೆಲ್ಲರೂ 'ಹೌದು' ಎನ್ನುವಂತೆ ಆಟವಾಡಿ ಗೆದ್ದಿದ್ದಾರೆ. ಅಂಥ ಮಹಾನುಭಾವರಿಗೆ ನನ್ನ ತುಂಬು ಹೃದಯದ ಅನಂತಾನಂತ ನಮನಗಳು.

ಕನ್ನಡ ಜನಪದದ ಪ್ರತಿನಿಧಿ

ಕೆ. ಆರ್. ಕಮಲೇಶ್

ಬಹಳ ದೊಡ್ಡ ವ್ಯಕ್ತಿಗಳ ಬಗ್ಗೆ ಸಂದರ್ಭದಲ್ಲಿ ಬರೆಯುವುದು ಸುಲಭ. ಅವರ ಅಗಾಧ ಸಾಧನೆ ನಮ್ಮ ಕಣ್ಮುಂದೆ ಇರುತ್ತದೆ. ಅಥವಾ ಆ ವ್ಯಕ್ತಿತ್ವದ ಪ್ರಭಾವಕ್ಕೆ ಒಳಗಾದ ಅನೇಕರು ಅವರ ಬಗ್ಗೆ ಹೇಳಿರುವ ಮಾತುಗಳನ್ನೇ ನಮ್ಮವನ್ನಾಗಿಸಿ ಬಿಡಬಹುದು. ಆದರೆ ನಮ್ಮಲ್ಲೇ ಇದ್ದು, ನಮಗಿಂತ ಕೊಂಚ ಭಿನ್ನರೀತಿಯ ಬದುಕನ್ನು ನಡೆಸಿ, ಸರ್ವರ ಗೌರವಾದರಕ್ಕೆ ಪಾತ್ರರಾಗಿರುವವರನ್ನು ಕುರಿತು ಚಿಂತಿಸುವುದೇ ಕಷ್ಟ. ಭಾವನಾತ್ಮಕವಾದರೆ ವಿಶೇಷಣಗಳಿಂದ ಪುಟ ತುಂಬುತ್ತದೆ. ಇಲ್ಲಿ ಕುಬ್ಜ ದೃಷ್ಟಿಯಿಂದ ನೋಡಿದರೆ ಅಥವಾ ನಿರ್ಮತ್ಸರರಾಗಿ ನೋಡದಿದ್ದರೆ ಗುಣಗಳು ದೋಷಗಳಾಗುತ್ತವೆ. ಸಾಧಿತ ಕಾರ್ಯಗಳು ಅಲ್ಪವಾಗಿ ಬಿಡುತ್ತವೆ. ಇಂತಹ ತಾಕಲಾಟದಲ್ಲೂ ಜಾಗೃತವಾಗಿ. ವಸ್ತುನಿಷ್ಠವಾಗಿ ವ್ಯಕ್ತಿತ್ವವನ್ನು ನೋಡಲು ಸಾಧ್ಯ. ಅಂತಹ ಕಿರು ಪ್ರಯತ್ನ ಇಲ್ಲಿದೆ.

ಶ್ರೀ ಎನ್. ಮಲ್ಲಪ್ಪನವರ ಪರಿಚಯ ನನಗೆ ದೀರ್ಘ ಕಾಲದ್ದಲ್ಲ. ಸುಮಾರು ಒಂದು ಒಂದೂವರೆ ವರ್ಷದ ಕೆಳಗೆ ಉದ್ಯೋಗಾರ್ಥಿಯಾಗಿ ಅವರ ಬಳಿ ಹೋದೆ. ಇದಕ್ಕೆ ಮೊದಲು ನಾನು ಸಂಪಾದಿಸಿದ ಅಭಿನಂದನ ಗ್ರಂಥವೊಂದಕ್ಕೆ ಅವರಿಂದ ಲೇಖನ ತರಿಸಿಕೊಂಡಿದ್ದೆ. ಆದರೆ ಮಲ್ಲಪ್ಪನವರ ಹೆಸರಂತೂ ನನಗೆ ಸಾಕಷ್ಟು ಹಳೆಯದು. ಇವರ ಮಿತ್ರರಾದ ಶ್ರೀ ಜಿ. ವಿ. ನಾರಾಯಣಮೂರ್ತಿಯವರಿಗೆ ಮಲ್ಲಪ್ಪನವರನ್ನು ಎಷ್ಟು ಹೊಗಳಿದರೂ ಅಲ್ಪ. ಅವರ ಬಾಯಿಂದ ಮಲ್ಲಪ್ಪನವರ ಪರಿಚಯವಷ್ಟೆ. ಒಂದು ಭಾನುವಾರ ಮಧ್ಯಾಹ್ನ ಸೋಮೇಶ್ವರ ಬಡಾವಣೆಯಲ್ಲಿರುವ ಅವರ ಮನೆಗೆ ಹೋದೆ. ಬಿಸಿಲಿನ ಝಳ. ಬಸ್ಸಿನ ಪ್ರಯಾಣದಿಂದ ಸಾಕಷ್ಟು ಕೆಂಪಾದ ಬಟ್ಟೆ. ಊರಿನಲ್ಲಿ ಇದ್ದಾರೋ ಇಲ್ಲವೋ ಎಂಬ ತಳಮಳ. ಎರಡು ಸಾರಿ ಮೆಲ್ಲನೆ ಬಾಗಿಲು ಬಡಿದೆ. ಕೆಲಸದ ಹುಡುಗ ಒಬ್ಬ ಬಂದ. 'ಮಲ್ಲಪ್ಪನೋರು ಇದ್ದಾರ.' 'ಇದ್ದಾರೆ ಒಳಗೆ ಬನ್ನಿ'. ಆಚೆ ರೂಮಿನಿಂದಲೇ 'ಯಾರೋ ಅದು ಶಂಕರ........' ಎಂಬ ತಾರಕ ಸ್ವರ. 'ಬೆಂಗಳೂರಿನಿಂದ ಯಾರೋ ಬಂದವರೆ' ಎಂಬ ಉತ್ತರ ಕೇಳಿ ಬಿಳಿ ಲುಂಗಿ ಉಟ್ಟಿದ್ದು, ಖಾದಿ ಬನೀನು ತೊಟ್ಟಿದ್ದ, ಹೆಗಲ ಮೇಲೆ ವಲ್ಲಿ, ಕೈಯಲ್ಲೊಂದು ಪುಸ್ತಕ ಹಿಡಿದ ಹಿರಿಯರೊಬ್ಬರು ಕಾಣಿಸಿದರು. 'ನಮಸ್ಕಾರ' ಎಂದು ಪರಿಚಯ ಹೇಳಿಕೊಳ್ಳುವದರಲ್ಲೇ, 'ಓ ನೀನ ಆಗಲೆ ಮೂರ್ತಿ ಕಾಗದ ಬರೆದಿದ್ದ. ಕುಂತ್ಕೊ........ನೋಡು ನಿನ್ನ ಪುಸ್ತಕನೇ ಹಿಡಿದು ಕೊಂಡಿದ್ದೇನೆ........ಚೆನ್ನಾಗಿದೆ' ಎನ್ನುತ್ತ ಪಕ್ಕದಲ್ಲಿಯೇ ಕುಳ್ಳಿರಿಸಿಕೊಂಡರು. ಸಮಾಧಾನದಿಂದ ಮುಖ ಒರೆಸಿಕೊಳ್ಳುತ್ತಿದ್ದ ನನ್ನನ್ನು ನೋಡಿ 'ಲೇ ಶಂಕರ........ ಒಂದು ಲೋಟ ನೀರು ತಾರ್ಲ' ಎಂದ್ರು. 'ಏನ್ ತಗೋಳ್ತಿಯಪ್ಪ ಹಾಲೋ........ಕಾಫೀನೋ.' ನಾನು ಬಿಗು-ಮಾನದಿಂದ 'ಏನೂ ಬೇಡ' ಎನ್ನುವಷ್ಟರಲ್ಲೇ, 'ಒಂದು ಲೋಟ ಮಜ್ಜಿಗೆ ತಾರ್ಲ' ಎಂದು ಆರ್ಡರ್ ಮಾಡಿಬಿಟ್ರು. ಆಮೇಲೆ ಒಂದಿಷ್ಟು ಉಭಯ ಕುಶಲೋಪರಿ. ಸುಮ್ಮನೆ ನಾನು ಮಾತಿಗಾಗಿ 'ತಾವು ಒಬ್ಬರೆ ಇದ್ದೀರಾ' ಎಂದೆ. 'ಇಲ್ಲ ನನ್ನ ಹೆಂಡ್ತಿಗೆ ಕ್ಯಾನ್ಸರ್ ಆಗಿದೆ. ಎರಡನೆ ಮಗನ ಹತ್ತಿರ ಕೆ.ಜಿ.ಎಫ್. ನಲ್ಲಿ ಇದ್ದಾಳೆ. ನಾನು ಹೋಗ್ತಿರುತ್ತೇನೆ. ಈ ಹಾಸ್ಟೆಲ್...... ಈ ಕಾಲೇಜನ್ನ ಬಿಟ್ಟು ನಾನೆಲ್ಲಿ ಹೋಗಕಾಕ್ತದೆ' ಎಂದ್ರು. ತಮ್ಮ ಮಕ್ಕಳ ವಿಚಾರ. ಹೆಂಡತಿಯ ಕಾಯಿಲೆಯ ವಿಚಾರ. ತಮ್ಮ ಮಿತ್ರನ ವಿಚಾರ, ಗಾಂಧೀ ವಿಚಾರಧಾರೆ ಮುಂತಾದ ಎಲ್ಲ ವಿಷಯನ ಮಾತನಾಡಿದರು. ನನಗೂ ಅವರಿಗೂ

ಸುಮಾರು ಅರ್ಧ ಶತಮಾನಕ್ಕೂ ಹೆಚ್ಚಿನ ಅಂತರ. ನನ್ನಂತಹ ಕಿರಿಯನನ್ನು ಅದರಲ್ಲೂ ಸಹಾಯಕ್ಕಾಗಿ ಹೋದವನನ್ನು ಇಷ್ಟೊಂದು ಆತ್ಮೀಯವಾಗಿ ಕುಳ್ಳಿರಿಸಿ ಮಾತನಾಡಿದ ಅವರ ವ್ಯಕ್ತಿತ್ವಕ್ಕೆ ಮೊದಲೇ ನಾ ಶರಣಾದೆ.

ಒಂದು ನಾಲ್ಕೈದು ತಿಂಗಳನಂತರ ಅವರ ಕಾಳಿದಾಸ ಕಾಲೇಜಿಗೆ ಬಂದ ಮೇಲೆ ಅವರ ಮನೆಗೆ ಹೋದೆ. ಅದೇ ವಿಶ್ವಾಸ. ತ.ರಾ.ಸು. ಅವರ ಕಾದಂಬರಿಯೊಂದನ್ನು ಓದುತ್ತ ಕುಳಿತಿದ್ದರು. 'ಹೇಗಿದೆ ಸಾರ್' ಅಂದೆ. 'ಸಮಯ ಹೋಗಬೇಕಲ್ಲಪ್ಪ' ಅಂದರು. ಅವರ ಓದಿನ ಹುಚ್ಚನ್ನು ಕಂಡ ನಾನು ಪ್ರಕಟಣಾ ಸಂಸ್ಥೆಯಲ್ಲಿ ಇನ್ನೂ ಕೆಲಸ ಮಾಡುತ್ತಿದ್ದುದರಿಂದ ಆಗೊಂದು ಈಗೊಂದು ಪುಸ್ತಕ ಕೊಡುತ್ತಿದ್ದೆ. ಯಾವಾಗಲಾದರೊಮ್ಮೆ ಸರ್ಕಾರಿ ಜೂನಿಯರ್ ಕಾಲೇಜಿನ ಮೈದಾನದಲ್ಲಿ ಅವರ ಜೊತೆ ಸುತ್ತುತ್ತಿದ್ದೆ. ಒಂದು ದಿನ ಯಾವುದೋ ಮಾತಿನಲ್ಲಿ ವಿಶ್ವೇಶ್ವರಯ್ಯನವರ ವಿಚಾರ ಬಂತು. 'ಅವರನಂತರ ಅಂತಹ ದೂರದೃಷ್ಟಿಯುಳ್ಳ ಆಡಳಿತಗಾರರನ್ನು ಕರ್ನಾಟಕ ಮಾತ್ರವಲ್ಲ ಭಾರತವೇ ಕಂಡಿಲ್ಲ' ಎಂದೆ. ಅವರು ಗಂಭೀರವಾಗಿ 'ನಿಜ ಆದರೆ ದೊಡ್ಡವರಾದರೂ ಪರಿಪೂರ್ಣರಲ್ಲ' ಎಂದರು. ನನಗೆ ಬಹಳ ಸೋಜಿಗ. ಇವರಿಗೇನು ವಿಶ್ವೇಶ್ವರಯ್ಯನವರ ಬಗ್ಗೆ prejudice ? ಅಂದ್ಕೊಂಡೆ. ಒಂದು ನಿಮಿಷ ತಡೆದು ಹೇಳಿದರು "ನೋಡಿ, ವಿಶ್ವೇಶ್ವರಯ್ಯನವರು ಬಹಳ ದೊಡ್ಡ ವ್ಯಕ್ತಿಗಳು—ಬುದ್ಧಿಯಲ್ಲೂ ಹಾಗೂ ಶಕ್ತಿಯಲ್ಲೂ. ಆದರೆ ನನ್ನದೊಂದು ಅನುಭವ. ನನ್ನ ವಿದ್ಯಾರ್ಥಿ ಜೀವನದಲ್ಲಿ ಟಿ. ವೆಂಕಟಸ್ವಾಮಯ್ಯ ಎನ್ನುವವರ ಮನೆಯಲ್ಲಿ ಸ್ವಲ್ಪ ಕಾಲವಿದ್ದೆ. ಅವರೂ ಕೂಡ ಬೈರೇನಹಳ್ಳಿಯವರೆ, ಅಂದರೆ ವಿಶ್ವೇಶ್ವರಯ್ಯನವರ ಊರಿನವರೆ, ಅವರ ಸಹಪಾಠಿ ಕೂಡ. ಆ ಕಾಲದಲ್ಲೇ ಇಂಗ್ಲಿಷ್ ಬಿ.ಎ. ಮಾಡಿದ ಹಿಂದುಳಿದ ವರ್ಗದ ದವರು. ಆದರೆ ಸರ್ವೆ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಆಗಿ ಕೆಲಸಕ್ಕೆ ಸೇರಿ ಅದರಲ್ಲೇ ನಿವೃತ್ತರಾದರು" ಎಂದರು. ನನಗೊಂದು ಮಿಂಚು ಹೊಳೆಯಿತು. ನನ್ನ ಮಾವ ಆ ಕಾಲದಲ್ಲಿ ಎಸ್.ಎಸ್.ಎಲ್.ಸಿ. ಓದಿ ಜೀವ ವಿಮಾ ಇಲಾಖೆಗೆ ಸೇರಿ ಪ್ರಾದೇಶಿಕ ಮ್ಯಾನೇಜರ್ ಆಗಿ ನಿವೃತ್ತರಾದುದು ಹೇಗೆಂದು. ಮಲ್ಲಪ್ಪನವರ ಅಂತರ್ಯ ಅರ್ಥವಾಯಿತು. ವಿಶ್ವೇಶ್ವರಯ್ಯನವರು ಈ ರಾಜ್ಯಕ್ಕೆ ನೀರು, ವಿದ್ಯುಚ್ಛಕ್ತಿ, ಕೈಗಾರಿಕೆ, ವಿಶ್ವವಿದ್ಯಾನಿಲಯ ತಂದರು. ಆದರೆ ಕೆಳ ವರ್ಗದ ಜನರಿಗೆ ದೃಷ್ಟಿ ಕೊಡಲಿಲ್ಲ. ಅಗ್ನಿ ಅರ್ಹತೆ ಪಡೆದು ಕೊಂಡಿದ್ದವರ ಜೊತೆಯಲ್ಲಿ ಸ್ಪರ್ಧಿಸಲು ಅವರಿಗೆ ಹೇಳಿದರು. ಇದೇ ಮುಂದೆ ರಾಜ್ಯದಲ್ಲಿ ಬ್ರಾಹ್ಮಣೇತರ ಚಳುವಳಿಗೂ ಕಾರಣವಾಗಿರಬೇಕು. ಇವರ ಯೋಚನಾ ಲಹರಿಯ ಎಳೆಯನ್ನು ಹಿಡಿದಿದ್ದೆ. ಆಮೇಲೆ ಮಲ್ಲಪ್ಪನವರು ವಿಶ್ವೇಶ್ವರಯ್ಯನವರ ಪ್ರಾಮಾಣಿಕತೆ, ದಕ್ಷತೆ, ನಿಸ್ವಾರ್ಥತೆ, ಪರೋಪಕಾರ ಮುಂತಾದ ಗುಣಗಳನ್ನು ಪ್ರಶಂಸಿಸಿದರು.

ಇಲ್ಲಿಂದ ನನ್ನ ಅವರ ಸಂಬಂಧ ಸಾಕಷ್ಟು ಬೆಸೆಯಿತು. ಪತ್ರಿಕೋದ್ಯಮ ಹಾಗೂ ಸಂಶೋಧನೆ ಗಳಲ್ಲಿ ಆಸಕ್ತಿ ಇದ್ದ ನನಗೆ ಅವರು ಪ್ರಿಯವಾದ ವ್ಯಕ್ತಿಯಾಗಿ ಕಂಡರು. ನನ್ನ ಪ್ರೌಢ ಪ್ರಬಂಧದ ವಿಷಯ 'ಮೈಸೂರು ಪ್ರಜಾ ಪ್ರತಿನಿಧಿ ಸಭೆ'ಗೆ ನನಗೆ ಹಳೆಯ ಮೈಸೂರಿನ ಸ್ಥಿತಿಗತಿಗಳ ವಿಚಾರ ಬೇಕಾಗಿತ್ತು. ಹೋದಾಗಲೆಲ್ಲಾ ಹಿಂದುಳಿದ ವರ್ಗದ ವಿದ್ಯಾರ್ಥಿ ಹಾಗೂ ಜನರ ಕಲ್ಯಾಣದ ಬಗ್ಗೆ ಅವರೊಡನೆ ಮಾತುಕತೆ, ರಾಜಕಾರಣಿಗಳು ಈ ವಿಚಾರನ ಹೇಗೆ ಸ್ವಾರ್ಥಕ್ಕಾಗಿ ಬಳಸಿಕೊಳ್ಳುತ್ತಿದ್ದಾರೆ ಎಂಬುದನ್ನು ಕುರಿತು ಚಿಂತನೆ. 'ಮಂಡಲ್ ಆಯೋಗ' ಇನ್ನೂ ಜಾರಿಗೆ ಬರದಿರುವ ವಿಚಾರದಲ್ಲಿ ಆತಂಕ ಇಂತಹ ವಿಚಾರಗಳನ್ನು ಕುರಿತು ಮಾತನಾಡುವಾಗ ಮಲ್ಲಪ್ಪನವರು ಯುವಕರಾಗಿ ಬಿಡುತ್ತಿದ್ದರು. ಒಮ್ಮೊಮ್ಮೆ ಆಕ್ರೋಶಕ್ಕೆ ಒಳಗಾಗಿ ಬಿಡುತ್ತಿದ್ದರು. ಗ್ರಾಮ್ಯ ಬೈಗುಳಗಳು ಆವರ ಬಾಯಿಂದ ಪುಂಖಾನುಪುಂಖವಾಗಿ ಹೊರಡುತ್ತಿದ್ದವು. ಒಂದು ಸಾರಿ ನಾನು 'ಹೀಗೆ ರಾಜಕಾರಣಿಗಳ ಹಿಂದುಳಿದ ಮತ್ತು ಅಲ್ಪಸಂಖ್ಯಾತರ ವಿಚಾರನ ಚಲಾವಣೆ ನಾಣ್ಯ

ಮಾಡಿಕೊಳ್ಳದಂತೆ ನಾವೇಕೆ ಒಂದು ಅಧ್ಯಯನ ಕೇಂದ್ರ ಪ್ರಾರಂಭ ಮಾಡಬಾರದು' ಎಂದೆ. ಮಲ್ಲಪ್ಪನವರು ಮೌನವಾಗಿ ಅಂದಿನ ಸಂಚಾರ ಮುಗಿಸಿ ಮನೆಗೆ ಹೋದರು.

ಹದಿನೈದು ದಿನದ ಅನಂತರ ಮತ್ತೊಮ್ಮೆ ಭೇಟಿ. "ನೋಡಪ್ಪ. ನೀನು ಹೇಳಿದ ವಿಚಾರ ಯೋಚಿಸಿದೆ. ಒಳ್ಳೇದು 'ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಅಭಿವೃದ್ಧಿ ಅಧ್ಯಯನ ಕೇಂದ್ರ' ಅಂತ ಯಾಕೆ ಪ್ರಾರಂಭ ಮಾಡಬಾರದು ಅಂತಿದ್ದೇನೆ" ಅಂದರು. ನಾನೇನೋ ಹುಚ್ಚುಚ್ಚಾಗಿ ಹೇಳಿದ್ದೆ. ಅದರ ರೂಪರೇಷೆಗಳ ಕಲ್ಪನೆ ಕೂಡ ನನಗಿರಲಿಲ್ಲ. ಆದರೆ ಮಲ್ಲಪ್ಪನೋರು ಅದನ್ನು ಗಂಭೀರವಾಗಿ ಚಿಂತಿಸಿದರು. 'ನೋಡು ಇದನ್ನ ನಾವು ರಾಜಕೀಯ ಸಂಸ್ಥೆಯನ್ನಾಗಿ ಮಾಡಲ್ಲ.' 'ಮತ್ತೆ ಅದರ ಸ್ವರೂಪ ಹೇಗೆ?' "ಈಗ ಅದು ತುಮಕೂರಿನಲ್ಲಿರುತ್ತದೆ. ಕಾಲ ಕ್ರಮೇಣ ರಾಜ್ಯಕ್ಕೆಲ್ಲಾ ಅದು ವಿಸ್ತಾರಗೊಳ್ಳಬೇಕು. ಎಲ್ಲಾ ಹಿಂದುಳಿದ ಜಾತಿ ಅಂದರೆ ಕುರುಬ, ತಿಗಳ, ಉಪ್ಪಾರ, ಹಕ್ಕಿಪಿಕ್ಕಿಗಳು, ಹರಿಜನ, ವಿಶ್ವಕರ್ಮ, ಹಜಾಮರು, ಕುಂಬಾರ, ಗಾಣಿಗ,........ಮುಂತಾದ ಹಮಾಂ ಕೋಂ ಜಾತಿಯವರನ್ನೆಲ್ಲಾ ಕ್ರಮಬದ್ಧವಾಗಿ ಅಧ್ಯಯನ ಮಾಡೋಣ. ನಮ್ಮ 'ಕಾಳಿದಾಸ ವಿದ್ಯಾವರ್ಧಕ ಸಂಘ'ದಲ್ಲೆ ಅದಕ್ಕೊಂದು ಜಾಗ ಕೊಡ್ತೀನಿ. ಬರೀ ಅವರ ಆರ್ಥಿಕ ಹಿಂದುಳಿಯುವಿಕೆ—ಆ ಮೂಲಕ ಸರ್ಕಾರಿ ಚಾಕರಿ ಕೊಡಿಸೋದು ನನ್ನ ಉದ್ದೇಶವಲ್ಲ. ಪ್ರತಿಯೊಂದು ಜಾತಿಯ ಸಂಪ್ರದಾಯ. ಆಚರಣೆ, ನಂಬಿಕೆ. ಅವರದೇ ಅಂತ ಹೇಳೋ ವೈಶಿಷ್ಟ್ಯನ ಗುರುತಿಸೋದು. ಆಯಾ ಜಾತಿಗಳಲ್ಲಿ ಎಷ್ಟು ಜನ ಅಕ್ಷರಸ್ಥರಿದ್ದಾರೆ, ಉದ್ಯೋಗಿಗಳಿದ್ದಾರೆ, ಅವರುಗಳು ಯಾವ ಯಾವ ಇಲಾಖೇಲಿ ಇದ್ದಾರೆ. ಅವರುಗಳಿಗೆ ಏನಾಗಬೇಕು........ಇದನ್ನೆಲ್ಲಾ ಈ ಸಂಸ್ಥೆ ಕೊಡಬೇಕು. ಮುಂದೆ ಯಾರಾದರೂ ಈ ಜಾತಿಗಳ ಬಗ್ಗೆ ಯಾವುದೇ ಮಾಹಿತಿ ಬೇಕಾದರೂ ನಮ್ಮ ಸಂಸ್ಥೆಗೆ ಬರಬೇಕು ಅಂತ ನನ್ನ ಇಷ್ಟ" ಅಂತ ಮಲ್ಲಪ್ಪನವರು ತಮ್ಮ ಯೋಜನೆಯನ್ನು ಹೇಳಿದರು. 'ಅದೆಲ್ಲಾ ನಮ್ಮ ಕೈಲಿ ಆಗೋದ' ಅಂತ ನಾನಂದೆ. "ಛೆ ಅಂಗಾಗದು ಅಂತ ಕೈ ಕಟ್ಟಿ ಕುಂತ್ರೆ ಎಂತ ಗಂಡಸ್ತನ ಅನ್ನಿಸಿಕೊಳ್ತದೆ. ನಾನು ಐದು ಸಾವಿರ ಕೊಡ್ತೀನಿ. ನೀನೊಂದಿಷ್ಟು ಹಾಕು, ಇದಕ್ಕಾಗಿ ಭಿಕ್ಷೆ ಬೇಕಾದರೂ ಬೇಡೋಣ, ಯುವಕರನ್ನು ಆರಿಸಿಕೊಂಡು ಅವರಿಂದ ಮಾಹಿತಿ ಸಂಗ್ರಹಿಸೋಣ" ಅಂತ ಮಲ್ಲಪ್ಪನೋರು ನಿರ್ಧರಿಸಿಯೇ ಬಿಟ್ಟರು. ಹಿಡಿದ ಕೆಲಸವನ್ನು ಪಟ್ಟು ಬಿಡದೆ ಮುಗಿಸುವ ಛಲ ಅವರದು. ಅವರು ಯೋಜಿಸಿಕೊಂಡ ಕಾರ್ಯ ಅಂತಹ ಸುಲಭಸಾಧ್ಯವಾದ್ದೇನಲ್ಲ ಅಂತ ನನಗೆ ತಿಳಿದಿತ್ತು. ಅದಕ್ಕೆ ಬೇಕಾಗುವ ಅಗಾಧ ಹಣ, ವಿವಿಧ ವಿಚಾರಗಳಲ್ಲಿ ಪರಿಣತ ಸಲಹೆ ನೀಡುವ ತಜ್ಞರು, ನಿಸ್ವಾರ್ಥದಿಂದ ದುಡಿಯುವ ಯುವಕ ಪಡೆ ಅವರ ಕಣ್ಮುಂದೇನೂ ತಯಾರಾಗಿ ನಿಂತಿರಲಿಲ್ಲ. ಆದರೆ ಎಲ್ಲವನ್ನೂ ಸರಿ ಹೊಂದಿಸುವ ಅದಮ್ಯ ವಿಶ್ವಾಸ ಮಲ್ಲಪ್ಪನವರಲ್ಲಿತ್ತು. ಜಾತಿಗೀತಿಗಳನ್ನು ಬಿಟ್ಟು ಶೋಷಿತರನ್ನೆಲ್ಲಾ ಒಂದೆಡೆ ತಂದು ಅವರ ಸಮಸ್ಯೆಗಳನ್ನು ಅಧ್ಯಯನ ಮಾಡುವ ಕೆಲಸವನ್ನು ವಿಶ್ವವಿದ್ಯಾನಿಲಯ, ರಾಜ್ಯ ಇಲ್ಲ ಇಡೀ ರಾಷ್ಟ್ರವೇ ಮಾಡಬೇಕಾಗುತ್ತದೆ. ಆದರೆ ಮಲ್ಲಪ್ಪನಂತಹ ಧೀಮಂತ ವ್ಯಕ್ತಿ ಅದನ್ನು ಚಿಂತಿಸಬಲ್ಲರು, ಅದಕ್ಕೊಂದು ಪುಟ್ಟ ರೂಪ ಕೊಡಬಲ್ಲರು. ಇಂತಹ ಆಲೋಚನೆ ಅವರಿಗೆ ಬೇರೆ ಎಲ್ಲಿಂದಲೋ ಬಂದಿದ್ದಲ್ಲ. ಜನರ ಬಳಿಗೆ ನೇರವಾಗಿ ಹೋದದ್ದಕ್ಕೆ, ಅವರನ್ನು ಪ್ರೀತಿಸಿದ್ದಕ್ಕೆ ದೊರೆತ ಪರಿಣತಿಯ ಫಲ. ಇಂತಹ ಆಲೋಚನೆಗಳು ವ್ಯಕ್ತಿ ಮಾನವತೆಯನ್ನು ಎಷ್ಟು ಪ್ರೀತಿಸುತ್ತಾನೆಂದು ತೋರಿಸುತ್ತದೆ. 'ಹಿಂದುಳಿದ ಮತ್ತು ಅಲ್ಪ ಸಂಖ್ಯಾತರ ಅಭಿವೃದ್ಧಿ ಅಧ್ಯಯನ ಕೇಂದ್ರ' ದಿಢೀರನೆ ರಾಜ್ಯದ ಗಮನ ಸೆಳೆಯದೆ ಹೋಗಬಹುದು. ಆದರೆ ಮಲ್ಲಪ್ಪನವರ ಧ್ಯೇಯೋದ್ದೇಶಗಳು ಮಾತ್ರ ಚಿರಕಾಲ ಉಳಿಯುತ್ತವೆ. ಹೀಗೆ ಮಲ್ಲಪ್ಪನವರು original thinker ಆಗಿ ನನಗೆ ಗೋಚರಿಸಿದ್ದಾರೆ. ಕ್ಷಣಿಕ ಅನುಭವವನ್ನು ಕವಿತೆಯನ್ನಾಗಿಸಿ ಬಿಡಬಹುದು. ಹತ್ತಾರು ಭಾವನಾತ್ಮಕ ಅನುಭವದ ಸಹಾಯದಿಂದ ಕಾವ್ಯವನ್ನು ನೇಯಬಹುದು. ಆದರೆ ಜನತೆಯ ಬದುಕನ್ನೇ ರೂಢಮೂಲವಾಗಿ ಬದಲಾವಣೆ ಮಾಡಬಲ್ಲ ಯೋಜನೆಗಳು ದೀರ್ಘ ಕಾಲದ ತಪಸ್ಸಿನ ಫಲವೆನ್ನದೆ ವಿಧಿ ಇಲ್ಲ. ವೈದಿಕ ಧರ್ಮದ ವಿರುದ್ಧ ವಿಚಾರಾತ್ಮಕವಾಗಿ ಬಂಡೆದ್ದ ಭಗವಾನ್ ಬುದ್ಧನಾಗಲಿ, ಅನಿಷ್ಟ ಜಾತಿ

ಪದ್ಧತಿ ಹಾಗೂ ಶೋಷಣೆಯ ವಿರುದ್ಧ ಕೂಗೆಬ್ಬಿಸಿದ್ದ ಬಸವಣ್ಣನವರಾಗಲೀ. ಬಂಡವಾಳಶಾಹಿಗಳ ವಿರುದ್ಧ ಕ್ರಮಬದ್ಧವಾಗಿ ಸಂಘಟಿಸಿದ ಲೆನಿನ್ ಆಗಲೀ, ಹಳೆಯ ವಿಚಾರಗಳಿಂದಲೇ ಸ್ಫೂರ್ತಿಗೊಂಡು ಅಚ್ಚ ಹೊಸತೆಂಬ ಅಹಿಂಸಾತ್ಮಕ ಹೋರಾಟ ಪ್ರಾರಂಭಿಸಿದ ಗಾಂಧಿಯಾಗಲೀ ಎಲ್ಲರಿಗಿಂತಲೂ ಮಿಗಿಲೆನ್ನದೆ ವಿಧಿ ಇಲ್ಲ. ನಾನು ಮಲ್ಲಪ್ಪನವರ ಈ ಯೋಜನೆ ಈ ರೀತಿಯಂತಹುದು ಎನ್ನುವ ಧೈರ್ಯ ಮಾಡುವುದಿಲ್ಲ. ಆದರೆ ಎಂಭತ್ತು ವರ್ಷದ ಹಿರಿಯ ಮಲ್ಲಪ್ಪನವರು ಒಮ್ಮೆಯಾದರೂ ಬದುಕನ್ನು ವೃದ್ಧಿಗೊಳಿಸುವಂತಹ ಯೋಜನೆಗಳನ್ನು ಹೇಳಬಲ್ಲರೆಂಬುದೇ ನನ್ನ ಅಭಿಪ್ರಾಯ.

ವಿದ್ಯಾರ್ಥಿ ದೆಸೆಯಿಂದಲೂ ನನಗೆ ಕನ್ನಡ ಚಳುವಳಿ ಹಾಗೂ ಈ ಸಂಬಂಧದ ಹೋರಾಟದಲ್ಲಿ ತುಸು ಆಸಕ್ತಿ. ಇದಕ್ಕೆ ವಿದ್ಯಾರ್ಥಿ ದೆಸೆಯಲ್ಲಿ ನನಗೆ ಒದಗಿದ ಡಾ॥ ದೇ.ಜ.ಗೌ.ರವರ ಸಂಪರ್ಕ ಕಾರಣ ವಿರಬಹುದು. ಮಲ್ಲಪ್ಪನವರ ಜೊತೆ ಆಗಾಗ ವಾಯುಸಂಚಾರಕ್ಕೆ ಹೋಗುತ್ತಿದ್ದ ನಾನು ಕನ್ನಡದ ವಿಚಾರ ಕೂಡ ಮಾತಾಡುತ್ತಿದ್ದೆ. ಪ್ರಾಯಶಃ ಕನ್ನಡ ಆಡಳಿತ ಭಾಷೆ ಮಾಡುವ ವಿಚಾರದಲ್ಲಿ ನಮ್ಮಿಬ್ಬರ ಮಾತುಕತೆ ಸಾಗಿರಬೇಕು: ಮೂವತ್ತು ವರ್ಷಗಳ ಕಾಲ ಸರ್ಕಾರಿ ಸೇವೆಯಲ್ಲಿದ್ದ ಮಲ್ಲಪ್ಪನವರು ಈ ವಿಚಾರದಲ್ಲಿ ಏನು ಹೇಳ್ತಾರೆಂಬುದು ನನ್ನ ತವಕ. ಒಂದಿನ ನಾನು 'ಏನ್ ಸಾರ್ ಸ್ವಾತಂತ್ರ್ಯ ಬಂದು ನಾಲ್ಕು ದಶಕಗಳ ಹತ್ತಿರ ಬರುತ್ತಿದ್ದರೂ ನಾವಿನ್ನೂ ಪರ ದಾಸ್ಯದಲ್ಲಿಯೇ ಇದ್ದೇವಲ್ಲ' ಎಂದೆ. ಅದಕ್ಕೆ ಮಲ್ಲಪ್ಪನೋರು ನಗುತ್ತಾ 'ಅದಕ್ಕೆ ನಾವೆಲ್ಲಾ ಕಾರಣ' ಎಂದರು. 'ನಾನು ಹೇಗೆಂದು' ಕುತೂಹಲನಾದೆ. ಅವರು 'ನೋಡು ನಾನು ಬಿ.ಎ. ಪಾಸು ಮಾಡಿದ್ದ ಹೊಸತು. ಪ್ರಾಯಶಃ 1933–34 ಇರಬಹುದು. ನಮ್ಮ ಹಾಳ್ಯದಲ್ಲಿ ನಾನೆ ಆಗ ಮೊದಲ ಪದವೀಧರ. ಆಗ ಕ್ರೈಸ್ತ ಸಂಘ ಒಂದರಲ್ಲಿ ಹಿರಿಯರೊಬ್ಬರಿಗೆ ಬೀಳ್ಕೊಡಿಗೆ ಸಮಾರಂಭ ಇಟ್ಟುಕೊಳ್ಳಲಾಗಿತ್ತು. ನನ್ನ ಮಿತ್ರ ಡೇವಿಡ್ ನನ್ನನ್ನೇ ಅಧ್ಯಕ್ಷತೆ ವಹಿಸುವಂತೆ ಕೇಳಿಕೊಂಡ. ಪ್ರಾಯಶಃ ನನ್ನ ಮೊದಲ ಸಾರ್ವಜನಿಕ ಸಮಾರಂಭವದಿರಬೇಕು ; ಹೋದೆ. ಸಮಾರಂಭದಲ್ಲಿ ಇಂಗ್ಲಿಷಿನಲ್ಲಿ ಭಾಷಣ ಬಿಗಿಯಲು ಪ್ರಾರಂಭ ಮಾಡಿದೆ. ಸಭಿಕರೆಲ್ಲಾ 'ಕನ್ನಡದಲ್ಲಿ ಮಾತನಾಡಿ' 'ಕನ್ನಡದಲ್ಲಿ ಮಾತನಾಡಿ' ಎಂದು ಪ್ರಾರ್ಥಿಸಿದರು. ಇಂಗ್ಲಿಷ್ ಮೇಜರ್ ಪಾಸ್ ಮಾಡಿದ್ದೆನೆಂಬ ನನ್ನ ಅಹಂ ಮಾತ್ರ ಇಳಿಯಲೇ ಇಲ್ಲ. ಮುಂದೆ ಸೊಸೈಟಿ ಇನ್‌ಸ್ಪೆಕ್ಟರ್ ಹುದ್ದೆಯಲ್ಲಿ ಕೂಡಾ ಇಂಗ್ಲಿಷಿನ ವಿಜೃಂಭಣೆ. ನನಗಾದ ಅನಂದ ಅಷ್ಟಿಷ್ಟಲ್ಲ. ಅಮಲ್ದಾರ್ ಆಗಿ ಬಂದೆ ನೋಡಿ ಆಗ ಗೊತ್ತಾಯಿತು. ಈ ಇಂಗ್ಲಿಷ್ ಭಾಷೆಯಿಂದ ನಮ್ಮ ಜನ ಎಷ್ಟರ ಮಟ್ಟಿಗೆ ಶೋಷಿತರಾಗುತ್ತಿದ್ದಾರೆಂಬುದು. ನಮ್ಮ ಕಾನೂನು ಎಲ್ಲಾ ಪರಭಾಷೆಯಲ್ಲಿರುತ್ತಿತ್ತು. ಸಣ್ಣಪುಟ್ಟ ವಿಚಾರಕ್ಕೂ ರೈತ ಪರರನ್ನ ಅವಲಂಬಿಸಬೇಕು. ಮನೆ ಭಾಷೆ, ಪರಿಸರ ಭಾಷೆ ಅವನಿಂದ ದೂರವಾಗಿ ಯಾವುದೋ ದೇಶದ ಭಾಷೆಯಿಂದ ಆತ ಬಂಧಿತನಾಗಿದ್ದ. ಮಧ್ಯಸ್ಥಿಕೆದಾರರಿಗೆ ಇದರಿಂದ ಸುಲಿಗೆಗೆ ದಾರಿಯಾಗಿತ್ತು. ಈಗ ಕೂಡ ಅಷ್ಟೆ. ಪ್ರಜಾಪ್ರಭುತ್ವ ಈಗ ಹೆಸರಿಗೆ ಮಾತ್ರ ಇದೆ. ಆದರೆ ಹಳ್ಳಿಗ ಮಾತ್ರ ಎಲ್ಲ ವಿಚಾರಕ್ಕೂ ತಬ್ಬಲಿಯೆ, ಪರಿಸ್ಥಿತಿಯೇನೂ ಬದಲಾಯಿಸಿಲ್ಲ'........ಎಂದು ಮಲ್ಲಪ್ಪನವರು ತಮ್ಮ ಅನುಭವದೊಡನೆ ಇಂದಿನ ಭಾಷಾ ಸಮಸ್ಯೆಯನ್ನು ವಿಶ್ಲೇಷಿಸಿದ್ದರು. ಆಮೇಲೆ ಮಾತು ಮುಂದುವರಿಸಿದ ಮಲ್ಲಪ್ಪನವರು ಇತ್ತೀಚೆಗೆ ನಾನು ಮಾಸ್ತಿಯವರ ಆತ್ಮಕತೆ 'ಭಾವ' ಓದಿದೆ. ಅದರಲ್ಲೂ ಕೂಡಾ ಇಂತಹದೆ ಪ್ರಸಂಗ ಬಂದಿದೆ ಎಂದರು. ನಮ್ಮ ಅನೇಕ ಪ್ರಾಧ್ಯಾಪಕರು, ಚಳುವಳಿಗಾರರು. ದೊಡ್ಡ ಹೋರಾಟಗಾರರು ಕನ್ನಡ ಎಂದರೆ ಪ್ರಾಣ, ಮಾನ, ತಾಯಿ ಮುಂತಾಗಿ ಹೇಳಲಾರಂಭಿಸಿ ಭಾವನಾತ್ಮಕರಾಗಿ ಬಿಡುತ್ತಾರೆ. ಆದರೆ ಮಲ್ಲಪ್ಪನೋರು ಇದನ್ನ ವಾಸ್ತವಿಕ ರೀತಿಯಲ್ಲಿ ಆಲೋಚಿಸಲು ಪ್ರಚೋದಿಸುತ್ತಾರೆ. ಅದು ಹೇಗೆಂದರೆ ನಮ್ಮ ಶ್ರೀಸಾಮಾನ್ಯನ ಭಾಷೆ ಕನ್ನಡ. ಆ ಕಾರಣಕ್ಕಾಗಿ ಇದಕ್ಕೆ ಅಗ್ರಸ್ಥಾನ ಬೇಕು. ಇದರಿಂದ ಶ್ರೀಸಾಮಾನ್ಯನಿಗೆ ನಮ್ಮ ಯೋಜನೆಗಳೆಲ್ಲ ಅರಿವಾಗುತ್ತವೆ. ರೈತನ ಸ್ಥಿತಿ ನೋಡಿ ನಾವು ಪಾಠ ಕಲಿತು ಕನ್ನಡನ ಈಗಲಾಗದರೂ ಆಡಳಿತ ಭಾಷೆಯನ್ನಾಗಿ ಬಳಸಬೇಕೆಂಬುದು ಮಲ್ಲಪ್ಪನವರ ಅಭಿಪ್ರಾಯ.

ಮಲ್ಲಪ್ಪನವರು ಅಂತಹ ಆರೋಗ್ಯವಂತರಲ್ಲ. ಒಂದಲ್ಲಾ ಒಂದು ವ್ಯಾಧಿಯಿಂದ ನರಳುತ್ತಿರುವವರೆ ! ಆದರೆ ಈ ರೋಗ ರುಜಿನ ಅವರ ಉತ್ಸಾಹವನ್ನಾಗಲಿ, ಕ್ರಿಯಾ ಶೀಲತೆಯನ್ನಾಗಲೀ ಕಡಿಮೆ ಮಾಡಿಲ್ಲ. ಉದರ ಬೇನೆ, ಆ ಸಂಬಂಧವಾದ ಎದೆ ನೋವಿನಿಂದಾಗಿ ಎರಡು ಸಲ ನರ್ಸಿಂಗ್ ಹೋಮ್ ಸೇರಿದ್ದಾಗಿದೆ. ಗ್ಯಾಸ್ ಸಂಬಂಧಪಟ್ಟ ಕಾಯಿಲೆಯಂತೂ ಅವರ ವಿದ್ಯಾರ್ಥಿ ದೆಸೆಯಿಂದಲೂ ಶನಿಯಂತೆ ಕಾಡುತ್ತಿದೆ. ಇದರಿಂದ ಅವರು ಹಿಂದೆ ಜೂನಿಯರ್ ಬಿ.ಎ. ಪರೀಕ್ಷೆಯನ್ನು ತೆಗೆದುಕೊಳ್ಳದ ಸಂದರ್ಭ ಕೂಡಾ ಒದಗಿತ್ತು. ಆದರೂ ಆ ಕಷ್ಟದ ಸಮಯವನ್ನು ನೀಗಿದ್ದರು. ಈಗೀಗ ದಿನೇ ದಿನೇ ಕಾಯಿಲೆ ಮಲಗುತ್ತಾರೆ. ಒಂದೆರಡು ದಿನ ಅಷ್ಟೆ. 'ಅಪ್ಪಾ' 'ಅಮ್ಮಾ' 'ಓ ನಾ ಸತ್ತೆ' ಅಂತ ದೊಡ್ಡ ಗಂಟಲು ಮಾಡುತ್ತಾರೆ. ಸ್ವಲ್ಪ ಓಡಾಡೋದು–ತುಸು ಶಕ್ತಿ ಬಂದರೆ ಡಿ.ಡಿ.ಪಿ.ಐ. ಆಫೀಸಿಗೋ ಅಥವಾ ಹಾಸ್ಟೆಲ್‌ಗೋ ಹೊರಟೇ ಬಿಡುತ್ತಾರೆ. ಆದರೆ ಕಾಯಿಲೆ ಮಲಗಿದ ಸಂದರ್ಭದಲ್ಲಿ ಜರುಗಿದ ಎರಡು ಪ್ರಸಂಗ ಹೇಳಿದರೆ ಮಲ್ಲಪ್ಪನವರ ಹೆಂಗರುಳಿನ ಪರಿಚಯವಾಗುತ್ತದೆ. ಮಲ್ಲಪ್ಪನವರು ನರ್ಸಿಂಗ್ ಹೋಮ್ ಸೇರಿದಮೇಲೆ ಅವರನ್ನು ನೋಡಲು ನಾನು ದಿನನಿತ್ಯ ಯಾತ್ರೆ ಕೈಗೊಂಡೆ. ಅವರು 'ನೋಡಪ್ಪ, ಹಾಸ್ಟೆಲ್ ಕಡೆ ಒಂದು ಸಾರಿ ಹೋಗು........ಹುಡುಗರು ಹ್ಯಾಗಿದ್ದಾರೋ........ನನಗೆ ಕಳವಳ........' ಎಂದರು. ಈ ಸಂದರ್ಭದಲ್ಲಿ ಹಾಸ್ಟೆಲ್ಲಿನ ಅಡಿಗೆ ಭಟ್ಟ ಸಹ ಕೈಕೊಟ್ಟಿದ್ದ. ದಿನನಿತ್ಯದಂತೆ ಒಂದು ಸಂಜೆ ನರ್ಸಿಂಗ್ ಹೋಮ್‌ಗೆ ಹೋದರೆ ಏನೋ ಪ್ರಮಾದ ಆಗಿ ಹೋದಂತೆ ಧೈರ್ಯ ಕಳಕೊಂಡು ಮಲ್ಲಪ್ಪನವರು ಕೂತಿದ್ದಾರೆ. 'ಯಾಕೆ ಸಾರ್' ಎಂದೆ. 'ಹಾಸ್ಟೆಲ್ಲಿನಲ್ಲಿ ಅಡಿಗೆಯವನು ಬಂದಿಲ್ಲ. ನಾನು ಚೆನ್ನಾಗಿದ್ರೆ ಏನಾದರೂ ಏರ್ಪಾಟು ಮಾಡುತ್ತಿದ್ದೆ' ಅಂತ ಪೇಚಾಡಿದರು. 'ಹೋಗ್ಲಿ ಬಿಡಿ ಯೋಚನೆ ಬೇಡ ನಾ ನೋಡಿಕೊಳ್ಳುತ್ತೀನಿ' ಅಂತ ಹೇಳಿ ಹಾಸ್ಟೆಲ್ಲಿಗೆ ಹೋದೆ. ಹುಡುಗರೇ ಅಂದು ಹೇಗೋ ಅಡಿಗೆ ಮಾಡಿಕೊಂಡು ನಿಭಾಯಿಸಿಕೊಂಡಿದ್ರು. ಸುದ್ದಿ ತಂದು ಮಲ್ಲಪ್ಪನವರಿಗೆ ಮುಟ್ಟಿಸಿದೆ. ಸೊಸೆ ತಂದಿದ್ದ ಗಂಜಿಯನ್ನು ಸಮಾಧಾನದಿಂದ ಕುಡಿದರು. ನಾನು ಸುಮ್ನೆ ಕೀಟಲೆಗೆ 'ಇವತ್ತು ಹಾಸ್ಟೆಲ್ ಇಲ್ದೆ ಇದ್ರೆ ಏನ್ ಪ್ರಪಂಚ ಮುಳುಗಿ ಹೋಗ್ತಿತ್ತೆ. ಈ ಊರಲ್ಲಿ ಎಷ್ಟೊಂದು ಹೋಟೆಲ್‌ಗಳಿವೆ' ಎಂದೆ. ಅದಕ್ಕೆ ಮಲ್ಲಪ್ಪನವರು 'ಅಂಗಲ್ಲ ಎಲ್ರ ಹತ್ತಿರನೂ ಹೋಟೆಲ್‌ನಾಗೆ ಊಟ ಮಾಡಲು ದುಡ್ಡು ಎಲ್ಲಿಂದ ಬರಬೇಕು. ನಿಮ್ಮ ಮಕ್ಕಳನ್ನ ನಮ್ಮ ಮಕ್ಕಳಂತೆ ನೋಡಿಕೊಳ್ತೇವೆ ಅಂತ ಅವರ ತಂದೆತಾಯಿಗಳಿಗೆ ನಾನು ಕೊಟ್ಟ ಮಾತು ಏನಾಗ್ತದೆ' ಎಂದರು. ಮಲ್ಲಪ್ಪನವರಲ್ಲಿ ಚಿಕ್ಕದು–ದೊಡ್ಡದು ಎಂಬ ಭೇದವಿಲ್ಲ. ಯಾವುದೇ ಕೆಲಸವಾಗಲಿ ಚೆನ್ನಾಗಿ ಮಾಡಬೇಕು. ಎಲ್ಲಕ್ಕೂ ಒಂದೇ ರೀತಿ ಆಸಕ್ತಿ ಕೊಡಬೇಕೆಂಬುದೇ ಅವರ ಧ್ಯೇಯೋದ್ದೇಶ.

ಮಾರನೆಯ ಬೆಳಗ್ಗೆ ಮತ್ತೊಮ್ಮೆ ಅವರನ್ನು ನೋಡಲು ನರ್ಸಿಂಗ್ ಹೋಮ್‌ಗೆ ಹೋದೆ. ಅವರ ಮೂರು ಜನ ಗಂಡುಮಕ್ಕಳು ತಂದೆ ಸೇವೆಗೆ ಕಂಕಣಬದ್ಧರಾಗಿದ್ದರು, ಒಂದು ರೀತಿ ಮಲ್ಲಪ್ಪನವರದು ತುಂಬು ಸಂಸಾರ. ಡಾಕ್ಟರ್ ಇವರನ್ನು ಪರೀಕ್ಷಿಸಿ ಸಮಾಧಾನದಿಂದ ಅತ್ತಹೋದರೆ ಮಲ್ಲಪ್ಪನವರು ಕಣ್ಣೀರು ಸುರಿಸುತ್ತಾ "ನಾನು ಬೇಡ ಅಂತ ಹೇಳಿದರೂ ಅವಳು ಕೇಳಲಿಲ್ಲ........ನಿಮಗೆ ಫೋನ್ ಮಾಡಿ ಬಿಟ್ಟಳು,........ರಾತ್ರಿ ಎಷ್ಟು ಕಷ್ಟಪಟ್ಟು, ತ್ರಾಸ ತಗೊಂಡು ಬಂದಿದ್ದೀರ........ನನ್ನಿಂದ ಎಂತಹ ತೊಂದರೆ ನಿಮಗೆ........" ಎನ್ನುವ ಪ್ರಲಾಪ ತೆಗೆಯತೊಡಗಿದರು. ಎರಡನೆಯ ಮಗ ತುಸು ಕೋಪದಿಂದಲೆ 'ಈಗ ಏನು ಆಗೋಯ್ತು ಅಪ್ಪಾಜಿ........ನೀವು ಸುಮ್ಕಿರಿ........ನಾವೆಲ್ಲಾ ಇದ್ದೇವೆ........' ಅಂತ ಸಮಾಧಾನ ಮಾಡಿದರು. ವಯಸ್ಸಾದ ಮೇಲೆ ತಂದೆ ಮಕ್ಕಳನ್ನು ಮಿತ್ರನಂತೆ ಕಾಣಬೇಕೆಂಬುದು ಅನುಭವದ ವಾಕ್ಯ. ಆದರೆ ಮಲ್ಲಪ್ಪನವರಿಗೆ ನಾನು ಇತರರಿಗೆ ಭಾರವಾಗುತ್ತಿದ್ದೇನೊ ಎಂಬ ಸಂಕೋಚ. ಆದರೆ ಅವರ ಮಕ್ಕಳು ಇಂತಹ ಭಾವನೆ ಬಾರದಷ್ಟು ಸಹೃದಯತೆಯಿಂದ ಅವರನ್ನು ನೋಡಿಕೊಳ್ಳುತ್ತಿದ್ದಾರೆ. ಅದು ಬೇರೆ ವಿಚಾರ. ಮಲ್ಲಪ್ಪನವರ ದಾಕ್ಷಿಣ್ಯ ಪ್ರವೃತ್ತಿ ಎಂತಹದು ಅನ್ನುವುದಕ್ಕೆ ಇದೊಂದು ಉದಾಹರಣೆಯಷ್ಟೆ.

ಮಲ್ಲಪ್ಪನವರಿಗೆ ಸಾವಿನ ವಿಚಾರ ಕುರಿತು ಒಂದು ಸ್ಥಿತಪ್ರಜ್ಞೆ ಬಂದಿದೆ ಎಂದು ನನಗನ್ನಿಸುತ್ತದೆ. ಸುಮಾರು ಎರಡು ವರ್ಷದ ಹಿಂದೆ ಅವರ ಹೆಂಡತಿಗೆ ಕ್ಯಾನ್ಸರ್ ಕಾಯಿಲೆ ಪ್ರಾರಂಭವಾಗಿರಬೇಕು. ಈ ಕಾಯಿಲೆಯ ಅನಂತರ ಮಲ್ಲಪ್ಪನವರಿಗೆ ತಾವು ತಮ್ಮ ಹೆಂಡತಿಯನ್ನು ಎಷ್ಟು ಪ್ರೀತಿಸುತ್ತಿದ್ದೇನೆಂಬುದು ಅರಿವಾಗಿರಬೇಕು. ನಿಜ—ಕಾದಂಬರಿಯಲ್ಲಿನ ಪಾತ್ರಗಳಂತೆ, ಚಲನಚಿತ್ರದ ನಾಯಕ–ನಾಯಕಿಯರಂತೆ ದಿನನಿತ್ಯ ಉರುಹೊಡೆದ ಪ್ರೇಮ ಸಂಭಾಷಣೆಯನ್ನು ಬದುಕಿನಲ್ಲಿ ಹೇಳಲು ಸಾಧ್ಯವೆ? ಹೆಂಡತಿಗೆ ವಾಸಿಯಾಗದ ಕಾಯಿಲೆ ಬಂದನಂತರ ಅವರು ಬಗ್ಗಿದರು, ಯಾತ್ರೆಗಳನ್ನು ಕೈಗೊಂಡರು, ಹಲವು ವೈದ್ಯರಿಗೆ ಶರಣಾದರು. ಅದಕ್ಕಿಂತಲೂ ಮಿಗಿಲಾಗಿ ಅಂತರ್ಮುಖಿಗಳಾದರು. ಇವರ ವಿವಾಹವೇ ಇವರ ಬದುಕಿನಲ್ಲಿ ಒಂದು ವಿಚಿತ್ರ ಘಟನೆಯಾಗಿತ್ತು. ಸಹಾಯ ಮಾಡಿದ ಸೋದರ ಮಾವನ ಆಜ್ಞೆಯಂತೆ ಮದುವೆಯಾಗಲಾಗಲಿಲ್ಲ. ಮದುವೆಯಾದ ಈಕೆಯೋ ನಿರಕ್ಷರಕುಕ್ಷಿ. ಇವರ ಆಲೋಚನೆಗಳಿಗಾಗಲೀ ಕಾರ್ಯ ವಿಚಕ್ಷಣೆಗಾಗಲಿ ಓಡಲು ಅವರು ಅಸಮರ್ಥರಾಗಿದ್ದರು. ಆದರೂ ಸಂಸಾರದ ರಥ ಓಡಿತು, ಅದು ತುಸು ಸಂತೋಷವನ್ನೇನೋ ತಂದಿತ್ತು. ಮಲ್ಲಪ್ಪನವರು ಎಂದೂ ತಮ್ಮ ಆಲೋಚನೆಗಳನ್ನು ಬಾಳಸಂಗಾತಿಯಲ್ಲಿ ಹಂಚಿಕೊಳ್ಳಲೇ ಇಲ್ಲ. ತಮ್ಮಷ್ಟಕ್ಕೆ ಪ್ರತ್ಯೇಕವಾಗಿ, ತಮಗೆ ಸರಿ ಕಂಡಂತೆ ಬಾಳಿದರು. ಇದರಿಂದ ಮುಗ್ಧತೆಯ ಮೂರ್ತರೂಪವಾದ ಅವರ ಮಡದಿಗೆ ಯಾವ ಆಘಾತವೂ ಆಗಲಿಲ್ಲ. ಆದರೆ ಮಲ್ಲಪ್ಪನವರಲ್ಲಿ 'ನಾನು ಆಕೆಯನ್ನು ಸರಿಯಾಗಿ ಗಮನಕ್ಕೆ ತೆಗೆದುಕೊಳ್ಳಲಿಲ್ಲವಲ್ಲಾ' ಎಂಬ ಕೊರಗಿದೆ. 'ನನ್ನ ಪ್ರೀತಿ–ಪ್ರೇಮವೇ ಒಂದು ರೀತಿಯ ಕುರುಡಾಯಿತಲ್ಲಾ, ನನ್ನ ಮಕ್ಕಳ ಲಾಲನೆ–ಪೋಷಣೆಗೆ ಮಾತ್ರ ಅವಳನ್ನು ಬಳಸಿಕೊಂಡೆ. ಆದರೆ ಆಕೆಯನ್ನು ಸಮಾನಸ್ಕಂದಳನ್ನಾಗಿ ನಡೆಸಿಕೊಳ್ಳಲಿಲ್ಲ' ಎಂಬ ಅಳಲು ಈಗ ಅದಮ್ಯ ಪ್ರೇಮದ ಮೂಲಕ ಹರಿದು ಬರುತ್ತಿದೆ. ಅವರ ದಾಂಪತ್ಯ ಜೀವನ ನೋಡಿದ ಎಂಥವರಿಗಾದರೂ ಸಂತೋಷವಾಗುವುದರಲ್ಲಿ ಸಂಶಯವಿಲ್ಲ. ಮನವರಿತು ನಡೆದ ಹೆಂಡತಿ, ಆಶೋತ್ತರಗಳಂತೆ ಬೆಳೆದ ಗಂಡುಮಕ್ಕಳು, ನೆಮ್ಮದಿಯ ಬಾಳ್ವೆ ನಡೆಸುತ್ತಿರುವ ಹೆಣ್ಣುಮಕ್ಕಳುಗಳಿಂದಾಗಿ ಮಲ್ಲಪ್ಪನವರು ಸುಖಿಗಳಾಗಿದ್ದಾರೆ, ಧನ್ಯಮಯ ಬಾಳನ್ನು ಬದುಕಿದ್ದಾರೆ. ತಮ್ಮ ಹೆಂಡತಿಯ ಸಾವಿನ ನೋವನ್ನೆಲ್ಲಾ ಮೌನವಾಗಿ ತಾವೊಬ್ಬರೇ ಅನುಭವಿಸುತ್ತಿರುವ ಮಲ್ಲಪ್ಪನವರನ್ನು ಕಂಡರೆ, ಈಗ ಎಂಥವರಿಗಾದರೂ ಎದೆ ಬಿರುಯುತ್ತದೆ.

ನನ್ನ, ಮಲ್ಲಪ್ಪನವರ ಪರಿಚಯದ ಕೊಂಡಿ ಸಾಕಷ್ಟು ಬೆಸೆಯಲು ವಿಶೇಷ ಘಟನೆಯೊಂದು ನಡೆಯಿತು. ದಿನನಿತ್ಯದ ಸುತ್ತಾಟದಲ್ಲಿ ಅವರ ಬಾಯಿಂದಲೇ ಅವರ ಅನುಭವ ಕೇಳಿದ ನಾನು ಬೆರಗಾದೆ. ಎಂಭತ್ತು ವರ್ಷದ ಆ ಬದುಕು ಸಾಕಷ್ಟು ರಸಮಯ ಘಟನೆಗಳನ್ನು ಅನುಭವಿಸಿತ್ತು. ಇದನ್ನು ಎಲ್ಲರೂ ಅನುಭವಿಸಲೆಂದು ನನ್ನ ಬಯಕೆ. 'ನಿಮ್ಮ ಬದುಕನ್ನು ಬರಹ ರೂಪಕ್ಕಿಳಿಸಿ' ಎಂದು ತಗಾದೆ ಮಾಡತೊಡಗಿದೆ. 'ಬಿಡಪ್ಪ ನಂದೇನೂ ಹೇಳಿಕೊಳ್ಳೊಂಥದ್ದು' ಎಂಬ ನಮ್ರತೆ ಅವರದು. 'ಬೇಡ ಆ ಕಾಲದ ಜನಜೀವನ ನಮಗೆ ಕೊಡಿ, ಅರ್ಧ ಶತಮಾನದ ಹಿಂದಿನ ಬದುಕು ನಮಗರಿವಾಗಲಿ' ಎಂದಾಗ ಮಾತನಾಡಲಿಲ್ಲ. ಸುಮ್ಮನೆ ಮನೆಗೆ ಹೋದೆ.

ಈ ಮಧ್ಯೆ ಬಾಪ್ಕೋ ಸಂಸ್ಥೆಯಲ್ಲಿದ್ದ ನನಗೆ 'ಮಲ್ಲಿಗೆ' ಮಾಸಪತ್ರಿಕೆಗೆ ಒಂದು ತಿಂಗಳು 'ನಮ್ಮ ಮಾತು' ಬರೆಯುವ ಹೊಣೆಗಾರಿಕೆ ಬಂತು, ನಮ್ಮ ಸಾಹಿತ್ಯದ ರಥದ ಚಾಲನೆಗೆ ಪುಷ್ಟಿ ಕೊಡುವ ಮಾತುಗಳನ್ನು ಹೇಳಬೇಕೆಂದುಕೊಂಡೆ. ಮಲ್ಲಪ್ಪನವರನ್ನು ಕೇಳೋಣ ಎಂದುಕೊಂಡು 'ನಮ್ಮ ಸಾಹಿತ್ಯದ ಗುರಿ ಹೇಗಿರಬೇಕು?' ಎಂದೆ. ಸಂದರ್ಭ ವಿಚಾರಿಸಿದ ಮಲ್ಲಪ್ಪನವರು ನಾಳೆ ಬರೆದು ಕೊಡುತ್ತೇನೆ ಎಂದರು. ಅದು ಸಾವಿರದ ಒಂಭೈನೂರ ಎಂಭತ್ತನಾಲ್ಕರ ಸೆಪ್ಟೆಂಬರ್ ತಿಂಗಳಲ್ಲಿ ಅಚ್ಚಾಗಿ ಲಕ್ಷಾಂತರ ಕನ್ನಡಿಗರ ಮೆಚ್ಚಿಗೆಗೆ ಪಾತ್ರವಾಯಿತು. ಅವರ ಸಾಹಿತ್ಯ ದೃಷ್ಟಿ ಹೀಗಿದೆ................ "ನಗರದ ಮಧ್ಯೆ 'ಪ್ರೇಮ ....ಕಾಮ'ಗಳಿಂದ ರಚಿತವಾದ ಸಾಹಿತ್ಯ ಸಾರ್ವಕಾಲಿಕವೆಂದಾಗಲೀ, ಸರ್ವ ಜನಾದರಣೀಯವೆಂದಾಗಲೀ

ಹೇಳುವಂತಿಲ್ಲ. ಕಾಂಕ್ರೀಟ್ ನಗರಗಳಷ್ಟೇ ದೇಶವಲ್ಲ. ನಮ್ಮ ನಾಡು ಹಳ್ಳಿಗಳನ್ನು ಪ್ರತಿನಿಧಿಸುವುದರಿಂದ ಅಚ್ಚ ಗ್ರಾಮೀಣ ಸಂಸ್ಕೃತಿ ನಮ್ಮ ಸಾಹಿತ್ಯದಲ್ಲಿ ಕಾಣುವಂತಾಗಬೇಕು. ಪೊತ್ತಾರಸೆ ಆರು ಹೊಡೆದು ಕೊಂಡು ಹೋಗಿ ನೇಸರ ನೆತ್ತಿಮೇಲೆ ಬರೋತನಕ ಉತ್ತು, ಹೊಟ್ಟೆ ಹಸಿದಾಗ "ಇನ್ನೂ ಬುತ್ತಿಬಂದಿಲ್ಲ" ಎಂದು ಊರ ಕಡೆ ನೋಡುವ ರೈತ, ಮನೆಯಲ್ಲಿ ಇದೆಯೋ, ಇಲ್ಲವೋ ಹೊಂದಿಸಿಕೊಂಡು ಬಿಸಿ ಮುದ್ದೆ ಮಾಡಿಕೊಂಡು ಹೊಲದಲ್ಲಿ ಉಳುವ ಗಂಡನನ್ನು ನೆನೆಯುತ್ತಾ ಬರುವ ಹೆಣ್ಣು ಮಗಳು ನಮಗೆ ಮಾನ್ಯ ವಾಗಬೇಕು. ಒಂದೇ ಗಂಗಳದಲ್ಲಿ ಉಂಡು ಅಲ್ಲಿರುವ ಹೊಂಗೆ ನೆರಳಿನಲ್ಲಿ ವಿಶ್ರಮಿಸಿ ಕೊಳ್ಳುವ ರೈತ ದಂಪತಿಗಳನ್ನು ಕಂಡರಿಸಬೇಕು. ಗಂಡ ಸಾಲು ಹೊಡೆಯುತ್ತಿದ್ದರೆ ಆತನಿಗೆ ಬೇಸರಿಕೆಯಾಗದಂತೆ ಮಾತ-ನಾಡುತ್ತಾ ಗೊಬ್ಬರ ಚೆಲ್ಲುವ ಆತನ ಹೆಂಡತಿಗೆ ಅಗ್ರಗಣ್ಯಸ್ಥಾನ ಸಿಗಬೇಕು. ಕೊಯಿದು ಹಾಕಿದ ಅರಿಯನ್ನು ಮಳೆಯಿಂದ ರಕ್ಷಿಸಲು ಹೆಣಗಾಡುವ ರೈತ ದಂಪತಿಗಳ ಚಿತ್ರಣ ದೊರೆಯಬೇಕು"....... ಸಾಹಿತ್ಯವನ್ನು ಕುರಿತು ಇಂತಹ ಮಾತುಗಳನ್ನು ಹೇಳಬಲ್ಲವರಿಗೆ ಬರಹ ಒಂದು ಕಷ್ಟವೆ ? ಪುನಃ ನನ್ನ ತರಲೆ ಶುರುವಾಯಿತು. 'ನಿಮ್ಮ ಆತ್ಮ ಕಥನ ಪ್ರಾರಂಭ ಮಾಡಿ' ಎಂದು ದುಂಬಾಲು ಬಿದ್ದೆ. 'ನೀನು ಆತ್ಮ ಕಥನ ಎನ್ನಬೇಡ' ಅಂತ ತಾಕೀತು ಮಾಡಿದರು. 'ಹೋಗಲಿ ನೆನಪುಗಳು ಅಂತನೇ ಬರೀರಿ' ಎಂದೆ. ಮಲ್ಲಪ್ಪನವರು ದೃಢ ನಿಶ್ಚಯ ಮಾಡಿದರು. ಹಳೆಯ ಕಡತಗಳನ್ನೆಲ್ಲಾ ಕಲೆ ಹಾಕಿದರು. ವಿದ್ಯಾರ್ಥಿ ದೆಸೆಯಿಂದಲೂ ಅವರು ತುಂಬಾ ಓದಿನ ಹುಚ್ಚಿಗೆ ಒಳಗಾಗಿದ್ದರು. ಇವರ ಪ್ರಬಂಧವನ್ನು ಪ್ರೊ॥ ತೀ.ನಂ.ಶ್ರೀ. ಯವರೇ ಮೆಚ್ಚಿ ಇಡೀ ತರಗತಿಯಲ್ಲಿ ಪ್ರಶಂಸಿಸಿದ್ದರಷ್ಟೆ. ತಾವು ಓದಿದ ಪುಸ್ತಗಕಳ ಅಭಿಪ್ರಾಯಗಳನ್ನು ಒಂದು ನೋಟ್ ಬುಕ್ಕಿನಲ್ಲಿ ಬರೆದು ಇಟ್ಟುಕೊಂಡಿದ್ದರು. ಇವೆಲ್ಲಕ್ಕಿಂತ ತಮ್ಮ ನೆನಪಿನ ಕೋಟೆಗೆ ಲಗ್ಗೆ ಹಾಕಿದರು. ಬಾಲ್ಯದ ಆ ದಿನಗಳು, ಜನರ ನಂಬಿಕೆ, ಆಚರಣೆ, ಭಾವನಾತ್ಮಕತೆಯ ವಿಚಾರಗಳು ಈಗ ಪೈಪೋಟಿಯಿಂದ ಹೊರಬಂದವು. ದಿನ ನನಗೆ ಇವುಗಳನ್ನು ಕೇಳುವ ಸೌಭಾಗ್ಯ. ತಂದೆ ತಾಯಿಗಳನ್ನು ಬಾಲ್ಯದಲ್ಲೇ ಕಳೆದು ಕೊಂಡು, ಕಷ್ಟ ಪರಂಪರೆಯಲ್ಲಿ, ಬಡತನದ ಬೇಗೆಯಲ್ಲಿ ನೊಂದು—ಬೆಂದು ಪದವಿ ಗಳಿಸಿ, ಸೊಸೈಟಿ ಇನ್‌ಸ್ಪೆಕ್ಟರ್ ಆಗಿ ಅನಂತರ ಅಮಲ್ದಾರರಾಗಿ, ಅಸಿಸ್ಟೆಂಟ್ ಕಮಿಷನರ್ ಆಗಿ ಇವುಗಳ ಜೊತೆ ಕುರುಬ ಸಂಘದ ಸಂಸ್ಥಾಪಕರಾಗಿ ಹಾಸ್ಟೆಲ್, ಪ್ರೌಢಶಾಲೆ, ಕಾಲೇಜುಗಳ ಅಭಿವೃದ್ಧಿ ಶೀಲರಾಗಿ ಮಲ್ಲಪ್ಪನವರ ಬದುಕು ವಿಶಿಷ್ಟರೀತಿಯ ಹೋರಾಟವಾಗಿತ್ತು. ಪ್ರಾರಂಭದಿಂದಲೂ ಮೌಢ್ಯದ ವಿರುದ್ಧ ಹೋರಾಟ ನಡೆಸಿದ ವಿಚಾರವಂತರವರು. ಅಧಿಕಾರದಲ್ಲಿದ್ದಾಗ ಅಧಿಕಾರಷಾಹಿ ಹಾಗೂ ಬಂಡವಾಳಷಾಹಿಗಳ ವಿರುದ್ಧ ಸಮರ ಸಾರಿದವರು. ಸಾರ್ವಜನಿಕ ರಂಗದಲ್ಲಿ ಬೇರೂರಿದ್ದ ಭ್ರಷ್ಟಾಚಾರ, ಕಪಟತೆ, ಸ್ವಾರ್ಥಪರತೆಯ ವಿರುದ್ಧ ಕಾದಾಡಿದವರು. ಇದೆಲ್ಲಾ 'ಕಳೆದ ಆ ದಿನಗಳು'* ಗ್ರಂಥದಲ್ಲಿ ರಂಜನೀಯವಾಗಿ ಬಂದಿದೆ. ಆದರೆ ಈ ಪುಸ್ತಕ ಬರೆಯುವಾಗ ಮಲ್ಲಪ್ಪನವರ ಮಾನಸಿಕ ಸ್ಥಿತಿಯ ಬಗ್ಗೆ ಒಂದೆರಡು ಪ್ರಸಂಗ ಹೇಳಬೇಕು. ಪ್ರತಿ ದಿನ ಗ್ರಂಥದ ಪ್ರಗತಿಯನ್ನು ನೋಡುತ್ತಾ, ಅವರು ಬರೆದದ್ದನ್ನು ಮೊದಲ ಓದುಗನಾಗಿ ಅನುಭವಿಸುತ್ತಾ ಬಂದಿದ್ದೇನೆ. ಒಂದು ಸಂಜೆ ಅವರ ಮನೆಗೆ ಹೋದರೆ ಪೆನ್ನು ಹಿಡಿದು ಮಲ್ಲಪ್ಪನವರು ಕಣ್ಣೀರು ಸುರಿಸುತ್ತಾ ಕುಳಿತಿದ್ದಾರೆ. 'ಯಾಕೆ ಕಣ್ಣೀರು' ಎಂದೆ. 'ನಮ್ಮಕ್ಕನ ಸಾವನ್ನು ಕುರಿತು ಬರೆಯುತ್ತಿದ್ದೇನೆ' ಎಂದರು. 'ನೀವೆ ಹೀಗೆ ಭಾವನಾತ್ಮಕವಾದರೆ ಪುಸ್ತಕ ವಸ್ತುನಿಷ್ಠವಾಗುವುದಾದರೂ ಹೇಗೆ' ಎಂದೆ. 'ಅಲ್ಲ ನನ್ನಕ್ಕನ ಸಾವನ್ನು ನೆನೆಸಿಕೊಂಡು ಅಳತಿಲ್ಲಾ, ನನ್ನ ಅಜ್ಞಾನಕ್ಕೆ, ನನ್ನ ಪಾಪಕಾರ್ಯಕ್ಕೆ ಅಳುತ್ತಿದ್ದೇನೆ' ಎಂದರು. 'ಹಾಗಾದರೆ ಏನು ಸಮಾಚಾರ' ಎಂದೆ. 'ನೋಡಿ ಈ ಗ್ರಂಥದಲ್ಲಿ ನನ್ನ ಎಳೆತನದಲ್ಲಿದ್ದ ಮೌಢ್ಯದ ಪರಿಸರವನ್ನು ಒಂದು ರೀತಿ ಲೇವಡಿ ಮಾಡುತ್ತಿದ್ದೇನೆ. ಆದರೆ ಆಗಿನ್ನೂ ಈ ಮೌಢ್ಯದಿಂದಲೇ ನಾ ಪಾರಾಗಿರಲಿಲ್ಲ. ಯಾಕೆಂದ್ರೆ ಚಿಕ್ಕಂದಿನಲ್ಲಿ ತಂದೆ ತಾಯೀನ ಕಳಕೊಂಡ ನನಗೆ ಅಕ್ಕನೇ ಎಲ್ಲಾ ಆಗಿ ಬೆಳೆಸಿದಳು. ಆಕೆ ಸಾಯೋ ಹೊತ್ತಿಗೆ ನಾನು ಅವಳು ಮನೆಯಲ್ಲಿ ಸತ್ರೆ ಅಪಶಕುನ ಅಂತ ಜೀವ ಇರ

*ಇದು ಮಲ್ಲಪ್ಪನವರ ಆತ್ಮಕಥೆ, ಅಚ್ಚಿನಲ್ಲಿದೆ.

ಬೇಕಾದರೆ ಹೊರಗಿಡೋಣ ಅಂದೆ. ಅದು ಸಾಯುವ ಸ್ಥಿತಿಯಲ್ಲಿದ್ದ ನಮ್ಮಕ್ಕನಿಗೆ ಗೊತ್ತಾಗಿರಬಹುದು. 'ಯಾಕಪ್ಪಾ ಈ ಗಲಾಟೆ' ಎಂದಳು. ಈ ಸನ್ನಿವೇಶ ಜ್ಞಾಪಕಕ್ಕೆ ಬರುತ್ತಿದ್ದ ಹಾಗೆ ಕಣ್ಣೀರು ಬಂತು ಎಂದರು. ಆತ್ಮ ಶೋಧನೆ ವ್ಯಕ್ತಿತ್ವದ ಬೆಳವಣಿಗೆಯ ಲಕ್ಷಣವಲ್ಲವೆ? ಇನ್ನೊಂದು ಸಾರಿ ಅವರು ಮಾತನಾಡುತ್ತಾ 'ನೋಡು ನಾವು ಎಂತಹ ಸ್ವಾರ್ಥಿಗಳು, ಅಹಂಕಾರವಂತರೆಂದರೆ ಅಂತಹಾ ಸಮಯದಲ್ಲಿ ಅದು ಅರ್ಥ ಆಗೋದಿಲ್ಲ. ಈಗ ಅಂತರಂಗ ಪರಿಶೋಧನೆಗೆ ಪ್ರಯತ್ನಿಸಿದರೆ ತಿಳೀತದೆ' ಎಂದರು. 'ನಿಮ್ಮ ಬದುಕಿನದಾ' ಎಂದೆ. 'ಹೌದು.' 'ಹಾಗಾದರೆ ಯಾವುದು?' 'ತಬ್ಬಲಿಯಾದ ನನ್ನ ಓದಿಗೆ ನನ್ನ ಸೋದರ ಮಾವ ಸರಸಪ್ಪ ಅನ್ನೋರು ಸಹಾಯ ಮಾಡಿದರು. ಆಮೇಲೆ ಯಾವುದೋ ವ್ಯವಹಾರಿಕ ಸಂಬಂಧದಿಂದಾಗಿ ನನಗೂ ಅವರಿಗೂ ಅಷ್ಟಕಷ್ಟೆ ಆಯಿತು. ಅವರು ನನ್ನ ವಿದ್ಯಾಭ್ಯಾಸ ಕಾಲದಲ್ಲಿ ಕೊಟ್ಟ ಹಣದ ಒಂದು ಕಾಸೂ ಬಿಡದೆ ಅವರಿಗೆ ಕೊಟ್ಟು ನಾನು ಬೇರೆ ಕಡೆ ಮದುವೆಯಾದೆ. ಅವರ ಕೊನೆಗಾಲಕ್ಕೆ ನಮ್ಮ ಸಂಬಂಧ ಉತ್ತಮಗೊಂಡಿತ್ತು. ಯಾವುದೋ ಆಸ್ತಿ ಮಾಡಲಿಕ್ಕೆ ನನ್ನಿಂದ ಸುಮಾರು ಆರುನೂರು ರೂಪಾಯಿ ಸಾಲ ಪಡೆದರು. ಅವರ ಹಿಂದಿನ ಉಪಕಾರ ಮರೆತ ನಾನು, ಅವರಿಸ್ಕೊಂಡ ಸಾಲಕ್ಕೆ ಒತ್ತಾಯ ಮಾಡಿದೆ. ಅವರೇನು ನನಗೆ ಕೊಡಲಿಲ್ಲ. ಆದರೆ ಈಗ ನನಗೆ ಅನ್ನಿಸ್ತದೆ. 1930–31 ರಲ್ಲಿ ಅವರು ಕೊಟ್ಟ ಪತ್ತಿಪ್ಪತ್ತು ರೂಪಾಯಿಗಳ ಬೆಲೆ ಎಷ್ಟು, ಅದರ ಹಿಂದೆ ಎಂತಹ ಸದುದ್ದೇಶವಿತ್ತು. ನಾನು ಗೆಜೆಟೆಡ್ ಅಧಿಕಾರಿ ಆಗಿ ಕೊಟ್ಟ ಈ ಸಣ್ಣ ಹಣದ ಮತ್ತೆ ಕೇಳುವುದರ ಮೂಲಕ ನಾನು ಎಷ್ಟು ಸಣ್ಣವನಾದೆ ಅನ್ನಿಸಿತು. ಪ್ರಾಯಶಃ ಉತ್ತಮ ಸಾಹಿತ್ಯ ಸೃಷ್ಟಿ ಎಲ್ಲಾ ಇಂತಹ ಒಳತೋಟಿಯ ಅಭಿವ್ಯಕ್ತಿಯನ್ನೂ ಹಾಗೂ ಗಾಢ ಸಂವೇದನೆಯನ್ನೂ ಒಳಗೊಂಡಿರುತ್ತದೆ. ವಾಲ್ಮೀಕಿ ಕ್ರೌಂಚ ಪಕ್ಷಿಗಳ ಹತ್ಯೆನೋಡಿ. ಅವರ ಮೂಲಕ ಸತ್ಯ ಸಾಕ್ಷಾತ್ಕಾರ ಪಡೆದು ಕವಿಯಾದ. ಆದರೆ ಬೇಡನಾಗಿ ಹಿಂದೆ ವನವನ್ನೆಲ್ಲಾ ಅಲೆದ. ಆ ಪ್ರಕೃತಿಯ ಪ್ರೇಮ ಇಡೀ ರಾಮಾಯಣವನ್ನೆಲ್ಲಾ ವ್ಯಾಪಿಸಿದೆ. ಮಲ್ಲಪ್ಪನವರು ಹುದುಗಿಡಲಾರದ ಭಾವನೆಗಳಿಗಾಗಿ, ತಮ್ಮ ಬಾಲ್ಯದ ಅಗಾಧ ಅನುಭವದೊಡನೆ 'ಕಳೆದ ಆ ದಿನಗಳನ್ನು' ಚಿತ್ರಿಸುತ್ತಿದ್ದಾರೆ.

ಒಂದು ದಿನ ವಾಕಿಂಗ್ ಸಮಯದಲ್ಲಿ ಮಲ್ಲಪ್ಪನವರು 'ನಿಮ್ಮ ತಾಯಿ, ಈ ಜಿಲ್ಲೆಯ ಎ.ಎನ್.ಎಂ. ಅಭ್ಯರ್ಥಿಗಳ ಆಯ್ಕೆ ಸಮಿತಿಯಲ್ಲಿದ್ದಾರಂತೆ ನಿಜವೆ?' ಎಂದರು. 'ಹೌದು ಯಾಕ್ ಸಾ' ಎಂದೆ. 'ನೋಡಿ ನಮ್ಮ ಮಗುವೊಂದಿದೆ. ಆ ಡಿ.ಹೆಚ್.ಓ.ಗೂ ಕೂಡಾ ಹೇಳಿದ್ದೇನೆ' ಎಂದರು. 'ಅವರಾರು?' ಎಂದೆ. 'ಈ ಜಿಲ್ಲಾಧಿಕಾರಿ ಕಛೇರಿಯಲ್ಲೇ ಬಹು ಹಿಂದೆ ಅವರ ತಾತ ಲಕ್ಕಣ್ಣ (ಅರವಣ್ಣ) ಎಂಬುವವನು ಜವಾನ ಆಗಿದ್ದ' ಎಂದರು. 'ನಿಮಗೆ ಹೇಗೆ ಪರಿಚಯ—ಸಂಬಂಧವೆ' ಎಂದೆ. 'ಇಲ್ಲ. ನಾನು ಹಿಂದೆ ಪದವಿ ಮಾಡಿಕೊಂಡು ಆರೇಳು ತಿಂಗಳು ಕೆಲಸವಿಲ್ಲದೆ ಕುಂತಿದ್ದೆ. ಇವರ ಹಿರಿಯರು ನನಗೆ ತಾತ್ಕಾಲಿಕ ಕೆಲಸ ಕೊಡಿಸುವುದಾಗಿ ಹೇಳಿ ತಮಗೆ ಪರಿಚಯವಿದ್ದ ಚಿತ್ರದುರ್ಗದ ಆಗಿನ ಡಿ.ಸಿ. ಶೇಷಾದ್ರಿ ಹತ್ತಿರ ಕರೆದುಕೊಂಡು ಹೋಗಿದ್ದರು. ಅಲ್ಲೇನೂ ನನಗೆ ಕೆಲಸ ಆಗಲಿಲ್ಲ. ಆದರೆ ಆತ ತುಂಬಾ ಒಳ್ಳೆಯವ. ಅವರ ಕುಟುಂಬ ಕಷ್ಟದಲ್ಲಿದೆ ಎಂದರೆ ನಾನು ಹೇಗೆ ನೊಡ್ಕೊಂಡಿರೋದು ಅದಕ್ಕೆ ನಿಮಗೆ ಹೇಳಿದೆ' ಎಂದರು. ಮಲ್ಲಪ್ಪನವರಲ್ಲಿ ಈ ಉಪಕಾರ ಸ್ಮರಣೆಯ ಗುಣ ತುಸು ಅಧಿಕ. ವಿದ್ಯಾರ್ಥಿ ದೆಸೆಯಲ್ಲಿ ಒಂದು ಮೂರು ತಿಂಗಳು ಸಹಾಯ ಮಾಡಿದ ದಿವಂಗತ ಟಿ. ಮರಿಯಪ್ಪನವರ ಜ್ಞಾಪಕಾರ್ಥ, ಅವರಿಗೆ ಅಮರತ್ವ ಕೊಡುವುದಕ್ಕಾಗಿ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಒಂದು ಹಾಸ್ಟೆಲನ್ನೇ ತೆರೆದರು. ಪುರಂದರ ದಾಸರು ಒಂದೆಡೆ ಹರಿಯನ್ನು ಕುರಿತು ಹೀಗೆನ್ನುತ್ತಾರೆ. 'ಹೂವ ತರುವವರ ಮನೆಗೆ ಹುಲ್ಲತರುವೆ.' ಹಾಗೆಯೇ ಇರಬೇಕೇನೊ. ತಮ್ಮ ಬಗ್ಗೆ ಕಾಳಜಿ ವಹಿಸಿದ ಪ್ರತಿಯೊಬ್ಬರಿಗೂ ಮಲ್ಲಪ್ಪನೋರು ಸಹಾಯ ಮಾಡಲಿಕ್ಕೆ ಹೋಗ್ತಾರೆ, ಇಲ್ಲ ಕೃತಜ್ಞತೆಯಿಂದ ಅವರನ್ನು ಸ್ಮರಿಸಿಕೊಳ್ಳುತ್ತಾರೆ.

ಮಲ್ಲಪ್ಪನವರ ಒಡನಾಟ ನನಗೆ ಈ ರೀತಿ ಖುಷಿ ಕೊಟ್ರೂ ಒಮ್ಮೊಮ್ಮೆ ಅವರಲ್ಲಿ ಕಾಣುವ ವಿಲಕ್ಷಣ ಪ್ರವೃತ್ತಿಯನ್ನು ಕುರಿತು ನಾನು ಹೇಳಲೇ ಬೇಕು. ಉದಾಹರಣೆಗೆ ಇತ್ತೀಚೆಗೆ ಮಲ್ಲಪ್ಪನೋರಿಗೆ ಒಂದೊಂದು ಯೋಚನೆ ಕಾಡುತ್ತಿರುತ್ತದೆ. "ಮುಂದೆ ಈ ಸಂಘ, ಈ ಕಾಲೇಜನ್ನೆಲ್ಲಾ ಹೈಸವಾಗಿ ನೋಡ್ಕೊಳ್ಳೋರ್‍ಯಾರು. ನಿಷ್ಕಾಮದಿಂದ ದುಡಿಯದಿದ್ದರೆ ನಮ್ಮಂಥವರ ಪ್ರಯತ್ನವೆಲ್ಲಾ ಹೊಳೆಯಲ್ಲಿ ಹುಣಸೇ ಹಣ್ಣು ಕದಡಿದಂತಾಗುತ್ತದೆ. ನಾನೇನೋ ಆ ಕಾಲದಲ್ಲಿ ವಿಧಿ ಇಲ್ಲದೆ ಸರ್ಕಾರಿ ಚಾಕರಿಗೆ ಸೇರಿದ ಕಾರಣದಿಂದಾಗಿ ಪೂರ್ಣವಾಗಿ ದುಡೀಲಿಕ್ಕಾಗಲಿಲ್ಲ: ನನ್ನ ಮಕ್ಕಳು ಬೇರೆ ತರಹನೇ ಆಲೋಚನೆ ಮಾಡ್ತಾರೆ. ಸ್ವತಂತ್ರ ಬದುಕನ್ನು ಆರಿಸಿಕೊಳ್ಳಕ್ಕೆ ಹಿಂಜರೀತಾರೆ. ನಾನು ಅಮಲ್ದಾರ್ ಆಗಿದ್ದಾಗ ಮಧುಗಿರಿ ಪಾವಗಡದಲ್ಲಿ ಮಾಡಿದ ಕಾಮಗಾರಿ ಕೆಲಸನ ಜನ ಈಗಲೂ ನೆನೆಸಿಕೊಳ್ಳುತ್ತಾರೆ. ಅವನ್ನೆಲ್ಲಾ ಉಪಯೋಗಿಸಿ ಕೊಂಡು ವಿಶಾಲ ಕ್ಷೇತ್ರನ ಆರಿಸಿಕೊಳ್ಳಬಹುದಾಗಿತ್ತು........" ಇವೆಲ್ಲಾ ಅವರ ಆಲೋಚನಾ ತರಂಗಗಳು. ನಾನು ಅವರಿಗೆ ಆಗಾಗ ಹೇಳುತ್ತಿರುತ್ತೇನೆ. 'ಮಕ್ಕಳು—ಬಂಧುಗಳು ನಮ್ಮ ಆಸ್ತಿಗೆ ಮಾತ್ರ ಉತ್ತರಾಧಿ ಕಾರಿಗಳು, ನಮ್ಮ ಧ್ಯೇಯೋದ್ದೇಶಗಳಿಗಲ್ಲ. ಜಗತ್ತು ವಿಶಾಲವಾಗಿದೆ. ನಿಮ್ಮಿಂದ ಅನೇಕರು ತಮ್ಮ ಹೃದಯಗಳಲ್ಲಿ ನಿಮ್ಮ ಆದರ್ಶದ ಜ್ಯೋತಿಯನ್ನು ಹತ್ತಿಸಿಕೊಳ್ಳುತ್ತಾರೆ. ಇಲ್ಲಿಗೇನೆ ಈ ಉತ್ತಮ ಕೆಲಸ ಕೊನೆಗೊಳ್ಳಲಿಲ್ಲ, ಕಾಲಕ್ರಮದಲ್ಲಿ ಅದು ಸ್ವಲ್ಪ ಮಂದವಾದರೂ ಮುಂದೆ ಸಾಕಷ್ಟು ಪ್ರಜ್ವಲಿಸುತ್ತದೆ. ಈಗಾಗಲೆ ಒಂದಿಬ್ರು ಈ ಮಾರ್ಗದಲ್ಲಿ ಕೂಡಾ ಇರಬಹುದು.

ಇಷ್ಟೊಂದು ಅತ್ಯಲ್ಪದ ಒಡನಾಟದಲ್ಲಿ ಮಲ್ಲಪ್ಪನವರ ಎಲ್ಲಾ ಮುಖಗಳ ಪರಿಚಯ ನನಗಾಗಿದೆ ಅಂತ ಅಲ್ಲ. ಅವರ ವ್ಯಕ್ತಿತ್ವ ಇಂತಹ ಬಗೆಯದು ಕೂಡಾ ಅಂತ ಹೇಳಕ್ಕೆ ಆಗುವುದಿಲ್ಲ. ಒಮ್ಮೊಮ್ಮೆ ಅವರೇ ತಮಾಷೆಗೆ ಈ ಮಾತು ಹೇಳುತ್ತಿರುತ್ತಾರೆ. "ನಾನೇನು ಆಲದ ಮರದಷ್ಟು ದೊಡ್ಡವನಲ್ಲಪ್ಪ. ಸಣ್ಣ ತುಳಸೀ ಗಿಡದಂಥವನು. ದೊಡ್ಡ ಪ್ರವಾಹ ಬಂದರೆ ತುಳಸೀ ಗಿಡ ಕೊಚ್ಚಿ ಹೋಗ್ತದೆ. ಪ್ರವಾಹ ಇಳಿದು ಒಂದು ಚೂರು ಮಣ್ಣಿನ ನೆಲ ಸಿಕ್ಕರೆ ಅದು ಅಲ್ಲೇ ಚಿಗುರುತ್ತದೆ."

ಒಂದು ಮೀನು ಯಾವುದೋ ಕಾರಣದಿಂದ ಬೆಸ್ತರ ಬಲೆಗೆ ಬಿದ್ದಿರುತ್ತದೆ. ಮಿಲಿ ಮಿಲಿ ಒದ್ದಾಡುತ್ತಾ, ಬಲೆ ತೂತು ಆಗಿರುವ ಜಾಗ ನೋಡಿ—ಚಕ್ಕನೆ ಸಮುದ್ರಕ್ಕೆ ಹಾರಿ ವಿಶಾಲ ಪರಿಧಿಯೊಳಗೆ ಈಜುತ್ತದೆ. ಹಾಗೆಯೇ ಮಲ್ಲಪ್ಪನವರು ಅನಿವಾರ್ಯದಿಂದ ಸರ್ಕಾರಿ ಚಾಕರಿಗೆ ಸೇರಿದರೂ ಸಿಕ್ಕ ಅವಕಾಶನ ಉಪಯೋಗಿಸಿ ಕೊಂಡು ಸಂಘ, ಹಾಸ್ಟೆಲ್, ಕಾಲೇಜು ಅಂತ ಸಾರ್ವಜನಿಕ ರಂಗಕ್ಕೆ ಧುಮುಕಿದರು. ತಮ್ಮ ಕೈಲಾದಷ್ಟು ಮಟ್ಟಿಗೆ ಪ್ರಾಮಾಣಿಕ ದುಡಿಮೆಯನ್ನು ಮಾಡಿ, ಸಾಮಾನ್ಯರಲ್ಲಿ ಒಬ್ಬರೆನಿಸಿಕೊಂಡರು. ಇಂತಹವರಿಂದಲೇ ದೇಶದ ನೈತಿಕ ಮಟ್ಟ ಹೆಚ್ಚೋದು. ಎಲ್ಲ ಕಾಲದಲ್ಲೂ ಇಂತಹವರ ಸಂಖ್ಯೆ ಹೆಚ್ಚುತ್ತದೆ. ಸಾವಿರದ ಇನ್ನೂರು ವರ್ಷಗಳ ಹಿಂದೆ ಸಾತ್ವಿಕ ಗುಣಗಳನ್ನೆಲ್ಲಾ ಎರಕ ಹೊಯ್ದಂತಿದ್ದ ರಾಷ್ಟ್ರಕೂಟರ ದೊರೆ ನೃಪತುಂಗ ತನ್ನ ನಾಡಿನ ಜನರನ್ನು "ಸುಭಟರ್, ಅಭಿಮಾನಿಗಳ್, ಅತ್ಯುಗ್ರರ್, ವಿವೇಕಿಗಳ್, ಗಂಭೀರರ್, ಅಭಿಜನರ್, ಗುಣಿಗಳ್,................" ಎಂದೇನೇನೋ ಬಣ್ಣಿಸಿದ. ವರ್ಷಗಳು ಉರುಳಿದರೂ ಈ ನಾಡಿನ ಜನರ ಮೂಲ ಸತ್ವ ಹುದುಡಿ ಹೋಗಿಲ್ಲ. ಮಲ್ಲಪ್ಪನವರಂತಹ ವ್ಯಕ್ತಿಗಳನ್ನು ಕಂಡಾಗಲೆಲ್ಲಾ ನೃಪತುಂಗನ ಆ ಮಾತುಗಳು ನೆನಪಿಗೆ ಬರುತ್ತವೆ.

ಬೆಂಗಳೂರು
27—11—84

ಮಾನ್ಯ ಶ್ರೀ ಚಿಕ್ಕವೀರಯ್ಯನವರಿಗೆ ಮಲ್ಲಪ್ಪನ ವಂದನೆಗಳು.

ಹಿಂದಿನ ತಿಂಗಳ ತಮ್ಮ ಕಾಗದವನ್ನು ಎಲ್ಲಿಯೋ ಇಟ್ಟು ಮರೆತು ಬಿಟ್ಟಿದ್ದೆನು. ಇನ್ನೇನೋ ಕಾಗದ ಹುಡುಕುವಾಗ ಅದು ಸಿಕ್ಕಿತು.

ಮಾನ್ಯ ನ. ಮಲ್ಲಪ್ಪನವರಿಗೆ ಸನ್ಮಾನ ಮಾಡುವ ವಿಷಯ ತಿಳಿದು ಸಂತೋಷವಾಯಿತು. ಅವರ ಬಗ್ಗೆ ನನ್ನ ಅಪಾರವಾದ ಪ್ರೀತಿ ಗೌರವಗಳಿವೆ. ಆದರೆ ಅವರ ಮತ್ತು ನನ್ನ ಸಂಪರ್ಕ ಹೆಚ್ಚಿನ ಅವಧಿ ಯದಲ್ಲ. ಅವರ ಗುಣಗಾನ ಮಾಡಿ ಲೇಖನ ಬರೆಯುವಷ್ಟು ಸಾಮಗ್ರಿ ನನ್ನಲ್ಲಿಲ್ಲವೆಂದು ತಿಳಿಸಿದರೆ ಬೇಸರಪಟ್ಟುಕೊಳ್ಳಬೇಡಿ.

ಅವರನ್ನು ಹೆಚ್ಚೆಂದರೆ ಏಳೆಂಟು ಬಾರಿ ಭೇಟಿಯಾಗಿರಬಹುದು. ಅವರ ಚಿರಂಜೀವಿಯೊಬ್ಬರು ಶಿಕ್ಷಣ ಇಲಾಖೆಯ ಸೇವೆಯಲ್ಲಿರುವುದರಿಂದ ಅವರ ಸಂಪರ್ಕ ಹೆಚ್ಚಾಗಿದೆ.

ಆದರೂ ಶ್ರೀಯುತ ಮಲ್ಲಪ್ಪನವರ ಸತ್ಯಸಂಧತೆ, ಧೈರ್ಯ, ಕಾರ್ಯದಕ್ಷತೆ, ಮುಂದಾಲೋಚನೆ, ನಿರ್ಬಿಡೆಯ ಸ್ವಭಾವ ಎಂಥವರೂ ಮೆಚ್ಚಿಕೊಳ್ಳುವಂತಹವು. ಅವರು ನಮ್ಮ ಸಮಾಜದ ಅಭಿವೃದ್ಧಿಗಾಗಿ ಅವಿಶ್ರಾಂತವಾಗಿ ಬಹು ಕಾಲದಿಂದ ದುಡಿಯುತ್ತಿದ್ದಾರೆ. ಅದರ ಫಲವಾಗಿ ಇಂದು ಅನೇಕ ಶಿಕ್ಷಣ ಸಂಸ್ಥೆಗಳು ಬೆಳೆದಿವೆ. ಅವರ ಮುಂದಾಳ್ತನದಲ್ಲಿ ಬೆಳೆದ ಪ್ರಸಾದನಿಲಯ ತುಮಕೂರಿನಲ್ಲಿ ಹೆಮ್ಮೆಯಿಂದ ತಲೆಯೆತ್ತಿದೆ. ಇಂತಹ ಪುಣ್ಯ ಜೀವಿಗಳು ನಮ್ಮ ಜನಾಂಗದಲ್ಲಿ ಹತ್ತು ಜನರಿದ್ದಿದ್ದರೆ ನಾವು ಈಗಿರುವ ಸ್ಥಿತಿಯಲ್ಲಿರುತ್ತಿರಲಿಲ್ಲ. ಅವರಿಗೆ ಈ ನಾಲ್ಕು ಅಕ್ಷರಗಳ ಕಾಣಿಕೆ ವೈಯಕ್ತಿಕವಾದ ನನ್ನ ಗೌರವದ ಸಂಕೇತವಷ್ಟೆ. ದೇವರು ಅವರಿಗೆ ಆರೋಗ್ಯ ನೆಮ್ಮದಿಯನ್ನು ಕೊಡಲೆಂದು ಪ್ರಾರ್ಥಿಸುತ್ತೇನೆ.

ಇಂತಿ ವಂದನೆಗಳು
ಕೆ. ಮಲ್ಲಪ್ಪ

ಅಪರೂಪದವರು

ಸಿ. ಗಂಗಯ್ಯ

ಮೂವತ್ತು ವರ್ಷದ ಹಿಂದಿನ ಮಾತು. ನಾನು ಹೈಸ್ಕೂಲು ಓದುತ್ತಿದ್ದ ಸಮಯ. ನನ್ನ ಹಳ್ಳಿಯಲ್ಲಿ ಶಾಲೆಯಿಲ್ಲದ ಕಾರಣವಾಗಿ ತಂದೆ ನನ್ನನ್ನು ಕರೆತಂದು ತುಮಕೂರಿನ ಸರ್ಕಾರಿ ಪ್ರೌಢಶಾಲೆಗೆ ಸೇರಿಸಿದರು. ಓದುವ ಹಂಬಲ ಬಹಳವಾಗಿಯೇ ಇತ್ತು. ಆದರೆ ತುಮಕೂರಿನಲ್ಲಿ ನಾನು ಎದುರಿಸ ಬೇಕಾದುದು ಊಟದ ಸಮಸ್ಯೆ. ಇನ್ನೂ ಚಿಕ್ಕವನಾದುದರಿಂದ ಅಡಿಗೆ ಕಲೆ ಕೈಗೂಡಿರಲಿಲ್ಲ. ನನ್ನ ತಂದೆ ಯವರು ನನ್ನನ್ನು ನಮ್ಮ ಸಂಬಂಧಿಕರೊಬ್ಬರ ಮನೆಗೆ ಸೇರಿಸಿದರು. ಹೇಗೋ ಆ ವರ್ಷವನ್ನು ಕಳೆದೆ. ಎಸ್.ಎಸ್.ಎಲ್.ಸಿ. ಪಾಸೂ ಆಯಿತು. ಮುಂದಿನ ವರ್ಷ ನನ್ನ ತಂದೆ ಇನ್ನೊಬ್ಬ ಸಂಬಂಧಿಕರ ಮನೆ ಸೇರಿಸಿದರು. ಅವರನ್ನು ತಣ್ಣನೆಯ ಹೊತ್ತಿನಲ್ಲಿ ನೆನೆಯಬೇಕು. ಇಂಟರ್‌ಮೀಡಿಯಟ್ ಪಾಸಾಯಿತು.

ನನ್ನ ಓದಿನ ಹಂಬಲ ಇಲ್ಲಿಗೆ ಮುಗಿಯಲಿಲ್ಲ. ಪದವಿಗಳಿಸಬೇಕೆಂಬ ಆಸೆ ಪ್ರಬಲವಾಯಿತು. ಈ ಹಿಂದೆ ಇದ್ದ ಸಂಬಂಧಿಕರ ಬೆಂಬಲವೂ ದೊರಕಲಿಲ್ಲ. ಓದನ್ನು ನಿಲ್ಲಿಸಿಬಿಡುವ ಮಾನಸಿಕ ಯಾತನೆಯಲ್ಲಿ ತೊಳಲಾಡಿದೆ. ಇದ್ದಕ್ಕಿದ್ದಂತೆ ನನ್ನ ತಂದೆ ಶ್ರೀ ಎನ್. ಮಲ್ಲಪ್ಪನವರ ಮನೆಯಲ್ಲಿ ಇರುತ್ತೀಯಾ ಅಂದರು. ನನಗೂ ಸ್ವಲ್ಪ ದಿಗಿಲು ಆಯಿತು. ಆಗ ಶ್ರೀ ಮಲ್ಲಪ್ಪನವರು (ವಿಶ್ವೇಶ್ವರಯ್ಯ ಯೋಜನೆ) ಗ್ರಾಮಾಂತರ ಕೈಗಾರಿಕೆಯ ಜಿಲ್ಲಾ ಅಧೀಕ್ಷಕರಾಗಿದ್ದರು. ನಿಷ್ಠಾವಂತ ಅಧಿಕಾರಿಗಳಾಗಿದ್ದರು. ಆದರೆ ಅವರ ಮನವೊಲಿಸುವುದು ಹೇಗೆ ?

ಅದೊಂದು ಸುದಿನವೆಂದೇ ಹೇಳಬೇಕು. ನನ್ನ ತಂದೆ ಈ ವಿಚಾರದಲ್ಲಿ ಶ್ರೀ ಮಲ್ಲಪ್ಪನವರನ್ನು ಕಾಣಲು ಹೋದರು. ತುಮಕೂರಿನ ಗಾಂಧಿನಗರದಲ್ಲಿ ಆಫೀಸ್, ಪಕ್ಕದಲ್ಲಿಯೇ ಮನೆ. ತಂದೆಯವರ ಆಣತಿಯಂತೆ ಅವರ ಜೊತೆ ನಾನು ಹೊರಟೆ. ಅವರ ಕಛೇರಿ ತಲುಪಿದ ಕೂಡಲೆ ಎದೆಯಲ್ಲಿ ಭಯಮಿಶ್ರಿತ ಭಾವನೆಗಳು ಓಡಾಡತೊಡಗಿದುವು. ಆಫೀಸಿನ ಸುತ್ತಮುತ್ತ ಜನ. ನನ್ನ ತಂದೆಯವರು ದೂರಸಂಬಂಧಿ ಯೆಂಬ ಸಲುಗೆಯಿಂದಲೇ ಮಲ್ಲಪ್ಪನವರ ಛೇಂಬರಿಗೆ ಹೋದರು. ನಾನು ಮೌನವಾಗಿ ಹಿಂಬಾಲಿಸಿದೆ. ಕಛೇರಿಯ ತುರ್ತು ಕೆಲಸಗಳಲ್ಲಿ ಮಗ್ನರಾಗಿದ್ದರಿಂದ ಸ್ವಲ್ಪ ಹೊತ್ತು ಮಾತನಾಡಲಾಗಲಿಲ್ಲ. ನಾನು ಸುಮ್ಮನೆ ಅವರನ್ನೇ ನೋಡುತ್ತಾ ಕುಳಿತೆ. ಮಾತು ಒರಟಾದರೂ ಮನದಲ್ಲಿ ಮರುಕ. ಮುಖದಲ್ಲಿ ಕರುಣೆ ಎದ್ದು ಕಾಣುತ್ತಿತ್ತು.

ಅವರೇ ಮಾತನಾಡಿಸಿದರು. "ಏನು ಬಂದದ್ದು ?" ನನ್ನ ತಂದೆಯ ಕಡೆ ನೋಡಿದರು. "ಇವನು ನನ್ನ ಮಗ. ಗಂಗಣ್ಣ ಅಂತ. ಇಂಟರ್ ಪ್ಯಾಸ್ ಮಾಡವ್ನೆ. ಮುಂದೆ ಓದಿಸ್ಬೇಕೂಂತ ಇದ್ದೀನಿ". ತಂದೆ ಯವರ ಉತ್ತರ. ನನ್ನಿಂದೇನಾಗಬೇಕು ? ಒಂದೆಲ್ಡು ವರ್ಸ ಊಟ ಹಾಕ್ಬೇಕು. ತಂದೆಯವರು ನಗಲಾಗದ ನಗೆಯೊಂದನ್ನು ತುಟಿಗೆ ಇಳಿಸಿಕೊಂಡು, ತಲೆಕೆರೆದುಕೊಂಡರು. ಆಗೋಲ್ಲಪ್ಪ. ಈಗಾಗಲೇ ನಾಲ್ಕೈದು ಜನಕ್ಕೆ ವಾರಾನ್ನ ಹಾಕ್ತಾ ಇದ್ದೀನಿ. ಖಾರವಾಗಿತ್ತು ಅವರ ಮಾತು. ನನಗೆ ಒಮ್ಮೆಲೆ ದಿಗಿಲು ಬಡಿದಂತಾಯಿತು. ತಂದೆಯವರು ಗಾಬರಿಗಣ್ಣುಗಳಿಂದ ಅವರನ್ನೇ ನೋಡಿದರು. ಕೊಂಚ ಹೊತ್ತು ಯಾರೂ ಮಾತನಾಡಲಿಲ್ಲ. ಎಲ್ಲರ ನಡುವೆಯೂ ಸ್ಮಶಾನ ಮೌನ.

ಹಾಗೆಯೇ ಸ್ವಲ್ಪ ಹೊತ್ತು ಕಳೆಯಿತು. ಶ್ರೀ ಮಲ್ಲಪ್ಪನವರು ಸಪ್ಪೆಮುಖ ಹಾಕಿಕೊಂಡು ಕುಳಿತಿದ್ದ ನನ್ನ ಕಡೆ ತೀಕ್ಷ್ಣವಾಗಿ ನೋಡಿದರು. ಕ್ಷಣ ದಿಟ್ಟಿಸಿ—ಸರಿ, ಹೋಗು, ಸೋಮವಾರದಿಂದ ತಂದು ಮನೆಗೆ

ಬಿಡು. ಅಷ್ಟು ಕಠಿಣವಾಗಿತ್ತು ಅವರ ಮಾತು. ಆದರೆ ಮಲ್ಲಿಗೆಯಷ್ಟು ಮೃದುವಾದ, ಪಾರಿಜಾತದಷ್ಟು ಕೋಮಲವಾದ ಮನಸ್ಸನ್ನು ಕಂಡು ನನ್ನ ಕೊರಳು ತುಂಬಿತ್ತು. ಹೃದಯ ತುಂಬಿದ ನಮಸ್ಕಾರ ಹೇಳಿ ಹೊರಟೆವು.

ಅವರ ಸಹಾಯದಲ್ಲಿ ದಿನಗಳು ಕಳೆಯತೊಡಗಿದುವು. ನಿತ್ಯವೂ ಮಕ್ಕಳ ಜೊತೆಯಲ್ಲಿಯೇ ಕುಳಿತು ಊಟ ಮಾಡುತ್ತಿದ್ದೆ. ಒಂದು ದಿನ ಅಡಿಗೆ ಭಟ್ಟ ತಂಗುಳ ಅನ್ನ ಬಡಿಸಿದ್ದ. ಆ ಸಮಯದಲ್ಲಿ ಶ್ರೀ ಮಲ್ಲಪ್ಪನವರು ಸ್ನಾನದ ಮನೆಗೆ ಹೋಗುತ್ತಿದ್ದವರು ನಮ್ಮ ಕಡೆ ನೋಡಿ ಸ್ವಲ್ಪ ಹೊತ್ತು ದಿಟ್ಟಿಸಿದರು. ಅನ್ನ ಹಳಸಿದೆ ಎಂದು ಅರಿವು ಮಾಡಿಕೊಂಡ ಶ್ರೀಯುತರು ಸ್ನಾನದ ಮನೆಗೆ ನಡೆಯುತ್ತ ಭಟ್ಟನನ್ನು ಕೂಗಿದರು. ಅವನು ಥರಥರನೆ ನಡುಗುತ್ತಾ ಅವರ ಬಳಿಗೆ ಓಡಿದ. ನಾವು ಯಾವುದೂ ಅರಿವಿಲ್ಲದೆ ಊಟ ಮಾಡುತ್ತಿದ್ದೆವು. ಅದೇ ವೇಳೆಯಲ್ಲಿ ಸ್ನಾನದ ಮನೆಯಿಂದ 'ಕುಂಯ್' ಎನ್ನುವ ಆಘಾತದ ಧ್ವನಿ ಕೇಳಿಸಿದಾಗ ನಾವು ಆ ಕಡೆ ತಿರುಗಿದೆವು. ಭಟ್ಟನ ಕುತ್ತಿಗೆಗೆ (ಹಿಂಭಾಗ) ಎರಡು ಬಾರಿಸಿದ್ದರು. ಅವನು ಸಪ್ಪೆಮೋರೆ ಹಾಕಿಕೊಂಡು ನಿಂತಿದ್ದ. ನೋಡೋ ಬೇಕೂಫ, ಓದುವ ಹುಡುಗನಿಗೆ ತಂಗುಳನ್ನ ಹಾಕತೀಯ, ಮೈಯಿ ಜಡ ಆಗೋಲ್ವ ಎಂದು ಗುಡುಗಿದರು. ನನಗಂತೂ ಕಣ್ಣಿನಲ್ಲಿ ಕೃತಜ್ಞತೆಯ ಹನಿಗಳು ಉರುಳುತ್ತಿದ್ದುವು. ನಾನು ಯಾವುದೋ ಪುಣ್ಯಮಾಡಿ ಈ ಮನೆಗೆ ಬಂದಿದ್ದೀನಿ ಎನ್ನಿಸಿತು. ಅಂದಿನಿಂದ ಭಟ್ಟ ತಪ್ಪಿ ಕೂಡ ತಂಗಳು ಬಡಿಸಲಿಲ್ಲ. ಈ ಘಟನೆ, ನಡೆದು ಅಪಾರ ದಿನಗಳಾದರೂ ಇಂದಿಗೂ ನನ್ನನ್ನು ಕೈಹಿಡಿದು ನಡೆಸುತ್ತಿರುವ ಧೀಶಕ್ತಿ.

ಇತ್ತೀಚೆಗೆ ಇನ್ನೊಂದು ಅಪರೂಪದ ಪ್ರಸಂಗ ನಡೆಯಿತು. ಕನಕದಾಸ ಜಯಂತಿಯಲ್ಲಿ ಭಾಷಣ ಮಾಡಲು ಸಮಿತಿಯವರು ನನ್ನನ್ನು ಆಹ್ವಾನಿಸಿದ್ದರು. ಆದರೆ ಸಮಿತಿಯ ಮಹನೀಯರುಗಳು ಜಯಂತಿಯ ದಿನಾಂಕವನ್ನು ನನಗೆ ಹೇಳದೆ, ಜಯಂತಿಯ ಹಿಂದಿನ ದಿನ ಸಮಾರಂಭದ ಆಹ್ವಾನ ಪತ್ರಿಕೆ ತಂದು ಮುಂದೆ ಇಟ್ಟಾಗ ನನಗೆ ಕೋಪ ಮುಗಿಲು ಮುಟ್ಟಿತ್ತು. ನನಗೆ ಮೊದಲೆ ದಿನಾಂಕವನ್ನು ತಿಳಿಸಬಾರದೇ ಎಂದು ಜಗಳವುಂಟುಮಾಡಿದೆ. ನಾನಿನ್ನೂ ಆಹ್ವಾನ ಪತ್ರಿಕೆಯನ್ನು ಓದಿರಲಿಲ್ಲ. ಸಾರ್, ಮಲ್ಲಪ್ಪನವರು ಬರ್‍ತಾ ಇದ್ದಾರೆ. ಅವರದೇ ಅಧ್ಯಕ್ಷತೆ. ನಮ್ಮ ತಪ್ಪನ್ನು ಮರೆತು ನೀವು ಬರಲೇಬೇಕು ಎಂದು ಹಠ ಹಿಡಿದರು. ಮಲ್ಲಪ್ಪನವರ ಹೆಸರು ಕೇಳುತ್ತಲೆ ನನಗೆ ಭಯ, ಗೌರವ ಮೂಡಿ ಬಂದುವು. ಈಗ ತಿರಸ್ಕರಿಸುವಂತಿಲ್ಲ, ಒಪ್ಪುವಂತಿಲ್ಲ. ಒಂದು ವಿಧವಾದ ತ್ರಿಶಂಕು ಸ್ಥಿತಿಗೆ ಸಿಕ್ಕಿಹಾಕಿಕೊಂಡೆ. ಸರಿ, ಬರುವುದಾಗಿ ಒಪ್ಪಿಕೊಂಡೆ.

ಸಮಾರಂಭದ ಭಾಷಣವೂ ಮುಗಿಯಿತು. ಅಧ್ಯಕ್ಷರ ಭಾಷಣ ಮಾಡುತ್ತಾ ಶ್ರೀ ಮಲ್ಲಪ್ಪನವರು ನಮ್ಮ ಗಂಗಣ್ಣ ಇಷ್ಟೊಂದು ಚೆನ್ನಾಗಿ ಭಾಷಣ ಮಾಡುತ್ತಾನೆ ಅಂತ ನಾನು ತಿಳಿದುಕೊಂಡಿರಲಿಲ್ಲ. 'ಹರಿಭಕ್ತಿಸಾರ' ಪದ್ಯಗಳನ್ನು ಹಾಡುವಾಗ ನನ್ನ ಹೃದಯ ತುಂಬಿತು ಎಂದು ಉದ್ಗಾರ ಎತ್ತಿದರು. ಆಗ ನನ್ನ ಹೃದಯ ಆನಂದದಿಂದ ತುಂಬಿ ಹೋಯಿತು. ಅಂದು ಊಟ ಕೊಟ್ಟ ವ್ಯಕ್ತಿಯೇ ಇಂದು ಇನ್ನೊಂದು ಶಕ್ತಿಯಾಗಿ ಪ್ರಶಸ್ತಿಯನ್ನು ತಂದುಕೊಟ್ಟಿತು ಎಂದುಕೊಂಡೆ.

ಹೀಗೆಯೇ ಹತ್ತು ಹಲವಾರು ಘಟನೆಗಳು ನನ್ನ ಜೀವನದಲ್ಲಿ ನಡೆದು ಹೋಗಿದೆ. ಶ್ರೀ ಮಲ್ಲಪ್ಪನವರು ಒಂದು ಮಹಾ ವೃಕ್ಷ. ಅದರ ನೆರಳಿನಲ್ಲಿ ಸಾವಿರಾರು ಜನ ಆಶ್ರಯ ಪಡೆದಿದ್ದಾರೆ, ಪಡೆಯುತ್ತ ಇದ್ದಾರೆ. ಇವರನ್ನು ಅಭಿನವ ಕನಕದಾಸ ಎಂದರೆ ತಪ್ಪಾಗಲಿಕ್ಕಿಲ್ಲ. ಕಾರಣ, ಆ ಕನಕದಾಸ ಎಲ್ಲವನ್ನೂ ದಾನಮಾಡಿದ. ಇವರು ಇಂದಿಗೂ ಬರಿಗೈಯಿಂದ ಬಂದವರನ್ನು ಸಲಹುತ್ತ, ದಾನಮಾಡುತ್ತಾ ಬಂದಿದ್ದಾರೆ. ನನ್ನ ಜೀವನದಲ್ಲಿ ಅನೇಕ ಅಪರೂಪದ ವ್ಯಕ್ತಿಗಳನ್ನು ಕಂಡಿದ್ದೇನೆ. ಅಂತಹ ಅಪರೂಪದ ವ್ಯಕ್ತಿಗಳಲ್ಲಿ ನಿಷ್ಠಾವಂತ, ನಿಸ್ವಾರ್ಥಪರ, ಸೇವಾಮನೋಭಾವದ, ಸರಳತೆಯ ಸಾಕಾರಮೂರ್ತಿ ಶ್ರೀ ಮಲ್ಲಪ್ಪನವರು ಎಂದರೆ ಅತಿಶಯೋಕ್ತಿಯಾಗಲಾರದು.

ಸಂಸ್ಕೃತಿ ಸಂಪನ್ನರು

ಪ್ರೊ|| ಎಚ್. ಜಿ. ಸಣ್ಣಗುಡ್ಡಯ್ಯ

ನಾನು ಶ್ರೀಮಾನ್ ಎನ್. ಮಲ್ಲಪ್ಪನವರನ್ನು ಮೊದಲು ನೋಡಿದ್ದು ಸುಮಾರು ೧೯೬೦-೬೧ ರಲ್ಲಿ. ಮೊದಲು ತುಮಕೂರಿನ ಕೃಷಿಕ ಕವಿ ಶ್ರೀ ವೀ. ಚಿಕ್ಕವೀರಯ್ಯನವರ ಪರಿಚಯವಾಯಿತು. ಅವರ ಜೊತೆಯಲ್ಲಿ ನಾನು ಒಂದೆರಡು ಸಲ ಶ್ರೀ ಕಾಳಿದಾಸ ವಿದ್ಯಾರ್ಥಿ ನಿಲಯದ ಬಳಿಗೆ ಹೋದ ನೆನಪಿದೆ. ಅಲ್ಲಿ, ಆಗ ಇನ್ನೂ ಬಿ.ಎಸ್ಸಿ. ವಿದ್ಯಾರ್ಥಿಯಾಗಿದ್ದು ನಿಲಯದ ಇತರ ವಿದ್ಯಾರ್ಥಿಗಳ ಊಟ ವಸತಿಗಳ ಮೇಲ್ವಿಚಾರಣೆಯನ್ನು ನೋಡಿಕೊಳ್ಳುವ ಕೆಲಸಕ್ಕೆ ನಿಯೋಜಿತರಾಗಿದ್ದ ಶ್ರೀ ಕೆ. ಸಿ. ರಾಮಯ್ಯನವರ ಪರಿಚಯವಾಯಿತು. ಇವರಿಬ್ಬರ ಮೂಲಕ ಕಾಳಿದಾಸ ವಿದ್ಯಾವರ್ಧಕ ಸಂಘದ ಅಧ್ಯಕ್ಷರಾಗಿದ್ದ ಶ್ರೀ ಮಲ್ಲಪ್ಪನವರ ಪರಿಚಯ ಆದದ್ದು. ಬಹುಶಃ ಸಂಘದ ಕಾರ್ಯದರ್ಶಿಯಾಗಿದ್ದ ಶ್ರೀ ಸಿರಿಯಪ್ಪ ಒಡೆಯರ್ ಅವರ ಪರಿಚಯ ಆದದ್ದೂ ಆಗಲೆ. ಆ ವೇಳೆಗೆ ಶ್ರೀ ಮಲ್ಲಪ್ಪನವರು ಸಹಾಯಕ ಕಮಿಷನರ್ ಹುದ್ದೆಯಿಂದ ನಿವೃತ್ತರಾಗಿದ್ದರು. ದಕ್ಷ ಅಧಿಕಾರಿಯಾಗಿದ್ದು ಗ್ರಾಮೀಣ ಜನರ, ನಿರ್ಗತಿಕರ ಕಲ್ಯಾಣಕ್ಕೆಂದು ಯೋಜಿತವಾಗಿದ್ದ ಕಾನೂನುಗಳ ಚೌಕಟ್ಟಿನೊಳಗೆ ಶಕ್ತಿಮೀರಿ ಒಳ್ಳೆಯ ಕೆಲಸಗಳನ್ನು ಮಾಡಿದವರೆಂದೂ ಪ್ರಾಮಾಣಿಕರೆಂದೂ ಜನ ಮಾತಾಡಿಕೊಳ್ಳುತ್ತಿದ್ದುದನ್ನು ಕೇಳಿದ್ದೆ. ನಮ್ಮ ಪ್ರದೇಶದಲ್ಲಿ ಹಾಗೆ ಕೇಳಿಬರುತ್ತಿದ್ದ ಇನ್ನೊಬ್ಬ ನಿವೃತ್ತ ಅಧಿಕಾರಿಯ ಹೆಸರೆಂದರೆ ಶ್ರೀ ತಿಪ್ಪೇರುದ್ರಯ್ಯನವರದು.

ಶ್ರೀ ಮಲ್ಲಪ್ಪನವರ ವ್ಯಕ್ತಿತ್ವ ತುಂಬ ಆಕರ್ಷಕವಾದದ್ದು. ನಾನು ಅವರನ್ನು ಕಂಡ ಈಚೆಗೆ ಅವರು ಯಾವಾಗಲೂ ಉಡುತ್ತಿದ್ದುದು ಶುಭ್ರ ಬಿಳಿಯ ಖಾದಿ ಧೋತ್ರ; ಯಾವುದಾದರೊಂದು ಮಾಸಲು ಕದಡುಬಣ್ಣದ ಖಾದಿ ಜುಬ್ಬ. ಒಮ್ಮೊಮ್ಮೆ ಹೆಗಲ ಮೇಲೆ ಮಡಿಚಿದ ಖಾದಿಯದೇ ವಸ್ತ್ರ ಇರುತ್ತಿದ್ದುದುಂಟು. ಈಗಂತೂ ಅವರಂತೆ ಶುಭ್ರವಾದ ಓರಣವಾದ ಧೋತ್ರವನ್ನು ಉಡುವ ಜನ ತುಮಕೂರು ನಗರದಲ್ಲಿ ಬಹು ವಿರಳ. ಆ ವಿರಳ ಪಂಕ್ತಿಯಲ್ಲಿ ಮೊದಲು ನೆನಪಿಗೆ ಬರುವುದು ಶ್ರೀ ಮಲ್ಲಪ್ಪನವರೆ. ಅತಿ ಎತ್ತರವಲ್ಲದ ಅತಿ ಸ್ಥೂಲವಲ್ಲದ ಆಕೃತಿ. ಕರ್ನಾಟಕದ ಎರೆನಾಡಿನ ಮನುಷ್ಯನೆಂದು ಎಲ್ಲಿಗೆ ಹೋದರೂ ಗುರುತಿಸಬಹುದಾದಂಥ ಕಪ್ಪು ಮೈ ಬಣ್ಣ. ಸದಾ ನಯವಾಗಿ ಕ್ಷೌರಮಾಡಿಕೊಂಡ ಮುಖ. ಮುಖದ ಮೇಲೆ ಅಕೃತಕವಾದ ನಿತ್ಯಕಾಂತಿ. ತಲೆಯಲ್ಲಿ ಇನ್ನೂ ಬಿಳಿಗೂದಲು ಕಾಣುತ್ತಿರಲಿಲ್ಲ. ಪಂಪಕವಿ ತನ್ನ ಬಣ್ಣನೆಗೆ ಬಳಸಿದ "ಕದಳೀ ಗರ್ಭ ಶ್ಯಾಮ, ಮೃದು ಕುಟಿಲ ಶಿರೋರುಹ, ಸರೋರುಹ ವದನ" ಎಂಬ ಮಾತುಗಳನ್ನು ಅಪ್ರಯತ್ನವಾಗಿ ನೆನಪಿಗೆ ತರುವಂಥ ನೋಟ. ಕರ್‌-ನಾಡಿನ ಇತಿಹಾಸಕ್ಕೆ ಒಪ್ಪುವಂಥ ವಿಶಿಷ್ಟವಾದ ಚಿತ್ರ. ಆದರೆ ಈ ಆಕೃತಿ ಮನಸ್ಸಿಗೆ ಮುಚ್ಚಾದ ಒಂದು ಪ್ರತಿಮೆಯಾಗಿ ನೆಲೆನಿಂತದ್ದು ಕೇವಲ ನೋಟದಿಂದಲ್ಲ; ಅದನ್ನು ದೃಢಪಡಿಸುತ್ತ ಹೋದ ಅವರ ಸ್ವಭಾವದ ಪರಿಚಯದಿಂದ.

ಅವರು ಬಳಸುವ ಗ್ರಾಮ್ಯವಾದ ಹಳೆಯ ಮಾತುಗಳು, ಎಳೆದೆಳೆದು ನುಡಿಯುವ ವಾಕ್ಯಗಳು, ಧ್ವನಿಯಲ್ಲಿ ಬರುವ ಪಲುಕು, ಕಾಕು, ಉದ್ಗಾರಗಳು ಇವೆಲ್ಲ ಮಲ್ಲಪ್ಪನವರನ್ನು ಬಲ್ಲವರು, ಅಭಿಮಾನಿಗಳು, ಅವರ ಉಸ್ತುವಾರಿಯಲ್ಲಿ ಕೆಲಸ ಮಾಡಿದವರು ಮತ್ತು ಮಲ್ಲಪ್ಪನವರನ್ನು ಅನುಕರಿಸುವವರು ಇವರೆಲ್ಲರ ಬಾಯಲ್ಲಿ ಪುನರುಕ್ತವಾದದ್ದನ್ನು ಬೇಕಾದಷ್ಟು ಸಲ ಕೇಳಿದ್ದೇನೆ. ಅವೆಲ್ಲ ಶ್ರೀಮಾನ್ ಮಲ್ಲಪ್ಪನವರ ಅನಂತರವೂ ಉಳಿಯುವಂತೆ ಕಾಣುತ್ತವೆ. ಮಲ್ಲಪ್ಪನವರು ಸಭೆ ಸಮಾರಂಭಗಳಲ್ಲಿ ಮಾತನಾಡಲು ಎದ್ದು

ನಿಂತರೆ ಸುಲಭಕ್ಕೆ ತೆಗೆಯುವವರಲ್ಲ ಎಂಬ ಭಯ ಆವರನ್ನು ಬಲ್ಲವರಿಗೆಲ್ಲ ಇದ್ದದ್ದೆ. ಅವರು ಹೇಳಬೇ ಬೇಕಾಗಿದ್ದ ವಿಷಯ ಅಷ್ಟೊಂದು. ವೃತ್ತಿ ಬಾಂಧವರು, ಜಾತಿ ಬಂಧುಗಳು, ವಿದ್ಯಾರ್ಥಿಗಳು ಮುಂತಾದ ಸಂಬಂಧಪಟ್ಟವರೆಲ್ಲರ ಮನಸ್ಸನ್ನು ಮುಟ್ಟಬೇಕೆಂಬ ಆಗ್ರಹ ಆ ವ್ಯಕ್ತಿಯದು. ಎಲ್ಲರ ಮನಸ್ಸನ್ನೂ ಒಲಿಸಿಕೊಳ್ಳಬೇಕೆಂಬ ಆಸೆಯೂ ಆ ಮಾತುಗಳ ಹಿಂದಿನ ಉದ್ದೇಶ. ಮಲ್ಲಪ್ಪನವರನ್ನು ಆಗಾಗ ಅನುಕರಣೆ ಮಾಡುವವರು ಕೂಡ ಮಲ್ಲಪ್ಪನವರ ಮಾತು ಮತ್ತು ಮಾತಿನ ರೀತಿಯನ್ನು ಬಹುವಾಗಿ ಸವಿದು ಅನುಭವಿಸುವುದನ್ನು ಕಂಡಿದ್ದೇನೆ.

ಮಲ್ಲಪ್ಪನವರ ಸ್ವಭಾವವನ್ನೂ ವ್ಯಕ್ತಿತ್ವವನ್ನೂ ಅರ್ಥಮಾಡಿಕೊಳ್ಳುವುದಕ್ಕೆ ಸಹಾಯಕವಾದ ಕೆಲವು ಘಟನೆಗಳನ್ನೂ ಪ್ರಸಂಗಗಳನ್ನೂ ಇಲ್ಲಿ ತಿಳಿಸಿದರೆ ಅಪಚಾರವಾಗದೆಂದು ಭಾವಿಸುತ್ತೇನೆ:

೧೯೭೧–೭೨ ರಲ್ಲಿ ತುಮಕೂರು ಸರ್ಕಾರಿ ಕಾಲೇಜಿನಲ್ಲಿ ಪರೀಕ್ಷೆಯ ಕೆಲಸದಲ್ಲಿ ನಿರತರಾಗಿದ್ದ ಅಧ್ಯಾಪಕರೊಬ್ಬರ ಮೇಲೆ ವಿದ್ಯಾರ್ಥಿಗಳು ಹಲ್ಲೆ ನಡೆಸಿದರು. ಅಧ್ಯಾಪಕರುಗಳಾದ ನಾವು ಪರೀಕ್ಷೆಗಳ ಕೆಲಸವನ್ನು ನಿರಾಕರಿಸಿ ಮುಷ್ಕರ ಹೂಡಬೇಕಾಯಿತು. ಮುಷ್ಕರ ನಿರತರಾದ ಅಧ್ಯಾಪಕರುಗಳನ್ನು ಪುನಃ ಕೆಲಸಕ್ಕೆ ಒಪ್ಪಿಸುವ ಸಲುವಾಗಿ ಕರೆಯಲಾಗಿದ್ದ ಕೆಲವು ಪ್ರಮುಖ ಅಧಿಕಾರಿಗಳು ಹಾಜರಿದ್ದ ಸಭೆಯಲ್ಲಿ ಮನಸ್ತಾಪಕ್ಕೆ ಒಳಗಾಗಿದ್ದ ಅಧ್ಯಾಪಕರುಗಳನ್ನು ಪ್ರತಿನಿಧಿಸಬೇಕಾಗಿ ಬಂದ ನಾನು ನಮ್ಮ ಇಲಾಖೆಯ ನಿರ್ದೇಶಕರ ಜೊತೆ ನಿಷ್ಠುರವಾದ ಮಾತುಗಳನ್ನು ವಿನಿಮಯ ಮಾಡಿಕೊಳ್ಳಬೇಕಾಯಿತು. ಅದೊಂದು ಜಗಳವೇ ಸರಿ. ಅಂದು ಅಲ್ಲಿದ್ದ ಹಲವರ ಅಭಿಪ್ರಾಯದಂತೆ ಆ ಪ್ರಕರಣದಿಂದ ನನಗೆ ಅಥವಾ ನಮ್ಮ ಸಹೋದ್ಯೋಗಿ ಅಧ್ಯಾಪಕರುಗಳಿಗೆ ಉಂಟಾದ ಮಾನಸಿಕ ಘಾಸಿಗಿಂತ ನಮ್ಮ ನಿರ್ದೇಶಕರಿಗೆ ಉಂಟಾದ ಘಾಸಿಯೇ ಹೆಚ್ಚು. ಅದು ತಮಗೆ ಆದ ದೊಡ್ಡ ಅಪಮಾನವೆಂದೇ ಅವರು ಭಾವಿಸಿದರೆಂಬುದು ಅನಂತರ ನಡೆದ ವಿದ್ಯಮಾನಗಳಿಂದ ನನಗೆ ಮನವರಿಕೆಯಾಯಿತು. ಈ ಘಟನೆಯ ಅನಂತರದ ಕೆಲವೇ ದಿವಸಗಳಲ್ಲಿ ರೀಡರ್‌ಗಳ ಹುದ್ದೆಗೆ ನೇರ ನೇಮಕಾತಿಗಾಗಿ ಅರ್ಜಿಗಳನ್ನು ಕರೆದರು. ಅರ್ಜಿ ಸಲ್ಲಿಸಿದವರಲ್ಲಿ ನಾನೂ ಒಬ್ಬನಾಗಿದ್ದೆ. ಆಯ್ಕೆ ಸಮಿತಿಯ ಸದಸ್ಯರುಗಳಲ್ಲಿ ನಮ್ಮ ನಿರ್ದೇಶಕರೂ ಒಬ್ಬರಾಗಿದ್ದರು. ಇದರಿಂದ ನನಗೆ ಒಂದು ದೊಡ್ಡ ಗಂಡಾಂತರವೇ ಒದಗಿದಂತೆ ಆಯಿತು. ನಮ್ಮ ವೃತ್ತಿಯಲ್ಲಿ ಅನುಭವದ ಮೇಲೆ ಬಡ್ತಿ ಬರುವಂಥದು ಒಟ್ಟು ಸೇವಾವಧಿಯಲ್ಲಿ ಒಮ್ಮೆ ಅಥವಾ ಒಮ್ಮೆಯೂ ಇಲ್ಲ. ಉಪನ್ಯಾಸಕರಾಗಿ ಇಲಾಖೆಯನ್ನು ಪ್ರವೇಶಿಸಿ ಉಪನ್ಯಾಸಕರಾಗಿಯೇ ನಿವೃತ್ತರಾಗುತ್ತಿದ್ದವರೇ ಹೆಚ್ಚು. ಹೀಗಿದ್ದಾಗ ಈ ನೇರ ನೇಮಕಾತಿಗೆ ಕೇಳಿದ್ದ ಅರ್ಹತೆಗಳೆಲ್ಲ ನನಗೆ ಇದ್ದುವಾದರೂ ಸಂದರ್ಶನದ ಅಗ್ನಿಪರೀಕ್ಷೆಯಲ್ಲಿ ನಾನು ತೇರ್ಗಡೆ ಹೊಂದಬಹುದೇ ಎಂಬ ಬಗ್ಗೆ ದೊಡ್ಡ ಆತಂಕವೇ ಉಂಟಾಗಿತ್ತು. ನಾನು ಸಿಕ್ಕಿಕೊಂಡಿದ್ದ ಈ ಬಿಕ್ಕಟ್ಟನ್ನು ನನ್ನ ಮಿತ್ರರ ಮೂಲಕ ಕೇಳಿ ತಿಳಿದಿದ್ದ ಶ್ರೀ ಮಲ್ಲಪ್ಪನವರು ನನಗೆ ಹೇಳಿ ಕಳುಹಿಸಿದರು. ನನಗೂ ನಮ್ಮ ನಿರ್ದೇಶಕರಿಗೂ ನಡುವೆ ಉಂಟಾದ ಈ ವೈಮನಸ್ಯದ ಪರಿಣಾಮದಿಂದ ನನ್ನನ್ನು ರಕ್ಷಿಸಬಲ್ಲ ಕೆಲವರು ನಿಸ್ಪೃಹ ಲೋಕಸೇವಾ ಆಯೋಗದ ಸದಸ್ಯರು ಶ್ರೀಮಾನ್ ಮಲ್ಲಪ್ಪನವರಿಗೆ ಗೊತ್ತಿದ್ದರು.

"ಅವರ ನಿರ್ದೇಶಕರು ನನ್ನೊಡನೆ ಎರಡು ಮೂರು ಸಲ ಮಾತನಾಡಿದ್ದಾರೆ. 'ಆತ ಏನೇ ಆದರೂ ಆಯ್ಕೆಯಾಗಕೂಡದು. ಅದು ನನ್ನ ಸ್ವಂತ ಪ್ರತಿಷ್ಠೆಯ ಪ್ರಶ್ನೆ' ಎಂದು ಹೇಳಿದ್ದಾರೆ" ಎಂಬ ಅರ್ಥದ ಮಾತುಗಳು ಆಯೋಗದ ಛೇರ್ಮನ್ನರಿಂದಲೇ ಬಂದಿದ್ದುವು. ಈ ಪರೀಕ್ಷೆಯಲ್ಲಿ ನಾನು ಗೆದ್ದು ಬಂದೆ. ನಮ್ಮ ನಿರ್ದೇಶಕರಿಗೆ ನಿರಾಶೆಯೂ ಆಯಿತು. ಈ ಪೇಚಿನಿಂದ ಶ್ರೀಮಾನ್ ಮಲ್ಲಪ್ಪನವರು ನನ್ನನ್ನು ಪಾರು ಮಾಡಲು ವಹಿಸಿದ ಪಾತ್ರದಲ್ಲಿ ಅವರು ಪ್ರಾಸಂಗಿಕವಾಗಿ ನನಗೆ ಹೇಳಿದ ತಿಳುವಳಿಕೆಯ ಮಾತುಗಳು ನನ್ನ ಮನಸ್ಸಿನಲ್ಲಿ ಅಳಿಯದೆ ಉಳಿದಿವೆ. "ಆಕೆ ಹೆಣ್ಣುಮಗಳು. ನಿಮ್ಮ ಇಲಾಖೆಯ ಮುಖ್ಯಸ್ಥೆ. ರಾಜ್ಯಮಟ್ಟದ ಅಧಿಕಾರಿ. ಅವರಷ್ಟೇ ಮುಖ್ಯರಾದ ಇತರೆ ಹಲವು ಜನ ಅಧಿಕಾರಿಗಳು ಮತ್ತು ಅಧ್ಯಾಪಕರುಗಳ ಎದುರು

ತನಗೆ ಮುಖಭಂಗವಾಗಿದೆ ಅಂದುಕೊಂಡಿದ್ದಾರೆ. ಆದ್ದರಿಂದ ನೀನು ಅವರನ್ನು ಕಂಡು ಆಕೆಯ ಮನಸ್ಸಿನ ಕಷಾಯು ಆರುವಂತೆ ಎರಡು ಮಾತಾಡಬೇಕು. ನಿಮಗೂ ಪಶ್ಚಾತ್ತಾಪವಾಗಿದೆ ಎಂಬುದನ್ನು ಅವರಿಗೆ ಮನವರಿಕೆಯಾಗುವಂತೆ ಮಾಡಿ" ಎಂಬುದೇ ಅವರು ಕೊಟ್ಟ ಹಿತವಚನ.

ರೀಡರ್ ಹುದ್ದೆಗೆ ನಾನು ಆಯ್ಕೆಯಾದದ್ದು ನಿಜವಾದರೂ ನೇಮಕಾತಿಯ ಆಜ್ಞೆ ಬರುವ ಮೊದಲೇ ನನ್ನನ್ನು ಬೇರೆ ಊರಿಗೆ ವರ್ಗಮಾಡಲಾಯಿತು. ನೇಮಕಾತಿಯ ಆಜ್ಞೆ ಬಂದಾಗ ಮತ್ತೊಮ್ಮೆ ನನ್ನನ್ನು ಇನ್ನೊಂದು ಊರಿಗೆ ವರ್ಗಮಾಡಲಾಯಿತು. ಈ ಕಿರುಕುಳದ ನಡುವೆ ನಾನು ನಿರ್ದೇಶಕರನ್ನು ಒಂದೆರಡು ಸಲ ಕಂಡು ಮಾತಾಡಿದೆ. ನಾನು ಪಶ್ಚಾತ್ತಾಪ ಪಟ್ಟಿದ್ದೇನೆ ಎಂಬರ್ಥದ ಮಾತುಗಳನ್ನು ಹೇಳಿಕೊಂಡೆ. ಆದರೆ ಅವರ ಮನಸ್ಸಿನಲ್ಲಿ ಉಳಿದಂಥ ಗಾಯ ಪೂರ್ತಿಯಾಗಿ ವಾಸಿಯಾಗಲಿಲ್ಲ ಎಂದು ಕಾಣುತ್ತದೆ. ನಿರ್ದೇಶಕರ ಪದವಿಯನ್ನು ಬಿಟ್ಟು ಅವರು ಕರ್ನಾಟಕ ವಿಶ್ವವಿದ್ಯಾಲಯದ ಉಪಕುಲಪತಿಯಾದರು. ಆ ಅಧಿಕಾರದಲ್ಲಿ ಇದ್ದಂತೆಯೇ ಗುಣವಾಗದ ಖಾಯಿಲೆಯೊಂದರಿಂದ ಅವರು ಅನಿರೀಕ್ಷಿತವಾಗಿ ಮರಣಹೊಂದಿದರು. ಇದು ನನ್ನ ಮನಸ್ಸಿನ ವಿಷಾದವನ್ನು ಹೆಚ್ಚಿಸಿತು. ನಾನು ವ್ಯಕ್ತಪಡಿಸಿದ ಪಶ್ಚಾತ್ತಾಪ ಕೇವಲ ಔಪಚಾರಿಕವಾಗಿ ಆಕೆಗೆ ಕಂಡಿರಬೇಕು, ಮತ್ತೊಮ್ಮೆ ಅವರನ್ನು ಕಾಣಬೇಕಾಗಿತ್ತು ಎಂದು ಇಂದಿಗೂ ಅನಿಸುತ್ತಿದೆ. ಶ್ರೀಮಾನ್ ಮಲ್ಲಪ್ಪನವರು ಹೇಳಿದ್ದ "ಆಕೆ ಹೆಣ್ಣುಮಗಳು, ಮನಸ್ಸಿಗೆ ನೋವು ಮಾಡಿಕೊಂಡಿದ್ದಾಳೆ.............. ...." ಎಂಬಿತ್ಯಾದಿ ಮಾತುಗಳು ನನ್ನನ್ನು ಇಂದಿಗೂ ಕೊರೆಯುತ್ತಿವೆ.

ಅನಂತರ ಶ್ರೀ ಮಲ್ಲಪ್ಪನವರು ರಾಜ್ಯದ ಕುರಿ ಸಾಕಣೆ ಮತ್ತು ಉಣ್ಣೆ ಅಭಿವೃದ್ಧಿ ಮಂಡಲಿಯ ಛೇರ್ಮನ್ ಆದರು. ಈ ಕಾಲಾವಧಿಯಲ್ಲಿ ನಾನು ಮಲ್ಲಪ್ಪನವರ ಜೊತೆಯಲ್ಲಿ ತುಮಕೂರಿನಿಂದ ಬೆಂಗಳೂರಿಗೆ ಒಂದೆರಡು ಸಲ ಓಡಾಡಿದ್ದುಂಟು. ಬೆಂಗಳೂರಿಗೆ ಎಷ್ಟು ಸಲ ಹೋದರೂ ರೈಲಿನಲ್ಲೇ ಹೋಗಿ ರೈಲಿನಲ್ಲೇ ಬರುವುದು ಶ್ರೀ ಮಲ್ಲಪ್ಪನವರ ಪರಿಪಾಠ. ಜೊತೆಯಲ್ಲಿ ಯಾವುದೇ ಕೆಲಸಕ್ಕೆ ಹೋಗುವವರೂ ರೈಲಿನಲ್ಲೇ ಹೋಗಬೇಕಾಗುತ್ತಿತ್ತು. ಹಾಗೆ ಅವರ ಜೊತೆ ಒಂದೆರಡು ಸಲ ಹೋದಾಗ ಬೆಂಗಳೂರು ನಗರದಲ್ಲಿ ಇಳಿದು ಕಾಫಿ ಸೇವನೆಗೆಂದು ಹೋಟೆಲ್ಲಿಗೆ ಹೋದದ್ದುಂಟು. ರಿಕ್ಷಾ ಹತ್ತಬೇಕಾಗಿ ಬಂದದ್ದುಂಟು. ಆದರೆ ಹೋಟೆಲ್ಲಿನ ಬಿಲ್ಲನ್ನಾಗಲೀ ರಿಕ್ಷಾದ ಬಾಡಿಗೆಯನ್ನಾಗಲೀ ಕೊಡುವುದಕ್ಕೆ ನನಗೆ ಒಂದು ಸಲವೂ ಅವಕಾಶ ಸಿಗಲಿಲ್ಲ. ನಾನು ಕೊಡುವುದಕ್ಕೆ ಪ್ರಯತ್ನಿಸಿದಾಗಲೆಲ್ಲಾ 'ನೋ' ಎಂದು ಖಂಡಿತವಾಗಿ ಹೇಳುತ್ತ ತಮ್ಮ ಜೇಬಿನಿಂದ ದುಡ್ಡು ತೆಗೆದುಕೊಟ್ಟರು. ನಾನು ಹುಡುಗ, ಅವರು ಹಿರಿಯರು. ನನ್ನ ಕೈಯಿಂದ ಹಣ ಕೊಡಿಸುವುದೇ ಎಂಬ ಆಗ್ರಹ ಅವರ ಮಾತಿನಲ್ಲಿ ಇರುತ್ತಿತ್ತು.

ವಿಧಾನ ಸೌಧದ ತಮ್ಮ ಕಛೇರಿಯಲ್ಲಿ ಅವರು ಪಾಲಿಸಿಕೊಂಡಿದ್ದ ಘನತೆ ತೋರಿಸುತ್ತಿದ್ದ ಸಲುಗೆ ಆತ್ಮೀಯತೆಗಳು ಮರೆಯುವಂಥವಲ್ಲ. ನನ್ನ ಬಂಧುವೊಬ್ಬರು ತುಮಕೂರಿನ ಕಾಳಿದಾಸ ಪ್ರೌಢಶಾಲೆಯಲ್ಲಿ ಕೆಲಸಕ್ಕೆ ಅರ್ಜಿ ಹಾಕಬೇಕಾಗಿ ಬಂತು. ಆಕೆ ಹೆಂಗಸು. ದೂರದ ಹಳ್ಳಿಯೊಂದರಲ್ಲಿ ಆಗಲೇ ಕೆಲಸದಲ್ಲಿದ್ದು ತುಮಕೂರು ನಗರದಿಂದ ಅಲ್ಲಿಗೆ ಓಡಾಡುವ ಹಿಂಸೆಯನ್ನು ಕೇಳಿ ತಿಳಿದ ಶ್ರೀಮಾನ್ ಮಲ್ಲಪ್ಪನವರು ಆಕೆಗೆ ಕೆಲಸ ಸಿಗುವಂತೆ ಏರ್ಪಾಟು ಮಾಡಿದರು. ಆದರೂ ಸ್ಥಳೀಯ ಸಂಸ್ಥೆಯೊಂದರ ಶಾಲೆಯಲ್ಲಿ ಶಿಕ್ಷಕಿಯಾಗಿ ಬಹುಮಟ್ಟಿನ ಸ್ವಾತಂತ್ರ್ಯವನ್ನು ಅನುಭವಿಸಿದ್ದ ಆಕೆ ಕಾಳಿದಾಸ ವಿದ್ಯಾಭಿವೃದ್ಧಿ ಸಂಸ್ಥೆಯ ಖಾಸಗಿ ಶಾಲೆಗೆ ಬಂದು ಸೇರುವುದಕ್ಕೆ ಏನೇನೋ ಸಂಕೋಚಗಳನ್ನು ಕಲ್ಪಿಸಿಕೊಂಡು ಅಲ್ಲಿಂದ ಬಿಟ್ಟು ಈ ಶಾಲೆಗೆ ಬರಲಿಲ್ಲ. ಆದರೆ ಮಲ್ಲಪ್ಪನವರು ಮಾತ್ರ ಕೆಲವು ವರ್ಷಗಳಾದ ಮೇಲೂ ಆಕೆ ಎಲ್ಲಿದ್ದಾರೆ, ಈಗಲೂ ಊರಿಂದೂರಿಗೆ ಬಸ್ಸಿನಲ್ಲಿ ಓಡಾಡುತ್ತಾರೆಯೆ ಎಂದು ಮುಂತಾಗಿ ಆಕೆಯ ಯೋಗಕ್ಷೇಮದ ವಿಚಾರವನ್ನು ಕೇಳುತ್ತಲೇ ಇದ್ದರು.

ಮಲ್ಲಪ್ಪನವರಿಗೆ ಕಾಲು ನಡಿಗೆಯೆಂದರೆ ಬಹಳ ಇಷ್ಟವಿದ್ದಂತೆ ಕಾಣುತ್ತದೆ. ನಿತ್ಯವೂ ಬೆಳಗಿನ ಹೊತ್ತು ದೀರ್ಘವಾದ ವಾಯು ವಿಹಾರಕ್ಕೆ ಹೋಗುವುದು, ತಮ್ಮ ಶಾಲೆ ಅಥವಾ ಹಾಸ್ಟೆಲ್ಲಿನಲ್ಲಿ ಯಾವುದಾದರೂ ಕಾರ್ಯಕ್ರಮ, ಸಭೆ ಇನ್ನು ವೇಳೆ ಇದ್ದರೆ ಮನೆಯಿಂದ ಹೊರಟು ನಡೆಯುತ್ತಲೇ ಅಲ್ಲಿಗೆ ತಲುಪುವುದು ಅವರ ಪದ್ಧತಿ. ತುಮಕೂರಿನ ಕೆ.ಆರ್. ಬಡಾವಣೆ ಮುಖ್ಯ ರಸ್ತೆಯಲ್ಲಿ ನಾನು ವಾಸಿಸುತ್ತಿದ್ದ ಬಾಡಿಗೆ ಮನೆ ಇದ್ದಿತು. ಅನಿರೀಕ್ಷಿತವಾಗಿ ಒಂದು ಸಲ ಅವರು ನಮ್ಮ ಮನೆಯೆದುರು ರಸ್ತೆಯಲ್ಲಿ ಹೋಗುತ್ತಿದ್ದರು. ನಾನು ಕಂಡು ಒಳಗೆ ಬರಬೇಕೆಂದು ಒತ್ತಾಯಿಸಿದೆ. ಅದೇ ವೇಳೆಯಲ್ಲಿ ಶ್ರೀಮಾನ್ ಮಲ್ಲಪ್ಪನವರಿಗೂ ಪರಿಚಿತರಾದ ನನ್ನ ಒಬ್ಬಿಬ್ಬರು ಸ್ನೇಹಿತರು ಮನೆಯಲ್ಲಿ ಕುಳಿತಿದ್ದರು. ನಾವೆಲ್ಲಾ ಏನೋ ಲಘು ಉಪಹಾರ ಮುಗಿಸಿ ಕಾಫಿ ಸೇವನೆಯಲ್ಲಿದ್ದೆವು. ಮಲ್ಲಪ್ಪನವರನ್ನು ಎಷ್ಟು ಒತ್ತಾಯ ಮಾಡಿದರೂ ತಿಂಡಿಯೂ ಬೇಡ ಕಾಫಿಯೂ ಬೇಡ ಎಂದರು. ಆರೋಗ್ಯದ ಬಗ್ಗೆ ಕಾಳಜಿಯಿಂದಿದ್ದು ಕಟ್ಟುನಿಟ್ಟಾಗಿ ಪಥ್ಯದ ಆಹಾರವನ್ನು ಸೇವಿಸುತ್ತಿದ್ದ ಅವರ ವಿಷಯ ನನಗೆ ತಿಳಿದಿದ್ದುದರಿಂದ ನಾನು ಅವರಿಗೆ ಏನೂ ಹಾನಿಯನ್ನು ಮಾಡಲಾರದೆಂದು ಒಂದು ಬಟ್ಟಲು ಮಜ್ಜಿಗೆಯನ್ನಾದರೂ ಕುಡಿಯಲು ಒತ್ತಾಯಿಸಿದೆ. ಅವರು ಆಗಬಹುದೆಂದರು. ನಾನೇ ಒಳಗಿನಿಂದ ಬಟ್ಟಲಿನಲ್ಲಿ ಮಜ್ಜಿಗೆಯನ್ನು ತಂದುಕೊಟ್ಟೆ. ಮಜ್ಜಿಗೆಯ ಬಟ್ಟಲನ್ನು ಕೈಯಲ್ಲಿ ಹಿಡಿದು ಅವರು ಕುಡಿಯಲು ಪ್ರಯತ್ನಿಸಿದರೋ ಅಥವಾ ಕುಡಿಯುವವರಂತೆ ನಟಿಸಿದರೋ ನಾನು ಹೇಳಲಾರೆ. ಆದರೆ ಮತ್ತೊಮ್ಮೆ ನಾನು ಏತಕ್ಕೋ ಒಳಗೆ ಎದ್ದುಹೋದಾಗ ಮಲ್ಲಪ್ಪನವರು ಕ್ಷಿಪ್ರವಾಗಿ ಮನೆಯ ಬಾಗಿಲಿನಿಂದ ಹೊರಕ್ಕೆ ಹೋಗಿ ಕಾಂಪೌಂಡಿನಲ್ಲಿ ನಿಂತದ್ದನ್ನು ಗಮನಿಸಿದೆ. ಪುನಃ ಅವರು ಒಳಗೆ ಬಂದು ಕೂತಾಗ ಬಟ್ಟಲಿನಲ್ಲಿದ್ದ ಮಜ್ಜಿಗೆ ಖಾಲಿಯಾಗಿತ್ತು. ಮಾತುಕತೆ ಮುಗಿದು ಅವರೆಲ್ಲ ಎದ್ದು ಹೋದ ಮೇಲೆ ನಾನು ಅಡಿಗೆ ಮನೆಗೆ ಹೋಗಿ ಪರೀಕ್ಷಿಸಿದೆ. ಆ ದಿನ ಮಜ್ಜಿಗೆಗೆ ರುಚಿ ಬರಲೆಂದು ನನ್ನ ಮನೆಯವರು ಸ್ವಲ್ಪ ಕೊತ್ತಂಬರಿ ಸೊಪ್ಪು, ಒಂದೆರಡು ಹಸುರು ಮೆಣಸಿನಕಾಯಿಗಳನ್ನು ಕಿವುಚಿ ಮಜ್ಜಿಗೆಗೆ ಬೆರೆಸಿದ್ದರೆಂದು ತಿಳಿಯಿತು. ನಾನು ಅನಂತರ ಲೆಕ್ಕ ಹಾಕಿದೆ, ಬಹುಶಃ ಮಲ್ಲಪ್ಪನವರು ಮಜ್ಜಿಗೆಯನ್ನು ಕುಡಿದಿರಲಿಲ್ಲ; ನನಗೆ ಕಾಣದಂತೆ ಹೊರಕ್ಕೆ ಹೋಗಿ ಬಟ್ಟಲಿನಲ್ಲಿದ್ದ ಮಜ್ಜಿಗೆಯನ್ನು ಕಾಂಪೌಂಡ್ ಅಂಚಿನ ಹುಲ್ಲಿನ ಮೇಲೆ ಚೆಲ್ಲಿದ್ದರು: ಪಥ್ಯದ ಕಟ್ಟುನಿಟ್ಟನ್ನೂ ನೆರೆಯುವರ ವಿಷಯದಲ್ಲಿ ತಮಗಿದ್ದ ಸೌಜನ್ಯವನ್ನೂ ಅವರು ಇಂತಹ ಸಂದಿಗ್ಧವಾದ ರೀತಿಯಲ್ಲಿ ಪಾಲಿಸಿದ್ದರು.

ಮೇಲೆ ಹೇಳಿದ ಪ್ರಸಂಗಗಳು ನಡೆದು ಹತ್ತಾರು ವರ್ಷಗಳು ಕಳೆದವು. ಈಚೆಗೆ ಏಳೆಂಟು ವರ್ಷ ನಾನು ಬೇರೆ ಊರುಗಳಲ್ಲಿ ಕಳೆದೆ. ಗೃಹಕೃತ್ಯದ ವಿಶೇಷ ಕಾರಣದಿಂದ ನನ್ನ ಸಂಸಾರ ತುಮಕೂರಿನಲ್ಲೇ ಉಳಿಯಬೇಕಾಯಿತು. ನಾನು ಬರುತ್ತ ಹೋಗುತ್ತ ಇದ್ದೆ. ಶ್ರೀ ಮಲ್ಲಪ್ಪನವರು ನಾನು ಬಂದಾಗ ಒಮ್ಮೊಮ್ಮೆ ನೋಡಲು ಸಿಗುತ್ತಿದ್ದರು. ಹೀಗೊಮ್ಮೆ ಅವರು ಸಿಕ್ಕಿದ್ದು ಬೆಂಗಳೂರಿನಿಂದ ತುಮಕೂರಿಗೆ ಬರುತ್ತಿದ್ದ ಷಟಲ್ ರೈಲುಗಾಡಿಯಲ್ಲಿ. ಅವರೇ ವರ್ಗಾವಣೆ ಮುಂತಾದ ಯೋಗಕ್ಷೇಮದ ಮಾತು ತೆಗೆದರು. ಆ ಸಂದರ್ಭಕ್ಕೆ ನಾನು ವಾಸವಾಗಿದ್ದ ಬಾಡಿಗೆ ಮನೆಗೆ ಹೋಗಿ ಆರೇಳು ವರ್ಷಗಳಾಗಿದ್ದುವು. ಮನೆಯ ಮಾಲಿಕರು ನನ್ನ ಹಳೆಯ ಸಹೋದ್ಯೋಗಿ ಸ್ನೇಹಿತರು. ಆದರೆ ಮನೆ ತೆರವು ಮಾಡುವ ವಿಷಯಕ್ಕೆ ಅವರು ನನ್ನ ಮೇಲೆ ಅಸೌಜನ್ಯದ ಒತ್ತಡ ತಂದಿದ್ದರು. ಅನುಕೂಲವಾದ ಇನ್ನೊಂದು ಮನೆ ನನಗೆ ದೊರೆಕುವವರೆಗೆ ಅವರು ಕಾಯಲು ಸಿದ್ಧರಿರಲಿಲ್ಲ. ಹೀಗಾಗಿ ಅವರು ನನ್ನ ಬಗ್ಗೆ ಇಲ್ಲಸಲ್ಲದ ಪ್ರಚಾರಕ್ಕೆ ಶುರುಮಾಡಿದ್ದರು. ನಾಲ್ಕಾರು ಜನ ಮಿತ್ರರ ಎದುರು ನನಗೆ ನೋವಾಗುವ ರೀತಿಯಲ್ಲಿ ನಡೆದುಕೊಂಡಿದ್ದರು. ನಾನೂ ಸ್ವಲ್ಪ ಹಠ ಮಾಡಿದೆ. ಮಲ್ಲಪ್ಪನವರು ಈ ವಿಷಯವನ್ನು ಬಂದು ಗುಟ್ಟಿನ ಮಾತೆಂಬಂತೆ ಅಂದು ರೈಲಿನಲ್ಲಿ ಪ್ರಸ್ತಾಪಿಸಿದರು. "ಏನಪ್ಪ ಸೀನಿನ್ನೂ ಅದೇ ಮನೆಯಲ್ಲಿದ್ದೀಯಾ ? ಯಾಕೆ, ಬೇರೆ ಮನೆ ಸಿಕ್ಕೋದಿಲ್ಲವೆ ? ಯಾವ ಮನೆಯಾದರೇನು ಬಾಡಿಗೆ ಕೊಡಲೇ ಬೇಕಲ್ಲ! ಬೇರೆ ಮನೆ ನೋಡಿ, ಅದನ್ನು ಬಿಟ್ಟು ಬಿಡಪ್ಪ" ಎಂದರು. ನನಗೆ ಸ್ವಲ್ಪ ಗಾಬರಿಯಾಯಿತು. ಬಹುಶಃ ನನ್ನ ಮನೆಯ ಮಾಲಿಕರು ಅವರಿಗೂ ದೂರು

ಹೇಳಿದ್ದಾರೆ ಅಂದುಕೊಂಡೆ. ಅವರೂ ಅಂದರು "ಹೂಂ, ಆತ ಇದೇ ರೈಲಿನಲ್ಲಿ ನನಗೆ ಸಿಕ್ಕಿದ್ದರು. ನನ್ಹತ್ರ ಹೇಳಿದರು. ಏನಾದರೂ ಮಾಡಿ ಆ ಮನೆ ಖಾಲಿಮಾಡಿ ಬಿಡು" ಎಂದರು. ನಾನು ಇನ್ನೂ ಆ ಮನೆ ಬಿಡದೆ ಇದ್ದುದಕ್ಕೆ ಕಾರಣವನ್ನೂ ನನ್ನ ಅವರ ನಡುವೆ ನಡೆದಿದ್ದ ವಿವಾದವನ್ನೂ ವಿವರವಾಗಿ ಹೇಳಿದೆ. ಎಲ್ಲ ಕೇಳಿದ ಮೇಲೆ ಅವರು ಹೇಳಿದರು, "ಇಲ್ಲ, ಅವರು ನನ್ಹತ್ರ ಹೇಳಲಿಲ್ಲ. ಆದರೆ ವಿಷಯ ತಿಳಿಯಿತು. ಅವರು ಒಂದು ದಿನ ರೈಲಿನಲ್ಲಿ ಯಾರೋ ನಿನ್ನ ಸಹೋದ್ಯೋಗಿ ಅಧ್ಯಾಪಕರ ಹತ್ತಿರ ಹೇಳ್ತಾ ಇದ್ದರು. ಅವರು ಹೇಳುತ್ತಿದ್ದ ರೀತಿ, ನಿಮ್ಮ ಬಗ್ಗೆ ಅವರ ಭಾವನೆಗಳು—ಎಲ್ಲ ಕೇಳಿ ಯಾಕೋ ಬೇಸರ ಆಯ್ತು. ಆಮೇಲೆ ನಿಮಗೆ ಹೇಳಬೇಕು ಅಂದುಕೊಂಡೆ. ಈಹೊತ್ತು ಸಿಕ್ಕಿದ್ರಿ, ಹೇಳಿದೆ" ಎಂದರು. ನನ್ನ ಖಾಸಗಿ ವಿಷಯದಲ್ಲಿ ಅವರು ಪ್ರವೇಶಿಸಿ ಕೊಟ್ಟ ಈ ಉಪದೇಶಕ್ಕೆ ನನಗೆ ಕೊಂಚವೂ ಬೇಸರವಾಗಲಿಲ್ಲ. ನನ್ನ ಹಠಮಾರಿತನವನ್ನು ತ್ಯಜಿಸಿ ಒಂದು ನಿರ್ಧಾರಕ್ಕೆ ಬರುವುದಕ್ಕೆ ಈ ಮಾತುಗಳು ಸಹಾಯಮಾಡಿ ಮನಸ್ಸಿಗೆ ಒಂದು ರೀತಿಯ ನೆಮ್ಮದಿಯೇ ಆಯಿತು. ಕೆಲವೇ ದಿನಗಳಲ್ಲಿ ನಾನು ಆ ಮನೆ ಖಾಲಿ ಮಾಡಿ ಬೇರೆ ಮನೆಗೆ ಹೋದೆ.

ಕಾಲುನಡಿಗೆ ಇವರಿಗೆ ಬಹಳ ಪ್ರಿಯವಾದದ್ದು ಎಂದಿದ್ದೆನಲ್ಲ. ಅವರ ಮನೆಗೆ ಸಮೀಪವೇ ಒಮ್ಮೆ ಅವರು ಪಾದಚಾರಿಗಳ ದಾರಿಯಲ್ಲಿ ನಡೆದು ಹೋಗುತ್ತಿದ್ದಾಗ ಇನ್ನೂ ನೆತ್ತಿ ಬಲಿಯದ ರಿಕ್ಷಾ ಹುಡುಗನೊಬ್ಬ ಯದ್ವಾತದ್ವಾ ರಿಕ್ಷಾ ಓಡಿಸುತ್ತ ಬಂದು ಮಗ್ಗುಲಲ್ಲಿದ್ದ ಕೊಳಾಯಿ ಕಂಬಕ್ಕೆ ಅಪ್ಪಳಿಸಿ ಮಲ್ಲಪ್ಪನವರಿಗೂ ಬಡಿದು ಬೀಳಿಸಿದ. ಕಾಲುಗಳಿಗೆ ಮಾಂಸಖಂಡಗಳಿಗೆ ತೀವ್ರವಾಗಿ ಏಟುಬಿದ್ದು ಅವರು ಆಸ್ಪತ್ರೆ ಸೇರಿದರು. ಮತ್ತೆ ಅವರು ಮೊದಲಿನ ಸ್ಥಿತಿಗೆ ಬಂದು ಓಡಾಡುವುದಕ್ಕೆ ತೊಡಗಲು ಸುಮಾರು ದಿನ ಬೇಕಾಯಿತು. ವಿಷಯ ತಿಳಿದ ಮೇಲೆ ನಾನೂ ಒಂದು ಸಲ ಅವರನ್ನು ಕಂಡೆ. ಇನ್ನೂ ನೋವನ್ನನುಭವಿಸುತ್ತ ಕಾಲಿಗೆ ಪಟ್ಟಿ ಕಟ್ಟಿಕೊಂಡಿದ್ದರಾದರೂ ಅವರು ನಮ್ಮೊಡನೆ ಮಾತನಾಡಿದ ರೀತಿಯಲ್ಲಿ ಅವರಿಗಾದ ಅಪಘಾತದ ತೀವ್ರತೆಯನ್ನು ಕಿರಿದುಮಾಡಿ ಹೇಳುವುದರಲ್ಲಿ ಅವರಿಗೆ ಕಾಳಜಿ ಇದ್ದಂತಿತ್ತೇ ಹೊರತು ತಮ್ಮ ಕಷ್ಟದ ಬಗೆಗಾಗಲಿ ಅನುಭವಿಸಿದ ನೋವಿನ ಬಗೆಗಾಗಲಿ ಅವರು ಉತ್ಪ್ರೇಕ್ಷೆ ಸ್ವಾನುಕಂಪೆ (self pity) ಗೀರಲಿಲ್ಲ. ಇಂತಹ ಸಹನಶೀಲ ವ್ಯಕ್ತಿ ತಮ್ಮ ಪತ್ನಿ ಅನಿರೀಕ್ಷಿತ ಕಾಯಿಲೆಗೆ ಒಳಗಾಗಿದ್ದಾರೆಂದೂ ಅದು ಗಂಡಾಂತರ ಕಾರಿಯಾದದ್ದೆಂದೂ ತಿಳಿದು ಬಂದಾಗ ಬಹಳವಾಗಿ ಹಚ್ಚಿಕೊಂಡಿದ್ದಾರೆಂದೂ ಎದೆಗುಂದಿದ್ದಾರೆಂದೂ ಅವರ ಸಮೀಪವರ್ತಿಗಳು ಹೇಳಿದರು. ಈ ವಿಷಯ ತಿಳಿದು ನಾನು ಅವರನ್ನು ಕಾಣುವಷ್ಟರಲ್ಲಿ ಬೆಂಗಳೂರಿಗೂ ತುಮಕೂರಿಗೂ ಸಾಕಷ್ಟು ಓಡಾಟ ಮುಗಿಸಿ ಶ್ರೀಮತಿ ರಂಗಮ್ಮನವರನ್ನು ಹಲವು ತರದ ಪರೀಕ್ಷೆಗೂ ಚಿಕಿತ್ಸೆಗೂ ಒಳಗುಮಾಡಲಾಗಿತ್ತು. ವೈದ್ಯರುಗಳೆನಿಸಿಕೊಂಡವರು ಭವಿಷ್ಯದ ಬಗೆಗೆ ಸಾಕಷ್ಟು ಭೀತಿಯನ್ನು ಬಿತ್ತಿದ್ದರು. ಎಂದೂ ಎಂದಿನಂತೆ ನನಗೆ ಕಾಫಿಯ ಉಪಚಾರ ಕುಶಲೋಪರಿ ನಡೆಯಿತಾದರೂ ಮಲ್ಲಪ್ಪ ನವರ ಮುಖದಲ್ಲಿ ನಿರ್ವಿಣ್ಣತೆ ಮನೆಮಾಡಿದಂತಿತ್ತು. ನಿವಾರಿಸಲಾಗದ್ದನ್ನು ಎದುರಿಸಬೇಕಲ್ಲವೆ? ನಮಗೆ ತಾನೆ ಇನ್ನೇನಾಗಬೇಕಾಗಿದೆ? ಮಕ್ಕಳು ಮೊಮ್ಮಕ್ಕಳುಗಳನ್ನೆಲ್ಲ ಕಂಡಾಗಿದೆ. ನಮ್ಮ ಕೈಲಾದ್ದನ್ನೆಲ್ಲ ಮಾಡಿ ಆಗಿದೆ ಎಂಬರ್ಥದ ಮಾತುಗಳನ್ನಾಡಿದರು. ನನಗಂತೂ ಪರಿಸ್ಥಿತಿ ಬಹಳ ಕೆಟ್ಟದ್ದೆನಿಸಿತು. 'ಸ್ವಲ್ಪ ಹೊರಗೆ ಹೋಗೋಣ ಬನ್ನಿ' ಎಂದು ನಾನು ಮಲ್ಲಪ್ಪನವರನ್ನು ಕರೆದೆ. ಮನೆಗೆ ಸಮೀಪದಲ್ಲಿದ್ದ ಸರ್ಕಾರಿ ಪ್ರೌಢಶಾಲೆಯ ಮೈದಾನದ ಒಂದು ಮೂಲೆಯಲ್ಲಿ ತಾರಿದ ಹುಲ್ಲಿನ ಮೇಲೆ ಕುಳಿತೆವು. ಅರ್ಧ ಮುಕ್ಕಾಲು ಗಂಟೆ ಕುಳಿತಿದ್ದೆವು. ನನ್ನ ಮಾತುಗಳನ್ನೆಲ್ಲ ಅವರು ಮಗುವಿನಂತೆ ಕುಳಿತು ಕೇಳಿದರು. ನಿರ್ಣಾಯಕವಾದ ಗಹನ ಸಂಗತಿಗಳನ್ನು ಕುರಿತು ಅವರೊಡನೆ ಮಾತನಾಡುವುದಕ್ಕೆ ನನಗೆ ಸಂಕೋಚವೇ ಇತ್ತು. ಆದರೂ ನಾನು ಸಾಕಷ್ಟು ಮಾತನಾಡಿದೆ. ಆಧುನಿಕ ವೈದ್ಯಪದ್ಧತಿಗೆ ಹೊರತಾದ ಕೆಲವು ಚಿಕಿತ್ಸೆಗಳೂ ಇವೆಯೆಂದೂ ದೇಹದಲ್ಲಿ ಪ್ರಾಣ ಇರುವವರೆಗೂ ಅವರ ಅಂತ್ಯದ ಬಗೆಗೆ ತೀರ್ಪು ಕೊಡಲು ವೈದ್ಯರುಗಳಿಗೆ ಹಕ್ಕಿಲ್ಲವೆಂದೂ ಅಲೋಪತಿ ಚಿಕಿತ್ಸೆ ಸರ್ವೋತ್ಕೃಷ್ಟವೇನೂ ಅಲ್ಲವೆಂದೂ ನಾನು ಹೇಳಿದೆ. ಅವರೂ ಅದನ್ನು ಒಪ್ಪಿದಂತೆ

ಕಂಡಿತು. ಮೂತ್ರಚಿಕಿತ್ಸೆ ಅಯಸ್ಕಾಂತ ಚಿಕಿತ್ಸೆ ಮುಂತಾದ ವಿಷಯಗಳೆಲ್ಲ ನಮ್ಮ ಮಾತಿನಲ್ಲಿ ಬಂದು ಹೋದುವು. 'ಏನು ಮಾಡುವುದು. ಮಕ್ಕಳೆಲ್ಲ ವಿದ್ಯಾವಂತರಾಗಿದ್ದಾರೆ. ಒಬ್ಬ ಮಗ ಸ್ವತಃ ಡಾಕ್ಟರು. ಅವರ ಪ್ರಯತ್ನಗಳನ್ನೆಲ್ಲ ನಾವು ತಳ್ಳಿಹಾಕುವುದಕ್ಕಾಗುವುದಿಲ್ಲ' ಎಂದು ಪೇಚಾಡಿಕೊಂಡರು. 'ನಮ್ಮ ಹೆಂಗಸರುಗಳು ವಿದ್ಯಾವಂತರಲ್ಲ' ಎಂದೂ ವಿಷಾದಪಟ್ಟುಕೊಂಡರು.

ಇದಾದ ಮೇಲೆ ಒಂದು ದಿವಸ ಬೆಳಗಿನ ಹೊತ್ತು ಶ್ರೀಮಾನ್ ಮಲ್ಲಪ್ಪನವರೂ ಶ್ರೀಮಾನ್ ಕೆ. ದಾಸಪ್ಪನವರೂ (ವಿದ್ಯಾರ್ಥಿನಿಲಯದ ಈಗಿನ ಕಾರ್ಯದರ್ಶಿ) ಬಹುಶಃ ನಿಲಯದಲ್ಲೇ ಯಾವುದೋ ಮೀಟಿಂಗ್ ಮುಗಿಸಿಕೊಂಡು ಸಿದ್ಧಗಂಗಾ ಬಡಾವಣೆಯ ಅಡ್ಡರಸ್ತೆಯಲ್ಲಿ ಬರುತ್ತಿದ್ದರು. ಎದುರಿನಿಂದ ಬರುತ್ತಿದ್ದ ನಾನು ಸೈಕಲ್‌ನಿಂದಿಳಿದು ನಿಂತೆ. ಶ್ರೀ ದಾಸಪ್ಪನವರನ್ನು 'ಆರೋಗ್ಯವಾಗಿದ್ದೀರಾ ?' ಎಂದೆ. 'ಎಲ್ಲೀ ಆರೋಗ್ಯ ವಯಸ್ಸಾದ ಮೇಲೆ !' ಎಂದು ಉದ್ಗಾರ ತೆಗೆದರು. ನಾನು ಮಲ್ಲಪ್ಪನವರ ಕಡೆ ತೋರಿಸಿ 'ನಿಮಗೆಂಥ ವಯಸ್ಸು ಪಕ್ಕದಲ್ಲಿರುವ ಮಲ್ಲಪ್ಪನವರಿಗೆ ಹೋಲಿಸಿದಾಗ ?' ಎಂದೆ. ಅದಕ್ಕೆ ಮಲ್ಲಪ್ಪನವರು 'ವಯಸ್ಸು ಎಲ್ಲರಿಗೂ ಆಗುತ್ತೆ. ಯಾರಿಗಾಗುವುದಿಲ್ಲ ? ಮಕ್ಕಳಿಗೂ ವಯಸ್ಸು ಆಗುತ್ತಲೇ ಇರುತ್ತೆ' ಅಂದರು. ಅದು ನಿರಂತರವಾದ ಕ್ರಿಯೆ, ಯಾರೂ ಅದರಿಂದ ಹೊರತಾದವರಲ್ಲ ಎಂಬ ತಾತ್ವಿಕ ನಿಲುವು ಅವರ ದನಿಯಲ್ಲಿ ನಿಚ್ಚಳವಾಗಿ ಕಾಣುತ್ತಿತ್ತು.

ಈ ಎಲ್ಲ ಮನಃಕ್ಲೇಶದ ಸಂದರ್ಭಗಳ ನಡುವೆಯೂ ಅವರು ಹಾಸ್ಟಲು, ಶಾಲೆ, ಸಂಘ, ಮಂಡಲ್ ಸಮಿತಿಯ ಜಾರಿಗಾಗಿ, ವೆಂಕಟಸ್ವಾಮಿ ಆಯೋಗದ ಎದುರು ಸಾಕ್ಷ್ಯಕ್ಕಾಗಿ ಓಡಾಡುತ್ತಿರುವವರು—ಈ ಎಲ್ಲ ಸಂಬಂಧವಾದ ಸಭೆಗಳಿಗೆ ಕಾರ್ಯಕ್ರಮಗಳಿಗೆ ತಪ್ಪದೆ ಹಾಜರಾಗುತ್ತಿರುತ್ತಾರೆ. ಯಾವುದೂ ಅವರಿಗೆ ಅಮುಖ್ಯವಲ್ಲ. ಯಾವುದೊಂದೇ ಮುಖ್ಯವೂ ಅಲ್ಲ. ಇತ್ತೀಚೆಗೆ ಅವರು ನನ್ನಲ್ಲಿ ತಮ್ಮ ವಿದ್ಯಾರ್ಥಿ-ನಿಲಯದ ವಿದ್ಯಾರ್ಥಿಗಳಿಗೆ ಪಠ್ಯೇತರ ವಿಷಯಗಳಲ್ಲಿ ಮಾರ್ಗದರ್ಶನ ಮಾಡುವಂಥ ವಾರ್ಡನ್ ಒಬ್ಬರನ್ನು (ಅಧ್ಯಾಪಕರುಗಳಲ್ಲೊಬ್ಬರನ್ನು) ಹುಡುಕಿ ಕೊಡಿ ಎಂದು ಎರಡು ಸಲ ಹೇಳಿದರು.

ಹಿಂದುಳಿದ ಜನಾಂಗ, ಜನ, ವಿದ್ಯಾರ್ಥಿಗಳು ಎಂದರೆ ಅವರಿಗೆ ಅನನ್ಯವಾದ ಪ್ರೇಮ. ತಮ್ಮ ವಿದ್ಯಾಭಿವೃದ್ಧಿ ಸಂಘದ ಮತ್ತು ಅದರ ಅಂಗ ಸಂಸ್ಥೆಗಳ ಕೆಲಸವೆಂದರೆ ಅವರಿಗೆ ದಣಿವೇ ಕಾಣುವುದಿಲ್ಲ. ಮಲ್ಲಪ್ಪನವರ ಗ್ರಾಮ್ಯತೆ, ಅವರ ಕೈಕೆಳಗೆ ಕೆಲಸ ಮಾಡಿದವರ, ಮಾಡುವಂಥವರ ಜೊತೆ ಅವರು ತೋರಿಸಿರಬಹುದಾದ ನಿಷ್ಠುರತೆ ಇವುಗಳ ಹಿಂದೆ ಬಹಳ ಅಪರೂಪವಾದ ಒಂದು ಅಂತಃಕರಣವನ್ನು ನಾವು ಗುರುತಿಸಬಹುದು. ಇಂತಹ ಚೇತನಗಳನ್ನೇ ಇರಬೇಕು 'ವಜ್ರಾದಪಿ ಕಠೋರಾಣಿ ಮೃದೂನಿ ಕುಸುಮಾದಪಿ' ಎಂದು ಕವಿಗಳು ವರ್ಣಿಸಿದ್ದು. ಕಠೋರತೆ ಮತ್ತು ಮೃದುತ್ವಗಳನ್ನು ಒಟ್ಟಿಗೆ ಬೆಸೆಯುವಂಥದು ಅಪಾರ ಅನುಭವ. ಹೃದಯದ ಪ್ರೇಮ ಮತ್ತು ಸತ್‌ಸಂಕಲ್ಪ. ಈ ಅಂತರಂಗದ ಗುಣಗಳ ದೀರ್ಘ ಕಾಲದ ಕೃಷಿಯಿಂದ ಬರುವಂಥದು ಉತ್ತಮ ನಡೆವಳಿಕೆ. ಈ ನಡೆ, ನಡೆವಳಿಕೆಗಳನ್ನೇ ಹಿಂದಿನವರು ಸಂಸ್ಕೃತಿ ಎಂದು ಕರೆದದ್ದು. ಈ ಅರ್ಥದಲ್ಲಿ ಶ್ರೀಮಾನ್ ಮಲ್ಲಪ್ಪನವರು ಒಬ್ಬ ಸಂಸ್ಕೃತಿ ಸಂಪನ್ನ ವ್ಯಕ್ತಿ.

ಪ್ರಾಮಾಣಿಕ ವ್ಯಕ್ತಿ

ಹೆಚ್. ಆರ್. ದಾಸೇಗೌಡ

ಈ ವರ್ಷದ ಆಗಸ್ಟ್ ತಿಂಗಳ ಮಧ್ಯಭಾಗದಲ್ಲಿ ಬೆಂಗಳೂರಿನ ಕುವೆಂಪು ಅಧ್ಯಯನ ಕೇಂದ್ರ ಹಾಗೂ ತುಮಕೂರಿನ ನಾಗರಿಕ ವೇದಿಕೆ ಏರ್ಪಡಿಸಿದ್ದ "ಕುವೆಂಪು–80", ಮೂರು ದಿನಗಳ ವಿಚಾರ ಸಂಕಿರಣಕ್ಕೆ ತುಮಕೂರಿಗೆ ಬಂದಿದ್ದೆ. ಮೊದಲೇ ನಿಯೋಜಿಸಲಾಗಿದ್ದಂತೆ ಈ ಸಂದರ್ಭದಲ್ಲಿ ಶ್ರೀ ಎನ್. ಮಲ್ಲಪ್ಪನವರನ್ನು ಕಾಣಬೇಕೆಂದು ಹೊರಟೆ. ಎರಡನೆಯ ದಿನದ ಗೋಷ್ಠಿಯ ನಡುವೆ ಬಿಡುವು ಮಾಡಿಕೊಂಡು ಸಂಜೆ ಮಿತ್ರ ಕೆ. ಆರ್. ಕಮಲೇಶರೊಡನೆ ಅವರ ಮನೆಗೆ ಹೋದೆ. ಮೊದಲೇ ನಮ್ಮ ಕಾರ್ಯಕ್ರಮ ತಿಳಿದುಕೊಂಡಿದ್ದ ಶ್ರೀಯುತರು ನಮ್ಮ ಬರುವಿಕೆಗಾಗಿ ಕಾದು ಕುಳಿತಿದ್ದರು. ಬೆಳಗಿನಿಂದ ತನ್ನ ಕಾಂತಿಯನ್ನೆಲ್ಲ ಚೆಲ್ಲಿದ ಸೂರ್ಯ ಆಗತಾನೆ ಮರೆಯಾಗಿದ್ದ. ಮುಬ್ಬುಗತ್ತಲು. ಬೀದಿ ದೀಪವೇನೊ ಸಾಕಷ್ಟು ಬೆಳಕು ಚೆಲ್ಲಿತ್ತು. ಮನೆಯ ಬಾಗಿಲಿಗೆ ಹೋದ ತಕ್ಷಣವೆ 'ಬನ್ನಿ ಗೌಡ್ರೆ........ಬನ್ನಿ ಇತ್ತ ಬನ್ನಿ........' ಎಂಬ ಕೃತ್ರಿಮವಿಲ್ಲದ ಆದರದ ಸ್ವಾಗತ ಬಯಸಿದ 80 ವರ್ಷಗಳ ವೃದ್ಧ ಶ್ರೀ ಮಲ್ಲಪ್ಪನವರು ಎದುರಾದರು. ದೊಡ್ಡ ವರಾಂಡದ ಮೂಲೆಯ ಕಾಟ್ ಒಂದರ ಮೇಲೆ ಯಾರೋ ಒಬ್ಬರು ಮಲಗಿದ್ದರು. ಮಲ್ಲಪ್ಪನವರೆ ಮಾತಿಗೆ ಮೊದಲಿಡುತ್ತಾ 'ನಿನ್ನೆ ಉದ್ಘಾಟನಾ ಸಮಾರಂಭಕ್ಕೆ ಬಂದಿದ್ದೆ. ಶ್ರೀಯುತ ಶಿವರುದ್ರಪ್ಪನವರು ಭರ್ಜರಿಯಾಗಿ ಮಾತನಾಡಿದರು.......ನೀವು ತುಂಬಾ ಒಳ್ಳೆ ಕೆಲಸ ಮಾಡ್ತಿದ್ದೀರಪ್ಪ' ಎಂದರು. ನಾನು ಸಂಕೋಚದಿಂದ 'ಇಲ್ಲ, ನನ್ನದೇನು ಮುಖ್ಯ ಅಲ್ಲ, ಇವು ಹೇಗೋ ನಡೀತವೆ ಮಿತ್ರರಿದ್ದಾರೆ' ಎಂದೆ. ಆಗ ಅದಕ್ಕವರು 'ಹೌದು, ಆದರೆ ಇವನ್ನೆಲ್ಲ ಸಂಘಟಿಸುವ ಶಕ್ತಿ ಬೇಕಲ್ಲ ಅದು ನಿಮ್ಮಲ್ಲಿದೆ' ಎಂದರು. ನನಗೆ ಮೊದಲೆ ಅವರ ಶ್ರೀಮತಿಯವರ ಕಾಯಿಲೆ ಕ್ಯಾನ್ಸರ್ ವಿಚಾರ ಗೊತ್ತಿತ್ತು. 'ನಿಮ್ಮ ಶ್ರೀಮತಿಯವರಿಗೆ ಈಗ ಹೇಗಿದೆ ಪರವಾಗಿಲ್ವೆ?' ಎಂದೆ. ಒಂದು ನಿಮಿಷ ಮಲ್ಲಪ್ಪನವರ ಉತ್ಸಾಹ ಪೂರ್ತಿ ಇಳಿದುಹೋದಂತೆ ಭಾಸವಾಯಿತು. ಯಾವುದೋ ಭಯಂಕರ ಅಂಧಕಾರ ಅವರನ್ನು ವ್ಯಾಪಿಸಿತು. ಮೌನ ಮುರಿದವರೇ 'ಏನೊ ಹಾಗೆ ಇದೆ, ಟ್ಯೂಬ್‌ನಲ್ಲಿ ಗಂಜಿ, ಹಾಲು ಹಾಕುತ್ತಿದ್ದೇವೆ—ದಿನ ನೂಕಬೇಕಲ್ಲ' ಎಂದರು. ನಾನು ಒಂದೆರಡು ಸಾಂತ್ವನ ನುಡಿಗಳನ್ನು ಆಡಲು ಹೋದರೆ 'ಕರ್ಮ ಸವೀಬೇಕಲ್ಲ ......ಏನು ಮಾಡಕಾಗ್ತದೆ.......' ಅಂತ ವೇದಾಂತ ಮಾತುಗಳನ್ನು ತಾವೇ ಆಡಿ ನನ್ನ ಬಾಯಿ ಮುಚ್ಚಿಸಿದರು. ಆಮೇಲೆ ಒಂದು ಕ್ಷಣ ತಡೆದು 'ನೀವು ಪಾವಗಡದ ಕಡೆಯವರಂತೆ' ಅಂದರು. ನಮ್ಮೂರು, ನಮ್ಮ ಕುಟುಂಬ ಹಾಗೂ ಬಳಗದ ವಿವರಗಳನ್ನು ನೀಡಿದೆ. 'ಓ........ಮಂಗಳವಾಡದ ಈರೇಗೌಡರ ಕಡೆಯವರೋ........ಅವರೊ ತುಂಬಾ ದೊಡ್ಡವರು ಬಿಡಿ, ಭರ್ಜರಿ ಕುಳ........ತುಂಬಾ ಸಭ್ಯಸ್ಥರು' ಎಂದರು. 'ನಾನು ಪಾವಗಡದಲ್ಲಿ 2 ವರ್ಷ ಅಮಲ್ದಾರನಾಗಿದ್ದೆ. ನಿಮ್ಮವರ ಮನೆಗಳಿಗೆಲ್ಲಾ ಬೇಕಾದಷ್ಟು ದಫ ಹೋಗಿದ್ದೀನಿ. ನಿಮ್ಮವರ ಆದರ ಆತಿಥ್ಯಗಳನ್ನು ಸವಿದಿದ್ದೇನೆ. ತುಂಬಾ ಒಳ್ಳೆಯ ಜನ' ಎನ್ನುತ್ತಾ ಮಲ್ಲಪ್ಪನವರು ನಮ್ಮೂರುಗಳ ಮತ್ತು ನಮ್ಮ ಹಿರಿಯರ ಹಳೆಯ ನೆನಪುಗಳನ್ನು ವಿವರವಾಗಿ ಮಾಡಿಕೊಟ್ಟರು. ಅವರ ಈ ವಿವರಣೆಗಳನ್ನು ಕೇಳುತ್ತಿದ್ದ ನನಗೆ ಅವರು ತೀರ ಆತ್ಮೀಯರಾದಂತೆ ಭಾಸವಾಗತೊಡಗಿತು. ಆಗ ನಾನು 'ಇಲ್ಲ ನಿಮ್ಮ ಹೆಸರನ್ನು ಮತ್ತು ನಿಮ್ಮ ಕಾರ್ಯದಕ್ಷತೆಯನ್ನು ಹಿರಿಯರಾದ ಈರೇಗೌಡರೂ ಹಾಗೂ ಊರಿನವರಿಂದ ಸಾಕಷ್ಟು ಕೇಳಿದ್ದೇನೆ. ನಿಮ್ಮ ಕಾರ್ಯಕ್ಷೇತ್ರ ನನಗೆ ಬಹಳ ಪರಿಚಿತವಾಗಿದೆ' ಎಂದೆ. ಮಲ್ಲಪ್ಪನೋರು ಅಷ್ಟೇ ಉತ್ಸಾಹದಿಂದ 'ಆಗ

ನಿಮ್ದು ಬಿಟ್ಟು ಕುಟುಂಬ. ಏನು ಕರಾವು.......ಏನು ಬೇಸಾಯ........ಆಗಿನ ಈರೇಗೌಡರ ಯಜಮಾನಿಕೆ' ಎನ್ನುತ್ತಿದ್ದಾಗ ನಾನು ಮಧ್ಯದಲ್ಲಿ ಬಾಯ್ಹಾಕಿ 'ಈಗಲೂ ಅಷ್ಟೆ.......ಅವರದೆ ಯಜಮಾನಿಕೆ' ಎಂದೆ. ಆಗ ಮಲ್ಲಪ್ಪನವರಿಗೆ ಎಂತಹ ಸಂತೋಷ ಆಯಿತು ಅಂತೀರಾ. ನಮ್ಮವರು ನಮ್ಮ ಹಳ್ಳೀ ಜನ ಇನ್ನೂ ಕೂಡ ಒಂದಾಗಿದ್ದಾರಲ್ಲ, ಸಹಬಾಳ್ವೆ ನಡೆಸುತ್ತಿದ್ದಾರಲ್ಲ ಎಂಬ ಸಮಾಧಾನ ಅವರದಾಗಿತ್ತು.

ನನ್ನ ಮಿತ್ರರ ಕಡೆ ಕೈತೋರಿಸುತ್ತಾ 'ಈ ವಯ್ಯನಿಗೆ ಹೇಳುತ್ತಿದ್ದೇನೆ........ಒಂದು ಸಾರಿ ಬೆಂಗಳೂರಿಗೆ ಹೋಗೋಣ ನಿಮ್ಮನ್ನ ನೋಡೋಣ ಅಂತ........ಇಲ್ಲಿಗೆ ಬರ್ತಾರೆ ಅಂತನೆ ಕಾಲ ನೂಕಿಬಿಟ್ಟ'........ಎಂದರು. ನಾನು ಎಲ್ಲಾದರೂ ಉಂಟೆ. ದೊಡ್ಡವರ ಹತ್ತಿರ ನಾನೆ ಮೊದಲು ಹೋಗಬೇಕು ಅಂತ ಅಂದ್ಕೊಂಡೆ, ಅದಕ್ಕೆ ಸಮಯ ಈಗ ಒದಗಿಬಂತು' ಎಂದೆ. 'ಹೋಗ್ಲಿ ಬಿಡಿ ಗೌಡ್ರೆ, ಎಲ್ಲಕ್ಕೂ ಕಾಲ ಕೂಡಿ ಬರಬೇಕು' ಎನ್ನುತ್ತಾ ಮಲ್ಲಪ್ಪನವರು, 'ನಾನು ಯೋಚಿಸಿದ ವಿಚಾರನ ಒಂದನ್ನ ಕಮಲೇಶ ನಿಮಗೆ ಹೇಳಿರಬೇಕು' ಎಂದರು. 'ಹೂಂ ಹೇಳಿದ್ದಾನೆ ಅತ. ಹಿಂದುಳಿದವರ ಬಗ್ಗೆ ಏನಾದರೂ ಕನ್‌ಸ್ಟ್ರಕ್ಟೀವ್ ಆಗಿ ಕೆಲಸ ಮಾಡಬೇಕೆಂಬ ನಿಮ್ಮ ಯೋಜನೆ ನಿಜಕ್ಕೂ ಶ್ಲಾಘನೀಯ. ಆದರೆ ಇಂತಹವೆಲ್ಲ ಬೇಗ ತಮ್ಮ ಪಥದಿಂದ ಅತ್ತ ಸರಿತವೆ. ಹಾವನೂರು ಆಯೋಗದಲ್ಲಿ ಕಾಣಿಸಲಾಗಿರುವ ಕೆಲವು ಪಂಗಡಗಳ ಜಾತಕನ ತಿಪ್ಪಗೊಂಡನ ಹಳ್ಳಿ ಟಿ.ಬಿ.ಯಲ್ಲಿ ಬರೆಯಲಾಯಿತು ಎಂದು ತಿಳಿದಿದೆ. ಸುಮ್ಮನೆ ರಾಜಕೀಯ ಕಾರಣಕ್ಕಾಗಿ ಇಂತಹ ಆಯೋಗಗಳು ನೇಮಕ ಆಗ್ತವೆ. ಸಂತೆಗೆ ಮೂರು ಮೊಳ ಅಂತ ತರಾತುರಿಯಲ್ಲಿ ವರದಿಗಳು ಸಿದ್ಧವಾಗುತ್ತವೆ. ಯಾವುದೇ ವೈಜ್ಞಾನಿಕ ಹಾಗೂ ವಿಚಾರಾತ್ಮಕ ಸಿದ್ಧಾಂತದ ನೆಲೆಗಟ್ಟು ಈ ಆಯೋಗಗಳ ವರದಿಗಳಿಗೆ ಇರೋದಿಲ್ಲ. ಹೀಗಾಗಿ ಹಿಂದುಳಿದವರ ಬಗ್ಗೆ ಏನಾದರೂ ಮಾಡೋದು ಅಂದರೆ ಬೇರೆಯೋರು ಸಂಶಯ ದೃಷ್ಟಿಯಿಂದ ನೋಡೋ ಹಾಗಾಗಿದೆ' ಎಂದೆ. ನನ್ನ ಸ್ವಭಾವಕ್ಕೆ ವಿರುದ್ಧವಾಗಿ ಮಲ್ಲಪ್ಪನವರ ಬಳಿ ಭಾವನಾತ್ಮಕವಾಗಿ ಮಾತನಾಡಿದೆ. ಪ್ರಾಯಶಃ ಅವರ ನಿಷ್ಕಳಂಕ ವ್ಯಕ್ತಿತ್ವ ನನ್ನ ಬಿಚ್ಚು ನುಡಿಗೆ ಕಾರಣವಾಗಿರಬೇಕು. ಮಲ್ಲಪ್ಪನವರಿಗೆ ಇದೊಂದು ರೀತಿಯ ಸಂತೃಪ್ತಿ ಕೊಟ್ಟಿರಬೇಕು. ಅವರು 'ಹೌದು ಗೌಡ್ರೆ, ನಾನು ಕೂಡಾ ಇದನ್ನೆ ಹೇಳ್ತಿದ್ದೇನೆ. ನಮ್ಮವರು ಹಿಂದುಳಿದಿದ್ದಾರೆ ಅಂತೀನಿ. ಸರ್ಕಾರಿ ಅಂಕಿ ಅಂಶಗಳನ್ನು ಉಲ್ಲೇಖಿಸುತ್ತೇನೆ ಹೊರತು ಅವನ್ನು ತಾಳೆ ನೋಡಿ ನಿರ್ಧರಿಸುವ ಪರ್ಯಾಯ ಮಾರ್ಗ ಕಾಣುತ್ತಿಲ್ಲ' ಎಂದರು. ಆಮೇಲೆ ನಾನು 'ಉತ್ತರ ಭಾರತದಲ್ಲಿ ಜಾಟ್ ಜನಾಂಗದವರು ಇಂತಹ ಒಂದು ಅಧ್ಯಯನ–ಸಂಶೋಧನಾ ಸಂಸ್ಥೆಯನ್ನು ನಿರ್ಮಿಸಿಕೊಂಡಿದ್ದಾರೆ. ಆ ಜನಾಂಗದಲ್ಲಿ ಒಂದು ಮಗು ಹುಟ್ಟಲಿ, ಒಬ್ಬ ಅಧಿಕಾರಿ ಒಂದು ಇಲಾಖೆಯಿಂದ ಮತ್ತೊಂದು ಇಲಾಖೆಗೆ ವರ್ಗವಾಗಿ ಹೋಗ್ಲಿ ಅದು ಆ ಸಂಸ್ಥೆಯ ಕಡತಗಳಲ್ಲಿ ದಾಖಲೆ ಆಗ್ತದೆ. ಆ ಜನಾಂಗಕ್ಕೆ ಸಂಬಂಧಪಟ್ಟ ಯಾವುದೇ ಮಾಹಿತಿ ಬೇಕಾದರೂ ಅಲ್ಲಿ ಸಿಗ್ತದೆ' ಎಂದೆ. ಮಲ್ಲಪ್ಪನವರು ಖುಷಿಯಿಂದ 'ನೋಡಿ ಅಂತಹದು ಇಲ್ಲಿ ಕೂಡಾ ಆಗಬೇಕು, ನಿಮ್ಮಂಥವರು ಮುಂದೆ ಬರಬೇಕು' ಎಂದರು. ನಾನು 'ಏನಬೇಕಾದರೂ ಮಾಡೋಣ ನಿಮ್ಮ ನಾಯಕತ್ವದಲ್ಲಿ ಇವೆಲ್ಲಾ ಆಗ್ತದೆ ಬಿಡಿ' ಎಂದೆ. ಅನಂತರ 'ನಾನು ಬರ್ತೀನಿ' ಅಂತೆದ್ದೆ. ಮಲ್ಲಪ್ಪನೋರು ಸಂಭ್ರಮಾನಂದಗಳಿಂದಿದ್ದು 'ದೇವರು ನಿಮ್ಮನ್ನು ಚೆನ್ನಾಗಿಟ್ಟಿರಲಿ.......ಒಳ್ಳೇದು ಹೋಗ್ಬನ್ನಿ' ಎಂದರು. ಮುಖ ಪರಿಚಯವೇನೋ ಇಂದೇ ಆದದ್ದು. ಆದರೆ ಅಂತರಂಗಗಳ ಪರಿಚಯವಾಗಿ ಎಷ್ಟೋ ವರ್ಷಗಳು ಕಳೆದಿವೆ ಎಂಬ ಭಾವನೆ ಮೂಡಿತ್ತು ನನ್ನಲ್ಲಿ. ಅವರ ಹಾರೈಕೆಯಲ್ಲಿ ಎಂತಹ ಸಾತ್ವಿಕ ಮಿಡಿತವಿದೆ, ಅವರ ಮಾತಿನಲ್ಲಿ ಎಂತಹ ಮೃದುತ್ವವಿದೆ ಎಂದು ಮನಸ್ಸು ಆಲೋಚಿಸುತ್ತಿತ್ತು.

ಮಲ್ಲಪ್ಪನವರು ಪಾವಗಡ ತಾಲ್ಲೂಕಿನ ಅಮಲ್ದಾರರಾಗಿದ್ದ ಕಾಲನ ಆ ಸುತ್ತಲಿನ ಜನವೆಲ್ಲಾ ಈಗಲೂ ಹೊಗಳುತ್ತಾರೆ. ಏನೋ ಆಗ ತುಮಕೂರು ಜಿಲ್ಲೆಗೆ ಒಳ್ಳೆಯ ದೆಸೆ ಇದ್ದಿರಬೇಕು. ಆಗ ಅದು

ತಿಪ್ಪೇರುದ್ರಯ್ಯನವರಂತಹ ಡಿ.ಸಿ. ಮತ್ತು ಮಲ್ಲಪ್ಪನೋರಂತಹ ಅಮಲ್ದಾರರನ್ನು ಪಡೆದುಕೊಂಡಿತ್ತು. ಆಗಿನ ಕಾಲದಲ್ಲಿ ನಮ್ಮ ಪೂರ್ವೀಕರದೊಂದು ಸಂಪ್ರದಾಯವಿತ್ತು. ಹೊಸದಾಗಿ ಯಾರೆ ಅಮಲ್ದಾರ ಬರಲಿ ಒಂದು ಒಳ್ಳೆಯ ಕರೆಯುವ ಹಸೂನ ಅವರ ಮನೆಗೆ ಹೊಡೆದು ಕಳುಹಿಸೋದು. ಅವರು ವರ್ಗವಾದ ನಂತರ ಅದನ್ನು ಹಿಂದಕ್ಕೆ ಪಡೆದು ಹೊಸಬರಿಗೆ ಮತ್ತೊಂದು ಕಳುಹಿಸೋದು. ನಮ್ಮ ತಾಲ್ಲೂಕಿನಲ್ಲಿರೋ ತನಕ ಅವರ ಮಕ್ಕಳು ಮರಿಗಳು ಸಂತೋಷದಿಂದ ಹಾಲು ಕುಡಿಯಲೆಂಬುದೆ ಈ ಸಂಪ್ರದಾಯದ ಹಿನ್ನೆಲೆ. ಸಾಮಾನ್ಯವಾಗಿ ರೆವಿನ್ಯೂ ಇಲಾಖೆಯಲ್ಲಿರುವ ಅಧಿಕಾರಿಗಳಿಗೆ ಇದೇನು ಹೊಸದಲ್ಲ. ಅವರೇಕಾಯಿ, ಹುರುಳಿಕಾಯಿ, ತೆಂಗು, ಬಾಳೆ, ಅಡಕೆಗಳನ್ನು ಶಾನುಭೋಗರಿಂದು ಹಿಡಿದು ಅಮಲ್ದಾರರವರೆಗೂ ಯಾರೂ ಇವನ್ನ ಕೊಳ್ಳುತ್ತಿರಲಿಲ್ಲ. ಅವರುಗಳೇನು 'ನಮಗೆ ಇದನ್ನು ಕೊಡಿ' ಅಂತ ಕೇಳದೆ ಇರಬಹುದು. ಸ್ವತಃ ಉತ್ತು, ಬಿತ್ತು ಬೆಳೆದ ರೈತ ಇದನ್ನ ಹಂಚಿ ಮತ್ತೊಬ್ಬರು ತಿಂದು ಖುಷಿ ಪಡೋದನ್ನ ನೋಡಿ ತನ್ನ ಶ್ರಮನ ಮರೆಯುತ್ತಾನೆ. ರೈತನ ಈ ಔದಾರ್ಯದ ಮೇಲೆ ತಾನೆ ಇಡೀ ನಮ್ಮ ನಾಗರಿಕತೆ—ಸಂಸ್ಕೃತಿ ಎಲ್ಲಾ ನಿಂತಿರೋದು. ಹಾಗೆಯೇ ಹೊಸದಾಗಿ ಅಮಲ್ದಾರರಾಗಿ ಬಂದ ಮಲ್ಲಪ್ಪನವರಿಗೂ ಈರೇಗೌಡರು ಒಂದು ಕರೆಯುವ ಹಸೂನ ಹೊಡೆದು ಕಳುಹಿಸಿದ್ದರಂತೆ. ಆಳು ಅವರ ಮನೆ ಬಳಿ ಹಸು ಹೊಡೆದುಕೊಂಡು ಹೋದ್ರೆ, ಮಲ್ಲಪ್ಪನವರು ವಿಷಯ ತಿಳಿದು 'ನಾನು ಈರೇಗೌಡರಿಗೆ ಹೇಳ್ತೀನೆ ನೀನು ಹಿಂದಕ್ಕೆ ಹೊಡ್ಕೊಂಡು ಹೋಗು' ಅಂದು ಹಿಂದಕ್ಕೆ ಅಟ್ಟಿಬಿಟ್ಟಿದ್ದರು. ಆಮೇಲೆ ಅವರು ತಮ್ಮ ಸ್ವಂತಕ್ಕಾಗಿ ಒಂದು ಹಸೂನೆ ಕೊಂಡ್ಕೊಂಡ್ರಂತೆ. ಪ್ರಾಯಶಃ ಈ ಅಮಲ್ದಾರರ ಈ ವಿಪರೀತ ವರ್ತನೆ ಅಂದಿನ ನಮ್ಮ ಹಿರಿಯರಿಗೆ ಆಶ್ಚರ್ಯ ತಂದಿರಬೇಕು.

ಮಲ್ಲಪ್ಪನವರು ನಡೆಸುತ್ತಿದ್ದ ಜಮಾಬಂದಿ ಗಾದೆ ಮಾತಾಗುವಷ್ಟು ನಮ್ಮ ಕಡೆ ಪ್ರಸಿದ್ಧವಾಗಿದೆ. ಈಗ ಬಿಡಿ ಗ್ರಾಮಲೆಕ್ಕಿಗ ಏನ್ ಬರೀತಾನೊ ಅದಕ್ಕೆ ರುಜು ಹಾಕೋ ಹಿರಿಯ–ಕಿರಿಯ ಅಧಿಕಾರಿಗಳ ಗುಂಪು. ಆದರೆ ತಿಪ್ಪೆರುದ್ರಯ್ಯನಂತಹ ಡಿ.ಸಿ. ವಿಚಾರನೆ ಬೇರೆ. ಇಡೀ ಫಾಸ್ಲೆಯ ಆಗಿನ ಸರ್ವೆ ನಂಬರನೆಲ್ಲಾ ಬೇಕಾದ್ರೆ ಬಾಯ್ನಲ್ಲಿ ಹೇಳ್ತಿದ್ದರಂತೆ ಆ ವ್ಯಕ್ತಿ. ಯಾವುದೇ ಸಣ್ಣತನ ಪ್ರದರ್ಶಿಸದೆ ರೈತರ ಹಿತ ರಕ್ಷಿಸೋದು ಅವರುದ್ದೇಶವಾಗಿತ್ತಂತೆ. ಆತನ ಕೈಯಲ್ಲಿ 'ಸೈ ಅನ್ನಿಸ್ಕೊಂಡೋರು' ಮಲ್ಲಪ್ಪನೋರು. ಹಾಗೆನೆ ತಾಲ್ಲೂಕಿನ ಶಾನುಭೋಗ. ಪಟೇಲರಿಂದಲೂ 'ಪುಣ್ಯಾತ್ಮ ಇವತ್ತು ನಮ್ಮನ್ನು ಹೊಟ್ಟೇಲಿ ಹಾಕಿಕೊಂಡು ಕಾಪಾಡಿದ. ಎಲ್ಲಾದರೂ ಚೆನ್ನಾಗಿ ಬಾಳಲಿ. ಆತನ ಮಕ್ಕಳು ಮರಿಗೆ ಒಳ್ಳೇದು ಆಗಲಿ' ಎಂಬ ಮೆಚ್ಚುಗೆ ನುಡಿ ಪಡೀತಿದ್ದರು ಮಲ್ಲಪ್ಪನವರು. ಇದಕ್ಕೆ ವಿಶೇಷ ಕಾರಣಗಳು ಇದ್ದವಂತೆ. ಜಮಾಬಂದಿ ದಿವಸ ಎಲ್ಲ ಕಂದಾಯದ ಆಯಾ ಶ್ಯಾನುಭೋಗರು ಪಟೇಲರು ಚುಕ್ತಾ ಮಾಡಬೇಕು ತಾನೆ. ಕೆಲವರಿಗೆ ಮಾಡಲಿಕ್ಕೆ ಆಗದೆ ಹೋದ ಸಂದರ್ಭದಲ್ಲಿ ಆ ಪಟೇಲ ಶ್ಯಾನುಭೋಗರನ್ನು ಕುರಿತು ಕಠಿಣವಾಗಿ ಮಲ್ಲಪ್ಪನೋರು ಮಾತ-ನಾಡ್ತಿದ್ರು. ಮಿತಿ ಮೀರಿ ಬೈಯುತ್ತಿದ್ರು. ಆದರೆ ಹೊಟ್ಟೆ ಮೇಲೆ ಹೊಡೆಯುತ್ತಿರಲಿಲ್ಲ. ಅವರು ಕಟ್ಟಬೇಕಾದ ದುಡ್ಡನ್ನು ತಾವೆ ಸ್ವತಃ ಟ್ರೆಜರಿಗೆ ಕಟ್ಟಿ ಡಿ.ಸಿ.ಗೆ ತೋರಿಸುತ್ತಿದ್ದರು. ಇಂತಹ ಸದ್ವರ್ತನೆಗೆ ಎಂತಹ ಕಲ್ಲು ಮನುಷ್ಯನಾದರೂ ಕರಗುತ್ತಾನಲ್ಲವೆ ?

ನಿನ್ನ ಸ್ನೇಹಿತರು ಯಾರೆಂಬುದನ್ನು ಹೇಳು ಆಮೇಲೆ ನೀನೇನೆಂಬುದನ್ನು ಹೇಳುತ್ತೀನಿ ಎಂದರಂತೆ ಒಬ್ಬ ಚಿಂತಕ. ಕೌರವಾದಿಗಳು ಕೆಟ್ಟು ಮಣ್ಣು ಸೇರಿದ್ದು ಅವರ ಅಕ್ಕಪಕ್ಕದವರಿಂದ ತಾನೆ. ಮಗುವಿನ ಪ್ರತಿಭೆ ಸುಸ್ಪಷ್ಟವಾಗಿ ಅರಳಬೇಕಾದರೆ ನಾವು ಒದಗಿಸುವ ಪರಿಸರ ಬಹು ಮುಖ್ಯ. ಈ ತರಹದ ದೃಷ್ಟಿಯಲ್ಲಿ ನೋಡಿದಾಗ ಮಲ್ಲಪ್ಪನವರು ಪುಣ್ಯವಂತರೆಂದೆ ಹೇಳಬೇಕು. ಯಾವುದೋ ಸಣ್ಣ ಪಾಳ್ಯದಲ್ಲಿ ಕುರಿ ಕಾಯುವ ಕುಟುಂಬದಲ್ಲಿ ಹುಟ್ಟಿದ ವ್ಯಕ್ತಿಗೆ ಕೃಪೆಗೈದ ವ್ಯಕ್ತಿಗಳೆಷ್ಟೊ, ತಿದ್ದಿ ತೀಡಿದ ಮಹನೀಯ

ರೆಪ್ಪೋ. ಇವನ್ನೆಲ್ಲಾ ಇವರು ಹೇಗೆ ಬೆಳೆಸಿಕೊಂಡರೆಂಬುದು ಮುಖ್ಯ. ಈಗ ಮಲ್ಲಪ್ಪನವರನ್ನು ನೋಡಿದ ಎಂಥವರಿಗಾದರೂ ಇವರು ಸರಿಯಾದವರ ಗರಡಿಯಲ್ಲಿ ಪಳಗಿರಬೇಕೆಂದು ಭಾಸವಾಗುತ್ತದೆ. ಈಗ ಅಚ್ಚಿಗೆ ಸಿದ್ಧವಾಗುತ್ತಿರುವ ಅವರ ಆತ್ಮಕಥೆಯ ಕೆಲವು ಭಾಗಗಳನ್ನು ಓದಿಸಿ ಕೇಳುವ ಸೌಭಾಗ್ಯ ನನ್ನದಾಗಿತ್ತು. ಇದರಿಂದಾಗಿ ಈ ವ್ಯಕ್ತಿಯ ಬದುಕು ನನಗೆ ಸಾಕಷ್ಟು ಪರಿಚಯವಾಗುತ್ತಾ ಅವರ ಬಗ್ಗೆ ಗೌರವವನ್ನು ಹುಟ್ಟಿಸಿತು, ಹೆಚ್ಚಿಸಿತು.

ಮಲ್ಲಪ್ಪನವರ ವಿದ್ಯಾಭ್ಯಾಸ ಹಲವು ಹಿರಿಯ ಮಹನೀಯರ ಸಹವಾಸ ಮತ್ತು ಸಹಕಾರದಿಂದಲೇ ಜರುಗಿದೆ. ಕನ್ನಡದಲ್ಲಿ ಗಾಂಧಿ ಸಾಹಿತ್ಯಕ್ಕೆ ಅಂಕುರಾರ್ಪಣ ಮಾಡಿದ ಪ್ರೊ॥ ಎಂ. ಯಮುನಾಚಾರ್ಯ ಅವರು ಇವರ ಪ್ರೌಢಶಾಲೆಯ ಅಧ್ಯಾಪಕರು. ಸಾಹಿತ್ಯಕ ಚಟುವಟಿಕೆಯ ಜೊತೆ ಸ್ಕೌಟ್ ಇತ್ಯಾದಿ ಚಟುವಟಿಕೆಗಳಿಂದ ಕರ್ನಾಟಕದಲ್ಲಿ ತೇನ್‌ಸಿಂಗನಂತೆ ಬೆಳೆದಿರುವ ಎಸ್. ವಿ. ರಂಗಣ್ಣನವರು ಇಂಟರ್‌ಮೀಡಿಯಟ್‌ನಲ್ಲಿ ಇವರ ಗುರುಗಳು. ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ಓದುತ್ತಿರಬೇಕಾದರೆ ಆಚಾರ್ಯ ತೀ.ನಂ.ಶ್ರೀ.ಯವರ ಕೃಪೆ ಇವರಿಗೆ ಒದಗಿತ್ತು. ಉನ್ನತ ವಿದ್ಯಾಭ್ಯಾಸಕ್ಕೆ ಟಿ. ಮರಿಯಪ್ಪನವರು ಮತ್ತು ಶ್ರೀ ವೆಂಕಟಸ್ವಾಮಪ್ಪನವರು ಸಹಾಯ ಮಾಡಿದರು. ಇನ್ನು ಇವರ ಸಹಪಾಠಿಗಳು ಜಿ. ವಿ. ನಾರಾಯಣ ಮೂರ್ತಿ, ಬಿ. ಹಿ. ರೇವಣ್ಣ. ಎಂ. ಪಿ. ಎಲ್. ಶಾಸ್ತ್ರಿ, ಸಿ. ನರಸಿಂಹಮೂರ್ತಿ, ಮಾಜಿ ಮರಿಯಪ್ಪ ಮುಂತಾದವರು. ಇನ್ನು ಇವರ ಜೊತೆ ಕೆಲಸ ಮಾಡಿದ ಹಿರಿಯ–ಕಿರಿಯ ಅಧಿಕಾರಿಗಳು ಹಾಗೂ ಮಂತ್ರಿವರ್ಯರೆಂದರೆ ಎಂ. ಜಿ. ಮೇಕ್ರಿ ಸಾಹೇಬರು, ಎಂ. ಕೆ. ವೆಂಕಟೇಶನ್, ಬಿ. ಬೀರಪ್ಪ. ಕೆ. ತಿಪ್ಪೇರುದ್ರಯ್ಯ, ಕಡಿದಾಳ್ ಮಂಜಪ್ಪ, ಕೊಲ್ಲೂರು ಮಲ್ಲಪ್ಪ, ಎಂ. ವಿ. ಚಂದ್ರಶೇಖರ್, ಟಿ. ಮರಿಯಪ್ಪ, ಡಿ. ದೇವರಾಜ ಅರಸ್, ಹೆಚ್. ಸಿದ್ದವೀರಪ್ಪ ಮುಂತಾದವರು. ಈ ಮೇಲಿನ ಮಹನೀಯರ ಹೆಸರುಗಳನ್ನು ನೆನೆದರೆ ಸಾಕು, ಅವರ ಸಾಧನೆ ಮತ್ತು ಸೇವೆ ಕಣ್ಮುಂದೆ ನಿಲ್ಲುತ್ತದೆ. ಇಂತಹವರ ಸಹವಾಸದಲ್ಲಿ ತಮ್ಮ ಬದುಕನ್ನು ರೂಪಿಸಿಕೊಂಡ ಮಲ್ಲಪ್ಪನವರು ಅಪ್ಪಟ ಚಿನ್ನವಾಗಿರುವುದರಲ್ಲಿ ಸಂಶಯವೇನು ? ಅವರ ಮಿತ್ರರ ಪಟ್ಟಿಯಲ್ಲಿ ಸಮಾಜ ಸೇವಕರಿದ್ದಾರೆ, ರಾಜಕಾರಣಿಗಳಿದ್ದಾರೆ, ದಕ್ಷ ಆಡಳಿತಾಧಿಕಾರಿಗಳಿದ್ದಾರೆ, ಸಾಹಿತಿಗಳಿದ್ದಾರೆ. ಮಲ್ಲಪ್ಪನವರು ದುಂಬಿಗಳಾಗಿ ಪ್ರತಿಯೊಂದು ಗುಂಪಿನ ಈ ವ್ಯಕ್ತಿಗಳಲ್ಲಿನ ಗುಣಗಳನ್ನು ಹೀರಿಕೊಂಡು ಎಲ್ಲವೂ ಆಗಿದ್ದಾರೆ. ಮಲ್ಲಪ್ಪನವರು ಆಡಳಿತಗಾರರಾಗಿ, ಸಮಾಜ ಸೇವಕರಾಗಿ, ಸಾಹಿತಿಗಳಾಗಿ, ರಾಜಕಾರಣಿಯಾಗಿ ತಮ್ಮ ಬದುಕನ್ನು ರೂಪಿಸಿಕೊಂಡಿದ್ದಾರೆ. ಆದರೆ ಇವೆಲ್ಲದಕ್ಕಿಂತ ಹೆಚ್ಚಾಗಿ ಮಲ್ಲಪ್ಪನವರು ಹೆಂಡತಿಗೆ ಉತ್ತಮ ಗಂಡನಾಗಿ ಮಕ್ಕಳಿಗೆ ಒಳ್ಳೆಯ ತಂದೆಯಾಗಿ ತಮ್ಮ ಕಾರ್ಯ ನಿರ್ವಹಿಸಿದ್ದಾರೆ. ಇದೇ ನನಗೆ ತೀರಾ ಮೆಚ್ಚುಗೆ ತಂದ ವಿಚಾರ. ನಮ್ಮ ಸಂವಿಧಾನದಲ್ಲಿ ಕಾರ್ಯಾಂಗ, ಶಾಸಕಾಂಗ, ನ್ಯಾಯಾಂಗಗಳು ಸಮಾನ ಹಕ್ಕು ಮತ್ತು ಕರ್ತವ್ಯಗಳನ್ನು ಪಡೆದ ಸ್ವತಂತ್ರ ಅಂಗಗಳಾಗಿವೆ. ಕೆಲವೊಮ್ಮೆ ಒಂದು ಮತ್ತೊಂದರ ಮೇಲೆ ಸವಾರಿ ಮಾಡಿರಬಹುದು. ಆದರೆ ಅಂತಹದು ಅಪರೂಪವಿರಬೇಕು. ಹಾಗೆಯೇ ಒಬ್ಬ ಮನುಷ್ಯನಿಗೆ ಹೊಟ್ಟೆ ಹೊರೆಯಲು ಒಂದು ಉದ್ಯೋಗ, ಅದಕ್ಕಂಟಿಕೊಂಡಂತೆ ಒಂದು ಸಂಸಾರ, ಮನಸ್ಸಿನ ತೃಪ್ತಿಗೆ ಮಾಡಬೇಕಾದ ಒಂದಿಷ್ಟು ಜನೋಪಯೋಗಿ ಕಾರ್ಯಗಳು—ಇರುತ್ತವೆ. ಇವು ಮೂರು ಪರಸ್ಪರ ಹೊಕ್ಕಳು ಬಳ್ಳಿಯ ಸಂಬಂಧವುಳ್ಳಂತಹವು. ಒಂದನ್ನು ಬಿಟ್ಟರೂ ತಪ್ಪೆ. ಸಮಾಜ ಸೇವೆಯ ಹೆಸರಿನಲ್ಲಿ ಹೆಂಡತಿ ಮಕ್ಕಳನ್ನು ಕಡೆಗಾಣಿಸಿದರೆ ಅಂತಹ ಘೋರ ಅಪರಾಧ ಮತ್ತೊಂದಿಲ್ಲ. ಉದ್ಯೋಗ, ಹೆಂಡತಿ ಮಕ್ಕಳು ಎಂದ್ಕೊಂಡು ಕುಳಿತರೆ ಕೂಪಮಂಡೂಕ ಜೀವನವಾಗುತ್ತದೆ. ಎಲ್ಲವನ್ನೂ ಸರಿತೂಗಿಸಿಕೊಂಡು ಹೋಗುವುದೇ ಸಮರಸದ ಬದುಕು. ಇಂತಹ ಬದುಕನ್ನು ಬಾಳಿದವರು ಶ್ರೀ ಎನ್. ಮಲ್ಲಪ್ಪನವರು. ಅಮಲ್ದಾರ್ ಮತ್ತು ಅಸಿಸ್ಟೆಂಟ್ ಕಮಿಷನರ್ ಆಗಿದ್ದಾಗ ಇವರು ಮಾಡಿದ ಜನಸೇವೆಯನ್ನು ತಿಪ್ಪೇರುದ್ರಯ್ಯ ಹಾಗೂ ಕಡಿದಾಳ್ ಮಂಜಪ್ಪನವರೆ ಪ್ರಶಂಸಿಸಿದರೆಂದರೆ ಇನ್ಯಾರ ಶಿಫಾರಸ್ಸು ಬೇಕು.

ಮಲ್ಲಪ್ಪನವರು ತಮ್ಮ ಅಧಿಕಾರಾವಧಿಯಲ್ಲಿ ಒಂದಿಬ್ಬರು ಸಚಿವರಿಗೆ ಛಾಲೆಂಜ್ ಕೂಡಾ ಹಾಕಿದ್ದರೆಂದು ನಾನು ಕೇಳಿದ್ದೇನೆ. ಈ ರೀತಿ ಛಾಲೆಂಜ್ ಮಾಡುವ ಪ್ರವೃತ್ತಿ ಗುಲಾಮಗಿರಿ ಅನುಸರಿಸುವ, ಅಪ್ರಾಮಾಣಿಕ ಬದುಕನ್ನು ನಡೆಸುವವರ ಕೈಯಲ್ಲಿ ಖಂಡಿತ ಸಾಧ್ಯವಿಲ್ಲ. ಸತ್ಯದ ನೇರ ನೆಡೆಗೆ ನಡೆಯುವೆನೆಂಬ ವಿಶ್ವಾಸ ವನ್ನು ಪ್ರಾಮಾಣಿಕ ಕಾರ್ಯಕರ್ತನಲ್ಲಿ ಮಾತ್ರ ಗುರ್ತಿಸಲು ಸಾಧ್ಯ. ಹೀಗಾಗಿ ಮಲ್ಲಪ್ಪನವರ ಸರ್ಕಾರಿ ಸೇವೆ ಸಾಕಷ್ಟು ನಿಷ್ಠೆಯಿಂದಲೇ ಸಾಗಿರಬೇಕು ಮತ್ತು ಅವರು ಪ್ರಾಮಾಣಿಕ ಅಧಿಕಾರಿಯಾಗಿ ಜನತಾ ಸೇವೆ ಮಾಡಿರಲಿಕ್ಕೇ ಬೇಕು.

ನಮ್ಮಲ್ಲಿ ಏನು ಪ್ರವೃತ್ತಿ ಬೆಳೆದಿದೆ ಎಂದರೆ, ತಾನು ಹುಟ್ಟಿದ ಜಾತಿ, ಪರಿಸರ ಹೇಳೋಕೆ ಕೀಳರಿಮೆ. ಇಲ್ಲ ಏರಿದ ಏಣಿಯನ್ನು ಒದೆಯುವಂತೆ ಅದನ್ನು ಮರೆಯೋದು. ನಾವು ಅನೇಕ ಅಧಿಕಾರಿ, ಮಂತ್ರಿ, ಮುಖ್ಯಮಂತ್ರಿಗಳನ್ನು ನೋಡುತ್ತಿದ್ದೇವೆ. ಅವರ ಹುಟ್ಟಿನಿಂದ, ಜಾತಿಯಿಂದ ಅವರಿಗೆ ಎಲ್ಲಾ ಸವಲತ್ತು ಸಿಕ್ಕಿರುತ್ತದೆ. ತನ್ನ ಜಾತಿ, ಓಟು ಗಿಟ್ಟಿಸಿ ಮಂತ್ರಿ ಆಗ್ತಾನೆ. ತನ್ನ ಇಡೀ ಕ್ಷೇತ್ರಕ್ಕಿಂತ ಕೆಲಸ ಮಾಡೋದು ಇರಲಿ ತನ್ನ ಜಾತೀಲಿ ಇರುವ ಅರ್ಹ ವಿದ್ಯಾರ್ಥಿಗಳಿಗೆ ಸ್ಕಾಲರ್‌ಷಿಪ್ ಕೊಡಿಸೋಕೆ ಆತ ಹಿಂಜರೀತಾನೆ. ತಾನು ನಿಂತ ನೆಲ ಮರೆತು ಕಿವಿಗೆ ಇಂಪಾಗುವ ಶಬ್ದಗಳನ್ನು ಬಳಸಿ, ಆತ್ಮವಂಚನೆ ಮಾಡಿ ಕೊಂಡು, ಜನತೆಯ ಕಣ್ಣಿಗೆ ಮಣ್ಣೆರಚುತ್ತಾನೆ. ಅಂತಹವರನ್ನೇ ನಾವು 'ಜೊಗಳೆ ಸ್ವಭಾವ'ದವರು ಎನ್ನೋದು. ಅವರು ಯಾವುದಕ್ಕೂ ತಮ್ಮನ್ನು ಐಡೆಂಟಿಟಿ ಮಾಡಿಕೊಳ್ಳೊಲ್ಲ. ಆದರೆ ಇಂತಹದರಿಂದ ಮಲ್ಲಪ್ಪನವರು ಬಹುದೂರ ಎನ್ನದೆ ವಿಧಿ ಇಲ್ಲ. ನಮಗೆ 'ಮಣ್ಣಿನ ಋಣ' 'ಅನ್ನದ ಋಣ' ಎನ್ನುವಂತೆ 'ಸಮಾಜದ ಋಣ' ಇದೆ ಎಂದು ಅವರು ಭಾವಿಸಿದ್ದಾರೆ. ನಮ್ಮ ಕಷ್ಟಗಳಲ್ಲಿ ಆತ್ಕೊಂಡು, ನಮ್ಮನ್ನು ಮುನ್ನೆಡೆಸಿದ ಸಮಾಜಕ್ಕೆ ನಾವೇನಾದರೂ ಕೊಡಬೇಡವೆ ? ಇದೇ ಮಲ್ಲಪ್ಪನವರನ್ನು ತುಮಕೂರಿನ ಬಿ.ಹೆಚ್. ರಸ್ತೆಯಲ್ಲಿನ 'ಕಾಳಿದಾಸ ವಿದ್ಯಾರ್ಥಿನಿಲಯ' ಹಾಗೂ ಶಿರಾಗೇಟ್‌ನಲ್ಲಿರುವ ಶ್ರೀ ಕಾಳಿದಾಸ ಕಿರಿಯ ಕಾಲೇಜುಗಳನ್ನು ತೆರೆಯುವಂತೆ ಮಾಡಿದೆ. ಬಸ್ಸಿನಲ್ಲಿ ಬೆಂಗಳೂರಿನಿಂದ ಶಿರಾಕ್ಕೆ ಹೋಗುವ ಮಾರ್ಗದ ಮಧ್ಯದ ತುಮಕೂರು ನಗರದಲ್ಲಿ ಬಿ.ಹೆಚ್. ರಸ್ತೆಯ ಎಡಗಡೆ ಕಾಣುವ ಈ ವಸತಿ ಗೃಹದ ಕಲ್ಲಿನ ಕಟ್ಟಡ ಹಾಗೂ ಶಿರಾಗೇಟಿನ ವಿಶಾಲ ಮೈದಾನದಲ್ಲಿರುವ ಭವ್ಯ ಕಾಲೇಜಿನ ಕಟ್ಟಡ ಎಂತಹ ಕ್ರಿಯಾಶೀಲನನ್ನಾದರೂ ಕ್ಷಣಕಾಲ ಸೆರೆ ಹಿಡಿಯುತ್ತವೆ. ಈ ಕಟ್ಟಡಗಳು ಮಲ್ಲಪ್ಪನವರ ಅಪರಿಮಿತ ಶ್ರಮವನ್ನು ಸಾರಿ ಸಾರಿ ಹೇಳುತ್ತವೆ. ಇಂತಹ ಬೃಹತ್ ಕೆಲಸ ಏಕ ವ್ಯಕ್ತಿಯ ಸಾಧನೆಯೇನಲ್ಲವೆಂಬುದು ನಿಜ. ಆದರೂ ಕೂಡ ನಾಯಕತ್ವ ಮುಖ್ಯವಲ್ಲವೆ. ನಮ್ಮ ಸಂವಿಧಾನದ ರಚನೆಯೆಲ್ಲಾ ಡಾ॥ ಬಿ. ಆರ್. ಅಂಬೇಡ್ಕರ್ ಒಬ್ಬರಿಂದಲೇ ಆಗಿಲ್ಲವೆಂಬುದನ್ನು ಸಂವಿಧಾನ ರಚನಾ ಪೂರ್ವಕ ಚರ್ಚೆಯನ್ನು ನೋಡಿದರೆ ಗೊತ್ತಾಗುತ್ತದೆ. ಆದರೆ ಅದನ್ನೆಲ್ಲಾ ಕ್ರೋಢೀಕರಿಸಿ ಅದಕ್ಕೊಂದು ರೂಪಕೊಟ್ಟ ಕೀರ್ತಿ ಡಾ॥ ಅಂಬೇಡ್ಕರ್‌ಗೆ ಸೇರುತ್ತದೆ. ಹಾಗೇನೆ ಎಲ್ಲರನ್ನೂ ಬಳಸಿಕೊಂಡು ಅನೇಕ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಟ್ಟ ಪುಣ್ಯ ಕೂಡಾ ಮಲ್ಲಪ್ಪ ನವರಿಗೆ ಸೇರುತ್ತದೆ. ಇವರ ಹತ್ತಿರ ಇದ್ದವರು ನಿಷ್ಠೆಯಿಂದ ದುಡಿಯದಿದ್ದರೆ ಮಲ್ಲಪ್ಪನವರ ಕೆಲಸಕ್ಕೆ ಇಂತಹ ಪ್ರತಿಫಲ ಸಿಕ್ಕುತ್ತಿರಲಿಲ್ಲವೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಅದು ಸರಿ 'ಕಬ್ಬಿಣದಂಗಡೀಲಿ ನೊಣಕ್ಕೇನು ಕೆಲಸ', ಮಿಠಾಯಿ ಅಂಗಡೀಲಿ ತಾನೆ ಅದಕ್ಕೆ ಕೆಲಸ ಇರೋದು. ಮಲ್ಲಪ್ಪನಂತಹ ಸೇವಾ ನಿಷ್ಠರ ಬಳಿ ಸಣ್ಣ ಜನ ಯಾಕೆ ಬರುತ್ತಾರೆ. ಮಲ್ಲಪ್ಪನವರು ಅಯಸ್ಕಾಂತ ಇದ್ದಂತೆ. ಅಯಸ್ಕಾಂತ ಕಬ್ಬಿಣನ ಮಾತ್ರ ಆಕರ್ಷಿಸುತ್ತದೆ. ಕಬ್ಬಿಣ ಕೂಡಾ ಅಷ್ಟೆ. ಅಯಸ್ಕಾಂತದ ಹತ್ತಿರ ಹೋಗುತ್ತದೆ. ಪರಸ್ಪರ ಸಮಾನ ಮನೋಭಾವ ಇಲ್ಲದಿದ್ದರೆ ಸ್ನೇಹ ಹೇಗೆ ಮುಂದುವರೀತದೆ. ಉತ್ತಮ ಧ್ಯೇಯವುಳ್ಳ ಬದುಕನ್ನು ನಡೆಸಬೇಕೆನ್ನುವವರು ಮಾತ್ರ ಇವರ ಸಮೀಪವರ್ತಿಗಳಾಗಬಹುದು. ಇಲ್ಲದವರು ಪೈಲಿಗಟ್ಟಲೆ ದೂರ ಓಡುತ್ತಾರೆ.

ಮಲ್ಲಪ್ಪನವರು ತಮ್ಮ ಏಳು ಮಕ್ಕಳನ್ನು ಒಂದು ನೆಲೆಗೆ ನಿಲ್ಲಿಸಿದ್ದಾರೆಂದು ಕೇಳಿದ್ದೇನೆ. ನಿಜಕ್ಕೂ ಇದು ಭವ್ಯವಾದ ಕೆಲಸ. ನಿವೃತ್ತನಾದ ಮೇಲೆ ಹೆಣ್ಮಕ್ಕಳ ಮದುವೆ ಮಾಡಿದೆ, ಅಳಿಯಂದಿರು ಅವರ ಕಾಲ್ಮೇಲೆ ನಿಂತುಕೊಳ್ಳೋಕೆ ಸಹಾಯ ಮಾಡಿದೆ ಅಂತ ಅವರೆ ಹೇಳುತ್ತಾರೆ. ಇದು ನಿಜವಾಗಿಯೂ ಒಳ್ಳೆಯ ಕೆಲಸ ಹೌದು. ತನ್ನ ಮನೆಯನ್ನ ಕುಟುಂಬವನ್ನ ಚೆನ್ನಾಗಿ ಇಡದವನು ಏನನ್ನು ಕೂಡ ಸಾಧಿಸಲಾರ. ಮನೆ–ಮಠ ತೊರೆದು ದೇಶಸೇವೆ ಮಾಡಲಿಕ್ಕೆ ಹೊರಟವನು ಪಲಾಯನವಾದಿಯೆಂದೇ ಹೇಳಬೇಕು. ಅವನಿಗೆ ಜೀವನವನ್ನು ಎದುರಿಸುವಷ್ಟು ಶಕ್ತಿ ಇಲ್ಲ. ಮಲ್ಲಪ್ಪನವರು ಯಾರಿಗೂ ಅನ್ಯಾಯ ಮಾಡದೆ ತಮ್ಮ ಸಂಸಾರ ತೂಗಿಸಿಕೊಂಡು ಹೋಗಿದ್ದಾರೆ. ಯೋಗ್ಯರನ್ನ ಹುಡುಕಿ ಅವರ ಕೈಯಲ್ಲಿ ತಮ್ಮ ಕರುಳುಬಳ್ಳಿಯನ್ನು ಇಟ್ಟು ಆ ಮೂಲಕ ಇನ್ನೊಂದು ಹಣತೆಯ ಬೆಳಕಿಗೆ ಕಾರಣರಾಗಿದ್ದಾರೆ. ತಂದೆ–ತಾಯಿಗಳು ಮಾಡಬೇಕಾದ ಕೆಲಸವೇ ಇದು. ತಮ್ಮ ಮಕ್ಕಳು ಸಮಾಜಕ್ಕೆ ಹೊರೆ ಆಗದೆ, ಉಪಯೋಗವಾಗುವಂತೆ ಮಾಡ್ಬಿಟ್ಟರೆ ಅವರ ಜವಾಬ್ದಾರಿ ತೀರಿತಷ್ಟೆ ಅಲ್ಲ ದೇಶಕ್ಕೆ ಮಹತ್ತರ ಸೇವೆ ಮಾಡಿದಂತಾಗುತ್ತದೆ. ಇದು ಮಲ್ಲಪ್ಪನವರಿಂದ ಆಗಿದೆ ಎಂಬುದೇ ನನ್ನ ತೃಪ್ತಿ.

ಕೊನೆಯದಾಗಿ ಒಂದು ವಿಚಾರ ಹೇಳಿ ನನ್ನ ಮಾತು ಮುಗಿಸುತ್ತೇನೆ. ಮಲ್ಲಪ್ಪನವರಂತಹ ವ್ಯಕ್ತಿಗಳಿಗೆ, ಅವರ ಸೇವಾ ಕಾರ್ಯವನ್ನು ಗುರುತಿಸಿ ಒಂದು ಅಭಿನಂದನಾ ಗ್ರಂಥ ತರೋದು, ನಾಲ್ಕು ಮಕ್ಕಳಿಗೆ ಅವರ ಹೆಸರಿನಲ್ಲಿ ವಿದ್ಯಾಭ್ಯಾಸ ಕೊಡಿಸೋದು ಒಳ್ಳೆ ಕೆಲಸಗಳೇನೊ ಸರಿ. ಆದರೆ ಇದಿಷ್ಟೆ ಅವರ ಸೇವಾ ಕಾರ್ಯಕ್ಕೆ ನಾವು ಸಲ್ಲಿಸುವ ಕೃತಜ್ಞತೆ ಆಗೋದಿಲ್ಲ. ಇವೆಲ್ಲಕ್ಕಿಂತ ಹೆಚ್ಚು ಮಲ್ಲಪ್ಪನವರ ಬದುಕಿನ ರೀತಿ, ಅವರಲ್ಲಿ ಬಡವರ ಬಗ್ಗೆ ಇರುವ ಅಂತಃಕರಣ, ದೀನ ದಲಿತರ ಬಗ್ಗೆ ಇರುವ ಕಾಳಜಿ, ತತ್ವಗಳ ಬಗ್ಗೆ ಇರುವ ನಿಷ್ಠೆಯನ್ನು ನಾವು ವಿಶೇಷ ರೀತ್ಯಾ ಗುರುತಿಸಬೇಕಾಗುತ್ತದೆ. ಮಲ್ಲಪ್ಪನವರು ಯಾರನ್ನ ಕುರಿತು ಇಡೀ ಜೀವಮಾನವೆಲ್ಲಾ ಚಿಂತಿಸಿದರೋ, ಯಾರ ಬಗ್ಗೆ ಹಗಲಿರುಳು ದುಡಿದರೋ ಆ ಸಮಸ್ತ ಜನಾಂಗಕ್ಕೆ ಮಲ್ಲಪ್ಪನವರನ್ನ ತಲುಪಿಸುವ ಕಾರ್ಯ ಮಾಡಬೇಕಾಗುತ್ತದೆ ಎಂಬುದು ನನ್ನ ಅನಿಸಿಕೆ. ಈ ಗ್ರಂಥ ಆ ದೊಡ್ಡ ಗುರಿಯ ನಾಂದಿಯಾಗಲೆಂದು ಹಾರೈಸುತ್ತೇನೆ.

ನನ್ನ ಬದುಕಿನಲ್ಲಿ ಮಲ್ಲಪ್ಪನವರು

ಕೆ. ಸಿ. ರಾಮಯ್ಯ

ಸಾವಿರದ ಒಂಭೈನೂರ ಅರವತ್ತೊಂಬತ್ತರ ಜೂನ್ ಆರು ನನ್ನ ಬದುಕಿನ ಒಂದು ಮಹತ್ವದ ದಿನ. ನನ್ನ ವೃತ್ತಿಜೀವನಕ್ಕೊಂದು ತಿರುವು ಕೊಟ್ಟ ದಿನ. ನನ್ನ ಸಾಧನೆಯ ರಂಗಕ್ಕೆ ಆ ದಿನ ಅಣಿಮಾಡಿ ಕೊಟ್ಟಿತು. ಬಹಳ ದಿನಗಳ ಕಾಲ ನನ್ನ ಕಾರ್ಯಕ್ಷೇತ್ರವಾದ ತುಮಕೂರಿನ ಕಾಳಿದಾಸ ವಿದ್ಯಾವರ್ಧಕ ಸಂಘದ ಪ್ರೌಢಶಾಲೆಗೆ ಮುಖ್ಯೋಪಾಧ್ಯಾಯನಾಗಿ ನಾನು ಬಂದು ಸೇರಿದ್ದು ಆ ದಿನವೇ. ಆದರೆ ಆ ಶಾಲೆಗೆ ಇದ್ದ ಹೆಸರು ಇಂದಿನದಲ್ಲ. ಅದು ಆಗ ಯುನೈಟೆಡ್ ಹೈಸ್ಕೂಲ್. ಅಂದಿಗೆ ಶಾಲೆ ಪ್ರಾರಂಭವಾಗಿ ಸುಮಾರು ಮೂರು ವರ್ಷ ಕಳೆದಿತ್ತು. ಅದರ ಸ್ಥಿತಿಗತಿ ಅತ್ಯಂತ ಕೆಳಮಟ್ಟದ್ದಾಗಿತ್ತು. ಶಿರಾಗೇಟ್‌ನಲ್ಲಿರುವ ಇಂದಿನ ಕಾಳಿದಾಸ ಹಾಸ್ಟೆಲಿನ ಕಟ್ಟಡದ ಮೇಲ್ಭಾಗದ ಎರಡು ಕೊಠಡಿಗಳಲ್ಲಿ ಶಾಲೆ ನಡೆಯುತ್ತಿತ್ತು. ವಿದ್ಯಾರ್ಥಿಗಳ ಸಂಖ್ಯೆ ಸುಮಾರು ನೂರಿಪ್ಪತ್ತು. ಶಾಲೆಗೆ ಅಗತ್ಯವೆನಿಸಿದ ಪುಸ್ತಕ ಭಂಡಾರ, ಪ್ರಯೋಗ-ಶಾಲೆಗಳ ವ್ಯವಸ್ಥೆ ಇರಲಿ, ವಿದ್ಯಾರ್ಥಿಗಳಿಗೆ ಅವಶ್ಯಕವಾದ ಪೀಠೋಪಕರಣಗಳ ವ್ಯವಸ್ಥೆಯೂ ಇರಲಿಲ್ಲ. ಫಲಿತಾಂಶವಂತೂ ಶಾಲೆಗೆ ಕೀರ್ತಿ ತರುವಂಥದ್ದಾಗಿರಲಿಲ್ಲ. ಆಗೊಮ್ಮೆ ಕೇವಲ ನೂರಕ್ಕೆ ಎರಡರಷ್ಟು ಫಲಿತಾಂಶ ಬಂದ ನೆನಪು. ಇಂಥ ಶಾಲೆಯ ನಿರ್ವಹಣೆಯ ಭಾರ ಹೊತ್ತ ನನಗೆ ಅಂದಿನ ಉತ್ಸಾಹದ ಹುರುಪಿನಲ್ಲಿ ಕೆಲಸ ಮಾಡುವ ಸಂತೋಷವೇ ಇತ್ತು. ಶಾಲೆಯನ್ನು ಅಭಿವೃದ್ಧಿಪಡಿಸುವ ನನ್ನ ಪ್ರಾಮಾಣಿಕ ಪ್ರಯತ್ನಗಳಿಗೆ ಒತ್ತುಕೊಡುವಲ್ಲಿ ನನ್ನ ಜೊತೆಗೆ ಅಂದಿನ ಶಾಲಾ ಕಾರ್ಯದರ್ಶಿಯೂ, ಹಿತೈಷಿಯೂ, ಬಂಧುವೂ ಆದ ಸಾಹಿತಿ ಶ್ರೀ ವೀ. ಚಿಕ್ಕವೀರಯ್ಯನಂಥವರು ನನ್ನೊಡನಿದ್ದದ್ದು ನನ್ನ ಪ್ರಯತ್ನಗಳಿಗೆ ಪುಷ್ಟಿದೊರಕಿಸಿತ್ತು. ವರ್ಷದಿಂದ ವರ್ಷಕ್ಕೆ ಶಾಲೆಯು ದಿಢೀರ್ ಬದಲಾವಣೆ ಕಾಣದಿದ್ದೂ ಶಾಲೆಯು ಪ್ರಗತಿಯ ಹಾದಿಯಲ್ಲಿತ್ತು. ನಾನು ಬಂದ ಮರುವರ್ಷವೇ ಶಾಲೆಯ ಫಲಿತಾಂಶ ಶೇಕಡ ಎರಡರಿಂದ ಇಪ್ಪತ್ತಕ್ಕೇರಿತು. ವಿದ್ಯಾರ್ಥಿಗಳ ಸಂಖ್ಯೆ ಒಂದುವರೆಪಟ್ಟು ಹೆಚ್ಚಿತು. ನನ್ನ ಪ್ರಯತ್ನ ಫಲ ನೀಡುತ್ತಿತ್ತು. ನನ್ನ ನಿರ್ವಹಣೆಯ ಮೊದಲ ಫಲಿತಾಂಶ ದೊರೆತಾಗ ಅದರ ಸಂತೋಷವನ್ನು ಹೆಚ್ಚು ಅನುಭವಿಸಿದವರು ಮಲ್ಲಪ್ಪನವರೇ. ಅಂದು ನನ್ನ ಬೆನ್ನುತಟ್ಟಿ ಪ್ರೋತ್ಸಾಹದ ಮಾತನಾಡಿದ ಅವರಿಗೆ ತಮ್ಮ ಬೆನ್ನುತಟ್ಟಿಕೊಂಡಷ್ಟೇ ಸಮಾಧಾನವಾಗಿತ್ತು.

ಆ ವರ್ಷಗಳಲ್ಲಿ ಮಲ್ಲಪ್ಪನವರು ಕಾಳಿದಾಸ ವಿದ್ಯಾವರ್ಧಕ ಸಂಘದ ಅಧ್ಯಕ್ಷರು. ಅವರ ವ್ಯಕ್ತಿತ್ವ ಅವರನ್ನು ಮುಖ್ಯಸ್ಥರನ್ನಾಗಿಸಿತ್ತು. ಮುಂದೆ ಸತತವಾಗಿ ಕಾಳಿದಾಸ ಸಂಘದ ಸೂತ್ರ ಹಿಡಿದ ಅವರ ಪ್ರೋತ್ಸಾಹ ನಮ್ಮೆಲ್ಲರಿಂದ ಕೆಲಸ ಮಾಡಿಸಿತು. ಇಂದು ಈ ಸಂಸ್ಥೆ ತನ್ನ ವ್ಯಾಪ್ತಿಯನ್ನು ಜಿಲ್ಲೆಯ ಉದ್ದಗಲಗಳಿಗೆ ಹಿಗ್ಗಿಸಿಕೊಂಡಿದೆ ಅಲ್ಲದೆ ರಾಜ್ಯಮಟ್ಟದ, ರಾಷ್ಟ್ರಮಟ್ಟದ ಕೀರ್ತಿಯನ್ನು ಗಳಿಸಿಕೊಂಡಿದೆ ಎಂಬುದು ಬೇರೆ ಮಾತು. ಆದರೂ ಮಲ್ಲಪ್ಪನವರು, ನಾನು ಒಂದೇ ಗುರಿಗಾಗಿ ಶ್ರಮಿಸುವಲ್ಲಿ ಈ ಸಂಸ್ಥೆ ನೆರವಾಗಿದೆ.

ಅಷ್ಟು ಮಾತ್ರಕ್ಕೆ ನಾನು ಮಲ್ಲಪ್ಪನವರನ್ನು ನೋಡಿದ್ದು, ಅವರ ಜೊತೆಯಲ್ಲಿರುವಂತಾಗಿದ್ದು ಈ ದಿನಗಳಿಂದಲ್ಲ. ನಮ್ಮಿಬ್ಬರ ಸಂಬಂಧ ಮೂರು ದಶಕಗಳ ಹಿಂದಿನದು. ನಾನಾಗ ವಿದ್ಯಾರ್ಥಿ ದೆಸೆಯಲ್ಲಿದ್ದೆ. ಎಸ್.ಎಸ್.ಎಲ್.ಸಿ. ಮುಗಿಸಿ ತುಮಕೂರಿನ ಪ್ರಥಮದರ್ಜೆ ಕಾಲೇಜಿನಲ್ಲಿ ಇಂಟರ್-ಮೀಡಿಯೇಟ್ ಕೋರ್ಸಿಗೆ

ಸೇರಿದ್ದೆ. ಹೊಸ ಸ್ನೇಹಿತರು, ಹೊಸ ಪರಿಸರ, ಹತ್ತಿರದ ಸಂಬಂಧಿಕರ ಮನೆಯಲ್ಲಿ ಊಟದ ವ್ಯವಸ್ಥೆ. ಪ್ರತ್ಯೇಕ ಕೊಠಡಿಯೊಂದರಲ್ಲಿ ವಾಸ. ಜೊತೆಯಲ್ಲಿ ಮೂರು ಜನ ವಿದ್ಯಾರ್ಥಿಗಳು. ಒಂದು ದಿನ ಕಾಲೇಜಿನಿಂದ ಮನೆಗೆ ಹೋಗುವ ಸಮಯ. ದಾರಿಮಧ್ಯದ ಸಾವಿತ್ರಮ್ಮನವರ ಛತ್ರದಲ್ಲಿ ಕೈಗಾರಿಕೆಗಳಿಗೆ ಸಂಬಂಧಿಸಿದ ಒಂದು ಕಾರ್ಯಕ್ರಮ. ಅಂದಿನ ದಿನಗಳಲ್ಲಿ ಇಂಥ ಕಾರ್ಯಕ್ರಮಗಳು ಕಡಿಮೆ. ದೇಶಕ್ಕೆ ಸ್ವಾತಂತ್ರ್ಯ ದೊರೆತ ಹೊಸದಾದ್ದರಿಂದಲೋ ಏನೋ ಜನಗಳಿಗೆ ತಮ್ಮ ನಾಯಕರನ್ನು, ಅಡಳಿಗಾರರನ್ನು ನೋಡುವ ಕುತೂಹಲ. ಅವರ ಭಾಷಣವನ್ನು ಕೇಳುವ ಆಸೆ. ನಾನೂ ನನ್ನ ಸ್ನೇಹಿತರೊಡನೆ ಸಹಜ ಕುತೂಹಲದಿಂದ ಅಲ್ಲಿಗೆ ಹೋದೆ. ಬೆಳಗಿನ ಸುಮಾರು ಹನ್ನೊಂದು ಗಂಟೆ. ಸಮಾರಂಭದಲ್ಲಿ ಒಬ್ಬ ವ್ಯಕ್ತಿ ಮೈಕಿನ ಮುಂದೆ ನಿಂತು ಕೈ ಬಾಯಿ ಜೋರಾಗಿ ಆಡಿಸುತ್ತ, ಭಾಷಣ ಮಾಡುತ್ತಿದ್ದರು. ಗ್ರಾಮ್ಯಪದ ಬೆರೆತ ಭಾಷೆಯಲ್ಲಿ, ಸಂದರ್ಭಕ್ಕನುಸಾರವಾಗಿ ಏರಿಸಿದ ದನಿಯಲ್ಲಿದ್ದ ಅವರ ಭಾಷಣವನ್ನು ಜನ ಬೆಬ್ಬೆರಗಾಗಿ ಕೇಳುತ್ತಿದ್ದರು. ನನಗೂ ಮೋಜೆನಿಸಿತು. ಮೈತುಂಬ ಧರಿಸಿದ ಖಾದಿ, ಕಾಲಿಗೆ ಚಡಾವು, ಶ್ರಮಪಟ್ಟು ಬಾಚಿದ್ದರೂ ನಿಂತ ಕೂದಲಿನ ಕ್ರಾಪು, ತುಂಬು ಗುಂಡಿಯ ಕೋಟು ಅವರ ಇರವನ್ನು ಭವ್ಯಗೊಳಿಸಿದ್ದವು. ವಿಚಾರಿಸಿದಾಗ ವಿಶ್ವೇಶ್ವರಯ್ಯ ಕೈಗಾರಿಕಾ ಯೋಜನೆಯ ಅಂದಿನ ಜಿಲ್ಲಾ ಸೂಪರಿಂಟೆಂಡೆಂಟ್ ಆಗಿದ್ದ ಮಲ್ಲಪ್ಪನವರೇ ಅವರೆಂದು ತಿಳಿಯಿತು. ಅಲ್ಲಿಯವರೆಗೆ ನಾನು ಅವರ ಬಗ್ಗೆ ಕೇಳಿ ತಿಳಿದಿದ್ದೇನೇ ಹೊರತು, ಕಣ್ಣಿನಿಂದ ನೋಡಿರಲಿಲ್ಲ.

ಮುಂದಿನ ಕೆಲದಿನಗಳಲ್ಲೇ ಮಲ್ಲಪ್ಪನವರು ನನಗೆ ಹತ್ತಿರವಾದರು. ಸಾವಿರದ ಒಂಭೈನೂರ ಐವತ್ತೆಂಟರ ಜೂನ್ ತಿಂಗಳು. ನಾನು ಇಂಟರ್-ಮೀಡಿಯೇಟ್ ಪೂರೈಸಿದ್ದೆ. ಮುಂದಕ್ಕೆ ಓದು ಮುಂದು ವರೆಸುವಲ್ಲಿ ಮನೆಯವರಿಗೆ ಆಸಕ್ತಿ ಇರಲಿಲ್ಲ. ನನ್ನ ವಿದ್ಯಾಭ್ಯಾಸ ಮಾಡಿಸುವ ಹೊಣೆ ನನ್ನ ಮಾವನವರ ದಾಗಿತ್ತು. ಅವರಿಗಾದರೊ ನಾನು ಓದು ನಿಲ್ಲಿಸಿ ಓವರ್‌ಸಿಯರ್ ಕೆಲಸಕ್ಕೆ ಸೇರಬೇಕೆನ್ನುವ ಹಂಬಲ. ಜೊತೆಗೆ ಮದುವೆ ಮಾಡಿಕೊ ಅಂತ ಒತ್ತಾಯ. ಈ ಹೊತ್ತಿನಲ್ಲಿ ನನ್ನ ಓದಿಗೆ ಸಹಾಯಕರಾಗಿ ಬಂದವರು ಕಾಳಿದಾಸ ಸಂಸ್ಥೆಯ ಮೂಲ ಸ್ಥಾಪಕರಲ್ಲೊಬ್ಬರೂ, ಜನಾಂಗದ ಗುರುಗಳೂ ಆದ ಶ್ರೀ ಸಿರಿಯಪ್ಪಒಡೆಯರ್ (ಅಯ್ಯನವರು) ಅವರು. ಅವರೇ ನನ್ನನ್ನು ಮಲ್ಲಪ್ಪನವರಿಗೆ ಪರಿಚಯಿಸಿದರು. ಒಂದು ಭಾನುವಾರ. ನಾವು ಮಲ್ಲಪ್ಪನವರ ಮನೆಗೆ ಹೋದಾಗ ಬೆಳಗಿನ ಒಂಭತ್ತು ಗಂಟೆ. ಅವರ ಮನೆ ಸಾಕಷ್ಟು ಹಳೆಯದು ಎನ್ನುವುದು ಅದರ ಲಕ್ಷಣಗಳಿಂದ ತೋರುತ್ತಿತ್ತು. ವಿಶಾಲವಾದ ಹಜಾರಕ್ಕೆ ಅಂಟಿಕೊಂಡ ಇಂದಿನ ಮನೆಯ ಭಾಗ. ಮುಂಭಾಗದ ಸಣ್ಣ ವರಾಂಡದಲ್ಲಿ ಕಿಟಕಿಯೊಂದರ ಮೊಳೆಗೆ ಕನ್ನಡಿ ತಗುಲಿಸಿ ಮಲ್ಲಪ್ಪನವರು ಮುಖಕ್ಷೌರ ಮಾಡಿಕೊಳ್ಳುತ್ತಿದ್ದರು. ಕೆನ್ನೆಗೆ ನೊರೆಬರುವಷ್ಟು ಸಾಬೂನು ಹಚ್ಚಿ ಪಕ್ಕದ ದೊಡ್ಡ ಹಿತ್ತಾಳೆ ಬಟ್ಟಲೊಂದರಲ್ಲಿ ಬ್ರಷ್ ಹಿಂಡುತ್ತಿದ್ದ ಮಲ್ಲಪ್ಪನವರನ್ನು ನೋಡಿ 'ನಮಸ್ಕಾರ' ಎಂದೆವು. ಅದೇ ಮುಖ ವನ್ನು ನಮ್ಮ ಕಡೆ ತಿರುಗಿಸಿ 'ಓ........ಬನ್ನಿ ಕೊತ್ಕೊಳ್ಳಿ........' ಅಂತ ಪಕ್ಕದ ಬೆಂಚೊಂದನ್ನು ತೋರಿಸಿದರು. ಅಯ್ಯನವರೊಡನೆ ಸ್ವಲ್ಪ ಸಂಕೋಚದಿಂದಲೇ ಕುಳಿತೆ. ನಮ್ಮ ಬಾಯಿಗೆ ಸ್ವಲ್ಪಕಾಲ ಬ್ರೇಕ್. ಮಲ್ಲಪ್ಪ ನವರು ಪುನಃ ಮುಖಕ್ಷೌರದಲ್ಲಿ ಮಗ್ನ. ಸ್ವಲ್ಪಕಾಲ ಗಾಢ ಮೌನ. ಅನಂತರ ಅವರೇ ನಮ್ಮತ್ತ ತಿರುಗಿ 'ಕುಂತಿರಿ, ಸ್ನಾನ ಮಾಡಿ ಬರ್ತೀನಿ' ಅಂತ ಭರ್ರನೆ ನಡೆದರು. ಸ್ನಾನ ಮುಗಿಸಿ, ಶುಭ್ರ ಬಿಳಿ ಲುಂಗಿ, ಲೋಕಲ್‌ಮೇಡ್ ಬನಿಯನ್ ಧರಿಸಿ ಬಂದು ತಲೆ ಬಾಚಿಕೊಳ್ಳುತ್ತಾ 'ಏನು ಸಮಾಚಾರ........' ಎಂದರು. ಪಕ್ಕದಲ್ಲಿದ್ದ ಅಯ್ಯನವರೇ ಮಾತನಾಡಿ, ನನ್ನ ಹೆಸರು, ಪರಿಚಯ ಎಲ್ಲ ಹೇಳಿ 'ಇಂಟರ್‌ಮೀಡಿಯೇಟ್ ಮುಗಿಸಿದಾನೆ ಮುಂದಕ್ಕೆ ಓದ್ತೀನಿ ಅಂತಾನೆ. ಅವನ್ನ ಕಾಲೇಜು ಗೀಲೇಜು ಓದ್ಸೋ ಮಟ್ಟದಲ್ಲಿ ಅವರ‍್ಯಾರು ಇಲ್ಲ. ಊಟದ ವ್ಯವಸ್ಥೆನೂ ಕಷ್ಟದ್ದೇ' ಅಂದರು. ಕಾಲುಮೇಲೆ ಕಾಲು ಹಾಕಿ ಕುಳಿತು ನೆಲ ನೋಡ್ತಾ ಕೇಳುತ್ತಿದ್ದ ಮಲ್ಲಪ್ಪನವರು ಕ್ಷಣವೂ ಯೋಚಿಸದೆ ಮುಖ ಮೇಲೆತ್ತಿ ಹೇಳಿದರು 'ಅಷ್ಟೇ ತಾನೇ........ನಾವು

ಹೇಗಿದ್ರೂ ಹಾಸ್ಟೆಲ್ ಮಾಡೋ ಬಗ್ಗೆ ಯೋಚಿಸ್ತಿದ್ದೀವಲ್ಲಾ........ಶುರು ಮಾಡೇ ಬಿಟ್ರಾಯ್ತು. ನಾಲ್ಕು ಜನದ ಜೊತೆಗೆ ಇವನೂ ಊಟ ಮಾಡ್ಕೊಂಡಿರ್ತಾನೆ. ಹಾಗೇ ಸ್ವಲ್ಪ ಹುಡುಗರ ಊಟದ ಖರ್ಚುವೆಚ್ಚದ ಲೆಖ್ಖಪತ್ರನೂ ನೋಡಲಿ. ಬೇರೆ ಒಬ್ಬರನ್ನ ಮ್ಯಾನೇಜರ್ ಅಂತ ಹುಡುಕೋದೂ ತಪ್ತದೆ' ಅಂದರು. 'ಒಳ್ಳೇದಾಯ್ತು ಬಿಡಿ, ನಾಳೆ ನಿಮ್ಮ ಹತ್ರ ಮತ್ತೆ ಕಳಸ್ತೀನಿ' ಎಂಬ ಅಯ್ಯನವರ ಉತ್ತರದೊಡನೆ ಹೊರ ಬಂದೆವು. ಅಂದು ನನಗಾದ ಆನಂದ ಅಷ್ಟಿಷ್ಟಲ್ಲ.

ಅಲ್ಲಿಂದ ನನ್ನ ಮಲ್ಲಪ್ಪನವರ ನೇರ ಸಂಪರ್ಕ ಬೆಳೆಯಿತು. ಮಲ್ಲಪ್ಪನವರು ತಮ್ಮ ಆಫೀಸ್ ಮಾಡಿಕೊಂಡಿದ್ದ ಗಾಂಧೀನಗರದ ಮನೆಯೊಂದು ಖಾಲಿಯಾದಾಗ ಅದನ್ನೇ ನಮ್ಮ ಹಾಸ್ಟೆಲ್ ಮಾಡಿಕೊಂಡೆವು. ಅನಂತರ ಅದು ಸರಿಹೊಂದದ್ದರಿಂದ ಈಗಿನ ಸೋಮೇಶ್ವರ ಬಡಾವಣೆ ಭಾಗದ ಸಬ್ ಇನ್‌ಸ್ಪೆಕ್ಟರ್ ಒಬ್ಬರ ಮನೆಯೊಂದಕ್ಕೆ ಬದಲಾಯಿಸಿದೆವು. ಕೆಲವು ದಿನಗಳಲ್ಲಿ ಮತ್ತೆ ಬಿ.ಹೆಚ್. ರಸ್ತೆಯ ವೆಂಕಟರಾವ್ ಮರಾಠಾ ಹಾಸ್ಟೆಲ್‌ಗೆ ವರ್ಗಾಯಿಸಿದೆವು. ಅದಾದರೂ ದೊಡ್ಡ ಕಟ್ಟಡವಾದರೂ ಶಿಥಿಲಗೊಂಡಿತ್ತು. ಅದರ ರಿಪೇರಿಗೂ ನಮ್ಮಲ್ಲಿ ಹಣವಿರಲಿಲ್ಲ. ಎಲ್ಲವೂ ಮೆಯಿಂಟೆನೆನ್ಸ್ ಛಾರ್ಜಿನಿಂದಲೇ ಆಗಬೇಕಿತ್ತು. ಜನ-ರಿಂದಲೂ ಸಹಾಯ-ಸಹಕಾರ ದೊರೆಯುವುದು ಕಷ್ಟವಾಗಿತ್ತು. ನಮ್ಮ ಸಂಘದಿಂದಲೇ ಸ್ವಲ್ಪ ಹಣ ದೊರೆಯಿತು. ಗೋಡೆ ನೆಲಗಳಿಗೆ ಸಿಮೆಂಟ್ ಲೇಪನ ಮಾಡಿಸಿಯಾಯ್ತು. ಹೊಸ ನೆಲದಲ್ಲಿ ಮಲಗಿದಾಗ ಛಳಿಗಾಲದ ಕೊರೆತದ ಅನುಭವ. ರಾಗಿಮುದ್ದೆಯ ಊಟದ ಹಿತದಲ್ಲಿ ಇದಾವುದೂ ತೊಂದರೆ ಅನಿಸುತ್ತಿರಲಿಲ್ಲ. ಪ್ರತಿ ತಿಂಗಳಿಗೆ ಇಪ್ಪತ್ತೆರಡು ರೂಪಾಯಿ ವೆಚ್ಚದಲ್ಲಿ ದಿನಕ್ಕೆರಡು ಸೊಗಸಾದ ಊಟ, ತಿಂಡಿ ದೊರೆಯುತ್ತಿತ್ತು. ತುಮಕೂರಿನಲ್ಲಿಯೇ ಇಂಥ ವ್ಯವಸ್ಥೆ ಬೇರೆಲ್ಲಿಯೂ ಇರಲಿಲ್ಲವೆಂದರೆ ಅತಿಶಯವೆನಿಸಲಾರದು. ಅಲ್ಲಿಗೂ ನಮ್ಮ ಹಾಸ್ಟೆಲ್ ವ್ಯವಸ್ಥಿತವಾಗಿರಲಿಲ್ಲ. ಸ್ವಂತ ಕಟ್ಟಡವಿದ್ದರೇ ವ್ಯವಸ್ಥೆ ಸಾಧ್ಯ ಎನ್ನುವ ಕೊರತೆ ಇತ್ತು. ಮಲ್ಲಪ್ಪನವರಂತೂ ಕಟ್ಟಡದ ಬಗ್ಗೆ ತೀರ ಉತ್ಸುಕರಾಗಿದ್ದರು. ಅಂತಲೇ ನಮ್ಮ ಆ ಹಾಸ್ಟೆಲ್‌ಗೆ ಬರಲು ಅವರಿಗೆ ಮುಜುಗರವೆನಿಸುತ್ತಿತ್ತು. ಜೊತೆಗೆ ಅವರಾಗ ಲ್ಯಾಂಡ್ ದರಖಾಸ್ತು ಅಸಿಸ್ಟೆಂಟ್ ಕಮಿಷನರ್ ಆದ್ದರಿಂದ ಬಿಡುವು ದೊರೆಯುವುದೂ ಕಷ್ಟವಾಗಿತ್ತು.

ನಮ್ಮ ಹಾಸ್ಟೆಲ್ ಕಟ್ಟಡದಿಂದ ಕಟ್ಟಡಕ್ಕೆ ಬದಲಾಯಿಸಿದರೂ ಮಲ್ಲಪ್ಪನವರ ಹಾಸ್ಟೆಲ್ ಭೇಟಿಯಲ್ಲೇನೂ ಬದಲಾವಣೆ ಆಗಲಿಲ್ಲ. ಅವರ ನಿಯಮದಂತೆ ಪ್ರತಿ ವಾರಕ್ಕೊಮ್ಮೆ ಹಾಸ್ಟೆಲ್‌ಗೆ ಭೇಟಿ. ಆಗ್ಗೆ ವಿದ್ಯಾರ್ಥಿಗಳ ಕಷ್ಟಸುಖದ ವಿಚಾರಣೆ, ಖರ್ಚು ವೆಚ್ಚಗಳ ತನಿಖೆ, ಊಟ ವ್ಯವಸ್ಥೆಯ ತಪಾಸಣೆ, ಅಷ್ಟೂ ಮೀರಿ ವಿದ್ಯಾರ್ಥಿಗಳ ಗುಣ ನಡತೆಗಳ ಬಗ್ಗೆ ಎಚ್ಚರಿಕೆಯ ಕಣ್ಣು. ನನ್ನ ಹತ್ತಿರದ ಸಂಬಂಧಿಯಾದ ಹೆಬ್ಬಾಕದ ಟಿ. ತಿಮ್ಮಣ್ಣ ನನ್ನ ಸಹಪಾಠಿ ಕೂಡ. ಚುರುಕು ವ್ಯಕ್ತಿತ್ವದ ಬುದ್ಧಿವಂತ ಹುಡುಗ. ಆಗೊಮ್ಮೆ ಈಗೊಮ್ಮೆ ಹೊಗೆ ಕುಡಿಯುವ ಹವ್ಯಾಸದ ನಂಟು ಅವನಿಗೆ. ಸದಾ ಜೇಬಿನಲ್ಲಿ ಒಂದು ಬೀಡಿ ಅಥವಾ ಸಿಗರೇಟಿನ ತುಣುಕು ಇರುತ್ತಿತ್ತು. ಆಕಸ್ಮಿಕವಾಗಿ ಮಲ್ಲಪ್ಪನವರು ಒಮ್ಮೆ ಹಾಸ್ಟೆಲಿಗೆ ಬಂದರು. ತಿಮ್ಮಣ್ಣ ಹೊರಗಿನ ಗೋಡೆಗೆ ಒರಗಿ ರಸ್ತೆಯ ಕಡೆ ಮುಖ ಮಾಡಿ ಸಿಗರೇಟ್ ಸೇದುತ್ತಾ ನಿಂತಿದ್ದ. ಅವನ ಬೆನ್ನು ಬಾಗಿಲ ಕಡೆ ಇತ್ತು. ಮಲ್ಲಪ್ಪನವರು ಹಿಂದಿನಿಂದ ಬಂದವರೇ ಅವನ ತೋಳು ಹಿಡಿದು ತಿರುಗಿಸಿ 'ಏನಪ್ಪಾ ದುಡ್ಡು ಎಷ್ಟು ಮಡಿಗಿದ್ದೀಯಾ ......ಜೇಬಿನಲ್ಲಿ......' ಎಂದು ವ್ಯಂಗ್ಯವಾಡಿದರು. ತಿಮ್ಮಣ್ಣನಿಗೆ ಷಾಕ್ ಅನುಭವ. ಮಲ್ಲಪ್ಪನವರು ಖದ್ದರ್ ಕೋಟು ಷರ್ಟ್ ಪ್ಯಾಂಟು ಧರಿಸಿ ಠೀವಿಯಿಂದ ಬಂದು ಗತ್ತಿನಲ್ಲಿ ಮಾತನಾಡಿಸಿದರೆ ನಮಗೆ ಬಾಯಿ ಬಿಡಲೂ ಹೆದರಿಕೆ. ಅದರೆ ತಿಮ್ಮಣ್ಣ ಮಾತ್ರ ಮಲ್ಲಪ್ಪನವರ ನೆನಪಿನಿಂದ ಇಂದಿಗೂ ದೂರವಾಗಿಲ್ಲ.

ಸ್ವಚ್ಛತೆಯ ಬಗ್ಗೆ ಮಲ್ಲಪ್ಪನವರಿಂದ ನಾನಾಗ ಹೆಚ್ಚು ಕಲಿತೆ. ಹಾಸ್ಟೆಲ್‌ಗೆ ಭೇಟಿ ನೀಡಿದಾಗೆಲ್ಲಾ ಕಟ್ಟಡದಲ್ಲಿ ಗಲೀಜು ಇರುವೆಡೆಗೆ ಅವರ ಕಣ್ಣು ಹಾಯುತ್ತಿತ್ತು. ಸ್ವಲ್ಪ ಗಲೀಜನ್ನೂ ಅವರು ಸಹಿಸುವವರಲ್ಲ. ಒಂದು ದಿನ ಅಡಿಗೆಯವರೇನೋ ಮುಂಭಾಗದ ನೆಲದಲ್ಲಿ ನೀರು ಎರಚಿಲ್ಲ ಅಂತ ತಾವೇ ಒಂದು ಬಕೆಟ್ ನೀರು ತಂದು ಎರಚಲು ಹೋದರು. ಬಕೆಟ್ ಜಾರಿ ಮೈಮೇಲೆ ನೀರು ಚೆಲ್ಲಿತು. ಬಟ್ಟೆ ನೆಂದು ತೊಪ್ಪೆಯಾದವು. ಅವರ ಕೋಪ ನೆತ್ತಿಗೇರಿತು. ಅಡಿಗೆಯವರನ್ನು ಚೆನ್ನಾಗಿ ಬೈದು ಸಿಟ್ಟನ್ನು ಶಮನಗೊಳಿಸಿಕೊಂಡರು. ಹುಡುಗರಿಗೇನೋ ನಗು ಬಂತು. ಆದರೆ ನಗುವ ಧೈರ್ಯ ಬರಲಿಲ್ಲ. ಅಂದಿನಿಂದ ನಾವ್ಯಾರೂ ತಮ್ಮ ಪಾಲಿನ ಕೆಲಸಗಳಲ್ಲಿ ಅಸಡ್ಡೆ ತೋರಿಸಲಿಲ್ಲ.

ನನ್ನ ಹಾಸ್ಟೆಲ್ ಜೀವನದ ಘಟನೆಗಳಿಂದ ಮಲ್ಲಪ್ಪನವರ ವ್ಯಕ್ತಿತ್ವದ ಆಳ ಹತ್ತಿರವಾಗುತ್ತದೆ. ನಮ್ಮ ಹಾಸ್ಟೆಲ್‌ನಲ್ಲಿ ಮಾಂಸಾಹಾರ ಉಪಯೋಗಿಸಬಾರದೆಂಬ ಕಟ್ಟಳೆ. ಆದರೆ ಹುಡುಗರ ಚಪಲ? ಒಂದು ರಜಾ ದಿನ. ಹುಡುಗರೆಲ್ಲ ಗುಟ್ಟಾಗಿ ಅಡಿಗೆ ಮಾಡಿಸಿದ್ದೆವು. ಊಟಕ್ಕೆ ಕುಳಿತಾಗ ರಾತ್ರಿ ಎಂಟು ಗಂಟೆ. ಇಸ್ತ್ರಿ ಎಲೆ. ದೊನ್ನೆಗಳು ಹರಡಿದ್ದವು. ಎಲ್ಲರ ಎಲೆಗಳಲ್ಲಿ ಬಡಿಸಿಯಾಗಿತ್ತು. ಸಾರಿನ ವಾಸನೆ ಮೂಗಿರಿಯುತ್ತಿತ್ತು. ಮಲ್ಲಪ್ಪನವರು ಎಲ್ಲಿಯೋ ವಾಕ್ ಹೋದವರು ಬಂದರು. ಅಲಂಕಾರದ ಕಿಂಡಿಯಿಂದ ಕೂಡಿದ ಗೋಡೆಯ ಹತ್ತಿರ ನಿಂತು ನೋಡಿದರು. ಅವರ ಇರವು ನಮಗರ್ಥವಾಯಿತು. ಎಲ್ಲರ ಗಲಾಟೆ ಸ್ತಬ್ಧವಾಗಿ ಸ್ಮಶಾನಮೌನ ನೆಲಸಿತು. ಕೆಟ್ಟೆವೆಂಬ ಭೀತಿ ತುತ್ತುಗಳನ್ನು ಹೊರಚೆಲ್ಲಿತು. ಮಲ್ಲಪ್ಪನವರು ಬಾಗಿಲು ತಳ್ಳಲಿಲ್ಲ, ಒಳಗೆ ಬರಲಿಲ್ಲ. ಹಾಗೆಯೇ ಕ್ಷಣಕಾಲ ನಿಂತು ಹೊರಟುಹೋದರು. ನಮ್ಮ ಗುಟ್ಟನ್ನು ಭೇದಿಸಲಾಗಲಿಲ್ಲ ಎಂಬ ಭ್ರಮೆ ನಮಗೆ. ಮತ್ತೊಂದು ದಿನ ಏನೋ ಕೆಲಸಕ್ಕಾಗಿ ನಾನು ಮಲ್ಲಪ್ಪನವರ ಮನೆಗೆ ಹೋದಾಗ ಅವರು ನನ್ನನ್ನು ಕುರಿತು 'ಏನೋ........ಅವತ್ತು ಮೂಳೆ ಕಡೀತಾ ಇದ್ರಿ........' ಅಂದರು. ನನಗೆ ಸ್ವಲ್ಪ ಅಳುಕೆನಿಸಿತು. '...... ಕ್ಷಮಿಸಿ ಸರ್. ಹುಡುಗರು ಒತ್ತಾಯಿಸ್ತಾರೆ. ಹೋಟೆಲ್‌ನಲ್ಲಿ ತಿನ್ನೋದು ಅನಾರೋಗ್ಯಕರ ಅಂತ ಯಾರೂ ಹೋಟೆಲ್‌ಗೆ ಹೋಗೋಲ್ಲ. ಇನ್ನು ಮುಂದೆ ಮಾಡಿಸೋಲ್ಲ........' ಅಂದೆ. ಮಲ್ಲಪ್ಪನವರು ಸುಮ್ಮನಿದ್ದರು. ಅವರಿಗೆ ಸಮಾಧಾನವಾದಂತಿಲ್ಲ ಅಂದುಕೊಂಡೆ. 'ನಮ್ಮ ಬಗ್ಗೆ ಮಲ್ಲಪ್ಪನವರು ಏನು ತಿಳಿದುಕೊಂಡರೋ.........ನಾವು ದೊಡ್ಡ ತಪ್ಪು ಮಾಡಿದಂತಾಯಿತಲ್ಲ' ಅನ್ನುವ ಅಪರಾಧ ಭಾವ ನನ್ನಲ್ಲಿಣಕಿತು. ಮಲ್ಲಪ್ಪನವರಿಂದ ಹೊರಟು ಬಂದ ಮೇಲೂ ನನ್ನ ಮನಸ್ಥಿತಿ ಹಿಡಿತಕ್ಕೆ ಬಾರದಂತಾಗಿತ್ತು. ಹಾಸ್ಟೆಲ್ ವಿದ್ಯಾರ್ಥಿಗಳ ಬಗ್ಗೆ ಪ್ರೀತಿಯ ಧಾರೆಯನ್ನೆರೆಯುತ್ತಿದ್ದ ಸಿರಿಯಪ್ಪ ಒಡೆಯರ್ ಅವರಿಗೂ ಈ ವಿಷಯ ಹೇಗೋ ತಲುಪಿತು. ನಾವು ಶಾಕಾಹಾರವನ್ನು ಬಳಸಿದ ಬಗ್ಗೆ ಅವರೂ ಬೇಸರಗೊಂಡರು. ಆದುವರೆಗೆ ದಿನನಿತ್ಯ ಹಾಸ್ಟೆಲ್‌ಗೆ ಬರುತ್ತಿದ್ದ ಅಯ್ಯನವರು ಬರುವುದನ್ನು ನಿಲ್ಲಿಸಿಬಿಟ್ಟರು! ಒಮ್ಮೆ ಒಡೆಯರ್–ಮಲ್ಲಪ್ಪನವರ ಭೇಟಿಯಲ್ಲಿ ಈ ವಿಷಯ ಪ್ರಸ್ತಾಪಕ್ಕೆ ಬಂದಾಗ ಮಲ್ಲಪ್ಪನವರು 'ಏನೋ ಹುಡುಗುಮುಂಡೇವು.......ಬಾಯಿಚಪಲ.......ಕಂಡಂಗೋ ಕಾಣದಂಗೋ ತಿಂತವ........' ಎಂದು ಸಾಂತ್ವನ ನುಡಿದಿದ್ದರು. ಅಂದಿನಿಂದ ಅಯ್ಯನವರ ದಿನಚರಿ ಮೊದಲಿನಂತಾಯಿತು. ಹುಡುಗರಿಗೆ ಸಂತೋಷವಾದರೂ ತಪ್ಪಿನ ಅರಿವು ಮನಸ್ಸಿನಿಂದ ಮರೆಯಾಗಲಿಲ್ಲ.

ನಾನು ಮೊದಲನೆ ಬಿ.ಎಸ್‌ಸಿ. ವಿದ್ಯಾರ್ಥಿಯಾಗಿದ್ದಾಗ ಮಲ್ಲಪ್ಪನವರಿಗೆ ಸುಮಾರು ನಲವತ್ತೇಳು ನಲವತ್ತೆಂಟು ವರ್ಷ. ಸರ್ಕಾರದ ವಿವಿಧ ಇಲಾಖೆಗಳಲ್ಲಿ ವಿವಿಧ ಅಧಿಕಾರೀ ಹುದ್ದೆಗಳಲ್ಲಿ ಮೆರೆದ ಅನುಭವದಲ್ಲಿ ತೂಕವಿತ್ತು. ಅವರ ಉಡುಪಿನ ಶಿಸ್ತು, ಮಾತಿನ ಗತ್ತು ನಮ್ಮಲ್ಲಿ ಭಯಮಿಶ್ರಿತ ಗೌರವವನ್ನು ಮೂಡಿಸಿದ್ದರೂ ಅವು ನಮ್ಮಗಳ ನಡುವಿನ ಆತ್ಮೀಯತೆಯನ್ನು ಕಸಿದುಕೊಳ್ಳಲಿಲ್ಲ. ಮಲ್ಲಪ್ಪನವರ ಮಾತಿನಲ್ಲಿ ಅವರ ಜೀವನದ ಸಿಹಿ–ಕಹಿಗಳ ದೊಡ್ಡ ಸರಕಿದೆ. ಕೆಲವೊಮ್ಮೆ ಅವರು ಹುಡುಗರೊಡನೆ ಹುಡುಗರಾಗಿ, ನೆಲದ ಮೇಲೆ ಕುಳಿತು ಸ್ವಚ್ಛಂದವಾಗಿ ಮಾತನಾಡುತ್ತಾ, ತಮ್ಮ ಹಳೆಯದಿನಗಳ ನೆನಪುಗಳನ್ನು ಬಗೆಯುತ್ತಾ

ಕುಳಿತರೆ, ನಮಗೆ ಕಾಲದ ಪರಿವೆಯೇ ಇರುತ್ತಿರಲಿಲ್ಲ. ಅವರು ಮಗುವಾಗಿದ್ದಾಗ, ವಿದ್ಯಾರ್ಥಿಯಾಗಿದ್ದಾಗ, ದುಡಿಮೆಗೆ ಪ್ರಾರಂಭಿಸಿದ ದಿನಗಳ ಕಥೆಗಳು ಅವರ ಬತ್ತಳಿಕೆಯಲ್ಲಿ ಹೇರಳ. ವಿದ್ಯಾರ್ಥಿಗಳಾದ ನಮ್ಮ ಮತ್ತು ಅವರ ಸಂಬಂಧದ ನವಿರಾದ ವಿಷಯಗಳನ್ನು ಪ್ರಸ್ತಾಪಿಸುವಾಗಲಂತೂ ಮಲ್ಲಪ್ಪನವರು ಭಾವುಕರಾಗುವರು. ತಮ್ಮ ವಿದ್ಯಾರ್ಥಿ ದೆಸೆಯಲ್ಲಿ ಅಂದಿನ ಖ್ಯಾತ ರಾಜಕಾರಣಿ, ಸ್ವಾತಂತ್ರ್ಯ ಹೋರಾಟಗಾರ ಶ್ರೀ ಟಿ. ಮರಿಯಪ್ಪನವರು ನಡೆಸಿಕೊಂಡ ರೀತಿಯ ವರ್ಣನೆ ಹೃದಯಕ್ಕೆ ಮುಟ್ಟುತ್ತಿತ್ತು. ಅವರು ಮಹಾರಾಜಾ ಕಾಲೇಜಿನ ವಿದ್ಯಾರ್ಥಿಯಾಗಿ ಮೈಸೂರಿನಲ್ಲಿದ್ದಾಗ ಅವರ ವಿದ್ಯಾರ್ಥಿ ಜೀವನಕ್ಕೆ ಮರಿಯಪ್ಪನವರು ಬೆಳಕು ಕಾಣಿಸಿದರಂತೆ. ಮಲ್ಲಪ್ಪನವರ ಮಾತುಗಳಲ್ಲಿ ಹಾಸ್ಯದ ಲಹರಿಗೆ ವ್ಯಂಗ್ಯದ ಲೇಪವಿರುತ್ತಿತ್ತು. ಅವರು ಯಾವುದೇ ವಿಚಾರವನ್ನು ಹೇಳಿದರೂ 'ಪಂಚತಂತ್ರ'ದ ಕಥೆಗಳಂತೆ ಕೊನೆಗೊಂದು ನೀತಿ ಇರುವುದು. ಅದರ ಹಿಂದೆಯೇ ನಮ್ಮ ಆವತ್ತಿನ ಜೀವನಧಾಟಿಯ ಬಗ್ಗೆ ವಿಮರ್ಶೆ, ತಪ್ಪು ಸರಿಗಳ ಲೆಕ್ಕಾಚಾರ. ನಾವು ನಡೆಯಬಹುದಾದ ದಾರಿಯ ಬಗ್ಗೆ ಸದಾ ತೋರುತ್ತಿದ್ದರು. ಹಾಸ್ಟೆಲ್‌ನಲ್ಲಿ ವಿದ್ಯಾರ್ಥಿಗಳು ತಮ್ಮ ಅಭ್ಯಾಸದ ಕಡೆ ಹೆಚ್ಚು ಶ್ರದ್ಧೆ ತೋರಿಸುವಂತೆ ಉಪದೇಶಿಸುವರು. ಪುಸ್ತಕದ ಓದಿನಷ್ಟೇ ಸಾಹಿತ್ಯಿಕ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ, ಆಟಗಳಲ್ಲಿ, ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸುವಂತೆ ಸಾಮಾನ್ಯ ಜ್ಞಾನವನ್ನು ಬೆಳೆಸಿಕೊಳ್ಳುವಂತೆ ಪ್ರೇರೇಪಿಸುವರು. 'ಲೇ ಅಯ್ಯಾ, ಯಾವಾಗಲೂ ಅಂಗೆ ಪುಸ್ತಕದಾಗೆ ತಲೆ ಇಕ್ಕಂಡ್ರೆ ವಿದ್ಯೆ ಹತ್ತದೇನೋ' ಎನ್ನುವರು. ಮಾತಿನ ಧಾಟಿ ಕಟುವಾದರೂ ಆತ್ಮೀಯತೆಯ ಬೆಸುಗೆಯಿಂದಾಗಿ ಅಪಾಯಕಾರಿ ಎನಿಸುತ್ತಿರಲಿಲ್ಲ.

ಹಾಸ್ಟೆಲ್‌ನಲ್ಲಿ ನಮ್ಮದೇ ಆದ ಸಂಘವೊಂದನ್ನು ರಚಿಸಿಕೊಳ್ಳಲು ಮಲ್ಲಪ್ಪನವರು ಅಗೊಮ್ಮೆ ಸೂಚಿಸಿದರು. ವಿದ್ಯಾರ್ಥಿ ಸಂಘ ರಚನೆಯಾಯ್ತು. ನಾನೇ ಸಂಘದ ಅಧ್ಯಕ್ಷನಾದೆ. ವರ್ಷದುದ್ದಕ್ಕೂ ಹಾಸ್ಟೆಲ್ ಚಟುವಟಿಕೆಗಳ ಕೇಂದ್ರವೇ ಆಯಿತು. ವರ್ಷದ ಕೊನೆಯಲ್ಲಿ ಮುಕ್ತಾಯ ಸಮಾರಂಭ. ಅದ್ಧೂರಿಯ ವಾತಾವರಣ. ಅಂದಿನ ಸುಪ್ರಸಿದ್ಧ ಹಾಸ್ಯ ಸಾಹಿತಿ ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳು ಕಾರ್ಯಕ್ರಮದ ಮುಖ್ಯ ಅತಿಥಿ. ಅವರು ಮಾತನಾಡಲಿದ್ದ ವಿಚಾರ 'ಜೀವನ ಸಂಜೀವಿನಿ–ನಗು'ವನ್ನು ಕುರಿತದ್ದು. ನಗಿಸುವ ಬಾಯಿಗೆ 'ನಗು'ವೇ ಸಿಕ್ಕರೆ ಕೇಳಬೇಕೆ ? ಈಶ್ವರನನ್ನೇ ವರ ಕೇಳಿದಂತಾಯಿತು. ಊಟ ಮಾಡದೆ ಕುಳಿತಿದ್ದರೂ ಹೊಟ್ಟೆ ಬಿರಿಯುವ ಔತಣ. ಕೊನೆಗೆ ಮಲ್ಲಪ್ಪನವರ ಭಾಷಣ. ಅವರ ಸ್ಥಾನ ಅಧ್ಯಕ್ಷರದು. ಮಲ್ಲಪ್ಪನವರು ಮಾತನಾಡಲು ಶುರುಮಾಡಿದರು. ಹುಡುಗರ ಚಾರಿತ್ರ್ಯ, ಶ್ರಮ, ನಿಷ್ಠೆ, ಪ್ರತಿಭೆಗಳ ಬಗ್ಗೆ ಎಲ್ಲಾ ಮಾತನಾಡಿ ಕೊನೆಗೆ 'ನಮ್ಮೆಲ್ಲರ ದುರದೃಷ್ಟ ಕಣ್ರಯ್ಯ, ಇಷ್ಟೊಂದು ಜಾತಿ, ಕುಲ ಅಂತ ಮಾಡಿಕೊಂಡಿದ್ದೀವಿ. ಅದಾವಾಗ ಇದೆಲ್ಲಕ್ಕೂ ಮುಕ್ತಿ ಸಿಕ್ಕುತ್ತೊ ......ಹಂಗಂತ ನಾವು ಸುಮ್ಮನೆ ಕೂತ್ಕೋಬಾರ್ದು. ಹಿಂದುಳಿದೋರನೆಲ್ಲ ಒಂದುಗೂಡಿಸೋ ಕೆಲಸ ಮಾಡ್ತಾನೇ ಇರಬೇಕು. ಮೇಲ್ವರ್ಗದವರನ್ನ, ಶೋಷಣೆ ಮಾಡೋರನ್ನ ತುಳಿಲಿಕ್ಕೆ ಬಿಡಬಾರದು. ಕೆಟ್ಟದ್ದನ್ನ ಮಾಡಬಾರದು ಅನ್ನೋದು ಎಷ್ಟು ಮುಖ್ಯನೋ, ಕೆಟ್ಟದ್ದನ್ನು ಸಹಿಸಲೂಬಾರದು ಅನ್ನೋದು ಅಷ್ಟೇ ಮುಖ್ಯ. ಹಮಾವರ್ ಕೋಮಿನ ಜಾತಿಗಳೆಲ್ಲ ಒಂದಾಗಬೇಕು. ಎಲ್ಲರ ಜೊತೆಗೂ ಸೇರ್ಕೊಂಡು, ಹೊಂದ್ಕೊಂಡು ಸಹಬಾಳ್ವೆ ಮಾಡುವುದನ್ನ ನಾವು ತೋರಿಸಿ, ಅವರಿಗೆ ಕಲಿಸಬೇಕು' ಎಂದರು. ಮಲ್ಲಪ್ಪನವರ ಭಾಷಣ ಮುಗಿದಿತ್ತು. ಬಹಳ ದಿನಗಳಿಂದ ವೇದಿಕೆಯ ಮೇಲೆ ಅವರ ಭಾಷಣ ಕೇಳದಿದ್ದ ನನಗೆ ಅವರ ಭಾಷಣ ವಿಶೇಷ ತೃಪ್ತಿ ತಂದಿತ್ತು. ಅವರ ಮಾತುಗಳ ಅಂತರಾರ್ಥ ಮನಸ್ಸನ್ನು ಎಚ್ಚರಿಸಿತ್ತು. ಕಾರ್ಯತಃ ಇವರೇನು ಮಾಡಿದ್ದಾರೆ ? ಎಂಬ ಪ್ರಶ್ನೆ ಹುಟ್ಟಿತು. ಹಾಸ್ಟೆಲ್ ವಿದ್ಯಾರ್ಥಿಗಳಿಂದಲೇ ನನ್ನ ಪ್ರಶ್ನೆಗೆ ಉತ್ತರ ಸಿಕ್ಕಿತು. ನಮ್ಮಲ್ಲಿ ಹಾಸ್ಟೆಲ್ ಮುಖ್ಯವಾಗಿ ಹಿಂದುಳಿದವರಿಗೆಂದು ಹುಟ್ಟಿಕೊಂಡಿದ್ದರೂ, ಅವರ ಶ್ರೇಯಸ್ಸಿಗಾಗಿ ಅವರ ಧೋರಣೆ ಇದ್ದರೂ ನಮ್ಮ ಹಾಸ್ಟೆಲ್‌ನಲ್ಲಿ ಹಿಂದುಳಿದವರ ಜೊತೆಗೆ ಮೇಲ್ವರ್ಗದವರೂ ಇದ್ದರು.

ಅವರ ಸಂಖ್ಯೆಯೇ ಗಣನೀಯವಾಗಿತ್ತು ಎಂದರೂ ತಪ್ಪಲ್ಲ. ಈ ಸಮಾನತೆಯನ್ನು ಸಾಧಿಸಿದ ಮಲ್ಲಪ್ಪನವರು ಎಂದಿಗೂ ಸಂಕುಚಿತರೆನಿಸುವುದಿಲ್ಲ.

ಹಾಸ್ಟೆಲ್ ವಿದ್ಯಾರ್ಥಿಗಳ ಬಗ್ಗೆ ಮಲ್ಲಪ್ಪನವರಿಗೆ ಪುತ್ರವಾತ್ಸಲ್ಯ. ಅವರನ್ನು ನಮ್ಮ ಮಕ್ಕಳಂತೆ ನೋಡಿಕೊಳ್ಳಬೇಕು ಎಂದು ಅವರು ಆಗ ಹೇಳುತ್ತಿದ್ದುದನ್ನು ನಾನು ಬೇರೆಲ್ಲೂ ಕೇಳಿಲ್ಲ. ಅವರು ಹುಡುಗರ ಬಗ್ಗೆ ತೋರಿಸುತ್ತಿದ್ದ ಕಾಳಜಿಯಲ್ಲಿ ಈ ಗುಣ ಸ್ಪಷ್ಟವಾಗಿದೆ. ಹಾಸ್ಟೆಲ್‌ನ ವಿದ್ಯಾರ್ಥಿಗಳಿಗೆ ಯಾವುದೊಂದು ಕೊರತೆ ಉಂಟಾಗುವುದನ್ನು ಅವರು ಸಹಿಸುತ್ತಿರಲಿಲ್ಲ. ಮನೆಯ ವಾತಾವರಣದಷ್ಟೇ ಅಥವಾ ಅದಕ್ಕಿಂತ ಉತ್ತಮವಾದ್ದನ್ನು ಅವರು ಕಾಣಬೇಕಿತ್ತು. ಹಾಸ್ಟೆಲ್ ಖರ್ಚು ವೆಚ್ಚಗಳು ಬಡವರಿಗೆ ಹೊರೆಯಾಗಬಾರದು. ಹಾಸ್ಟೆಲ್‌ಗೆ ಬರುವ ಆಹಾರ ಪದಾರ್ಥಗಳನ್ನು ಮಲ್ಲಪ್ಪನವರು ಪರಿಶೀಲಿಸಬೇಕು. ಆದ್ದರಿಂದಲೇ ಅವರು ಸಿಟಿ ಸ್ಟೋರ್ಸ್ ಮುತ್ತಣ್ಣನನ್ನು ಹೆಚ್ಚು ನಂಬುತ್ತಿದ್ದುದು. ಮುತ್ತಣ್ಣ ದಿನಸಿಯ ಕಸವನ್ನು ತಾನೇ ತೂರಿ, ಈರುಳ್ಳಿ ಸಿಪ್ಪೆಯನ್ನು ತೆಗೆದು ತೂಗಿ ಕೊಡುವರು. ಇದೆಲ್ಲದರ ಉಸ್ತುವಾರಿಗೆ ಹಾಸ್ಟೆಲ್‌ನಲ್ಲಿ ಒಬ್ಬ ಪ್ರಿಫೆಕ್ಟ್‌ನ್ನು ನೇಮಿಸಿದ್ದರು. ಜೊತೆಗೆ ನಾನೂ ಆ ಹೊಣೆಯನ್ನು ಹೊರಬೇಕಿತ್ತು. ಇಷ್ಟೆಲ್ಲಕ್ಕೂ ವೀರಿ ಅಯ್ಯನವರ ಮೇಲ್ವಿಚಾರಣೆ. ಅಂತೂ ಮಲ್ಲಪ್ಪನವರ ಸಹಜ ಸಹೃದಯತೆಯ ಶ್ರೀರಕ್ಷೆಯಲ್ಲಿ ನಾವು ನಿರಾತಂಕವಾಗಿ ಬೆಳೆದೆವು.

ಮಲ್ಲಪ್ಪನವರು ಹಾಸ್ಟೆಲ್. ವಿದ್ಯಾರ್ಥಿಗಳು ಅಂತೆಲ್ಲಾ ಓಡಾಡಿದರೂ ಅವರ ಜೀವನದಲ್ಲಿ ಮಕ್ಕಳಿಗೆ ಪಾಠ ಹೇಳುವ ಮೇಷ್ಟ್ರು ಅಂತ ಹೇಳಿಕೊಳ್ಳುವ ಅವಕಾಶಗಳೇನೂ ಬರಲಿಲ್ಲ. ಅಷ್ಟಲ್ಲದೆ ಅವರು ಕೆಲಸ ಮಾಡಿದ ಎಲ್ಲ ಇಲಾಖೆಗಳೂ ಶಿಕ್ಷಣೇತರವೆ. ಮಲ್ಲಪ್ಪನವರ ವ್ಯಕ್ತಿತ್ವದಲ್ಲಿ ನಮಗೆ ಭಯ ಮತ್ತು ಗೌರವ ಭಾವನೆಗಳಿದ್ದರೂ ಅದು ವಿದ್ಯಾರ್ಥಿಗಳು ಮೇಷ್ಟ್ರಗಳಿಗೆ ತೋರುವ ಭಯವಾಗಿರಲಿಲ್ಲ. ಆದ್ದರಿಂದಲೇ ಅದು ಈಗಿನ ಹೋಲಿಕೆಯಲ್ಲಿ ಹೆಚ್ಚು ಸಹಜತೆಯನ್ನು ಪಡೆದಿತ್ತು. ಮೇಷ್ಟ್ರು ಅಂದಾಕ್ಷಣ ಸರ್ಕಾರದಿಂದ ನೇಮಿಸಲ್ಪಟ್ಟು ಶಾಲೆಯಲ್ಲಿ ಪುಸ್ತಕ ತೆರೆದು ಬೋಧಿಸಬೇಕೆಂದಿಲ್ಲವಲ್ಲ. ಕಲಿಕೆ ಪರಿಣಾಮಗೊಳ್ಳಲು ಯಾವ ಕಟ್ಟುಪಾಡುಗಳೂ ಇಲ್ಲ. ತಾಯಿಯ ಅನುಕರಣೆಯಲ್ಲಿ ಮಗುವಿನ ಕಲಿಕೆ ಇಲ್ಲವೆ ? ದ್ರೋಣಾಚಾರ್ಯರ ಕಲ್ಪನೆಯ ಮಾತ್ರದಿಂದ ಏಕಲವ್ಯ ಅವರ ಶಿಷ್ಯನೆನಿಸಲಿಲ್ಲವೆ ? ಈ ವಿಶ್ಲೇಷಣೆಯಲ್ಲಿ ಮಲ್ಲಪ್ಪನವರನ್ನು 'ಮೇಷ್ಟ್ರು' ಎಂದರೂ ತಪ್ಪಿಲ್ಲ. ನನ್ನ ಮಟ್ಟಿಗಂತೂ ಅವರು ಪ್ರತ್ಯಕ್ಷವಾಗಿಯೇ ಕಲಿಸಿದ್ದಾರೆ. ಅವರಾಗ ಅಸಿಸ್ಟೆಂಟ್ ಕಮಿಷನರ್ ಹುದ್ದೆಗೆ ಬಡ್ತಿ ಪಡೆದಿದ್ದರು. ಮನೆಯಲ್ಲಿ ಜರ್ಬಿನ ವಾತಾವರಣ. ಅಂದಿನ ಅಸಿಸ್ಟೆಂಟ್ ಕಮಿಷನರ್ ಸಾಹೇಬರು ಅಂದರೆ ಇಂದಿನ ಮಂತ್ರಿಗಳಿಗೂ ಇಲ್ಲದ ಸ್ಥಾನ. ಕಛೇರಿಯಲ್ಲಿ, ಮನೆಯಲ್ಲಿ ಕೆಲಸಕ್ಕೆ ಜವಾನರು. ಹೊರಗಡೆ ತಿರುಗಾಡಲು ವಾಹನ. ಇದು ಅಂದಿನ ವೈಭವ. ಅವರ ಮನೆಗೆ ನಾನು ಆಗಾಗ್ಗೆ ಭೇಟಿಕೊಡುವುದು ಅನಿವಾರ್ಯವಾದರೂ, ನನ್ನ ಮಟ್ಟಿಗೆ ಅದು ನನ್ನ ಹೆಮ್ಮೆಯ ವಿಷಯವಾಗಿತ್ತು. ಮನೆಗೆ ಹೋದಾಗ ಮಲ್ಲಪ್ಪನವರು ತೋರಿಸುವ ಪ್ರೀತ್ಯಾದರಗಳಿಂದಾಗಿ ಮನೆಗೆ ಬರುವವರ ಸಂಖ್ಯೆ ಅಧಿಕ. ಈ ಮಧ್ಯೆ ಅವರ ಮನೆಯಲ್ಲಿಯೇ ಊಟ ಮಾಡಿ ವಿದ್ಯಾರ್ಜನೆ ಮಾಡುತ್ತಿದ್ದ ಕೆಲವು ವಿದ್ಯಾರ್ಥಿಗಳು. ಅವರಲ್ಲಿ ನನ್ನ ಮಿತ್ರರಾದ ಶ್ರೀ ಸಿ. ಗಂಗಯ್ಯ ಮತ್ತು ಗಂಗಮಲ್ಲಯ್ಯನವರೂ ಸೇರಿದ್ದರೆಂದು ನನ್ನ ನೆನಪಿನಲ್ಲಿದೆ. ಮಲ್ಲಪ್ಪನವರ ಮನೆಗೆ ಹೋಗುವಾಗ್ಗೆ ಅವರು ತಮ್ಮ ಬರಹಗಳನ್ನು ಕಾಪಿ ಮಾಡುವ ಅರ್ಜಿಪತ್ರಗಳನ್ನು ಡಿಕ್ಟೇಷನ್ ಮೂಲಕ ಬರೆಯುವ ಕೆಲಸವನ್ನು ನನಗೆ ವಹಿಸುತ್ತಿದ್ದರು. ಆಡಳಿತ ಇಲಾಖೆಯ ಮುಖ್ಯಸ್ಥಾನದಲ್ಲಿದ್ದ ಅವರಿಗೆ ದಿನನಿತ್ಯ ನೂರೆಂಟು ಅರ್ಜಿ ವಗೈರೆಗಳನ್ನು ವಿಲೇವಾರಿ ಮಾಡುವ ಕೆಲಸವೇ ದೊಡ್ಡದೆನಿಸುತ್ತಿತ್ತು. ಆಫೀಸ್‌ನಲ್ಲಿ ಮಾಡಲಾಗದ ಕೆಲಸಗಳೆಲ್ಲ ಮನೆಯಲ್ಲಿ ವಿಲೆ ಆಗಬೇಕು. ಹೀಗೆ ಅರ್ಜಿ ಮುಂತಾದುವನ್ನು ನಕಲು ಮಾಡುವಲ್ಲಿ ನಾನು ಸಾಧ್ಯವಾದ ಮಟ್ಟಿಗೆ ನೆರವಾಗುತ್ತಿದ್ದೆ. ಅವರು ಡಿಕ್ಟೇಟ್ ಮಾಡಿ ಹೇಳುತ್ತಿದ್ದರು. ಒಂದು ಸಾರಿ ಅವರೇನೋ ಹೇಳುತ್ತಿದ್ದರು. ನಾನು ಬರೆಯುತ್ತಿದ್ದೆ. ಅರ್ಜಿ

ಇಂಗ್ಲಿಷ್‌ನಲ್ಲಿತ್ತು. ಮಧ್ಯೆ ಕಮಿಟಿ ಎನ್ನುವ ಪದ. ನಾನು ಸುಮ್ಮನೆ ತಲೆತಗ್ಗಿಸಿ ಬರೆಯುತ್ತಲೇ ಇದ್ದೆ. ಬರೆದದ್ದೆಲ್ಲಾ ಸರಿಯೇ ಎಂಬ ಭಾವನೆ ನನಗೆ. ಮಧ್ಯೆ ಮಲ್ಲಪ್ಪನವರು ತಡೆದು 'ಏನು ಸ್ಪೆಲ್ಲಿಂಗ್ ಬರೆದಿದ್ದೀ ಓದು' ಅಂದರು. ನಾನು 'ಸಿ ಓ ಎಮ್ ಎಮ್ ಐ ಟಿ ಟಿ ಇ' ಎಂದೆ. 'ಮಾರಾಯ ಹಂಗೆಲ್ಲಾ ತಪ್ಪು ಬರೀಬೇಡ. ತಿದ್ದು ಅದನ್ನ ಸಿ ಓ ಎಮ್ ಎಮ್ ಐ ಟಿ ಟಿ ಇ ಇ ಮಾಡು. ನಿನಗೆ ಬಳಕೆ ಇಲ್ಲದ ಪದಗಳನ್ನು ಕೇಳಿ ಬರಿ. ಸ್ವಂತ ಸ್ಪೆಲ್ಲಿಂಗ್ ಸೃಷ್ಟಿಸಬೇಡ' ಅಂದರು. ಮತ್ತೊಮ್ಮೆ ಜಿಲ್ಲಾಧಿಕಾರಿಗಳಿಗೆ ಬರೆಯಬೇಕಾದ ಅರ್ಜಿಯೊಂದರ ವಿಳಾಸದಲ್ಲಿ ನಾನು 'ಡಿ.ಸಿ.' ಎಂದು ಬರೆದೆ. ಅವರು ಅದನ್ನು ಡೆಪ್ಯೂಟಿ ಕಮಿಷನರ್ ಅಂತ ಪೂರ್ತಿಯಾಗಿ ಬರೆಯಲು ನಿರ್ದೇಶಿಸಿದರು. ಹೀಗೆ ದಿನನಿತ್ಯ ಅರ್ಜಿಗಳನ್ನು ಬರೆದೋ ನಕಲುಮಾಡಿಯೋ ಅಂತು ನನ್ನ ಭಾಷೆ ಮತ್ತು ಶೈಲಿಗಳು ಮಲ್ಲಪ್ಪನವರಿಂದ ತಿದ್ದಲ್ಪಟ್ಟವು. ಕ್ರಮೇಣ ಅವುಗಳ ಬೆಳವಣಿಗೆಯಿಂದಾಗಿ ನನ್ನಲ್ಲಿನ ಆತ್ಮವಿಶ್ವಾಸ ಹಿಗ್ಗುತ್ತಿದ್ದುದನ್ನು ನಾನು ಕಾಣುತ್ತಿದ್ದೆ. ಮಲ್ಲಪ್ಪನವರ ಭಾಷೆಯ ಪ್ರೌಢಿಮೆ ಉಚ್ಚಮಟ್ಟದ್ದು. ಹಿರಿಯ ಅಧಿಕಾರಿಗಳೊಡನೆ ಇಂಗ್ಲಿಷ್‌ನಲ್ಲಿ ಮಾತನಾಡುತ್ತಾ ಕುಳಿತರೆ ಯೂರೋಪಿಯನ್ ವಾತಾವರಣ ಏರ್ಪಡುತ್ತಿತ್ತು. ಈ ತಪ್ಪು ಸರಿಗಳನ್ನು ಕಲಿಸಿಯಾದರೂ ನನಗವರು 'ಮೇಷ್ಟ್ರು' ಆದರು.

ಈ ಮೊದಲೇ ನಮ್ಮ ವಿದ್ಯಾವರ್ಧಕ ಸಂಘಕ್ಕೆ ನಮ್ಮದೇ ಆದ ಜಾಗವೊಂದು ಸಿಕ್ಕಿತ್ತು. ಮಲ್ಲಪ್ಪನವರು ಸರ್ಕಾರಿ ಸೇವೆಯಲ್ಲಿದ್ದರೂ, ಅವರ ಮನಸ್ಸು ಸದಾ ಮೂರು ಕವಲಿನಲ್ಲಿ ಅಂದರೆ ಮನೆ, ಆಫೀಸ್, ಸಂಘಗಳ ಕಡೆ ಇತ್ತು. ಸಂಘದ ಅಭ್ಯುದಯವನ್ನು ಕುರಿತು ಹಗಲಿರುಳು ಚಿಂತಿಸುವರು. ಅದು ಕೇವಲ ಒಂದು ಮಠೀಯ ಸಂಸ್ಥೆ ಎನಿಸದೆ ಹಿಂದುಳಿದ ಮತ್ತು ಅಲ್ಪಸಂಖ್ಯಾತರೆಲ್ಲರ ಆಶ್ರಯಕ್ಕೆಡೆಯಾಗಬೇಕೆಂಬುದು ಅವರ ಆಶಯ. ಆಗ ಮಾತ್ರ ತನ್ನ ಸಾಧನೆ ಸಾರ್ಥಕವೆನಿಸೀತು ಎಂಬ ತರ್ಕ. ಹಾಸ್ಟೆಲ್‌ಗಾಗಿ ಹಿರಿದಾದ, ವಿಶಾಲವಾದ ಭೂಮಿ ಬೇಕು. ಅದು ವ್ಯವಸಾಯಯೋಗ್ಯ ಎನಿಸಿದರೆ ಬಡ ಹುಡುಗರ ಹೊಟ್ಟೆ ತುಂಬಿಸೀತೆಂಬ ಬಗ್ಗೆ ಯೋಚನೆ. ಒಮ್ಮೆ ಆ ಬಗ್ಗೆ ತೀವ್ರವಾಗಿ ಪ್ರಯತ್ನಿಸಬೇಕಾದ ಸಂದರ್ಭವೊದಗಿತು. ಸಿರಿಯಪ್ಪ ಒಡೆಯರ್ ಬೇರೆ ಆಗ ಊರಿನಲ್ಲಿರಲಿಲ್ಲ. ಮಲ್ಲಪ್ಪನವರು ಇಂಥ ವಿಷಯಗಳಲ್ಲಿ ಒಡೆಯರ್ ಅವರನ್ನು ಸಂಧಿಸಿಯೇ ತೀರ್ಮಾನ ಕೈಗೊಳ್ಳುತ್ತಿದ್ದರು. ಮಲ್ಲಪ್ಪನವರು ನನಗೆ ಹೇಳಿಕಳುಹಿಸಿ ಜಮೀನು ಮಂಜೂರಾತಿಗೊಂದು ಅರ್ಜಿ ಬರೆಯಲು ಹೇಳಿದರು. ಜಿಲ್ಲಾಧಿಕಾರಿಗಳಿಗೆ ಒಂದು ಅರ್ಜಿ ಸಿದ್ಧವಾಯಿತು. ಸುಮಾರು ಮೂರು–ನಾಲ್ಕು ತಿಂಗಳಲ್ಲಿ ಚಿಕ್ಕನಾಯ್ಕನಹಳ್ಳಿ ಬಳಿ ಸಂಘಕ್ಕೊಂದು ಸುಮಾರು ಹದಿನೆಂಟು ಎಕರೆಗಳ ಜಮೀನು ಮಂಜೂರಾಯ್ತು. ಈಗ್ಗ ಅದು ಸಾಕಷ್ಟು ಬೆಲೆಬಾಳುವ ಆಸ್ತಿ. ಸಂಘದ ಅಭಿವೃದ್ಧಿಯಲ್ಲಿ ಇದೊಂದು ಗಮನಾರ್ಹ ಸಾಧನೆ ಎನ್ನಬಹುದು. ನಾನಾಗ ಎರಡನೇ ಬಿ.ಎಸ್‌ಸಿ.ಗೆ ಕಾಲಿಟ್ಟಿದ್ದೆ.

ಮಲ್ಲಪ್ಪನವರು ತಮ್ಮ ಅರ್ಜಿಗಳಲ್ಲಿನಷ್ಟೇ ಅಥವಾ ಧರಿಸುವ ಉಡುಪಿನಂತೆಯೇ ಸ್ವಚ್ಛತೆಯನ್ನು ವ್ಯಕ್ತಿತ್ವದಲ್ಲೂ ಉಳಿಸಿಕೊಂಡು ಬಂದವರು. ಸಾರ್ವಜನಿಕ ಬದುಕಿನಲ್ಲಿದ್ದರೂ ಗಣ್ಯ ಅಧಿಕಾರೀ ಸ್ಥಾನಗಳಲ್ಲಿದ್ದರೂ ಮತ್ತೊಬ್ಬರ ಬೆವರಿನ ಫಲವನ್ನುಂಡವರಲ್ಲ. ಅವರಿಗೆ ಈಗಲೂ ತಮ್ಮ ದುಡಿಮೆಯಿಂದ, ಪಿತ್ರಾರ್ಜಿತ ಬಳುವಳಿಯಿಂದ ದೊರೆತಿರುವ ಲಾಭವೆಂದರೆ ಪಾಳ್ಯದಲ್ಲಿರುವ ಸಾಮಾನ್ಯ ಮನೆ ಮತ್ತು ಮೂರು ಎಕರೆ ಜಮೀನು ಮಾತ್ರ. ಅವರು ಯೋಚಿಸಿದ್ದರೆ ತಮ್ಮ ಅಧಿಕಾರಾವಧಿಯಲ್ಲಿ ಸಾಕಷ್ಟು ಆಸ್ತಿಮಾಡಿಕೊಳ್ಳುವುದು ಕಷ್ಟವೆನಿಸುತ್ತಿರಲಿಲ್ಲ.

ಆ ವರ್ಷವೂ ನಮ್ಮ ಹಾಸ್ಟೆಲ್ ವಿದ್ಯಾರ್ಥಿ ಸಂಘದಿಂದ ಬಿರುಸಿನ ಚಟುವಟಿಕೆಗಳು. ಅನೇಕ ಸಾಹಿತಿಗಳ, ಕಲಾವಿದರ, ಪಂಡಿತರ ಭೇಟಿ. ಉಪನ್ಯಾಸಗಳು. ಚರ್ಚೆಗಳು. ವಿದ್ಯಾರ್ಥಿಗಳೆಲ್ಲರ ಸಕ್ರಿಯ ಪಾಲು. ಆ ವರ್ಷದ ಭೇಟಿಗಳಲ್ಲಿ ಖ್ಯಾತ ಸಾಹಿತಿ–ಪತ್ರಕರ್ತ ಪಿ. ಮು. ನಾಗಯ್ಯನವರು, ಅಂದಿನ ಖ್ಯಾತ

ರಸಾಯನಶಾಸ್ತ್ರಜ್ಞ ಸೀತಾರಾಮ್ ಅವರು ಪ್ರಮುಖರು. ಓ. ಮ. ನಾಗಯ್ಯನವರು ತುಮಕೂರು ಜಿಲ್ಲೆಯ ಸಮೃದ್ಧರಾದ ಕೋರಾವ ಆಳಿಯ. ಅದೇ ಅಭಿಮಾನದಿಂದಲೋ ಏನೋ ಅವರು ನಮ್ಮೊಂದಿಗೆ ಅತ್ಯುತ್ಸಾಹದಿಂದ ಕಾಲ ಕಳೆದರು. 'ಪೋಡಕ್ಕಿ ಮರೆ' ಮುಂತಾದ ಸ್ವಯಂಕೃತ ಕವನಗಳನ್ನು ಹಾಡಿದರು. ಹೀಗೆ ಹಾಸ್ಟೆಲ್ ಜೀವನ ಚೈತನ್ಯಪೂರ್ಣವಾಗಿ ಕಳೆಯುತ್ತಿತ್ತು.

ಮಲ್ಲಪ್ಪನವರು ಹಾಸ್ಟೆಲ್‌ನ ಸ್ವಂತ ಕಟ್ಟಡದ ಕನಸು ಕಾಣುತ್ತಲೇ ಇದ್ದರು. ಸದಾ ಅವರ ಮನಸ್ಸಿನಲ್ಲಿ ಅದರ ಚಿಂತನೆ ಸಾಗಿತ್ತು. ಕಟ್ಟಡದ ಸಮಗ್ರಚಿತ್ರದ ಕಲ್ಪನೆ ಆಗಲೇ ಮೂಡಿತ್ತು. ಕಟ್ಟಡದ ಯೋಜನೆ ತಯಾರಾಗಿತ್ತು. ಅಗತ್ಯಗಳೆನಿಸಿದ ಹಾಲ್, ಅಡಿಗೆಮನೆ, ಹೊರಾಂಗಣ, ಕಾರ್ಯಕ್ರಮಗಳಿಗೆ ಒಂದು ವೇದಿಕೆ, ಕೊಠಡಿಗಳು ಎಲ್ಲಿ ಹೇಗೆ ಎನ್ನುವುದರ ಸಂಪೂರ್ಣ ಸ್ವರೂಪ ಚಿತ್ರಿತವಾಗಿತ್ತು. ಇನ್ನೂ ಹೆಚ್ಚಿನ ಅವಶ್ಯಕತೆಗಳು ಅವುಗಳ ಸಾಧ್ಯತೆಯ ಬಗ್ಗೆ ಮಂಥನ ನಡೆದೇ ಇತ್ತು. ಈಗಾಗಲೇ ಕಟ್ಟಡದ ಶಂಕುಸ್ಥಾಪನೆಯಾಗಿ ತಳಪಾಯ ಮತ್ತು ಬಾವಿಯ ಕೆಲಸಗಳು ಪೂರ್ಣಗೊಂಡಿದ್ದವು. ಶಂಕುಸ್ಥಾಪನೆ ಕಾರ್ಯಕ್ರಮದಲ್ಲಿ ಅಂದಿನ ಮೈಸೂರು ಸರ್ಕಾರದ ಹಣಕಾಸಿನ ಮಂತ್ರಿಗಳೂ, ಶ್ರೇಷ್ಠ ಆಡಳಿತಗಾರರೂ, ಸಮಾಜ ಸೇವಕರೂ ಆದ ಶ್ರೀ ಟಿ. ಮರಿಯಪ್ಪನವರು ಮತ್ತು ರಾಜ್ಯದ ಹಿಂದುಳಿದವರ ಮತ್ತು ಅಲ್ಪಸಂಖ್ಯಾತರ ಗುಂಪಿನ ಮುಖಂಡರಾದ ಶ್ರೀ ಕೊಲ್ಲೂರು ಮಲ್ಲಪ್ಪನವರು ಪಾಲ್ಗೊಂಡಿದ್ದರು. ಮಲ್ಲಪ್ಪನವರಿಗೆ ಟಿ. ಮರಿಯಪ್ಪನವರು ಹತ್ತಿರವಾದದ್ದು ಹಾಸ್ಟೆಲ್‌ನಿಂದಲೇ. ಅವರು ಮೈಸೂರು ಮಹಾರಾಜಾ ಕಾಲೇಜಿನ ವಿದ್ಯಾರ್ಥಿಯಾಗಿದ್ದಾಗಿನ ಸಂಬಂಧ ಅದು. ಸಹೃದಯಿ ಮಲ್ಲಪ್ಪನವರಲ್ಲಿ ಅದು ಹೇಗೆ ದೂರವಾದೀತು ? ಆದ್ದರಿಂದಲೇ ಆ ನೆನಪು. ಮಲ್ಲಪ್ಪನವರ ಮಾತುಗಳಲ್ಲಿ ಕೃತಜ್ಞತೆಯ ಕಣ್ಣೀರು. ಆ ಋಣವನ್ನು ತೀರಿಸಲೆಂದೇ ಈ ಕೈಂಕರ್ಯ ಎಂಬ ನಿರ್ಧಾರದ ಘೋಷಣೆ.

ಶಂಕುಸ್ಥಾಪನೆಗೆ ಮೊದಲೇ ಮಲ್ಲಪ್ಪನವರು ಕಟ್ಟಡಕ್ಕಾಗಿ ಭಿಕ್ಷಾಪಾತ್ರೆ ಹಿಡಿದಿದ್ದರು. ಮಧುಗಿರಿ, ಶಿರಾ, ಪಾವಗಡ, ಚಿಕ್ಕನಾಯಕನಹಳ್ಳಿ ಯಾವುದೇ ಊರು ಎನ್ನದೆ, ಇಡೀ ಜಿಲ್ಲೆಯ ಊರುಗಳಿಗೆ ಪ್ರವಾಸ. ಹೊರಗಿನ ಜಿಲ್ಲೆಗಳಿಗೂ ಭೇಟಿ. ಪ್ರತಿ ಶನಿವಾರ, ಭಾನುವಾರಗಳಂದು ಅದಕ್ಕಾಗಿ ಬಿಡುವಿಲ್ಲದ ದುಡಿಮೆ. ಊರೂರಿಗೆ ಪ್ರಯಾಣ. ಹೋದಡೆಯೆಲ್ಲಾ ಜನರಿಂದ ಸ್ವಾಗತ. ಕಂಬಳಿಯಿಂದ ಹಿಡಿದು ಧಾನ್ಯದವರೆಗೆ ನಿಧಿಗೆ ಅರ್ಪಣೆ. "ಸ್ವಾಮಿ ಈ ಸಾರಿ ಕಂಬಳಿ ಹಾಸಿದ್ದೇವೆ. ಮುಂದಿನ ಸಾರಿ ಕುರ್ಚಿ ಹಾಕಿಸಿಕೊಳ್ಳಬೇಕು" ಎಂಬ ಎಚ್ಚರಿಕೆಯ ಮಾತು. ಅಜ್ಜನ ಕುಡಿಕೆಯ ಹತ್ತು ರೂಪಾಯಿ, ಅಜ್ಜಿಯ ಸೀರೆಯಗಂಟಿನ ಐದು ರೂಪಾಯಿ ಸಮರ್ಪಿತವಾದುವು. ಹಣ, ಒಡವೆ, ಕಂಬಳಿ ಎಲ್ಲವೂ ಭಿಕ್ಷಾಪಾತ್ರೆಗೆ ಬಿದ್ದವು. ಕೆಲವರಿಗೆ ಸೋಜಿಗ. ಕೊಂಕಿನ ಪ್ರಶ್ನೆ. ಸರ್ಕಾರಿ ಕೆಲಸದ ಇವರೇಕೆ ಹೀಗೆ ಪಾತ್ರೆಹಿಡಿದು ತಿರುಗಬೇಕು ? ಆದರೆ ಮಲ್ಲಪ್ಪನವರ ಉತ್ತರ ಒಂದೇ. ಸಂಘದ ಏಳಿಗೆಗೆ ಇದೆಲ್ಲ ಮಾಡಲೇಬೇಕು. ಅವರ ಚಾಚಿದ ಕೈ ಹಿಂದೆ ಸರಿಯಲಿಲ್ಲ. ಕಟ್ಟಡದ ಭವ್ಯ ಕನಸನ್ನು ಹೊತ್ತ ಅವರ ಯಾತ್ರೆ ಅದು ನನಸಾಗುವವರೆಗೆ ನಡೆದೇ ನಡೆಯಿತು.

ಸಾರ್ವಜನಿಕ ಹಣದ ಉಪಯೋಗದ ಬಗ್ಗೆ ಮಲ್ಲಪ್ಪನವರಿಗೆ ಸದಾ ಕಾವಲುಗಣ್ಣು. ಸಂದ ಪ್ರತಿಯೊಂದು ಹಣದ ಮೊಬಲಗಿಗೂ ರಸೀತಿ ಹಾಕಲೇಬೇಕು. ಅದರ ಜಮಾ ತೆಗೆದುಕೊಳ್ಳಬೇಕು. ಮಲ್ಲಪ್ಪನವರಿಗೂ ದುಂದುಗಾರಿಕೆಗೂ ಬಲು ದೂರ. ಸಭೆ ಸಮಾರಂಭದ ವೈಭವದ ಆಡಂಬರಗಳು ಅವರಿಂದ ದೂರ. ಅವರು ಬೆಂಗಳೂರಿನಲ್ಲಿ ಸಂಘದ ಕೆಲಸಕ್ಕಾಗಿ ತುಮಕೂರಿನಿಂದ ಓಡಾಡುವಾಗಲೂ ಸಂಘದ ಹಣವನ್ನೆಂದೂ ಉಪಯೋಗಿಸಿದವರಲ್ಲ. ಆಶ್ಚರ್ಯವೆಂದರೆ ಅವರು ಅಸಿಸ್ಟೆಂಟ್ ಕಮಿಷನರ್ ಅಂತಹ ದೊಡ್ಡ ಅಧಿಕಾರೀ ಹುದ್ದೆಗಳಲ್ಲಿದ್ದವರು ಆ ಭ್ರಮೆಯಲ್ಲಾದರೂ ಅವರು ಐಭೋಗದ ಜೀವನ ನಡೆಸ

ಬಹುದಿತ್ತು. ಅನೇಕ ಮೂಲಗಳಿಂದ ಆದಾಯವನ್ನು ಪಡೆದುಕೊಳ್ಳಬಹುದಿತ್ತು. ಆದರೆ ಅವರ ಕೈ ಬಾಯಿ ಹೊಲಸಾಗಲಿಲ್ಲ. ಅಧಿಕಾರದ ಮದ ತಲೆಗೇರಲಿಲ್ಲ. ಮೈಮೇಲಿನ ವಸ್ತ್ರ, ಒಡವೆಗಳು ವಿಜೃಂಭಿಸಲಿಲ್ಲ. ಮನೆಯಲ್ಲಿ 'ಅಮ್ಮ' ಆದರೂ ಸರಳವಾದ ಸೀರೆ, ಕುಪ್ಪಸಗಳನ್ನು ಬಿಟ್ಟರೆ ಬೇರೇನೂ ಬಯಸದವರು. ಮಕ್ಕಳ ಮೈಮೇಲೂ ಸರಳ ಉಡುಪು. ಮಕ್ಕಳಿಗೆ ಮಾತ್ರ ಮೇಷ್ಟ್ರು ಒಬ್ಬರಿಂದ ಪಾಠಕ್ಕೆ ಏರ್ಪಾಡು. ಅಷ್ಟು ಹೊರತಾಗಿ ಅವರಿಗೆ ಬೇರೇನೂ ಸೌಲಭ್ಯ ಇಲ್ಲ. ಬಹುಶಃ ಅವರು ಸರ್ಕಾರದ ಮತ್ತು ಸಾರ್ವಜನಿಕ ಹಣದ ಬಗ್ಗೆ ತಾಳಿದ್ದ ನಿರ್ಮೋಹದ ಮತ್ತು ಶಿಸ್ತಿನ ಫಲವಿದು.

ನನ್ನ ಬಿ.ಎಸ್‌ಸಿ. ಕೋರ್ಸ್ ಮುಗಿದಿತ್ತು. ಇದುವರೆಗೆ ಸುಮಾರು ನಾಲ್ಕು-ಐದು ವರ್ಷಗಳ ಕಾಲ ಮಲ್ಲಪ್ಪನವರ ನೆರಳಿನಲ್ಲಿ ಬೆಳೆದ ನನಗೆ ಅವರ ಅಗಲಿಕೆ ಅನಿವಾರ್ಯವಾಗಿತ್ತು. ಆ ವೇಳೆಗೆ ನನಗೆ ಪಟ್ನಾಯಕನಹಳ್ಳಿ ಬಳಿಯ ಗುಂಡಂಚಿಕ್ಕೇನಹಳ್ಳಿಯ ಮಾಧ್ಯಮಿಕ ಶಾಲೆಯ ಉಪಾಧ್ಯಾಯನಾಗಿ ಕೆಲಸ ದೊರೆಯಿತು. ಅಂದಿನ ಶಿಕ್ಷಣ ಇಲಾಖೆಯ ಅಧಿಕಾರಿಗಳಾಗಿದ್ದ ಶ್ರೀ ಕೆ. ಬಸವಯ್ಯನವರು ನನಗೆ ಅದರ ಅವಕಾಶ ದೊರಕಿಸಿದರು. ನಾನು ದುಡಿಮೆಯ ಅನಿವಾರ್ಯತೆಯಲ್ಲಿ ಅಲ್ಲಿಗೆ ಹೋಗಲೇ ಬೇಕಿತ್ತು. ಅಷ್ಟು ದೂರ ಹೋಗುವುದಕ್ಕೆ ನನ್ನ ಮನೋಭಾವವೂ ಕಾರಣವಾಯ್ತು. ನಾನು ಯೋಚಿಸಿದ್ದರೆ, ಮಲ್ಲಪ್ಪನವರನ್ನು ಕೇಳಿ ಸ್ಥಳೀಯವಾಗಿಯೇ ಉತ್ತಮ ಕೆಲಸವೊಂದನ್ನು ದೊರಕಿಸಿಕೊಳ್ಳಬಹುದಿತ್ತು. ಆದರೆ ನನ್ನ ಸ್ವಾಭಿಮಾನ ಮಲ್ಲಪ್ಪನವರಲ್ಲಿಯೂ ಸಲಿಗೆಯನ್ನು ಕಂಡುಕೊಳ್ಳಲು ಬಿಡಲಿಲ್ಲ. ನನ್ನ ಭವಿಷ್ಯಕ್ಕೆ ನಾನೇ ಜವಾಬ್ದಾರನಾಗಬೇಕೆಂದು ನನ್ನ ಮನಸ್ಸು ಹವಣಿಸುತ್ತಿತ್ತು. ಕೊನೆಗೆ ಡೈರಿ. ಪೌಲ್ಟ್ರಿ ಫಾರಂ ಏನನ್ನಾದರೊಂದು ಮಾಡಿ ಆ ಮೂಲಕವಾದರೂ ದುಡಿಯಬೇಕೆನ್ನುವ ಛಲ ನನ್ನದು. ಹೀಗಾಗಿ ನಾನು ತೋರಿದ ದಾರಿಯಲ್ಲೇ ನಡೆದೆ. ಮಲ್ಲಪ್ಪನವರ ಮನೆಗೆ ಹೇಳಲು ಹೋದೆ. 'ಓ! ಗುಡ್ ನ್ಯೂಸ್...ಹೋಗಿ ಬಾ ಒಳ್ಳೆದಾಗಲಿ' ಎಂದಷ್ಟೇ ನುಡಿದರು. ಹಲವು ವರ್ಷಗಳ ಗಾಢ ಸಂಬಂಧದ ಅಭಿಮಾನದಿಂದುಂಟಾದ ಅಗಲಿಕೆಯ ನೋವು ಅವರ ಮುಖದಲ್ಲಿ ಮಿಂಚಿತು.

ಶಾಲೆಯ ಉಪಾಧ್ಯಾಯನಾಗಿ ನಾನು ಆ ಹಳ್ಳಿಯಲ್ಲಿ ನನ್ನ ಕೆಲಸಗಳಲ್ಲಿ ಮುಳುಗಿದೆ. ಹಿಂದುಳಿದ ಪ್ರದೇಶವಾದ್ದರಿಂದ ಶಾಲೆಯ ದುರಸ್ತಿ ಕಷ್ಟಕರವಾಗಿತ್ತು. ಕಟ್ಟಡ, ಜಾಗ, ಉಪಕರಣಗಳು, ಮಕ್ಕಳು, ಜನ ಎಲ್ಲವನ್ನೂ ಹೊಂದಿಸಿಕೊಂಡು ನಡೆಯುವುದು ದುಸ್ತರವೆನಿಸಿತ್ತು. ಹೊಸ ಹುರುಪಿನಿಂದಾಗಿ ಅವುಗಳು ಒಂದೊಂದಾಗಿ ನಿಯಂತ್ರಣಕ್ಕೆ ಸಿಲುಕಿದ್ದವು. ಮಕ್ಕಳ ನಡುವಿನ ವಾತಾವರಣ ಸಂತೋಷವನ್ನು ತರುತ್ತಿತ್ತು. ಈಜು, ಸ್ವಂತ ಅಡಿಗೆಯ ಊಟ, ಪಾಠ ನನ್ನ ದಿನಚರಿಯಾದವು. ತುಮಕೂರಿನ ಬದುಕು ಕೇವಲ ನೆನಪಾಗಿ ಉಳಿಯಿತು. ಏಕಾಂತದ ಸನ್ನಿವೇಶಗಳಲ್ಲಿ ಆ ನೆನಪಿನ ಸುರುಳಿ ಬಿಚ್ಚುತ್ತಿತ್ತು. ಆ ನೆನಪಿನಲ್ಲಿ ನಾನು ಮಲ್ಲಪ್ಪನವರಿಗೆ ಆಗಿಂದಾಗ್ಗ ಪತ್ರಗಳನ್ನು ಬರೆಯುತ್ತಿದ್ದೆ. ಪತ್ರಗಳಲ್ಲಿ ಕೆಲವೊಮ್ಮೆ ಅವರ ಉಪಕಾರಗಳನ್ನು ಸ್ಮರಿಸುತ್ತಿದ್ದೆ. ನಾನು ಬರೆದ ಪ್ರತಿ ಕಾಗದಕ್ಕೂ ಮಲ್ಲಪ್ಪನವರು ತಕ್ಷಣದಲ್ಲಿ ಪ್ರತಿಕ್ರಿಯಿಸುತ್ತಿದ್ದರು. ಆ ಪತ್ರಗಳಲ್ಲಿ ಅವರು ನನ್ನ ಮನಸ್ಸಿನ ಗೊಂದಲಗಳಿಗೆ ಸಾಂತ್ವನ ನುಡಿಯುತ್ತಿದ್ದರು. ಅಲ್ಲದೆ ಮುಂದಿನ ಜೀವನದ ಸಾಧನೆಯ ಬಗ್ಗೆ ಮಾರ್ಗದರ್ಶನ ಮಾಡುತ್ತಿದ್ದರು.

ಈ ಮಧ್ಯೆ ಸಂಘ ಏನೇನೋ ಬದಲಾವಣೆಗಳನ್ನು ಕಂಡಿತು. ಆ ವೇಳೆಗೆ ಹಾಸ್ಟೆಲ್‌ನ ಕಟ್ಟಡದ ಕೆಲಸವೂ ಮುಗಿದಿತ್ತು. ಆದರೆ ಮಲ್ಲಪ್ಪನವರು ಈ ಅವಧಿಯಲ್ಲಿ ಬೆಂಗಳೂರು-ಮೈಸೂರು ಅಂತೆಲ್ಲಾ ತಿರುಗಾಡಿದರು. ಈ ಎಲ್ಲ ಸಮಸ್ಯೆಗಳ ನಡುವೆಯೂ ಹಾಸ್ಟೆಲ್ ಹೇಗೋ ನಡೆದಿತ್ತು. ಮಲ್ಲಪ್ಪನವರನ್ನೊಮ್ಮೆ ಈ ಮಧ್ಯೆ ಕಂಡಾಗ ಅವರು 'ನೀನೊದ್ಮೇಲೆ ರಾಮಯ್ಯ, ಆ ಜಾಗಕ್ಕೆ ಯಾರೂ ಬರಲಿಲ್ಲ' ಅಂತ ಪೇಚಾಡಿದರು. ಹಾಸ್ಟೆಲ್ ಸ್ಥಿತಿಗತಿಗಳ ಬಗ್ಗೆ ನೊಂದು ನುಡಿದರು. ಜನರಲ್ಲಿ ಬೆಳೆಯುತ್ತಿರುವ

ವ್ಯಾಪಾರೀ ದೃಷ್ಟಿಯ ಬಗ್ಗೆ ತಮ್ಮ ಅಸಮಾಧಾನವನ್ನು ತೋರಿಸಿದರು. ಜನಾಂಗದವರಿಂದಲೇ ಕೇಳಿಬರುವ ಕಟುಮಾತುಗಳಿಗೆ, ಅವರು ತೋರುವ ಅಸೂಯೆಯ ಭಾವನೆಗೆ ಮಲ್ಲಪ್ಪನವರ ಮನಸ್ಸು ಬೇಸತ್ತಿದ್ದುದು ಕಂಡುಬಂತು. ಮಲ್ಲಪ್ಪನವರಿಂದಲೇ ಕಲಿತ ನನಗೆ, ಅವರಿಗೆ ಇಂಥ ಸ್ಥಿತಿಯಲ್ಲಿ ಹೇಗಿರಬೇಕೆಂದು ಧೈರ್ಯ ಹೇಳುವ ಅರ್ಹತೆ ಇರಲಿಲ್ಲ. ಆದರೆ ಈ ಬೆಳವಣಿಗೆಗಳ ಬಗ್ಗೆ ತುಂಬಾ ನೋವಾಯಿತು. ಅವರ ಯೋಚನೆಗಳಿಗೆ ಮೌನವೇ ನನ್ನ ಪ್ರತಿಕ್ರಿಯೆಯಾಯಿತು.

ಮಲ್ಲಪ್ಪನವರು ಮಾತ್ರ ಜನಾಂಗದ ಐಕ್ಯತೆಯ ಬಗ್ಗೆ ಉನ್ನತ ಧ್ಯೇಯಗಳನ್ನು ಹೊಂದಿದ್ದರು. ವೈಯಕ್ತಿಕ ಭಿನ್ನಾಭಿಪ್ರಾಯಗಳೇನೇ ಇದ್ದರೂ ಆ ದೃಷ್ಟಿಯಿಂದ ರಾಜಿಮಾಡಿಕೊಳ್ಳಬೇಕೆಂಬುದು ಅವರ ಅನಿಸಿಕೆ. ತಾವೇ ಅದರ ಮೊದಲ ನಿದರ್ಶನವಾಗಿ ನಿಂತರು. ತಮ್ಮನ್ನು ಟೀಕಿಸುವವರ ಮನೆಯ ಸಮಾರಂಭಗಳಿಗೆ ಹೋದರು. ತಮ್ಮನ್ನು ಕಂಡು ಅಸೂಯೆ ಪಡುವವರನ್ನು ಕರೆದು ಸತ್ಕರಿಸಿದರು. ಜನಾಂಗದಲ್ಲಿ ಅಭಿವೃದ್ಧಿ ಕಾಣುತ್ತಿರುವವರನ್ನು ಸನ್ಮಾನಿಸಿದರು. ಮಲ್ಲಪ್ಪನವರ ಸ್ನೇಹಿತರಾದ ಚಿಕ್ಕಣ್ಣ ಎಂಬುವವರು ಭದ್ರಾವತಿಯಲ್ಲಿದ್ದರು. ಚಿಕ್ಕಣ್ಣನವರಿಗೆ ಅವರ ಇಲಾಖೆಯಲ್ಲಿ ಬಡ್ತಿ ದೊರೆತ ಬಗ್ಗೆ ಮಲ್ಲಪ್ಪನವರಿಗೆ ಅತೀವ ಸಂತೋಷ. ಒಂದು ಸಂತೋಷಕೂಟವನ್ನು ಏರ್ಪಡಿಸಿ ಅದಕ್ಕೆ ಅವರನ್ನು ಆಹ್ವಾನಿಸಿ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಜಿಲ್ಲಾಧಿಕಾರಿ ನಂಜುಂಡಯ್ಯನವರಿಗೆ ವರ್ಗವಾದಾಗಲೂ ನಡೆದ ಔತಣಕೂಟದಲ್ಲಿ ಮಲ್ಲಪ್ಪನವರು ಭಾಗವಹಿಸಿದ್ದರು. ಇಂತಹ ಅಪರೂಪದ ವ್ಯಕ್ತಿತ್ವವೇ ಮಲ್ಲಪ್ಪನವರು ಜನಾಂಗದವರಲ್ಲಿ ಅಭಿಮಾನ ಮೂಡಿಸಲು ಕಾರಣವಾಯಿತು.

ಕಾಲಚಕ್ರ ಉರುಳಿದಂತೆ ಇನ್ನೂ ಬದಲಾವಣೆಗಳಾದವು. ನನ್ನ ಮತ್ತು ಮಲ್ಲಪ್ಪನವರ ನೆಲೆಗಳೂ ಬದಲಾದವು. ನಾನು ಕೊರಟಗೆರೆ ತಾಲ್ಲೂಕಿನ ಪಾತಗಾನಹಳ್ಳಿ ಪ್ರೌಢಶಾಲೆಯ ಮುಖ್ಯೋಪಾಧ್ಯಾಯನಾಗಿ ಹೋಗಬೇಕಾಯಿತು. ಮಲ್ಲಪ್ಪನವರು ಬೆಂಗಳೂರಿನ ಖಾದಿ ಬೋರ್ಡ್ ಸೇರಿದರು. ನನ್ನ ಇಂಟರ್-ಮೀಡಿಯೇಟ್ ಶಿಕ್ಷಣದ ಅವಧಿಯಲ್ಲೇ ನನಗೆ ಮದುವೆ ಮಾಡಲು ಯೋಚಿಸಿದ ನಮ್ಮ ಮನೆಯವರ ಯೋಜನೆ ಈಗ ಫಲಿಸಿತು. ಕಾಲೇಜು ಶಿಕ್ಷಣ ಪಡೆದ, ದೂರದ ಸಂಬಂಧದ ಹೆಣ್ಣಿನೊಂದಿಗೆ ನನ್ನ ಮದುವೆ ನಿಶ್ಚಯವಾಯಿತು. ತುಮಕೂರಿನ ಒಕ್ಕಲಿಗರ ಹಾಸ್ಟೆಲ್ ಕಟ್ಟಡದಲ್ಲಿಯೇ ಮದುವೆಯ ಏರ್ಪಾಡು. ಅದ್ಧೂರಿಯ ಸಮಾರಂಭವಲ್ಲದಿದ್ದರೂ ನನ್ನ ಮಾವನವರ ಆಸಕ್ತಿಯ ಮಿತಿಯಲ್ಲಿ ಉತ್ತಮ ಏರ್ಪಾಡು. ನಿಕಟವರ್ತಿಗಳೆಲ್ಲರೂ ಸಮಾರಂಭಕ್ಕೆ ಆಗಮಿಸಿದ್ದರು. ನಾನು ಮಲ್ಲಪ್ಪನವರನ್ನು ಬೆಂಗಳೂರಿನಲ್ಲೇ ಆಹ್ವಾನಿಸಿದ್ದೆ. ಮಲ್ಲಪ್ಪನವರು ಸಮಾರಂಭಕ್ಕೆ ಬಂದಿದ್ದು ಅದಕ್ಕೊಂದು ವಿಶೇಷ ಕಳೆ ತಂದಿತ್ತು. ಇದರಿಂದ ನನಗೆ ಎಲ್ಲರಿಗಿಂತ ಹೆಚ್ಚು ಸಂತೋಷ. ಮಲ್ಲಪ್ಪನವರು ಬಂದಾಗ ನಾನು ಮದುಮಗ ವೇಷಧಾರಿಯಾಗಿ ಮದುವೆಮನೆಯ ಗ್ರೀನ್ ರೂಂನಲ್ಲಿ ಕುಳಿತಿದ್ದೆ. ಸುತ್ತಲ ಹೆಂಗಸರು ಸಂಭ್ರಮದ ತರಾತುರಿಯಲ್ಲಿದ್ದರು. ಮಲ್ಲಪ್ಪನವರಿಗೊಂದು ಕುರ್ಚಿ ಹಾಕಿ ಕೂಡಿಸಿಯಾಯ್ತು. ಆರೋಗ್ಯ ಸಮಾಚಾರದ ಕುಶಲ ಪ್ರಶ್ನೆಗಳು. ಅನಂತರ ಮಲ್ಲಪ್ಪನವರು ನೇರವಾಗಿ ಮದುವೆ ವಿಷಯಕ್ಕೆ ಬಂದರು. 'ಏನಯ್ಯಾ, ಹುಡುಗಿ ನೋಡಿದರೆ ವಿದ್ಯಾವಂತೆ ಹಂಗೆ ಕಾಣಿಸ್ತಾಳೆ. ಏನು ಓದಿದ್ದಾಳೆ ?' ಎಂದರು. 'ಪಿ.ಯು.ಸಿ. ಶಿಕ್ಷಣ ಅಷ್ಟೆ ಸರ್' ನಾನೆಂದೆ. 'ಓ ! ಅಷ್ಟೆ ಅಂತೀಯಲ್ಲಯ್ಯ........ಓದಾಕ್ ಬರುತ್ತಿಲ್ಲೋ ಬಿಡು....... ನೀನು ಸರದಾರ ಆಗ್ಬಿಟ್ಟೆ. ಕುರ್ಚಿಯಲ್ಲಿ ಕಾಲುಮೇಲೆ ಕಾಲು ಹಾಕಿ ಕೂತು ಎಲೆ, ಪೇಪರ್ ತಕ್ಕಳೀ........ಓದೇ ಅದರಲ್ಲೇನೈತೆ ಅಂತ ಜಬರ್‌ದಸ್ತ್ ಮಾಡೋಕೆ ಅವಕಾಶ ಅನ್ನೋ ಇಲ್ಲೋ' ಎಂದರು. ನನಗೆ ನಾಚಿಕೆಯಲ್ಲೂ ನಗು. ಮಲ್ಲಪ್ಪನವರೇ ಮುಂದಕ್ಕೆ ಮಾತನಾಡಿ 'ನಿಮ್ಮ ಮಾವ ನನಗೆ ತುಂಬಾ ಬೇಕಾದವರು ಕಣಯ್ಯ........ಅವರು ನಾನು ಅನೇಕ ವರ್ಷಗಳಿಂದ ಒಬ್ಬರನ್ನೊಬ್ಬರು ಬಲ್ಲವರು' ಮುಂತಾಗಿ ಪರಿಚಯದ ಮಾತುಗಳನ್ನಾಡಿದರು. ಅವರ ಆಗಮನದಿಂದ ಮದುವೆಯ ಸಂಭ್ರಮ ಹೆಚ್ಚಿತು. ಅವರು ನನ್ನ ಬಗ್ಗೆ ಇರಿಸಿಕೊಂಡಿದ್ದ ಅಭಿಮಾನಕ್ಕೆ ನನ್ನ ಮನಸ್ಸು ಬಾಗಿತ್ತು.

ಆಗ ಅವರು ಮೈಸೂರಿನ ವಿಭಾಗಾಧಿಕಾರಿಗಳ ಕಛೇರಿಯಲ್ಲಿ ಜೆ.ಎ. ಆಗಿ ಸೇರಿದ್ದರು. ಅವರನ್ನು ಆಗಾಗ್ಗೆ ಭೇಟಿ ಮಾಡುವುದು ಕಷ್ಟಸಾಧ್ಯವಾಗಿತ್ತು. ಒಮ್ಮೆ ಎಸ್.ಎಸ್.ಎಲ್.ಸಿ. ಪರೀಕ್ಷೆಯ ಮೌಲ್ಯ-ಮಾಪನದ ಸಲುವಾಗಿ ನಾನು ಮೈಸೂರಿಗೆ ಹೋಗಿದ್ದೆ. ಮಲ್ಲಪ್ಪನವರೂ ಮೈಸೂರಿನಲ್ಲಿದ್ದರು. ಅವರ ಮನೆಯಲ್ಲಿ ಇಳಿದುಕೊಳ್ಳುವ ಯೋಚನೆ ಬಂದರೂ ಅವರಾಗಲೇ ಅನೇಕ ಮಕ್ಕಳ ತಂದೆಯಾಗಿ ದೊಡ್ಡ ಸಂಸಾರವನ್ನು ಹೊತ್ತಿದ್ದರಿಂದ ಅಲ್ಲಿರುವುದು ಉಚಿತವಲ್ಲವೆಂದು ಭಾವಿಸಿ ಮಹಾರಾಜ ಕಾಲೇಜ್ ಹಾಸ್ಟೆಲ್‌ನಲ್ಲಿ ಇಳಿದುಕೊಂಡಿದ್ದೆ. ಅಲ್ಲಿಯೇ ಊಟದ, ವಸತಿಯ ವ್ಯವಸ್ಥೆ. ನಾನು ಮೈಸೂರಿಗೆ ಬಂದಿರುವ ಬಗ್ಗೆ ಮಲ್ಲಪ್ಪನವರನ್ನು ನೋಡಲು ಹೋದೆ. ಅವರು 'ಮನೆಯಲ್ಲಿಯೇ ಇರು' ಅಂತ ಒತ್ತಾಯಿಸಿದರು. 'ನಾನಾಗಲೇ ಮಹಾರಾಜ ಕಾಲೇಜು ಹಾಸ್ಟೆಲ್‌ನಲ್ಲಿದ್ದೇನೆ. ಏನೂ ತೊಂದರೆಯಿಲ್ಲ. ನೀವೇನೂ ಯೋಚಿಸ ಬೇಡಿ' ಅಂತ ಸಮಾಧಾನಿಸಿದ್ದೆ. ಹಾಸ್ಟೆಲಿನ ಊಟವೋ, ಮೈಸೂರಿನ ಹವೆಯೋ ನನ್ನ ದೇಹಕ್ಕೆ ಒಗ್ಗದೆ ಕೆಲ ದಿನಗಳಲ್ಲಿಯೇ ನಾನು ಅಸ್ವಸ್ಥನಾದೆ. ದಿನೇ ದಿನೇ ಪರಿಸ್ಥಿತಿ ಹದಗೆಟ್ಟು ಖಾಯಿಲೆ ಉಲ್ಬಣಿಸಿತು. ದಿನವಿಡೀ ಜ್ವರ ಕಾಯುತ್ತಿತ್ತು. ಆಹಾರ ಸೇರುತ್ತಿರಲಿಲ್ಲ. ಈ ಮಧ್ಯೆ ನನ್ನನ್ನು ನೋಡಿಕೊಳ್ಳಲು ಯಾರೂ ಇರಲಿಲ್ಲ. ಈ ವಿಚಾರವನ್ನು ನಾನು ಮಲ್ಲಪ್ಪನವರಿಗೆ ತಿಳಿಸಿರಲಿಲ್ಲ. ಆದರೂ ನನ್ನ ಸ್ನೇಹಿತರಿಂದ ಹೇಗೋ ಅವರ ಕಿವಿಗೆ ವಿಚಾರ ಬಿದ್ದು ಅದರ ಬಗ್ಗೆ ತೀವ್ರ ಕಾಳಜಿ ವಹಿಸಿದರು. ಈಗ ಇಂಜಿನಿಯರ್ ಆಗಿರುವ ಅವರ ಮಗ ರಾಜು ಕೈಲಿ ಗಂಜಿ, ಹಾಲು ಕೊಟ್ಟು ನೋಡಿಕೊಂಡು ಬಾ ಎಂದು ಕಳುಹಿಸಿದರು. ಅಂದಿನಿಂದ ನಾನು ಮೈಸೂರಿನಲ್ಲಿರುವವರೆಗೆ, ನನ್ನ ಆರೋಗ್ಯ ಪೂರ್ತಿ ಉತ್ತಮಗೊಳ್ಳುವವರೆಗೆ ಅವರ ಶುಶ್ರೂಷೆ ನಡೆಯಿತು. ಪ್ರತಿ ದಿನ ಮನೆಯಿಂದ ತಯಾರಾದ ಗಂಜಿ, ಹಾಲು, ಬಿಸಿನೀರು ಅಲ್ಲದೆ ಹಣ್ಣು, ಮಾತ್ರೆ, ಇಂಜೆಕ್ಷನ್ ಅಷ್ಟು ಮೀರಿ ಡಾಕ್ಟರ್ ಪರೀಕ್ಷೆಗಳ ಸೇವೆಯನ್ನು ನಾನು ಅವರಿಂದ ಪಡೆದೆ. ನಾನು ಪೂರ್ಣ ಚೇತರಿಸಿಕೊಂಡೆ. ಮಲ್ಲಪ್ಪನವರನ್ನು ಕಂಡು ಹೇಳಿಬರಲು ಹೋದಾಗ ಅವರು 'ನಾನು ಮೊದಲೇ ಹೇಳ್ಲಿಲ್ವೆ ನಮ್ಮ ಹತ್ರ ಏನು ಸಂಕೋಚ ನಿನ್ಗೆ, ಇಂಥ ದಡ್ಡತನ ಮಾಡ್ಬಾರ್ದು ನಾವೇನು ನಿನ್ಗೆ ಹೊರಗಿನೋರಾ' ಅಂತ ಬಯ್ದರು. ಆ ವಾತ್ಸಲ್ಯಕ್ಕೆ ನಾನು ಎಷ್ಟು ಋಣಿಯಾದರೂ ಕಡಿಮೆಯೇ.

ಮಲ್ಲಪ್ಪನವರ ನಿವೃತ್ತಿಯ ಅವಧಿ ಹತ್ತಿರ ಬಂದಿತ್ತು. ಸರ್ಕಾರಿ ಸೇವೆಯ ಕಿಂಕರರಾಗಿ ಅವರು ಮೂವತ್ತಕ್ಕೂ ಹೆಚ್ಚು ವರ್ಷ ದುಡಿದಿದ್ದರು. ಅವರ ನಿಷ್ಕಳಂಕ ನಿಷ್ಠಾವಂತ ದುಡಿಮೆ ಅವರ ಬದುಕನ್ನು ಸಾರ್ಥಕಗೊಳಿಸಿತ್ತು. ಅಧಿಕಾರದ ನಾನಾ ಮಜಲುಗಳಲ್ಲಿ ಅವರು ಸೇವೆ ಸಲ್ಲಿಸಿದ್ದರೂ ಅದೊಂದು ಸುಪ್ಪತ್ತಿಗೆ ಎಂದು ಅವರು ಭಾವಿಸಲಿಲ್ಲ. ಸ್ಥಾನಕ್ಕೆ ತಕ್ಕ ಹಿರಿಮೆ, ಗಳಿಕೆಗೆ ತಕ್ಕ ದುಡಿಮೆಗಳನ್ನು ಕಾಯ್ದುಕೊಂಡು ಬಂದರು. ಅಧಿಕಾರ ಸ್ಥಾನಗಳಿಂದ ಯಾರನ್ನೂ ತುಳಿದವರಲ್ಲ. ಯಾರ ಅನ್ನಕ್ಕೂ ಉಪ್ಪು ಹಾಕಿದವರಲ್ಲ. ಅಂತೆಯೇ ದಬ್ಬಾಳಿಕೆ, ದುಷ್ಟತನಗಳಿಗೆ ಸೊಪ್ಪು ಹಾಕಿದವರಲ್ಲ. ಕೆಲವು ಅಲಸಿಗರು, ಅಶಿಸ್ತುಗಾರರಿಗೆ ಅವರಿಂದ ಕಹಿ ಅನುಭವವಾಗಿರಬಹುದು. ಅಂತಹವರನ್ನು ಕಂಡಾಗ ಅವರ ಸೋಟೆ ಓಂಡಿ ಬುದ್ಧಿ ಹೇಳಿದ್ದೂ ಇದೆ.

ದುಡಿತದ ಜೀವ ಅವರದು. ಯಾವ ಅವಧಿಯಲ್ಲೂ ನೆಮ್ಮದಿಯ ಹೆಸರಿನಲ್ಲಿ ಸುಮ್ಮನಿರುವುದಿಲ್ಲ. ತನ್ನ ಚಟುವಟಿಕೆಗೆ ಮುಂದಿನ ದಾರಿ ಹುಡುಕುತ್ತಿರುತ್ತಾರೆ. ಸಂಘದಿಂದ ನಡೆಯುತ್ತಿದ್ದ ಶಿರಾಗೇಟ್ ಬಳಿಯ ಪ್ರೌಢಶಾಲೆಗೆ ಒಬ್ಬ ಉತ್ತಮ ಮುಖ್ಯೋಪಾಧ್ಯಾಯ ಬೇಕಾಗಿತ್ತು. ಆಗ ಅವರು ನನ್ನೊಡನೆ ಈ ಯೋಚನೆಯನ್ನು ಹೊರಗೆಡಹಿ 'ನೋಡು ರಾಮಯ್ಯ. ನೀನು ಯಾವುದೋ ದೂರದ ಹಳ್ಳಿಯಲ್ಲಿದ್ದೀಯ. ನನ್ನ ಕಣ್ಣಿಗೆ ಕಂಡಂತೆ ಬೆಳೆದ ನಿನಗಿಂತ ನಾನು ಗೊತ್ತಿಲ್ಲದೋರ್ನ ಹೇಗೆ ಆರಿಸ್ಲಿ, ನೀನು ಎಲ್ಲಿದ್ದರೂ ಚೆನ್ನಾಗಿ ಕೆಲ್ಸ ಮಾಡಿಕೊಂಡು ಹೋಗ್ತೀಯ ಅಂತ ನಂಬಿಕೆ ನನಗಿದೆ. ನಮ್ಮ ಸ್ಕೂಲ್ಗೇ ಯಾಕೆ ಬಂದ್ಬಿಡಬಾರದು ಅಂತೀನಿ. ನಿನಗೂ ನೆಲೆ ಆಗ್ತದೆ, ನನಗೂ ಅದರ ಯೋಚನೆ ತಪ್ಪುತ್ತದೆ' ಎಂದು ಆತ್ಮೀಯತೆಯ ಆಹ್ವಾನ

ನೀಡಿದರು. ನನ್ನ ಶಕ್ತಿ ಸಾಮರ್ಥ್ಯಗಳ ಬಗ್ಗೆ ಮಲ್ಲಪ್ಪನವರು ಯೋಚಿಸಿದ್ದರೋ ಇಲ್ಲವೋ ಒಟ್ಟಿನಲ್ಲಿ ನನ್ನ ಬಗ್ಗೆ ನಂಬಿಕೆ ಅವರಿಗೆ. ಮುಂದೆ ಅದನ್ನು ನಾನು ಹುಸಿಗೊಳಿಸಲಿಲ್ಲ.

ಈ ಮಧ್ಯೆ ಹಿಂದುಳಿದ ವರ್ಗಗಳ ಹಿತಚಿಂತನೆ ಹಾಗೂ ರಾಜ್ಯ ಉಣ್ಣೆನೇಕಾರರ ಸಮ್ಮೇಳನಗಳನ್ನು ಮಲ್ಲಪ್ಪನವರು ನಡೆಸಿ ರಾಜ್ಯ ಹಿರಿಯ ರಾಜಕಾರಣಿಗಳ ಗಮನ ಸೆಳೆದರು. ಹಿಂದುಳಿದವರಿಗಾಗಿ ಮಲ್ಲಪ್ಪನವರು ಕೈಗೊಂಡ ಕಾರ್ಯಗಳು ಅವರನ್ನು ರಾಜ್ಯಮಟ್ಟದಲ್ಲಿ ಗುರುತಿಸುವಂತೆ ಮಾಡಿದವು. ಸರ್ಕಾರಿ ಸೇವೆಯಿಂದ ವಿಶ್ರಾಂತರಾದ ಕಾಲದಲ್ಲಿ ಅವರು ರಾಜ್ಯದ ಹಿಂದುಳಿದವರ ಮತ್ತು ಅಲ್ಪಸಂಖ್ಯಾತರ ಗುಂಪಿನ ಪ್ರಬಲ ನಾಯಕರಾಗುವತ್ತ ಮುನ್ನಡೆದಿದ್ದರು. ಈ ಬೆಳವಣಿಗೆಯೇ ಅವರನ್ನು ರಾಜ್ಯದ ಕುರಿ ಮತ್ತು ಉಣ್ಣೆ ಅಭಿವೃದ್ಧಿ ಮಂಡಲಿಯ ಅಧ್ಯಕ್ಷರನ್ನಾಗಿ ರೂಪಿಸಿತು. ಆ ಹಿರಿಯ ಸ್ಥಾನದಲ್ಲಿ ನಿಂತ ಮಲ್ಲಪ್ಪನವರಿಗೆ ಹೊಸ ಶಕ್ತಿ ಬಂದಂತಾಗಿತ್ತು. ಅಲ್ಪಸ್ವಲ್ಪ ಕೆಲಸಗಳನ್ನು ಜನರಿಗೆ ಮುಟ್ಟಿಸಬೇಕೆಂದರೆ ಒಂದು ಅಧಿಕಾರದ ಸ್ಥಾನವಿರಬೇಕೆಂಬುದನ್ನು ಮಲ್ಲಪ್ಪನವರು ನಂಬಿದ್ದರೆಂದು ತೋರುತ್ತದೆ. ಅಂತೆಯೇ ಅದರ ಇತಿಮಿತಿಗಳನ್ನು ಬಲ್ಲ ಅವರು ಯಾವತ್ತೂ ಆ ಸ್ಥಾನಗಳಿಂದ ಅಪಾಯಕಾರಿ ಎನಿಸಲಿಲ್ಲ. ಅಂತಹ ಅಪಾಯದ ಸೂಚನೆಗಳನ್ನು ಕಂಡ ಕ್ಷಣವೇ ಅವರ ಕಾಲಿಗೆ ಮುಳ್ಳು ಚುಚ್ಚಿದಂತಾಗುತ್ತಿತ್ತು. ಆ ಲಕ್ಷಣಗಳನ್ನು ಕಂಡೇ ಅವರು ಕುರಿ ಅಭಿವೃದ್ಧಿ ಮಂಡಲಿಯಿಂದ ಕೆಲವೇ ತಿಂಗಳುಗಳಲ್ಲಿ ಹೊರಬಂದರು. ಅವರ ಸ್ವಾಭಿಮಾನ, ಆತ್ಮಸ್ಥೈರ್ಯ ಅವರನ್ನು ಅಷ್ಟೇ ಸೂಕ್ಷ್ಮ ಜಾಗೃತಭಾವದಲ್ಲಿಟ್ಟಿದ್ದವು. ಮಂಡಲಿಯಲ್ಲಿರುವ ಅವಧಿಯಲ್ಲಿಯೇ ಅವರು ಅನೇಕ ರಚನಾತ್ಮಕ ಕಾರ್ಯಗಳನ್ನು ಕೈಗೊಂಡರು. ಆ ಸಾಧನೆಗಳ ಪಟ್ಟಿ ಇಲ್ಲಿ ಅಪ್ರಸ್ತುತ. ಆದರೆ ರಾಜ್ಯದ ಉಣ್ಣೆ ನೇಕಾರರು ಅವರನ್ನು ಇಂದಿಗೂ ನೆನೆಯುತ್ತಾರೆಂದ ಮೇಲೆ ಅದರ ಮಹತ್ವ ಅರಿವಾಗದೇ ಇರುವುದಿಲ್ಲ.

ಮಲ್ಲಪ್ಪನವರೀಗ ಅಧಿಕಾರದ ಎಲ್ಲ ಅಂಟುಗಳಿಂದ ಮುಕ್ತವಾಗಿದ್ದಾರೆ. ಅಧಿಕಾರದ ಮುಳ್ಳಿನ ಹಾಸಿಗೆಯ ಅನುಭವ ಅವರನ್ನು ಅದರ ವಾಸನೆಯಿಂದ ದೂರವಿರಿಸಿದೆ. ಅದು ಅವರ ವೈಯಕ್ತಿಕ ಜೀವನಕ್ಕೆ ಚೈತನ್ಯವನ್ನು ನೀಡಿತು. ಗೃಹಸ್ಥರಾಗಿ ತಮ್ಮ ಕುಟುಂಬದ ಕಡೆ ಗಮನ ನೀಡುವಲ್ಲಿ ಅದು ಸಹಕರಿಸಿತು. ಮಲ್ಲಪ್ಪನವರು ಗೃಹಜೀವನದಲ್ಲಿ ನೋವು–ನಲಿವುಗಳನ್ನು ಹಂಚಿಕೊಂಡವರು. ದೊಡ್ಡ ಸಂಖ್ಯೆಯಲ್ಲೇ ಹೆಣ್ಣು–ಗಂಡು ಮಕ್ಕಳನ್ನು ಪಡೆದ ತುಂಬು ಜೀವನ ಅವರದು. ಅವರ ವ್ಯಕ್ತಿತ್ವದ ಏರಿಳಿತಗಳನ್ನು ಸಮಾನವಾಗಿ ತೂಗಿಸಿಕೊಂಡ ಸಹಧರ್ಮಿಣಿ. ಗಂಡು ಮಕ್ಕಳು ವಿದ್ಯಾವಂತರಾದರು. ಹೆಣ್ಣು ಮಕ್ಕಳು ಉತ್ತಮ ಮನೆ ಸೇರಿದರು. ಗಂಡು ಮಕ್ಕಳು ಮತ್ತು ಅಳಿಯಂದಿರು ಉನ್ನತ ಸ್ಥಾನಗಳನ್ನು ಗಳಿಸಿಕೊಂಡರು. ಈ ದೃಷ್ಟಿಯಿಂದ ನೆಮ್ಮದಿಯ ಜೀವನವನ್ನು ಸಾಗಿಸಿದ ಮಲ್ಲಪ್ಪನವರು ಭಾಗ್ಯಶಾಲಿಗಳೇ. ಅವರ ಸಂತೋಷಕ್ಕೆ ಎಣೆ ಇಲ್ಲವಾಗಿತ್ತು. ಈ ಅವಧಿಯಲ್ಲೇ ಅವರ ನೆಮ್ಮದಿಯ ಜೀವನಕ್ಕೊಂದು ಸಿಡಿಲು ಎರಗಬೇಕೆ ? ಅವರ ಹೆಂಡತಿ ಕ್ಯಾನ್ಸರ್ ರೋಗಕ್ಕೆ ತುತ್ತಾದರು. ಮಕ್ಕಳೆಲ್ಲ ದೂರದ ಊರುಗಳಿಗೆ ಸೇರಿದ್ದರು. ಗಂಡ ಹೆಂಡತಿ ಇಬ್ಬರೇ ಒಂದು ಗೂಡಿನಲ್ಲಿ. ಮಲ್ಲಪ್ಪನವರಿಗೆ ಒಂದು ಕೈ ಮುರಿದ ಅನುಭವ. ತಾನು ಏಕಾಂಗಿ ಆದೆನೆಂಬ ಭಾವನೆ. ಅವರ ಗೃಹಜೀವನಕ್ಕೆ ದೊಡ್ಡ ಪೆಟ್ಟು. ಅವರು ಅಸಹಾಯಕರಾದರು. ಆದರೂ ಅವರ ಕೈ ಆಸರೆಗಾಗಿ ಯಾರಿಗೂ ಚಾಚಲಿಲ್ಲ. ಸ್ವಂತ ಮಕ್ಕಳನ್ನು ಅವಲಂಬಿಸದ ಅವರು ಮತ್ತೊಬ್ಬರಿಗೆ ತೊಂದರೆ ಕೊಟ್ಟಾರೆ ?

ಕಾಳಿದಾಸ ವಿದ್ಯಾಸಂಸ್ಥೆ ನನ್ನನ್ನು ಕೈಬೀಸಿ ಕರೆದಿತ್ತು. ಮಲ್ಲಪ್ಪನವರ ಆದರ್ಶಗಳಲ್ಲಿ ಬೆಳೆದ ಆ ಸಂಸ್ಥೆಯಲ್ಲಿ ಕಿಂಚಿತ್ತಾದರೂ ಸೇವೆ ಸಲ್ಲಿಸಬೇಕೆಂಬ ಮಹತ್ವಾಕಾಂಕ್ಷೆಗೆ ಕಾಲ ಒದಗಿತ್ತು. ಕಾಳಿದಾಸ ವಿದ್ಯಾವರ್ಧಕ ಸಂಘಕ್ಕೆ ಭದ್ರಬುನಾದಿ ಹಾಕಿದ, ಅದರ ಶ್ರೇಯಸ್ಸಿಗಾಗಿ ಹಗಲಿರುಳು ದುಡಿದ ಸೇವಾಸಕ್ತ ಶ್ರೀ

ಸಿರಿಯಪ್ಪ ಒಡೆಯರ್ ಅವರ ಪಾತ್ರ ಇಲ್ಲಿ ಸ್ಮರಣೀಯ. ಅವರು ನನ್ನ ಹಾದಿಯನ್ನು ಸುಗಮಗೊಳಿಸಿದರು. ನಾನು, ಮಲ್ಲಪ್ಪನವರು ಒಂದೇ ನೆಲೆಯಲ್ಲಿ ನಿಲ್ಲುವಂತೆ ಮಾಡಿದ ಕೀರ್ತಿ ಅವರದು.

ನಾನು ಮಲ್ಲಪ್ಪನವರಿಗೆ ಹತ್ತಿರವಾಗುತ್ತಿದ್ದೆ. ಮಲ್ಲಪ್ಪನವರಿಗೂ ಅದು ನೆಮ್ಮದಿಯ ವಿಷಯ ವಾಗಿತ್ತು. ಅವರಿಗೆ ಸಂಘದ ಬೆಳವಣಿಗೆಯ ಬಗ್ಗೆ ಹೆಮ್ಮೆ. ಆ ಬಗ್ಗೆ ಅವರು ನನ್ನ ಬಳಿ ನೇರವಾಗಿ ಹೇಳರು. ತಮ್ಮ ಆತ್ಮೀಯರಾದ ಗಾಂಧೀ ಅನುಯಾಯಿ ಶ್ರೀ ಜಿ. ವಿ. ನಾರಾಯಣಮೂರ್ತಿ ಅಂಥವರ ಬಳಿ ಈ ಬಗ್ಗೆ ಪ್ರಸ್ತಾಪಿಸುವರು. ಸಾರ್ವಜನಿಕ ಅಭಿಪ್ರಾಯಗಳ ಕಡೆ ಅವರ ಕಿವಿ ಓಗ್ಗುತ್ತಿದ್ದುದನ್ನು ನಾನು ಗಮನಿಸುತ್ತಿದ್ದೆ. ಸಂಸ್ಥೆಯ ಬಗ್ಗೆ ಯಾರಾದರೂ ಮೆಚ್ಚಿಗೆ ನುಡಿದರೆ ಆ ಬಗ್ಗೆ ಅವರಿಗೆ ಹಿಗ್ಗು. ಯಾರಾದರೂ ಕೊಂಕು ನುಡಿದರೆ ತಲೆ ಕೆಡಿಸಿಕೊಳ್ಳುವ ಪ್ರವೃತ್ತಿ ಕಾಣುವುದು. ಎಷ್ಟೊ ಸಾರಿ ನನಗೂ ಮಲ್ಲಪ್ಪನವರಿಗೂ ಬಿಸಿಯಾಗಿ ಮಾತುಕತೆ ನಡೆದಿವೆ. ಯಾರೋ ಮಾಡಿದ ಆಕ್ಷೇಪಣೆಗಳಿಗೆ ಮಲ್ಲಪ್ಪನವರು ತಲೆ ಕೆಡಿಸಿಕೊಂಡು ಕೆಲವು ಸಲ ಅಸ್ವಸ್ಥರಾದದ್ದುಂಟು. ಅಂತಹ ವೇಳೆಯಲ್ಲಿ ನನಗೂ ಮನಸ್ಸಿಗೆ ಬೇಸರ ವಾದದ್ದು ನಿಜ. ನಾನು ಕಟುವಾಗಿ ಒಂದೆರಡು ಬಾರಿ ಉತ್ತರ ಕೊಟ್ಟ ನೆನಪಿದೆ. ಒಂದು ಉತ್ತಮ ಆದರ್ಶಕ್ಕೆ ಬದ್ಧವಾಗಿ ಒಂದು ಸಂಸ್ಥೆಯನ್ನು ನಡೆಸುವಾಗ ಇವೆಲ್ಲ ಆಗುವುದು ಸಹಜ. ಒಂದು ಸಾರಿಯೂ ಭಿನ್ನಾಭಿಪ್ರಾಯ ತಾಳದೆ ಪರಸ್ಪರ ಇರುಸು ಮುರುಸು ಅನುಭವಿಸದೆ ಜೀವನ ಸಾಗಿಸಿದ ಸುಕೃತಶಾಲಿಗಳು ಬಹುಶಃ ಜಗತ್ತಿನಲ್ಲಿ ಯಾರೂ ಇಲ್ಲವೆಂದೇ ಭಾವಿಸುತ್ತೇನೆ. ನಮ್ಮ ಬೇಸರ, ಇರುಸು ಮುರುಸು, ಭಿನ್ನಾಭಿ ಪ್ರಾಯಗಳು ಒಬ್ಬರಿಂದೊಬ್ಬರನ್ನು ಅಗಲಿಸಲು ಬಿಡಲಿಲ್ಲವೆಂಬುದೇ ಮಹತ್ವದ್ದಾಗಿದೆ.

ನಮ್ಮ ವೈಯಕ್ತಿಕ ಅಭಿಪ್ರಾಯಗಳು ಸಂಸ್ಥೆಯ ಬೆಳವಣಿಗೆಗೆಂದೂ ಅಡ್ಡಿ ಬರಲಿಲ್ಲ. ಶಾಲೆಯ ಬೆಳವಣಿಗೆಯ ಬಗ್ಗೆ ಮಲ್ಲಪ್ಪನವರಿಗೆ ಹೆಚ್ಚು ಆಸಕ್ತಿ. ಶಾಲೆಗಾಗಿ ಪ್ರತ್ಯೇಕ ಜಾಗ, ಕಟ್ಟಡಗಳನ್ನು ಹೊಂದುವ ಬಗ್ಗೆ ಅವರು ತೀವ್ರವಾಗಿ ಯೋಚಿಸುತ್ತಿದ್ದರು. ತುಮಕೂರು ಜಿಲ್ಲೆಯ ಪ್ರಬುದ್ಧ ರಾಜಕಾರಣಿಗಳೂ, ರಾಜ್ಯದ ಮಂತ್ರಿಗಳೂ ಆಗಿದ್ದ ಶ್ರೀ ಹುಚ್ಚಮಾಸ್ತಿಗೌಡರ ಬಗೆಗಿನ ಮಲ್ಲಪ್ಪನವರ ಸ್ನೇಹ ಈ ಯೋಜನೆಯನ್ನು ಆಗುಗೊಳಿಸಿತು. ಶಾಲೆಯ ಕಟ್ಟಡಕ್ಕೆ ಜಾಗವನ್ನು ಒದಗಿಸುವಲ್ಲಿ ಅವರಿಂದ ವಿಶೇಷ ನೆರವು ದೊರೆಯಿತು. ಜೊತೆಗೆ ಅಂದಿನ ನಗರಾಡಳಿತ ಮತ್ತು ಕಾನೂನು ಸಚಿವರಾದ ಶ್ರೀ ಡಿ. ಕೆ. ನಾಯ್ಕರ್. ತುಮಕೂರು ಜಿಲ್ಲಾಧಿಕಾರಿ ಶ್ರೀ ದೊರೈರಾಜ್. ಶಿಕ್ಷಣ ಇಲಾಖೆಯ ನಿರ್ದೇಶಕರುಗಳಾದ ಡಾ॥ ಮರಿರಾಜು, ಶ್ರೀ ಹೆಚ್.ವಿ. ಶ್ರೀರಂಗರಾಜು, ಶ್ರೀ ಎಸ್. ಮಂಜಯ್ಯ, ಸಹನಿರ್ದೇಶಕರಾದ ಶ್ರೀ ಟಿ. ರಾಮಯ್ಯ, ಉಪನಿರ್ದೇಶಕರು ಗಳಾದ ಶ್ರೀ ಸಿ. ಹನುಮೇಗೌಡ, ಶ್ರೀ ಕೆ. ಹನುಮಯ್ಯ, ಶ್ರೀ ಎಸ್. ಆರ್. ಶೇಷಗಿರಿಯಪ್ಪ ಅವರುಗಳ ಸಹಕಾರವೂ ಅದಕ್ಕೆ ಕಾರಣವಾಯಿತು. ಶಾಲೆಯ ಕಟ್ಟಡಕ್ಕೆಂದು ಸಮಿತಿಯೊಂದನ್ನು ರಚಿಸಲಾಯಿತು. ಆ ಸಮಿತಿಗೆ ಜಿಲ್ಲೆಯ ಖ್ಯಾತ ಉದ್ಯಮಿ ಶ್ರೀ ಎನ್. ಆರ್. ಜಗದೀಶ್ ಅವರು ಅಧ್ಯಕ್ಷರಾದರು. ಶ್ರೀ ಕೆ. ಜಿ. ಯಡಿಯೂರಪ್ಪನವರು, ಶ್ರೀ ಗಂಗಾಬೋವಿಯವರು, ಶ್ರೀ ಟಿ. ಅನಂತರಾಮಶೆಟ್ಟರು ಮತ್ತು ಶ್ರೀ ಕಾಂತರಾಜಪ್ಪನವರು ಉಪಾಧ್ಯಕ್ಷರಾದರು. ಶ್ರೀ ಟಿ. ಪಿ. ಬ್ರಹ್ಮಯ್ಯನವರು ಮತ್ತು ನಾನು ಕಾರ್ಯ-ದರ್ಶಿಗಳಾದೆವು. ಶ್ರೀ ಕಸ್ತೂರಿ ರಮೇಶಪೈ ಅವರು, ಶ್ರೀ ಸಿರಿಯಪ್ಪ ಒಡೆಯರ್ ಅವರು. ಶ್ರೀ ಟಿ.ಎಸ್. ಮಲ್ಲಿಕಾರ್ಜುನಯ್ಯನವರು, ಶ್ರೀ ವೀ. ಚಿಕ್ಕವೀರಯ್ಯನವರು, ಶ್ರೀ ಟಿ. ಪಿ. ಕೃಷ್ಣಪ್ಪನವರು, ಶ್ರೀ ಟಿ. ಜಿ. ಲಿಂಗರಾಜುರವರು, ಶ್ರೀ ಸಿ. ಎನ್. ಭಾಸ್ಕರಪ್ಪನವರು, ಶ್ರೀ ಸಿ. ಶಿವಮೂರ್ತಿಗಳು. ಶ್ರೀ ಜಿ. ರುದ್ರಪ್ಪ ನವರು, ಶ್ರೀ ಪಿ. ಜಿ. ಶ್ರೀನಿವಾಸಶೆಟ್ಟರು, ಶ್ರೀ ಅಶ್ರಾಫ್ ಹುಸೇನ್‌ರವರು, ಶ್ರೀ ಟಿ. ವೈ. ದಾಸಯ್ಯ ನವರು, ಶ್ರೀ ಜಿ. ಆರ್. ರಂಗಸ್ವಾಮಯ್ಯನವರು, ಶ್ರೀ ಕನವಳ್ಳಿಯವರು ಮತ್ತು ಶ್ರೀ ಗುರುಸ್ವಾಮಿ ದೀಕ್ಷಿತ್ ಅವರುಗಳು ಸದಸ್ಯರಾದರು. ಮಲ್ಲಪ್ಪನವರು ಈ ಸಮಿತಿಯ ಖಜಾಂಚಿಯಾದರು. ಸಮಿತಿ ರಚನೆಯಾದ ದಿನದಿಂದಲೇ ಹಣ ಸಂಗ್ರಹಣೆಯ ಕಾರ್ಯ ಪ್ರಾರಂಭವಾಯಿತು. ವಿದ್ಯಾರ್ಥಿಗಳು, ಶಿಕ್ಷಕರು, ಸಾರ್ವಜನಿಕರು

ಹೀಗೆ ಎಲ್ಲರ ಔದಾರ್ಯದಿಂದ ಕಟ್ಟಡಕ್ಕಾಗಿ ನಿಧಿ ಸಂಗ್ರಹಣೆಯಾಯಿತು. ಈ ರೀತಿ ಸಂಗ್ರಹಿಸಲಾದ ಹಣದಲ್ಲಿ ರಾಜ್ಯ ಸರ್ಕಾರದ ತೊಂಭತ್ತು ಸಾವಿರ ರೂಪಾಯಿ, ತುಮಕೂರು ನಗರಸಭೆಯ ಐವತ್ತು ಸಾವಿರ ರೂಪಾಯಿ, ಕಾಳಿದಾಸ ವಿದ್ಯಾವರ್ಧಕ ಸಂಘದ ಎಂಭತ್ತು ಸಾವಿರ ರೂಪಾಯಿ ಅಲ್ಲದೆ ಶ್ರೀ ಎಸ್. ಆರ್. ಜಗದೀಶ್, ಶ್ರೀ ಟಿ. ಪಿ. ಬ್ರಹ್ಮಯ್ಯ, ಶ್ರೀ ಕೆ. ಜಿ. ಯಡಿಯೂರಪ್ಪ, ಶ್ರೀ ಟಿ. ಪಿ. ಪದ್ಮಯ್ಯ. ಶ್ರೀ ಜಿ. ರುದ್ರಪ್ಪ, ಶ್ರೀ ಕೆ. ರಮೇಶಪ್ಪ, ಶ್ರೀ ಕಾಂತರಾಜು, ಶ್ರೀ ಬಿ. ಕೆ. ಚಿಕ್ಕಣ್ಣ, ಶ್ರೀ ಪಿ. ಜಿ. ಶ್ರೀನಿವಾಸಶೆಟ್ಟಿ, ಶ್ರೀ ಪಾರ್ಶ್ವನಾಥ್, ಶ್ರೀ ಟಿ. ಅನಂತರಾಮಶೆಟ್ಟಿ, ಶ್ರೀ ಟಿ. ಕೆ. ನಂಜುಂಡಪ್ಪ, ಶ್ರೀ ಮುನಿಯಪ್ಪಚೆಟ್ಟಿ, ಶ್ರೀ ಎನ್. ಆರ್. ರೇವಣ್ಣ, ಶ್ರೀ ವರ್ಧಮಾನ್, ಶ್ರೀ ಟಿ. ಪಿ. ಕೃಷ್ಣಪ್ಪ, ಶ್ರೀ ವೆಂಕಟರಮಣಪ್ಪ, ಶ್ರೀ ಮರುಳಸಿದ್ದಪ್ಪ ಮುಂತಾದವರ ವೈಯಕ್ತಿಕ ಕೊಡುಗೆಗಳೂ ಸೇರಿದವು. ಈ ನಿಧಿಯಲ್ಲದೆ, ಇಟ್ಟಿಗೆ ಮುಂತಾದ ಪರಿಕರಗಳೂ ಒದಗಿದವು. ಸಮಿತಿ ಅದ್ಭುತ ಯಶಸ್ಸು ಸಾಧಿಸಿತು. ಜೊತೆಗೆ ಶಾಲಾಭಿವೃದ್ಧಿ ಸಮಿತಿಯ ಮೊದಲ ಕಾರ್ಯದರ್ಶಿಗಳಾದ ಶ್ರೀ ಸಿರಿಯಪ್ಪ ಒಡೆಯರ್ ಅನಂತರದ ಕಾರ್ಯದರ್ಶಿಗಳಾದ ಶ್ರೀ ವೀ. ಚಿಕ್ಕವೀರಯ್ಯ, ಶ್ರೀ ಟಿ. ಎಂ. ನಾಗರಾಜು, ಶ್ರೀ ಟಿ. ಜಿ. ಲಿಂಗರಾಜು ಮತ್ತು ಈಗ ಆ ಸ್ಥಾನದಲ್ಲಿರುವ ಶ್ರೀ ಸಿ. ಎನ್. ಭಾಸ್ಕರಪ್ಪ ಅವರುಗಳ ಆಸಕ್ತಿಪೂರ್ಣ ಪ್ರಯತ್ನಗಳು ಸಹಕಾರಿಯಾದವು. ಶಾಲೆಯ ಕಟ್ಟಡ ನಿರ್ಮಾಣವಾಗುವ ಕನಸು ಬಹುಬೇಗ ನನಸಾಯಿತು. ಸಾವಿರದ ಒಂಭೈನೂರ ಎಪ್ಪತ್ತ ನಾಲ್ಕರ ವರ್ಷದಲ್ಲಿ ಕಟ್ಟಡದ ಶಂಕುಸ್ಥಾಪನೆಯ ಕಾರ್ಯ ನಡೆಯಿತು.

ತುಮಕೂರು ನಗರದ ಆಯಕಟ್ಟಿನ ಪ್ರದೇಶವಾದ ಶಿರಾಗೇಟ್ ಮುಂಭಾಗದಲ್ಲಿ ಕಟ್ಟಡ ಎದ್ದಿದೆ. ಪ್ರಕೃತಿಯ ಕೈಯಲ್ಲಿ ರಾರಾಜಿಸುತ್ತಿರುವ ವಿಶಾಲ ಆವರಣವುಳ್ಳ ಈ ಕಟ್ಟಡ ಸಂಘದ ಮಹತ್ತರ ಸಾಧನೆ. ಕಟ್ಟಡ ಮುಗಿದ ಕೆಲವೇ ದಿನಗಳಲ್ಲಿ ಪ್ರೌಢಶಾಲೆಯು ಕಿರಿಯ ಕಾಲೇಜು ಆಗಿ ಅಭಿವೃದ್ಧಿಗೊಂಡು ಎಲ್ಲಾ ಬೆಳವಣಿಗೆಯನ್ನು ತೋರಿದೆ. ಕಟ್ಟಡ ಉದ್ಘಾಟನೆಯ ಸಂಭ್ರಮದ ಕಾರ್ಯಕ್ರಮದಲ್ಲಿ ಮಲ್ಲಪ್ಪನವರ ಆಸೆಗಳು ಪೂರ್ಣಗೊಳ್ಳುತ್ತಿರುವ ಅನಿಸಿಕೆಗಳು ಸ್ಪಷ್ಟಗೊಂಡವು. ಮುಂದೆ ಅದು ಪ್ರಥಮ ದರ್ಜೆ ಕಾಲೇಜು ಆಗಬೇಕೆನ್ನುವುದು ಅವರ ಆಸೆಯಾಗಿದೆ.

ಮಲ್ಲಪ್ಪನವರ ಕಲ್ಪನೆಯಂತೆ ಬೆಳೆದ ಶಾಲೆ ಇಂದು ತನ್ನ ಪಾಲಿಗೆ ಉತ್ತಮ ಸಾಧನೆಗಳ ದಾಖಲೆಗಳನ್ನು ಹೊಂದಿದೆ. ಇಂದು ಈ ಸಂಸ್ಥೆ ಪ್ರೌಢಶಾಲಾ ವಿಭಾಗದಲ್ಲಿ ಏಳುನೂರ ಐವತ್ತು ವಿದ್ಯಾರ್ಥಿಗಳು ಇದ್ದಾರೆ. ಅಲ್ಲಿ ಕೆಲಸ ಮಾಡುವ ಶಿಕ್ಷಕರು ಇಪ್ಪತ್ತು ಮಂದಿ. ಕಾಲೇಜು ವಿಭಾಗದಲ್ಲಿ ನಾಲ್ಕುನೂರಕ್ಕೂ ಹೆಚ್ಚಿನ ವಿದ್ಯಾರ್ಥಿಗಳಿದ್ದು ಹದಿನೈದು ಮಂದಿ ಉಪನ್ಯಾಸಕರು ಕೆಲಸ ಮಾಡುತ್ತಿದ್ದಾರೆ. ಕಾಲೇಜು ದಿನೇ ದಿನೇ ಬೃಹದಾಕಾರವಾಗಿ ಬೆಳೆಯುತ್ತಿದೆ. ಶಾಲೆಯ ಕಟ್ಟಡವು ಸಾಕಷ್ಟು ಸಂಖ್ಯೆಯ ಕೊಠಡಿಗಳು, ಸಭಾಂಗಣ, ಶೌಚಾಲಯ, ಉದ್ಯಾನವನ, ಆಟದ ಮೈದಾನಗಳಿಂದ ಕೂಡಿ ಸುಸಜ್ಜಿತವಾಗಿದೆ. ನೀರಿನ ಅನುಕೂಲಕ್ಕಾಗಿ ಕೊಳವೆ ಬಾವಿ, ನೀರೆತ್ತುವ ಪಂಪುಗಳಿವೆ. ಶಾಲೆಗೆ ಹೊಂದಿಕೊಂಡು ಹಿಂದುಳಿದ ವಿದ್ಯಾರ್ಥಿಗಳಿಗಾಗಿ ಸರ್ಕಾರಿ ವಿದ್ಯಾರ್ಥಿನಿಲಯವಿದೆ. ಶಾಲೆಯಲ್ಲಿ ಎಲ್ಲ ಶೈಕ್ಷಣಿಕ ಚಟುವಟಿಗಳಿಗೆ, ಅವುಗಳ ಅಭಿವೃದ್ಧಿಗೆ ಅಗತ್ಯವೆನಿಸಿದ ಅನುಕೂಲಗಳಿವೆ. ಅದ್ಭುತವಾದ ಪ್ರಯೋಗಾಲಯ, ಆಟದ ಸಾಮಗ್ರಿಗಳು, ವಾಚನಾಲಯ, ಪುಸ್ತಕ ಭಂಡಾರಗಳ ವ್ಯವಸ್ಥೆ ಇದೆ. ನಮ್ಮ ಪ್ರಯೋಗಾಲಯವು ಬಹುಶಃ ರಾಜ್ಯದಲ್ಲಿಯೇ ವಿಶಿಷ್ಟವೆನಿಸಿದೆ. ಸುಮಾರು ಒಂದು ನೂರಕ್ಕೂ ಹೆಚ್ಚಿನ ಸುಧಾರಿತ ಉಪಕರಣಗಳು, ವಿಜ್ಞಾನದ ಗಹನ ವಿಚಾರಗಳನ್ನು ಅತಿ ಸುಲಭವಾಗಿ ಪರಿಣಾಮಕಾರಿಯಾಗಿ ವಿದ್ಯಾರ್ಥಿಗಳಿಗೆ ಮುಟ್ಟಿಸಬಲ್ಲ ಸೌರವ್ಯೂಹ, ಋತು ಬದಲಾವಣೆ, ಗ್ರಹಣಗಳು, ಅಣು ವಿಭಜನೆ ಮುಂತಾದುವುಗಳ ಸರಳ ಮಾದರಿಗಳು ಅದರಲ್ಲಿವೆ. ಈ ಉಪಕರಣಗಳು ರಾಜ್ಯದ ಅನೇಕ ಕಡೆಗಳಲ್ಲಿ ಹಾಗೆಯೇ ರಾಷ್ಟ್ರದ ನಾನಾ ಕೇಂದ್ರಗಳಲ್ಲಿ ಪ್ರದರ್ಶಿಸಲ್ಪಟ್ಟು ರಾಜ್ಯಮಟ್ಟದ, ರಾಷ್ಟ್ರಮಟ್ಟದ ಹಿರಿಮೆಯನ್ನು ಗಳಿಸಿವೆ. ನಾಡಿನ ಎಲ್ಲ ಭಾಗಗಳಿಂದ ಪ್ರಯೋಗಾಲಯವನ್ನು ವೀಕ್ಷಿಸಲು

ವಿದ್ಯಾರ್ಥಿಗಳು ಶಾಲೆಗೆ ಬರುತ್ತಾರೆ. ಪ್ರಯೋಗಾಲಯದ ಈ ಸಾಧನೆಯ ಹಿಂದೆ ಶಾಲೆಯ ಮಾದರಿ ಶಿಕ್ಷಕ ಶ್ರೀ ಎನ್. ಟಿ. ಶಿವಣ್ಣನವರ ಪರಿಶ್ರಮವಿದೆ. ಶಾಲೆಯ ಪುಸ್ತಕ ಭಂಡಾರದಲ್ಲಿ ಸುಮಾರು ಹತ್ತು ಸಾವಿರ ಪುಸ್ತಕಗಳಿವೆ. ಮಕ್ಕಳ ಪುಸ್ತಕಗಳಿಂದ ವಿಶ್ವಕೋಶಗಳವರೆಗಿನ ಸಂಗ್ರಹ ಅದರಲ್ಲಿದೆ. ವಿದ್ಯಾರ್ಥಿಗಳಿಗಾಗಿ ಅನೇಕ ದಿನಪತ್ರಿಕೆಗಳನ್ನು ನಿಯತಕಾಲಿಕಗಳನ್ನು ಹೊಂದಿದ ವಾಚನಾಲಯ ವ್ಯವಸ್ಥೆ ಇದೆ.

ಕೆಲವೇ ವರ್ಷಗಳಲ್ಲಿ ಶಾಲೆಯು ಸರ್ವತೋಮುಖ ಅಭಿವೃದ್ಧಿಯನ್ನು ಸಾಧಿಸಿದೆ. ಪ್ರತಿ ವರ್ಷ ಕೀರ್ತಿ ತರುವ ಫಲಿತಾಂಶವನ್ನು ಪಡೆಯುತ್ತಿದೆ. ಸಾವಿರದ ಒಂಭೈನೂರ ಎಂಭತ್ತುನಾಲ್ಕರ ವರ್ಷದಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಅತಿಹೆಚ್ಚು ಅಂಕಗಳಿಸಿ ಜಿಲ್ಲೆಗೆ ಪ್ರಥಮಸ್ಥಾನದಲ್ಲಿ ನಿಂತ ಕೀರ್ತಿ ಶ್ರೀರಂಗ ರಾಜುವಿನದಾದರೆ, ಅದೇ ವರ್ಷದ ಪಿ.ಯು.ಸಿ. ಪರೀಕ್ಷೆಯಲ್ಲಿ ಎಂ. ಪ್ರಹ್ಲಾದ್ ಉನ್ನತ ಸಾಧನೆ ಮಾಡಿ ಕೆಲವು ವಿಷಯಗಳಲ್ಲಿ ರಾಜ್ಯದಲ್ಲಿ ಅತಿಹೆಚ್ಚು ಅಂಕಗಳಿಸಿದ ಕೀರ್ತಿಗೆ ಪಾತ್ರನಾಗಿದ್ದಾನೆ. ಇನ್ನು ಸಾಂಸ್ಕೃತಿಕ, ಸಾಹಿತ್ಯಕ, ದೈಹಿಕ ಚಟುವಟಿಕೆಗಳಲ್ಲಿ ಶಾಲೆಯ ಸಾಧನೆ ಉತ್ತಮ ಮಟ್ಟದಲ್ಲಿದೆ. ಅನೇಕ ಕ್ರೀಡಾಪಟುಗಳನ್ನು, ವಾಕ್ಪಟುಗಳನ್ನು ಶಾಲೆಯು ರೂಪಿಸಿದೆ. ಶಿವಕುಮಾರ್, ಸರೋಜಿನಿದೇವಿ, ಕೆ. ಆರ್. ಬೃಂದ, ಹೆಚ್. ಪುಷ್ಪಲತ, ಹೆಚ್. ಎ. ಸುಜಾತ, ಎಂ. ಪ್ರಹ್ಲಾದ್ ಇವರೆಲ್ಲ ಶ್ರೇಷ್ಠ ವಾಕ್ಪಟುಗಳಾಗಿ ಜಿಲ್ಲೆಯ ಹಾಗೂ ರಾಜ್ಯಮಟ್ಟದ ಬಹುಮಾನಗಳನ್ನು ಗಳಿಸಿದ್ದಾರೆ. ಪ್ರತಿ ಶುಕ್ರವಾರ ಶಾಲೆಯ ಸಾಂಸ್ಕೃತಿಕ ಚಟುವಟಿಕೆಗಳ ದಿನವಾಗಿದ್ದು ವಿದ್ಯಾರ್ಥಿಗಳ ಬಹುಮುಖ ಪ್ರತಿಭೆಗಳ ಪ್ರದರ್ಶನಕ್ಕೆ, ಬೆಳವಣಿಗೆಗೆ ಅವಕಾಶವಿದೆ. ಅವರ ಪ್ರತಿಭೆಗಳನ್ನು ದಾಖಲಿಸಲು ಪ್ರತಿ ವರ್ಷ "ಎಳೆಯರ ಹಿಗ್ಗು" ಕೈಬರಹದ ಸಂಚಿಕೆಯನ್ನು ಪ್ರಕಟಿಸಲಾಗುತ್ತಿದೆ. ಈ ಎಲ್ಲ ಹಿರಿಮೆಗಳ ಹಿಂದೆ ಉತ್ತಮ ಶಿಕ್ಷಕರ ಪ್ರಯತ್ನ, ಶ್ರಮ, ಆಸಕ್ತಿ, ಮಾರ್ಗದರ್ಶನಗಳಿವೆ. ಶಾಲೆಯು ಸಾರ್ವಜನಿಕ ಸಂಸ್ಥೆಗಳ, ಅಧಿಕಾರಿಗಳ, ಸರ್ಕಾರದ ಮೆಚ್ಚುಗೆಗೆ ಪಾತ್ರವಾಗಿದೆ. ಶಾಲೆಯ ಕೀರ್ತಿಯನ್ನು ಜನರು ಕೊಂಡಾಡಿದ್ದಾರೆ. ಹಿಂದಿನ ರಾಷ್ಟ್ರಪತಿ ಶ್ರೀ ನೀಲಂ ಸಂಜೀವರೆಡ್ಡಿಯವರೇ ಶಾಲೆಯ ವಿಜ್ಞಾನೋ-ಪಕರಣಗಳನ್ನು ಮೆಚ್ಚಿ ಬಹುಮಾನವಿತ್ತಿದ್ದಾರೆ.

ಇಂದು ಕಾಳಿದಾಸ ವಿದ್ಯಾಸಂಸ್ಥೆ ತನ್ನ ಶಾಖೆಗಳನ್ನು ಅಕ್ಕಪಕ್ಕಗಳಿಗೆ ಚಾಚಿ ಬೆಳೆಯುತ್ತಿದೆ. ಬಿದರೆ, ಕೊರಟಗೆರೆ. ದ್ವಾರನಕುಂಟೆ, ಶಿರಾಗಳಲ್ಲಿ ಅದರ ಶಾಖೆಗಳಿವೆ. ಇವು ಮಲ್ಲಪ್ಪನವರ ಕೀರ್ತಿಯನ್ನು ಎಲ್ಲೆಡೆ ಸಾರುವ ಪ್ರತಿನಿಧಿಗಳಾಗಿವೆ. ಮಲ್ಲಪ್ಪನವರಿಗೆ ಇದು ಹೆಚ್ಚಿನ ತೃಪ್ತಿಯನ್ನು ತಂದಿದೆ. ಅವರು ಸಾಧನೆಯ ಎತ್ತರದಲ್ಲಿದ್ದಾರೆ. ಅದರ ಹಿರಿಮೆ ಅವರ ಜೀವನದ ನೋವುಗಳನ್ನು ಮರೆಸಿದೆ. ಅವರ ಜೀವನಕ್ಕೊಂದು ತಾತ್ವಿಕ ನೆಲೆಯನ್ನು ಒದಗಿಸಿದೆ. ನಾನು ಮಲ್ಲಪ್ಪನವರೊಡನೆ ಬಹಳ ದಿನಗಳನ್ನು ಕಳೆದಿದ್ದೇನೆ. ಅವರೊಡನೆ ಬಹುದೂರ ನಡೆದಿದ್ದೇನೆ.

ನಮ್ಮಿಬ್ಬರ ಬದುಕುಗಳು ಹೀಗೆಯೇ ಸಾಗಿವೆ. ಕಹಿಸಿಹಿಗಳ ಅನುಭವವಾಗಿದೆ. ಜೀವನ ಕಹಿ-ಸಿಹಿಗಳ ಮಿಶ್ರಣವಾಗಿದೆಯಲ್ಲವೆ? ಆದರೆ ಕಹಿಯಿಂದ ಸಿಹಿಯ ಹಿರಿಮೆ ಹೆಚ್ಚುತ್ತದೆ. ಹಾಗೆಯೇ ಸಿಹಿಯಿಂದ ಕಹಿ ಮಂಕಾಗುತ್ತದೆ. ಮಲ್ಲಪ್ಪನವರೀಗ ಜೀವನದ ದಾರಿಯನ್ನು ಕ್ರಮಿಸಿ ವೃದ್ಧಾಪ್ಯದ ಅಂಚಿನಲ್ಲಿದ್ದಾರೆ. ನೋವು-ನಲಿವು. ಸೋಲು-ಗೆಲವುಗಳನ್ನು ಕಂಡಿದ್ದಾರೆ. ಕಷ್ಟವನ್ನು ಮೆಟ್ಟಿದ್ದಾರೆ. ನೋವಿನಲ್ಲಿ ನಕ್ಕಿದ್ದಾರೆ. ನನ್ನನ್ನು ಅವರು ಪ್ರೀತಿಸಿದ್ದಾರೆ, ಕೋಪದಲ್ಲಿ ಬೈದಿದ್ದಾರೆ. ತಿದ್ದಿ ಮುನ್ನಡೆಸಿದ್ದಾರೆ. ಎಲ್ಲದಕ್ಕಿಂತ ಹೆಚ್ಚಾಗಿ ನನ್ನ ಮೇಲೆ ವಾತ್ಸಲ್ಯದ ಮಳೆಗರೆದಿದ್ದಾರೆ. ಮಲ್ಲಪ್ಪನವರ ನೆರಳಿನಲ್ಲಿ ಬೆಳೆದ ಹೆಮ್ಮೆ ನನಗಿದೆ. ಅವರ ಆದರ್ಶಗಳಲ್ಲಿ ನಡೆಯುವ ಭಾಗ್ಯ ನನ್ನದಾಗಿದೆ. ಅವರ ಬದುಕಿನೊಂದಿಗೆ ಬೆರೆತ ನನ್ನ ಬದುಕು ಧನ್ಯತೆಯಲ್ಲಿ ಫಲಿಸಿದೆ.

ಮಲ್ಲಪ್ಪನವರೊಡನೆ ಮಾತುಕತೆ

ಎಸ್. ಕೆ. ವೇಣುಗೋಪಾಲ್

ನನ್ನ ಜೀವನದಲ್ಲಿ ಮುದುಕರಿಗೆ ವಿಶಿಷ್ಟ ಸ್ಥಾನವನ್ನು ಕೊಟ್ಟಿದ್ದೇನೆ. ಅವರಲ್ಲಿರುವ, ನನ್ನ ವಿಶ್ಲೇಷಣೆಗೆ ನಿಲುಕದ ಒಂದು ಬಗೆಯ ವಿಲಕ್ಷಣ ಸ್ವಭಾವ, ವಿಚಿತ್ರ ವ್ಯಕ್ತಿತ್ವ ನನ್ನನ್ನು ಆಕರ್ಷಿಸಿದೆ. ಅವರ ಸುಕ್ಕಿನ ಮುಖದ ಹಿಂದಿರುವ ನೆರಳು ನನ್ನನ್ನು ಸೆಳೆಯುತ್ತದೆ. ಅವರ ಜೀವನ ಅನುಭವದ ಹಣ್ಣು ನನಗೆ ರುಚಿ ಎನಿಸುತ್ತದೆ. ಜೀವನದ ವಿಶಾಲ ಪರಿಧಿಯ ಮುಂದೆ ನಿಂತಿರುವುದರಿಂದುಂಟಾದ ನನ್ನ ಗೊಂದಲಗಳಿಗೆ ಅವರ ಸಾನ್ನಿಧ್ಯದಿಂದ ಸಮಾಧಾನವೆನಿಸುತ್ತದೆ. ನನ್ನ ಬದುಕಿನ ದಾರಿಗೆ ಅವರು ಭರವಸೆಯ ಕಿರಣವಾಗುತ್ತಾರೆ. ಇದಕ್ಕೆ ನನ್ನ ಹುಟ್ಟು ಪರಿಸರಗಳೇ ಕಾರಣವಿರಬಹುದು. ನನ್ನ ಹುಟ್ಟಿನಲ್ಲೇ ಕಂಡ ನನ್ನ ವೃದ್ಧ ತಂದೆ–ತಾಯಿ, ನನ್ನ ಮೇಲೆ ಪ್ರೀತಿಯ ರಕ್ಷೆಯನ್ನಿಟ್ಟ ನನ್ನ ಚಿಕ್ಕಪ್ಪ, ನನ್ನ ಮಾವ (ದಿವಂಗತ ಶ್ರೀ ಟಿ. ಎಸ್. ವೆಂಕಣ್ಣಯ್ಯನವರ ಸಹೋದರರಲ್ಲೊಬ್ಬರು), ನನ್ನ ಬಾಲ್ಯದಲ್ಲಿ ಕಂಡ ನನ್ನ ತಂದೆಯ ವೃದ್ಧ ಸ್ನೇಹಿತರು, ನನ್ನ ತಂದೆಯ ನಂತರ ನನಗೆ ಮೊದಲ ಗುರುವಾದ ವೃದ್ಧ ಶಿಕ್ಷಕರೊಬ್ಬರು. ಬೆಳೆಯುತ್ತಾ ಬಂದಂತೆ ಇನ್ನೂ ಅನೇಕ ವೃದ್ಧರು, ಇತ್ತೀಚೆಗೆ ಮಂಡ್ಯದ ಕೆ. ವಿ. ಶಂಕರಗೌಡರು, ಚಿಕ್ಕನಾಯ್ಕನಹಳ್ಳಿಯ ಜಿ. ವಿ. ನಾರಾಯಣ ಮೂರ್ತಿಗಳು, ನನ್ನ ವೃತ್ತಿಜೀವನಕ್ಕೆ ನೆರವಾದ ಬೆಂಗಳೂರಿನ ಖ್ಯಾತ ಮೌಲ್ವಿ ಅಬ್ದುಲ್‌ಬಾರಿ ಸಾಹೇಬರು, ಬೆಂಗಳೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಕಂಪನಿಯ ಹೆಚ್. ಸಿ. ರಾಮಣ್ಣನವರು ನನ್ನ ಮೇಲೆ ಪ್ರಭಾವ ಬೀರಿದ ಈ ಗುಂಪಿನಲ್ಲಿ ಸೇರುತ್ತಾರೆ.

ಅಪರೂಪಕ್ಕೊಮ್ಮೆಯಾದರೂ ನಾನು ಸಂಜೆವೇಳೆ ತುಮಕೂರಿನ ಸರ್ಕಾರೀ ಜೂನಿಯರ್ ಕಾಲೇಜು ಮೈದಾನದ ಕಡೆ ನಡೆದು ಹೋಗುತ್ತಿರುತ್ತೇನೆ. ಅಲ್ಲಿ ಇಲ್ಲಿ ಕಣ್ಣಾಡಿಸಿ. ವ್ಯಕ್ತಿಯೊಬ್ಬರಿಗಾಗಿ ನೋಡುತ್ತೇನೆ. ಶುಭ್ರವಾದ ಚೌಕಳಿಯ ಷರ್ಟ್, ಪಂಚೆ, ಕನ್ನಡಕ ಧರಿಸಿದ, ನೀಟಾಗಿ ತಲೆಬಾಚಿದ ಮುದುಕರೊಬ್ಬರು ಎದುರಾಗುತ್ತಾರೆ. ಅವರ ಕೈಯೊಳಗಿನ ವಾಕಿಂಗ್ ಸ್ಟಿಕ್ ಮಾದರಿಯ ಊರುಗೋಲು ಅವರ ಸ್ವಾಭಿಮಾನದ ಸಂಕೇತವಾಗಿ ನನಗೆ ಕಾಣಿಸುತ್ತದೆ. ಮಧ್ಯಮ ಎತ್ತರದ, ಕೃಷ್ಣವರ್ಣದ, ಚೌಕ ಮುಖದ ಆ ವ್ಯಕ್ತಿಯ ನೀಳಮೂಗಿನ ಕೆಳಗಿನ ಬಿಳಿಯ ಹಲ್ಲುಗಳ ಮಂದನಗೆ ನನ್ನನ್ನು ಆಕರ್ಷಿಸುತ್ತದೆ. ಪರಿಚಯದ, ಆತ್ಮೀಯತೆಯ ಕರೆ ನನ್ನನ್ನು ಅವರ ಪಕ್ಕದಲ್ಲಿರಿಸುತ್ತದೆ. ಅವರ ಜೊತೆಯಲ್ಲಿ ನಡೆದಂತೆ ಮೈದಾನದ ಸುತ್ತ ಒಬ್ಬೊಬ್ಬರು ಪರಿಚಯದ ಗೌರವದ ಭಂಗಿಯಲ್ಲಿ ಕೈ ಮುಗಿಯುತ್ತಾರೆ. ಮತ್ತೊಬ್ಬರು ದೈಹಿಕ ಶಿಕ್ಷಣದ ಅಧ್ಯಾಪಕರು 'ನಮಸ್ಕಾರ ಸಾರ್' ಎನ್ನುತ್ತಾರೆ. ನಾಲ್ಕು ಹೆಜ್ಜೆ ಮುಂದೆ ಬರುತ್ತಾ ಒಬ್ಬ ವೃದ್ಧರು 'ಚೆನ್ನಾಗಿದ್ದೀರಾ ?' ಎನ್ನುತ್ತಾರೆ. 'ಓ ಚೆನ್ನಾಗಿದ್ದೀನಿ—ಏನು ಸುಬ್ಬರಾವ್, ಎಲ್ಲಿ ಹೊರಟಿರಿ ?' ಆತ್ಮೀಯತೆಯ ಪ್ರಶ್ನೆ. 'ನನ್ನ ಮಗಳ ಮದುವೆ ನಿಶ್ಚಯವಾಗಿದೆ. ಅರ್ಜೆಂಟಾಗಿ ಮಾತುಕತೆಗೆ ಹೋಗಬೇಕಾಗಿದೆ' ಎಂದು ಅವರು ಉತ್ತರಿಸುತ್ತಾರೆ. 'ವಿಷ್ ಯು ಗುಡ್ ಲಕ್' ಕಾಲು ಮುಂದಕ್ಕೆ ಹೆಜ್ಜೆ ಇಡುತ್ತವೆ. ನನ್ನ ಮನಸ್ಸು ಅವರೊಡನೆ ಮಾತನಾಡಬೇಕೆನ್ನುತ್ತದೆ. ಏನು ಮಾತನಾಡುವುದು ? ಆರೋಗ್ಯ ಮುಂತಾದ್ದೆಲ್ಲ ಹಳಸಲು ಪ್ರಶ್ನೆಗಳಾಗುತ್ತವೆ. ಹೊಸದಾಗಿ ಮಾತನಾಡುತ್ತೇನೆ. "ಅಜ್ಜಾ ಅಜ್ಜಾ ಕಥೆ ಹೇಳು, ರಾಮಾಯಣದ ಕಥೆ ಹೇಳು" ಕವಿ ನಿಸಾರರು ವೃದ್ಧಕವಿ ಮುದ್ದಣನನ್ನು ಪ್ರಶ್ನಿಸಿದ ರೀತಿಯಲ್ಲಿ ಪ್ರಶ್ನಿಸುತ್ತೇನೆ. "ಹಿ ಹಿ ಹಿ

ಏನು ಹೇಳಲಿ" ಕಾಂತಿಯ ಮುಖದಲ್ಲಿ ಅಚ್ಚುಕಟ್ಟಾದ ಶುಭ್ರ ದಂತಪಂಕ್ತಿಗಳು ತೆರೆಯುತ್ತವೆ. "ಅದೇ ಖಾದಿ ಬೋರ್ಡ್. ಉಣ್ಣೆ ಬೋರ್ಡ್ ಇತ್ಯಾದಿ." "ಹ ಹೇಳ್ತೀನಿ, ಒಂದಫ ರೈಲಿನಾಗೆ ಹೋಗ್ತಿದ್ದೆ ಅರಸೀಕೆರೆ ಮಾರ್ಗ. ನಾನು ಬಿಳೀ ಖಾದಿ ಪರಾಯಿ, ನಿಲುವಂಗಿ ತೊಟ್ಟಿದ್ದೆ. ಮೈಮೇಲೆ ಖಾದಿದೇ ಒಂದು ವಸ್ತ್ರ ಇತ್ತು. ನನ್ನ ಜೊತೇಲಿ ಅದೇ ಡಬ್ಬೀಲಿ ನಾಲ್ಕಾರು ಜನ ಕೂತಿದ್ರು. ಅದರಲ್ಲಿ ಕೆಲವರು ಹದಿ ಹರೆಯದ ಹುಡುಗರು. ಒಬ್ಬರು ನನ್ನಂತೇ ಖಾದಿ ಧರಿಸಿದ ದೊಡ್ಡ ಮನುಷ್ಯನ್ಹಾಗೆ ಕಾಣ್ತಿದ್ದ ವ್ಯಕ್ತಿ. ಇನ್ನೂ ಕೆಲವರು ಹೆಂಗಸರು, ಗಂಡಸರು.......ಎಲ್ರೂ ಏನೋ ಮಾತ್ನಾಡ್ತಿದ್ರು. ನನ್ನ ಪಾಡಿಗೆ ನಾನು ಯಾವುದೋ ಪುಸ್ತಕ ಓದ್ತಾ ಕೂತಿದ್ದೆ. ಆಗ ಆ ಹುಡುಗರು ಮತ್ತೆ ಆ ಖಾದಿ ಧರಿಸಿದ ಮನುಷ್ಯನ ಮಧ್ಯೆ ಏನೋ ಚಕಮಕಿ ಶುರುವಾಯ್ತು. ಕೊನೆಗೆ ಒಂದು ಸ್ಟೇಷನ್ ಬರೋ ಹೊತ್ಗೆ ಆ ವ್ಯಕ್ತಿಗೆ ರಪರಪ ನಾಲ್ಕೇಟು ಬಿದ್ದವು. ಎಲಾ ಇವನ ಏನಾಯ್ತು ಅಂತ ನೋಡಿದರೆ ಆ ಹುಡುಗರು "ಏ ನೀವು ಶಾಸಕರಾಗ್ಬಿಟ್ರೆ ದೊಡ್ಡ ಮನುಷ್ಯರಾಗ್ಬಿಟ್ರಾ? ಅಯೋಗ್ಯರು......." ಅಂತ ಕೂಗಾಡ್ತಿದ್ರು. ಯಾರೋ ಕೆಲವರು ಸಮಾಧಾನ ಹೇಳೋಕೆ ಪ್ರಯತ್ನಿಸ್ತಿದ್ರು. ತಕ್ಷಣವೇ ಹುಡುಗರು ಏನೋ ಹೊಸದು ಸಿಕ್ಕಹಾಗೆ ಅದೇ ದೃಷ್ಟಿಯಲ್ಲಿ ನನ್ನ ಕಡೆ ತಿರುಗಿದ್ರು. ನನ್ಗೆಲ್ಲಾ ಅರ್ಥ ಆಯ್ತು. ನಾನಿದ್ದು "ಏ...ಏ...ನಾನು ತುಮಕೂರು ತಾಲ್ಲೂಕಿನ ಅಸಿಸ್ಟೆಂಟ್ ಕಮಿಷನರ್ ಕಣ್ರೋ ಮಾರಾಯ್ರ....ಶಾಸಕನೂ ಅಲ್ಲ ಮಂತ್ರೀನೂ ಅಲ್ಲ" ಅಂದಾಗ ಆ ಹುಡುಗರು "ಸಾರ್, ಕ್ಷಮಿಸಿ ಸಾರ್ ನಮ್ಗೆ ಗೊತ್ತಾಗಲಿಲ್ಲ" ಅಂತ ಕೈ ಮುಟ್ಟಿ ಕೇಳ್ಕೊಂಡ್ರು. ಕೊನೆಗೆ ನಾನು ತಲುಪೋ ಸ್ಥಳ ಬಂದು ಕೂಡಲೇ ಇಳಿದು ಸಮಾಧಾನ ಪಟ್ಕೊಂಡೆ. ಖಾದಿ ಬಟ್ಟೆಗೆ ಇರೋ ಬೆಲೆ ಇಂಥದು ಇವತ್ತು. ಇನ್ನು ಖಾದಿ ಬೋರ್ಡ್ ಏಕೆ? ಉಣ್ಣೆಬೋರ್ಡ್ ಏಕೆ?" ಮುದುಕರ ಮಾತುಗಳು ನನಗೆ ಪ್ರಿಯವಾಗುತ್ತವೆ. ಅನುಭವದ ನಿದರ್ಶನದಿಂದ ಕೂಡಿದ ಅವರ ತರ್ಕ ನಿಜವೆನಿಸುತ್ತದೆ. ನಾವಿಂದು ಗಾಂಧಿ, ಖಾದಿ ಮುಂತಾದ ಪದಗಳನ್ನು ಒಲ್ಲದ ಅಸಹನೀಯ ಜನವಾಗಿ ಕಾಣುತ್ತೇವೆ. ಗಾಂಧಿ ನಮ್ಮವನೂ ಅಲ್ಲ—ಪರಕೀಯನೂ ಅಲ್ಲ—ಹಾಗಾದರೆ ಯಾರು? ನಮ್ಮಲ್ಲಿದ್ದೂ ಪರಕೀಯನಾದವನು, ನಮ್ಮಿಂದಲೇ ದೂರ ತಳ್ಳಲ್ಪಟ್ಟವನು, ನಮ್ಮ ಗುಂಡಿಗೇ ಬಲಿಯಾದವನು. ನಮ್ಮ ಅನಿಸಿಕೆಗಳಿಗೆ ಒಗ್ಗದ, ನಮ್ಮ ಮಟ್ಟಕ್ಕೆ ಇಳಿಯದ ಅಥವಾ ಹೊಂದದ ಪ್ರತಿಯೊಬ್ಬನೂ ಗಾಂಧಿಯಾಗುತ್ತಾನೆ. ಅವನ ಅಳು, ನಗು, ಉಸಿರು ಎಲ್ಲವೂ ಗಾಂಧಿಮಯವಾಗುತ್ತವೆ. ಅವನ ಊಟ ತಿಂಡಿಗಳು ಗಾಂಧೀಪದಾರ್ಥಗಳು. ಅವನು ಸಿನೆಮಾ ನೋಡುವುದು 'ಗಾಂಧೀ ಕ್ಲಾಸ್'ನಲ್ಲಿ—'ಗಾಂಧೀ ಟಿಕೆಟ್'ನಲ್ಲಿ. ಇನ್ನು ಖಾದಿ—ದೇಶದ್ರೋಹಿಗಳ, ವಂಚಕರ, ಘಾತಕರ ಕೊಳೆಯನ್ನು ಬೆಳಗಿಸುವ ಉಪಕರಣವಾಗುತ್ತದೆ. ಆ ಬಟ್ಟೆಯನ್ನು ಧರಿಸಿದವರೆಲ್ಲರೂ ಘಾತಕರೇ ಆಗುತ್ತಾರೆ. ಯಾವುದು ತಪ್ಪು? ಯಾವುದು ಸರಿ? ಪ್ರಶ್ನೆಯಾಗಿಯೇ ಉಳಿಯುತ್ತದೆ.

ಅದೇ ಮುದುಕರನ್ನು ಅರಸಿ ಮತ್ತೊಮ್ಮೆ ಹೋಗುತ್ತೇನೆ. ಮುದುಕರು ಇನ್ನೊಂದು ಕಥೆ ಹೇಳುತ್ತಾರೆ. "ನಾನು ಹುಡ್ಗ ಆಗಿದ್ದಾಗ ಒಂದು ದೊಡ್ಡ ಕಾಯಿಲೆ ಬಂತು. ಚರ್ಮ ರೋಗ ಅದು. ಇಸಬಿನ ತರದ್ದು ಕಿವಿಗಳೆಲ್ಲಾ ಗಾಯವಾಗಿತ್ತು. ಡಾಕ್ಟ್ರಗಳಿಂದ ವಾಸಿ ಆಗ್ತಿತ್ತೋ ಬಿಡ್ತಿತ್ತೋ ಬಹಳ ದಿನಗಳ ಕಾಲ ಅದು ತಟ್ಟಿತ್ತು. ಸದ್ಯಕ್ಕೆ ನಮ್ಮಪ್ಪ ಮುಂತಾದವರೇ ಡಾಕ್ಟ್ರುಗಳಾದರು. ನಮ್ಮಪ್ಪ ಏನೇನೋ ಹರಕೆ ಹೊತ್ರು. ಎಡೆಯೂರು ಸಿದ್ಧಲಿಂಗೇಶ್ವರನ ಹೆಸರಿಗೆ ನಂಗೆ ಮುಂಡೆ ಬಿಡಿಸಿದ್ರು. ಗಂಜಳದ ನೆಲದ ಅನ್ನದ ಸೇವೆ ಮಾಡಿಸ್ತೀನಿ ಅಂದ್ರು. ನನ್ನ ಒಂದಿನ ಕರಕೊಂಡು ಹೋಗಿ ಹಸುವಿನ ಗಂಜಳ ಹಾಕಿ ಸಾರಿಸಿದ ನೆಲದ ಮೇಲೆ ಕೂಡಿಸಿದ್ರು. ಆ ನೆಲದ ಮೇಲೆ ರವಷ್ಟು ಬಿಸಿ ಅನ್ನ ತಂದು ಹಾಕಿದ್ರು. ಅದರ ಮೇಲೆ ರವಷ್ಟು ತುಪ್ಪ ಹಾಕಿದ್ರು. ಕಲಸು ಅಂದ್ರು. ಕಲಸಿದೆ. ಲಗೂನೆ ಎಲ್ಲ ತಿನ್ನು ಅಂದ್ರು. ಯಾಕಪ್ಪ ಇದು? ಎಂದೆ. ನಿನ್ನ ಕಾಯಿಲೆ ವಾಸಿ ಆಗೋಕೆ ಕಣೋ ಅಂದ್ರು. ನರಕಕ್ತಳ್ಳಿ ನಾಲ್ಗೆ ಸೀಳೋರಂಗೆ ಸುತ್ತಲೂ ನಾಲ್ಕು ಜನ ಕಾವಲು. ತಿನ್ನಕಾಗ್ದಿದ್ರೂ ವಾಂತಿ ಬಂದರೂ ತಿನ್ನಲೇಬೇಕಾಯ್ತು. ರವಷ್ಟು

ಜಿಪ್ಪಂಗೆ ಬಳ್ಕಂಡು ತಿನ್ನು, ದೇವ್ರು ಒಳ್ಳೇದು ಮಾಡಾಕಿಲ್ಲ ಇದ್ದಿದ್ರೆ ಅಂತ ಬೇರೆ ಬುದ್ಧಿವಾದ. ಏನು ಹೇಳೋದು ನಮ್ಮ ಜನಗಳಿಗೆ. ಅದು ಯಾವತ್ತು ಬುದ್ಧಿ ಬರುತ್ತೋ. ಯಾವಾಗ ಈ ಮೌಢ್ಯಗಳಿಗೆ ಮುಕ್ತಿ ಸಿಕ್ಕುತ್ತೋ." ಅವರ ಕಥೆ ಕಣ್ಣಲ್ಲಿ ನೀರು ಬರಿಸುವಂತಿತ್ತು. ಹೇಳುವ ಶೈಲಿಗೆ ಮಾತ್ರ ನಗು ಬರ್ತಿತ್ತು. ಇಂಥ ಕಥೆಗಳು ಈಗಲೂ ನಡೀದೇ ಇರೋ ಸಾಧ್ಯತೆ ಏನಿಲ್ಲ ಅನ್ನೋದೇನೂ ಆಶ್ಚರ್ಯವಾಗಿ ಕಾಣಿಸ್ಲಿಲ್ಲ. ಆದರೆ ರಾಜಕೀಯ ಸ್ವಾತಂತ್ರ್ಯಕ್ಕಾಗಿ ಅಷ್ಟೊಂದು ಬಡಿದಾಡಿದ ನಾವು ಇವುಗಳಿಂದ ಸ್ವತಂತ್ರರಾಗೋದು ಯಾವಾಗ ಅನ್ನೋದು ಒಂದೇ ನನ್ನ ಮುಂದಿನ ಪ್ರಶ್ನೆಯಾಯ್ತು.

ಮುದುಕರು ಸ್ವಾರಸ್ಯಕರ ವ್ಯಕ್ತಿ ಎನಿಸುತ್ತಾರೆ. ಅವರ ಹತ್ತಿರ ಮತ್ತೆ ಮತ್ತೆ ಹೋಗಬೇಕೆನಿಸುತ್ತದೆ. ಅವರಿಗಾದರೋ ಇಂಥ ಕಥೆ ಹೇಳಿ ಹೇಳಿ ಬೇಸರವಾಗಿರಬೇಕು. "ಬೇಸರಪಟ್ಕೋಬೇಡ ಇವತ್ತು ಬೇರೆ ಕಥೆ ಹೇಳ್ತೀನಿ." ಪ್ರಾರಂಭಿಸುತ್ತಾರೆ. "ಇತ್ತೀಚೆಗೆ ನಂಗ್ಯಾಕೊ ಅರುಳುಮರಳು ಅನಿಸ್ತದೆ. ವಯಸ್ಸಾಗ್ತಿದೆ ಅಂತ ಗೊತ್ತಾಗ್ತಿದೆ. ಅಲ್ಲ ನಿನ್ನ ಸ್ನೇಹಿತ ಹೊನ್ನೆ ಮದುವೆ ಮಾಡಿಕಂಡ್ನಲ್ಲ ಅವತ್ತು ಎಂಥ ಕೆಲಸ ಆಯ್ತು ಅನ್ತೀಯ. ಅವನು ನನ್ನ ಕೈಗೆ ಲಗ್ನಪತ್ರಿಕೆ ಕೊಟ್ಟು ಬಾಳ ಕರೆದು ಹೋದ. ನಾನು ನನ್ನ ಹೆಂಡ್ತಿಗೆ ವಿಷಯ ತಿಳಿಸಿ, ಎಲ್ಲಿ ಎಂದು ಮದುವೆ ಅಂತೆಲ್ಲಾ ಹೇಳ್ದೆ. ಮದುವೆ ದಿನ ಮುಹೂರ್ತದ ಟೈಂ ತಂಕ ಮನ್ಲೇ ಕುಂತಿದ್ದೆ. ಮುಹೂರ್ತದ ಟೈಂ ಆಯ್ತುಂತ ಎಲ್ಲ ರೆಡಿ ಮಾಡ್ಕಂಡು. ಜುಟ್ಟೆ ಗಿಟ್ಟೆ ಶಲ್ಯ ಎಲ್ಲ ಹಾಕ್ಕಂಡು. ಶಂಕರನಿಗೆ ಒಂದು ಆಟೋ ತರ್ತಾರೋ ಅಂತ ಏಳನ ಅಂತ ಅಂದ್ಕಂಡ್, ಆಮೇಲೆ ಏನೂ ಬೇಡ ಛತ್ರ ಇಲ್ಲೇ ಹತ್ತಿರ ಐತಲ್ಲ ಮೆಲ್ಗೆ ನಡ್ದೇ ಹೋದ್ರಾತು ಅಂತ ಆಕಡೆ ಹೆಜ್ಜೆ ಹಾಕ್ದೆ. ಛತ್ರದ ತುಂಬ ಜನ ಸೇರಿತ್ತು. ಮದುಮಗ ಮದುವಣಗಿತ್ತಿ ಗಲಾಟೇಲಿದ್ರು. ಈಗ್ಯಾಕೆ ಮಾತ್ನಾಡಿಸೋದು ಸ್ವಲ್ಪ ಹೊತ್ತು ಕುಂತಿರನ ಅಂತ ಅಂದ್ಕಳೋ ಹೊತ್ಗೆ ಯಾರೋ ಒಬ್ರು ಹಿರಿಯರು ಬಂದು 'ನಮಸ್ಕಾರ ಸ್ವಾಮಿ ಕೂತ್ಕೊಳ್ಳಿ. ಏ ಕುರ್ಚಿ ಹಾಕ್ರೊ' ಅಂತ ಕುಳ್ಳಿರಿಸಿ, 'ನಿಮ್ಮ ಮಗ್ನ ಸ್ವಾಮಿ, ನಿಮ್ಮ ಕೈಲೇ ಬೆಳ್ದೋನು, ಏನೋ ಮದ್ವೆ ಮಾಡ್ಕೋತಿದಾನೆ ಆಶೀರ್ವಾದ ಮಾಡಬೇಕು' ಅಂತ ವಿನ್ನವಿಸಿದರು. ನಾನು 'ಸಂತೋಷನಪ್ಪ ಅದಕೇನು ನಮ್ಮ ಮಗ್ನ ಬಗ್ಗೆ ನನಗೆ ಖುಷಿ ಅಲ್ವೇ' ಅಂತಂದು ಅಕ್ಷತೆಕಾಳು ಹಾಕ್ದೆ. ಹುಡ್ಗನ್ನ ನೋಡ್ದೆ ನಮ್ಮ ರಂಗರಾಜು ಇದ್ದಾಗೇ ಇದ್ದ. ಸರಿ ಸುಮ್ಮನಾದೆ ಗಲಾಟೆ ನಿಂತ ಮೇಲೆ ಮಾತ್ನಾಡ್ಸಿನಾ ಅಂತ. ಆಮೇಲೆ ಫಲತಾಂಬೂಲ ಕೊಟ್ರು. ಅದರ ಕವರ್ ಮೇಲೆ ಹೆಸ್ರು ನೋಡ್ದೆ, ಸುಬ್ರಹ್ಮಣ್ಯ–ಶ್ರೀಲಕ್ಷ್ಮಿ ಅಂತ ಇತ್ತು. ಸರಿ ರಂಗರಾಜು ಎಲ್ಲೋ ಈಗಿನ ಕಾಲದ ತರ ಹೊಸದಾಗಿ ಹೆಸರು ಛೇಂಜ್ ಮಾಡ್ಕಂಡವ್ನೆ. ಅವನ ಹೆಂಡ್ತಿಗೂ ಹಾಗೇ ಮಾಡ್ದವ್ನೆ ಅಂತ ಅಂದ್ಕಂಡೆ. ಯಜಮಾನ್ರು ಬಂದು ಊಟಕ್ಕೆ ಎಬ್ಸಿದ್ರು. ನನ್ನ ಹೊಟ್ಟೆ ಆರೋಗ್ಯ ಸರಿ ಇಲ್ಲ ಅಂತ ಹೇಳಿ ಮನೆಗೆ ಬಂದೆ. ಸಾಯಂಕಾಲ ರಂಗರಾಜು ಅವರ ಮನೆಕಡೆಯವರು ಯಾರೋ ಬಂದು 'ಏಕೆ ಸಾರ್, ಮದುವೆಗೆ ಬರಲೇ ಇಲ್ಲ ?' ಅಂದ್ರು. ನಾನಿದ್ದು 'ಬಂದಿದ್ನಲ್ರಯ್ಯ ಅದ್ಸರಿ ಅವನು ರಂಗರಾಜು ಯಾಕೆ ಹಂಗೆ ಹೆಸರು ಛೇಂಜ್ ಮಾಡ್ಕಂಡವ್ನೆ ? ಅಪ್ಪ ಅಮ್ಮ ಇಟ್ಟಿರೋ ಹೆಸ್ರು ಚಂದಾಕಿಲ್ವಂತ' ಅಂದಾಗ ಅವರು 'ಇಲ್ವಲ್ಲ ಸರ್, ಹಾಗೇನು ಕಾಣೆಸ್ಲಿಲ್ಲ' ಅಂದರು. ಮುಂದಿನ ವಿಚಾರ ಕೇಳಿದಾಗ ಗೊತ್ತಾಯ್ತು—ಅವನ ಮದುವೆ ಆಗಿದ್ದು ರುದ್ರಯ್ಯನ ಛತ್ರದಲ್ಲಿ, ನಾನು ಹೋಗಿದ್ದು ಭದ್ರಮ್ಮನ ಛತ್ರಕ್ಕೆ ಅಂತ" ಮುದುಕರು ನಗುತ್ತಾರೆ. ನಾನೂ ನಗುತ್ತೇನೆ. ನಗಿಸುವ ಕಲೆ ಮುದುಕರಿಗೆ ಚನ್ನಾಗಿ ಗೊತ್ತು. ಆದರೆ ಅದು ಸಹಜವಾದ ಮಾತಿನ ಧಾಟಿಗಿಂತ ಬೇರೆಯಾಗಿ ಕಾಣುವುದಿಲ್ಲ. ಆ ನಗುವಿನ ಹಿಂದಿರುವ ಬದುಕಿನ ಅನಿವಾರ್ಯತೆಯನ್ನು ನಾನು ಗುರ್ತಿಸದೆ ಇರುವುದಿಲ್ಲ.

ಮುದುಕರ ಮನೆಗೆ ಹೋಗುತ್ತೇನೆ. ಮಧ್ಯಾಹ್ನದ ಸಮಯ. ಮುದುಕರು ರೇಡಿಯೋ ಮುಂದೆ ಕುಳಿತು ಕೆನ್ನೆ ಮೇಲೆ ಕೈ ಇಟ್ಟು ಏನೋ ಕೇಳುತ್ತಿರುತ್ತಾರೆ. ನಾನು 'ನಮಸ್ಕಾರ' ಎಂದು ಕುಳಿತುಕೊಳ್ಳುತ್ತೇನೆ. ಮುದುಕರು ಮಾತಿಗೆ ಪ್ರಾರಂಭಿಸುತ್ತಾರೆ. 'ಏನಪ್ಪಾ, ಎನ್ಟಿಆರ್ ಸರ್ಕಾರ ಬಿದ್ದುಹೋಯ್ತಂತೆ.

ಅವನ್ಯಾರೋ ಭಾಸ್ಕರ್‌ರಾವ್ ಅಂತ ಮಂತ್ರಿ ತಾನೇ ಮುಖ್ಯಮಂತ್ರಿ ಅನ್ನಂತೆ. ಈಗ್ತಾನೇ ರೇಡಿಯೋದಾಗೆ ಬಂತು. ಎನ್ಟಿಆರ್ ಫೇಲ್ ಅಂತ ಕೇಳಿ ನನ್ನ ತಲೇನೇ ಕೆಳಗೆ ಬಿದ್ದಂಗೆ ಆಯ್ತು ನೋಡು' ಎನ್ನುತ್ತಾರೆ. ನಾನಿನ್ನೂ ಏನೂ ತಿಳಿಯದೆ ಮೊದಲಬಾರಿಗೆ ಇವರ ಬಾಯಿಂದ ವಾರ್ತೆ ಕೇಳಿ ಆಶ್ಚರ್ಯ ವ್ಯಕ್ತಪಡಿಸುತ್ತೇನೆ. ಅಷ್ಟು ಹೊತ್ತಿಗೆ ಇನ್ನೂ ಕೆಲವರು ಬಂದು ಕುರ್ಚಿಗಳಲ್ಲಿ ಕುಳಿತುಕೊಳ್ಳುತ್ತಾರೆ. ಮುದುಕರು ಅವರಿಗೂ ವಿಷಯ ತಿಳಿಸಿ "ನೋಡಿ ಯಾರು ಯಾರು ಯಾವಾಗ ಏನು ಆಗ್ತಾರೋ ಯಾರಿಗೊತ್ತು ಇಂದಿರಾಗಾಂಧಿ ಹಣೇಬರಹದಲ್ಲಿ ಏನು ಬರೆದಿದೆಯೋ ಈಗೇನೋ ಎಲೆಕ್ಷನ್ ಮಾಡ್ತೀನಿ ಅಂತ ಹೊರಟಿದ್ದಾಳೆ, ಎಲೆಕ್ಷನ್ ರಿಸಲ್ಟ್ ಏನು ಆಗುತ್ತೊ.' ಮುದುಕರ ಫಿಲಾಸಫಿ ನನಗೆ ಅರ್ಥವಾಗದೆ ಹೋಗುವುದಿಲ್ಲ. ಅವರೊಡನೆ ಕೆಲವಾರು ರಾಜಕೀಯದ ವಿಚಾರ ಚರ್ಚಿಸಿ ಮನೆಗೆ ಬರುತ್ತೇನೆ. ಕೆಲವೇ ದಿನಗಳಲ್ಲಿ ಇಂದಿರಾಗಾಂಧಿಯವರ ಕರಾಳ ಹತ್ಯೆಯ ಸುದ್ದಿ ಸಿಡಿಲಿನಂತೆ ಎರಗುತ್ತದೆ. ಅದರ ಕಾವಿಳಿದ ದಿನಗಳಲ್ಲಿ ನನ್ನ ಮನಸ್ಸು ನಿಧಾನವಾಗಿ ಘಟನೆಯನ್ನು ಮುದುಕರ ಮಾತುಗಳೊಡನೆ ತಾಳೆ ಹಾಕುತ್ತವೆ.

ಮುದುಕರಿಗಾಗಿ ಹುಡುಕುತ್ತಿರುತ್ತೇನೆ. ಅವರು ಕಾಯಿಲೆ ಬಿದ್ದಿರುವುದಾಗಿ ತಿಳಿಯುತ್ತದೆ. ನರ್ಸಿಂಗ್ ಹೋಂ ಕಡೆ ಧಾವಿಸುತ್ತೇನೆ. ಮುದುಕರು ಹಾಸಿಗೆಯೊಂದರ ಮೇಲೆ ಮಲಗಿರುತ್ತಾರೆ. ಔಷಧೋಪಚಾರ ನಡೆದಿರುತ್ತೆ. ಸುತ್ತಲಿನ ನಾಲ್ಕೈದು ಜನ ವಿಶ್ರಾಂತಿ-ವಿಶ್ರಾಂತಿ ಅಂತ ದೂರ ಸರಿಯುತ್ತಿರುತ್ತಾರೆ. 'ಆರೋಗ್ಯ ಹೇಗಿದೆ?' ನಾನು ಪ್ರಶ್ನಿಸುತ್ತೇನೆ. 'ಅಯ್ಯೋ ದೇವರೇ ನನಗೇನಾಗಿದೆ ನಾನು ಅದಕ್ಕಲ್ಲ ಬಂದದ್ದು. ಮನೆ ಹತ್ರ ಆ ಯುವಕ ಸಂಘದವರ ಗಲಾಟೆ ಜಾಸ್ತಿ. ಆ ಗಣೇಶನ್ನ ಗಂಭೀರವಾಗಿ ಕುಂದಿರಿಸಿ ಅವರು ಸಿನೆಮಾ ಹಾಡು ಹಾಕ್ಕಂಡ್ ಕಿರಿಚಾಡ್ತವೆ. ನಮ್ಮ ಪ್ರಾಣ ತಿಂತವೆ. ಅದಕ್ಕೆ ರೆಸ್ಟ್ ತಕ್ಕಳನ ಅಂತ ಇಲ್ಲಿಗೆ ಬಂದ್ರೆ ಇಲ್ಲೂ ಅದೇ ಹಣೆಬರಹ. ಅಲ್ಲಿಗಿಂತ ಜೋರಾಗಿ ಗಲಾಟೆ.' ಮುದುಕರ ಇಂಗಿತ ಅರ್ಥವಾಗುತ್ತವೆ. ಅವರ ಕಾಯಿಲೆಗೆ ನಿಜವಾದ ಕಾರಣ ತಿಳಿಯುತ್ತದೆ. ನಮ್ಮ ನಾಗರಿಕತೆಯ ಬೆಳವಣಿಗೆಯ ಬಗೆಗೆ ಹೆಮ್ಮೆ ಎನಿಸುವ ಬದಲು ನಾಚಿಕೆ ಎನಿಸುತ್ತದೆ. ನನ್ನ ಮುಖಕ್ಕೆ ತಟ್ಟಿದ ಅನುಭವವಾಗುತ್ತದೆ. ನಾನು ತಲೆ ಎತ್ತದೆ ಹಿಂದಿರುಗುತ್ತೇನೆ.

ಮಲ್ಲಪ್ಪನವರ ಭೇಟಿ ಬಹಳ ದಿನಗಳನಂತರ ಆಗುತ್ತದೆ. ಕಾಲೇಜಿನ ವಿಚಾರ ಪ್ರಸ್ತಾಪಕ್ಕೆ ಬರುತ್ತದೆ. ಕಾಲೇಜನ್ನ ಫಸ್ಟ್ ಗ್ರೇಡ್ ಕಾಲೇಜಾಗಿ ಬೆಳಸಬೇಕು. ಹೈಸ್ಕೂಲನ್ನ ರೆಸಿಡೆನ್ಷಿಯಲ್ ಆಗಿ ಬೆಳೆಸಬೇಕು. ಸಾಧ್ಯವಾದರೆ ಇನ್ನೊಂದು ಬೇರೇನೇ ರೆಸಿಡೆನ್ಷಿಯಲ್ ಸ್ಕೂಲ್ ಮಾಡಬೇಕು ಅಂತೆಲ್ಲಾ ಯೋಜನೆಗಳನ್ನ ಹಂಚಿಕೊಳ್ಳುತ್ತಾರೆ. ಆದರೆ ಇದೆಲ್ಲದರ ಗುರಿ ನನಗೇ ನೆಟ್ಟ ಬಾಣವಾಗುತ್ತದೆ. ಮುದುಕರು ಹೇಳುತ್ತಾರೆ 'ಅಲ್ಲಪ್ಪ, ಈ ಸಾರಿ ನಮ್ಮುಡ್ಗರು ನಿನ್ನ ಸಬ್ಜೆಕ್ಟ್‌ನಾಗೆ ಬಹಳ ಜನ ಫೇಲಾಗಿದ್ದಾರಂತೆ. ಹಂಗಾದ್ರೆ ಯಾವ ಸಂಸ್ಥೆನ ನಾವು ಬೆಳಸಕಾಗ್ತವೆ ಹೇಳು.' ನಾನು ಪ್ರಶ್ನೆಯಿಂದ ಅವಾಕ್ಕಾಗುತ್ತೇನೆ. 'ನನ್ನ ಕೈಲಾದ ಎಲ್ಲಾ ಪ್ರಯತ್ನ ನಾನು ಮಾಡಿದ್ದೇನೆ. ಯಾರಿಗಿಂತಲೂ ಹೆಚ್ಚು ಕ್ಲಾಸುಗಳನ್ನ ಉಪಯೋಗಿಸಿಕೊಂಡಿದ್ದೇನೆ. ರಜಾ ದಿನಗಳಲ್ಲೆಲ್ಲಾ ಕ್ಲಾಸ್ ಮಾಡಿದ್ದೇನೆ. ಹುಡುಗರ ಸಮಸ್ಯೆನೆಲ್ಲ ತಿಳ್ಕಂಡು ಅದಕ್ಕನುಸರಿಸಿ ತಾಳ್ಮೆಯಿಂದ ಜಾಣ್ಮೆಯಿಂದ ಪಾಠ ಮಾಡಿದ್ದೇನೆ. ಪರೀಕ್ಷೆಗಳನ್ನ. ಹುಡುಗರ ಅಭಿವೃದ್ಧಿಯನ್ನ ದೂರದೃಷ್ಟಿಯಲ್ಲಿರಿಸಿಕೊಂಡು ಕೆಲಸ ನಿರ್ವಹಿಸಿದ್ದೇನೆ. ಇನ್ನೇನು ಮಾಡೋಕೆ ಸಾಧ್ಯ? ನೀವೇ ಹೇಳಿ' ನಾನು ಪ್ರಶ್ನಿಸುತ್ತೇನೆ. ಮುದುಕರು ತಟಕ್ಕನೆ ಉತ್ತರಿಸುತ್ತಾರೆ 'ಅಲ್ಲಪ್ಪ ಅವೆಲ್ಲ ಸರಿ, ಆದರೆ ಫಲಿತಾಂಶ ಏನಾಯ್ತು ಹೇಳು, ಅದು ತಾನೆ ಮುಖ್ಯ ನೀನೇನ್ಮಾಡಿದರೆ ಏನು ಬಂತು ಪ್ರಯೋಜನ?' 'ಹಾಗಾದರೆ ಏನು ಮಾಡಬೇಕು ಅಂತ ನಿಮ್ಮ ಅಭಿಪ್ರಾಯ' ಪ್ರಶ್ನಾರ್ಥಕವಾಗಿ ನೋಡುತ್ತೇನೆ. 'ನಂಗೆ ಅದೆಲ್ಲಾ ಗೊತ್ತಿಲ್ಲ ಒಟ್ಟಿನಲ್ಲಿ ಫಲಿತಾಂಶ ಚನ್ನಾಗಿ ಬರಬೇಕು. ನೀನೇನಾದರೂ ಮಾಡು ಹುಡುಗರು ಪ್ಯಾಸು ಮಾಡಬೇಕು' ಮುದುಕರು ಗಂಭೀರರಾಗುತ್ತಾರೆ. 'ನೋಡಿ

ನಾನು ಮಾಡೋ ಪ್ರಾಮಾಣಿಕ ಪ್ರಯತ್ನವೆಲ್ಲ ನಾನು ಮಾಡ್ತೇನೆ. ಆದರೆ ಹುಡುಗರ ಕಡೆಯಿಂದಲೋ ಅಥವಾ ಬೇರೆ ಯಾವುದೋ ತಪ್ಪುಗಳಿಂದಾಗಿಯೋ ಉದ್ದೇಶ ಸಾಧನೆ ಆಗದೆ ಇದ್ರೆ ನಾನು ಏನೂ ಮಾಡೋಕಾಗಲ್ಲ' ನಿಷ್ಠುರವಾಗಿ ನುಡಿಯುತ್ತೇನೆ. ಪ್ರಶ್ನೆಗಳ ಅಲೆಗಳು ನನ್ನ ಮನಸ್ಸನ್ನು ಆವರಿಸಿರುತ್ತವೆ. ನನ್ನ ಮನಸ್ಪೂರ್ವಕ ಕೆಲಸದಿಂದುಂಟಾದ ಅಭಿಮಾನಕ್ಕೆ ಅಪರಾಧ ಭಾವನೆಯೊಂದು ಅಡ್ಡವಾಗುತ್ತದೆ. ಮನಸ್ಸು ಕಲಕಿದಂತಾಗಿ ಮನೆಗೆ ಬರುತ್ತೇನೆ. ದಾರಿಯಲ್ಲಿನ ಯೋಚನೆಗಳಿಂದ ತೀರ್ಮಾನಕ್ಕೆ ಬರಲು ಮನಸ್ಸು ಹವಣಿಸುತ್ತದೆ. ಆಲೋಚನೆಗಳು ಉತ್ತರಿಸುತ್ತವೆ. ಮನಸ್ಸು ಸ್ಥಿಮಿತಕ್ಕೆ ಬರುತ್ತದೆ. ಮುದುಕರು ನನ್ನಂಥವರಿಗಿಂತ ಹೆಚ್ಚು ಪ್ರಾಕ್ಟಿಕಲ್ ಎಂದಷ್ಟೇ ತಿಳಿಯುತ್ತದೆ. ಮತ್ತೆ ಮುದುಕರನ್ನು ನೋಡುವ ದಿನಗಳಿಗಾಗಿ ಹಾತೊರೆಯುತ್ತೇನೆ.

ಶ್ರೀ ಮಲ್ಲಪ್ಪನವರು

ಎಸ್. ಮಂಚಯ್ಯ

ಶ್ರೀ ಮಲ್ಲಪ್ಪನವರ ಮತ್ತು ನನ್ನ ಸಂಬಂಧ ಎರಡು ದಶಕಗಳಷ್ಟು ಹಳೆಯದು. ನನಗೆ ಅವರ ಪರಿಚಯ ಆಗುವ ವೇಳೆಗೆ ಅವರು ಸರ್ಕಾರಿ ಸೇವೆಯಿಂದ ನಿವೃತ್ತರಾಗಿದ್ದರು. ನಿವೃತ್ತರಾಗುವ ಮುನ್ನ ಅವರು ರೆವಿನ್ಯೂ ಇಲಾಖೆಯಲ್ಲಿ ಹಿರಿಯ ಅಧಿಕಾರಿಗಳಾಗಿ ಸೇವೆ ಸಲ್ಲಿಸುತ್ತಿದ್ದರು. ಮೊಟ್ಟ ಮೊದಲಿಗೆ ಅವರ ಪರಿಚಯವಾದಾಗ ಅವರು ನಿವೃತ್ತ ಅಧಿಕಾರಿಗಳೆಂದು ನಂಬುವುದೂ ಕಷ್ಟವಾಗಿತ್ತು. ಅಪ್ಪಟ ಖಾದಿ ಧಾರಿಗಳಾದ ನೇರ ನಡೆನುಡಿಯ ಮಲ್ಲಪ್ಪನವರು ಆ ಕಾಲದಲ್ಲಿ ಎದ್ದುಕಾಣುತ್ತಿದ್ದ ಅಧಿಕಾರಿಗಳ ದರ್ಪ ದೌಲತ್ತುಗಳನ್ನು ಅಂಟಿಸಿಕೊಳ್ಳದೆ ಇದ್ದವರು. ನಮ್ಮ ಪರಿಚಯ ಆದದ್ದು ಅರವತ್ತರ ದಶಕದಲ್ಲೆಂದು ಕಾಣುತ್ತದೆ. ಅಂದಿನಿಂದ ಇಂದಿನವರೆಗೂ ನಮ್ಮ ಸ್ನೇಹ ಉಳಿದು ಬಂದಿದೆ ; ಆತ್ಮೀಯರಾಗಿದ್ದೇವೆ ; ಅನೇಕ ವಿಷಯಗಳಲ್ಲಿ ಒಂದೇ ನಿಲುವನ್ನು ಹೊಂದಿದ್ದೇವೆ. ಇಬ್ಬರ ಸ್ವಭಾವವು ಸ್ವಲ್ಪ ಹೆಚ್ಚುಕಡಿಮೆ ಒಂದೇ ಎಂದು ಹೇಳಿದರೆ ತಪ್ಪಾಗುವುದಿಲ್ಲ.

ಮಲ್ಲಪ್ಪನವರು ತುಮಕೂರು ಜಿಲ್ಲೆಯವರೇ. ಹುಟ್ಟೂರ ಹೆಸರು ತಿಳಿಯದು. ಅವರನ್ನು ನೋಡಿದಾಗಲೇ ಅವರು ಶ್ರೀಮಂತ ಕುಟುಂಬದವರಲ್ಲವೆಂಬುದು ಖಚಿತವಾಯಿತು. ತುಮಕೂರು ಜಿಲ್ಲೆಯ ಗ್ರಾಮವೊಂದರಲ್ಲಿ ಹಿಂದುಳಿದ ವರ್ಗದ ಬಡ ಕುಟುಂಬವೊಂದರಲ್ಲಿ ಹುಟ್ಟಿ ಬಡತನಗಳ ಕಷ್ಟನಷ್ಟಗಳ ಮಧ್ಯೆಯೂ ವ್ಯಾಸಂಗ ಮುಂದುವರಿಸಿ ಪದವೀಧರರಾಗಿದ್ದರೆಂದರೆ ಅವರೊಬ್ಬ ಹಠವಾದಿಗಳೇ ಇರಬೇಕು. ಆ ಕಾಲದಲ್ಲಿ ಇಂದಿನಂತೆ ವಿಪುಲವಾಗಿ ಎಲ್ಲಾ ಕಡೆಗಳಲ್ಲೂ ಶಿಕ್ಷಣ ಸೌಲಭ್ಯಗಳಿರಲಿಲ್ಲ. ಪ್ರೌಢಶಾಲೆಯ ಶಿಕ್ಷಣಕ್ಕೂ ಜಿಲ್ಲಾ ಕೇಂದ್ರಕ್ಕೇ ಬರಬೇಕಾಗಿತ್ತು. ಇನ್ನು ಪದವೀಮಟ್ಟದ ಶಿಕ್ಷಣ ಪಡೆಯಬೇಕಾದರೆ ಮೈಸೂರಿಗೋ ಬೆಂಗಳೂರಿಗೋ ಹೋಗಬೇಕಾಗಿತ್ತು. ಆಗಿನ ಕಾಲದಲ್ಲಿ ಪದವಿ ಪಡೆಯುವುದೇ ಒಂದು ಮಹತ್ಸಾಧನೆ ಎಂದರೆ ತಪ್ಪಲ್ಲ.

ಹಿಂದುಳಿದ ಪಂಗಡಕ್ಕೆ ಸೇರಿದ ಈ ಪದವೀಧರರಿಗೆ ಆ ವರ್ಗದಲ್ಲಿ ಪದವೀಧರರೇ ಇಲ್ಲದ ಆ ಕಾಲದಲ್ಲಿ ಸರ್ಕಾರದಲ್ಲಿ ಉನ್ನತ ಹುದ್ದೆಯೇ ದೊರಕಬೇಕಾದುದು ನ್ಯಾಯ. ಪಾಪ ಅವರಿಗೆ ಶಿಫಾರಸು ಮಾಡಿ ಉನ್ನತ ಹುದ್ದೆಯನ್ನು ಕೊಡಿಸುವ ಜನರಿರಲಿಲ್ಲವೆಂದು ಕಾಣುತ್ತದೆ. ಅವರು ಸಹಕಾರ ಇಲಾಖೆಯಲ್ಲಿ ಪರಿವೀಕ್ಷಕರಾಗಿ ಸೇವೆ ಪ್ರಾರಂಭಿಸಿದರು. ಗ್ರಾಮೀಣ ಪ್ರದೇಶದ ಬಡ ಕುಟುಂಬದಲ್ಲಿ ಹುಟ್ಟಿ ಕಷ್ಟಪಟ್ಟು ಪದವೀಧರರಾಗಿದ್ದ ಅನೇಕರಿಗೆ ಇದೇ ಗತಿಯಾಗಿದೆ. ಇದು ದುರದೃಷ್ಟವೆಂದು ಭಾವಿಸಿದರೂ ಯಾರ ಹಂಗಿಗೂ ಒಳಗಾಗದೆ ಸ್ವಶಕ್ತಿಯಿಂದ ಮೇಲೆ ಬಂದು ತಮ್ಮತನವನ್ನು ಪ್ರದರ್ಶಿಸಿದ ಹೆಮ್ಮೆ ಇವರದು. ಇದಕ್ಕಿಂತಲೂ ಹೆಚ್ಚಿನದೇನು ಬೇಕು ?

ಮಲ್ಲಪ್ಪನವರು ಶುದ್ಧ ಖಾದಿಧಾರಿಗಳು. ನೇರ ನಡೆಯುವರು. ನೇರ ನಡೆನುಡಿಯುವರೆಂದರೆ ಅನೇಕರಿಗೆ ಹಿಡಿಸದು. ಇವರದು ಒರಟು ಸ್ವಭಾವ. ಹಳ್ಳಿಗಳ ಪರಿಸ್ಥಿತಿ ನೋಡಿ ಇವರ ಹೃದಯ ತುಡಿಯುತ್ತದೆ. ನಮ್ಮ ಹಳ್ಳಿಯ ಜನರು ಜೀವನದ ಕನಿಷ್ಠ ಅವಶ್ಯಕತೆಗಳನ್ನು ಪಡೆದು ಸಂತೃಪ್ತಬಾಳನ್ನು

ನಡೆಸುವ ಕಾಲ ಬರುವುದೆ ಎಂದು ಹಾತೊರೆಯುವುದು ಕಂಡಿದ್ದೇನೆ. ಗ್ರಾಮೀಣ ಪ್ರದೇಶದ ಮಕ್ಕಳ ಶಿಕ್ಷಣ ಸಂಪೂರ್ಣವಾಗಿ ನಿರ್ಲಕ್ಷಿಸಲ್ಪಟ್ಟಿದೆ; ಆ ಶಾಲೆಗಳಲ್ಲಿ ಕನಿಷ್ಠ ಸೌಲಭ್ಯಗಳರಲಿ, ಅಗತ್ಯ ಸಂಖ್ಯೆಯ ಶಿಕ್ಷಕರೂ ಇರುವುದಿಲ್ಲ. ಈ ಮಕ್ಕಳು ಪರಿಸರದ ದುಷ್ಪರಿಣಾಮಗಳನ್ನು ನಿವಾರಿಸಿಕೊಂಡು ಇಂತಹ ಶಾಲೆಗಳಲ್ಲಿ ಶಿಕ್ಷಣ ಪಡೆದು ನಗರಗಳಲ್ಲಿ ಶ್ರೀಮಂತ ಶಾಲೆಗಳಲ್ಲಿ ಶಿಕ್ಷಣ ಪಡೆದವರ ಜೊತೆಯಲ್ಲಿ ಎಲ್ಲಾ ಕ್ಷೇತ್ರಗಳಲ್ಲೂ ಸ್ಪರ್ಧಿಸಬೇಕು. ಸರ್ಕಾರಕ್ಕೆ ಇದು ಮನವರಿಕೆಯಾಗಿಲ್ಲವೇ? ಗ್ರಾಮೀಣ ಪ್ರದೇಶದ ಮಕ್ಕಳಿಗೆ ಏನಾದರೂ ರಿಯಾಯಿತಿ ತೋರಿಸಬಾರದೆ ಎಂದು ಸದಾ ಚಿಂತಿಸುವರು. ಸಾಮಾನ್ಯ ಶಾಲಾ ಪದ್ಧತಿಯನ್ನು ಅನುಷ್ಠಾನಕ್ಕೆ ತರುವುದೊಂದೇ ಇದಕ್ಕೆ ಪರಿಹಾರ ಎಂದು ಅನೇಕ ಹೇಳಿ ಅವರಿಗೆ ಸೂಚಿಸಿದ್ದೇನೆ. ಶಿಕ್ಷಣದ ಬಗ್ಗೆ ಬಹಳ ಆಸಕ್ತಿ ಬೆಳೆಸಿಕೊಂಡು ಹಲವು ಶಾಲೆಗಳನ್ನು ಹಳ್ಳಿಯ ಮಕ್ಕಳಿಗಾಗಿ ಶಿರಾ ಹಾಗೂ ಗುಬ್ಬಿ ತಾಲ್ಲೂಕುಗಳಲ್ಲಿ ತೆರೆದಿದ್ದಾರೆ.

ತುಮಕೂರಿನ ಶಿರಾ ರಸ್ತೆಯ ಬಲಗಡೆ ತಲೆ ಎತ್ತಿ ನಿಂತಿರುವ ಕಾಳಿದಾಸ ಕಿರಿಯ ಕಾಲೇಜು ಅವರ ಶ್ರಮದ ಶಿಶು. ಅದರ ಸ್ಥಾಪಕರಾಗಿ ಪ್ರಾರಂಭದಿಂದಲೂ ಅದರ ಅಭಿವೃದ್ಧಿಗಾಗಿ ಶ್ರಮಿಸುತ್ತಿದ್ದಾರೆ. ಆ ಸಂಸ್ಥೆ ಪ್ರಾರಂಭಿಸುವುದಕ್ಕೆ ಮೊದಲು ನ್ಯಾಯವಾದ ದಾರಿಯಲ್ಲಿ ಖಾಸಗಿ ಶಾಲೆಗಳನ್ನು ನಡೆಸುವುದರ ಹಿಂದಿರುವ ಕಷ್ಟಸುಖಗಳ ಪರಿಚಯವಿರಲಿಲ್ಲ. ಶಾಲೆ ಪ್ರಾರಂಭಿಸಿದ ಮೇಲೆ ಈ ಸಮಸ್ಯೆಗಳೆಲ್ಲಾ ಒಂದೊಂದಾಗಿ ಪರಿಚಯವಾಗುತ್ತಾ ಬಂದುವು. ವಿದ್ಯಾರ್ಥಿಗಳಿಂದ ವಂತಿಗೆ ವಸೂಲ್ಮಾಡಕೂಡದೆಂದು ಸರ್ಕಾರ ಆದೇಶ ಹೊರಡಿಸಿತ್ತು. ಸರ್ಕಾರವೇನೋ ಶಿಕ್ಷಕರ ವೇತನವನ್ನು ಪ್ರತಿ ತಿಂಗಳೂ ಕ್ರಮವಾಗಿ ಸಂದಾಯಮಾಡುತ್ತಿತ್ತು. ಒಂದು ಶಾಲೆ ನಡೆಸಲು ಇಷ್ಟಾದರೆ ಸಾಕೆ? ಕಟ್ಟಡ ಬೇಕು: ಪೀಠೋಪಕರಣಗಳು ಮತ್ತು ಪಾಠೋಪಕರಣಗಳು ಬೇಕು; ಪುಸ್ತಕ ಭಂಡಾರ ಬೇಕು: ಶಿಕ್ಷಕರ ತ್ರಿವಿಧ ಸೌಲಭ್ಯಗಳಿಗೆ ವಂತಿಗೆ ಸಲ್ಲಿಸಬೇಕು: ಶಾಲೆಯಲ್ಲಿ ಸಾದಿಲ್ವಾರು ಖರ್ಚಿಗೆ ಹಣ ಬೇಕು. ಇವೆಲ್ಲಾ ಖರ್ಚುಗಳನ್ನು ಹೇಗೆ ನಿಭಾಯಿಸುವುದು? ದಾನಿಗಳು ತಾನೆ ಎಲ್ಲಿಯವರೆವಿಗೆ ಕೊಟ್ಟಾರು? ಈ ಸಮಸ್ಯೆಗಳನ್ನು ಚರ್ಚಿಸಿ ಸರ್ಕಾರಕ್ಕೆ ಸೂಕ್ತ ಸಲಹೆ ಕೊಡಲು ಒಂದು ವೇದಿಕೆ ಅಗತ್ಯವಾಗಿತ್ತು. ಶ್ರಿಯುತ ಮಲ್ಲಪ್ಪನವರು ತುಮಕೂರು ಜಿಲ್ಲೆಯಲ್ಲಿ ಅನುದಾನ ಪಡೆಯುವ ಖಾಸಗಿ ಶಿಕ್ಷಣ ಸಂಸ್ಥೆಗಳ ಸಂಘವೊಂದನ್ನು ಸ್ಥಾಪಿಸಿ ಪ್ರಾರಂಭದಲ್ಲಿ ಅದರ ಸಂಚಾಲಕರಾಗಿ ಸೇವೆ ಸಲ್ಲಿಸಿದರು. ಆ ಸಂಘದ ಸಭೆಗಳಲ್ಲಿ ನಾನು ಶಿಕ್ಷಣ ಇಲಾಖೆಯ ನಿರ್ದೇಶಕನಾಗಿ ಭಾಗವಹಿಸಿದ್ದೆ. ಅವರ ಶ್ರಮ ಸರ್ಕಾರದ ಮೇಲೆ ಒಳ್ಳೆಯ ಪರಿಣಾಮ ಉಂಟುಮಾಡಿತು.

ಮಲ್ಲಪ್ಪನವರಿಗೆ ಈಗ ಎಂಭತ್ತುವರ್ಷ ವಯಸ್ಸು. ಆರೋಗ್ಯ ಕುಸಿಯುತ್ತಿದೆ. ಅವರದು ತುಂಬು ಬಾಳು. ಅವರಿಗೆ ಭಗವಂತ ಆರೋಗ್ಯ ಭಾಗ್ಯವನ್ನು ಕೊಟ್ಟು ಇನ್ನಷ್ಟುಕಾಲ ಕಾಳಿದಾಸ ವಿದ್ಯಾ ಸಂಸ್ಥೆಗೆ ಅವರ ಸೇವೆ ಲಭಿಸಿ ಆ ಮೂಲಕ ಗ್ರಾಮೀಣ ಪ್ರದೇಶದ ಮಕ್ಕಳಿಗೆ ಸಹಾಯವಾಗಲೆಂದು ಭಗವಂತನನ್ನು ಪ್ರಾರ್ಥಿಸುತ್ತೇನೆ.

ಗುರುಸದೃಶರು

ಎಂ. ಹೆಚ್. ಸಿದ್ಧನಂಜಯ್ಯ

ಗ್ರಾಮಾಂತರ ಕೈಗಾರಿಕಾ ಯೋಜನೆಯು ಬೆಂಗಳೂರು–ಕೋಲಾರ ಜಿಲ್ಲೆಗಳಲ್ಲಿ ಪ್ರಾಯೋಗಿಕವಾಗಿ ಆರಂಭಗೊಂಡಿದ್ದಿತು. ಆಗ ನಾನು 1–6–1950 ರಲ್ಲಿ ಗ್ರಾಮಾಂತರ ಕೈಗಾರಿಕಾಭಿವೃದ್ಧಿ ಇನ್‌ಸ್ಪೆಕ್ಟರನಾಗಿ ಸೇರಿ ಬೆಂಗಳೂರು ಜಿಲ್ಲೆಯ ದೇವನಹಳ್ಳಿ ತಾಲ್ಲೂಕಿನ ಕಸಬ ಹೋಬಳಿ ಆವತಿ ಸರ್ಕಲ್ಲಿನಲ್ಲಿ ಕೆಲಸದಲ್ಲಿದ್ದೆನು. ದೊಡ್ಡಬಳ್ಳಾಪುರದಲ್ಲಿ ಅನಂತರ ಕೈಗಾರಿಕೆಗಳ ಬಗ್ಗೆ ತರಪೇತಿ ಪಡೆದೆನು. ಅದಾದ ಮೇಲೆ ಕೆಂಗೇರಿಯಲ್ಲಿ ಲೆಕ್ಕಪತ್ರ ಬರವಣಿಗೆ ವಿಚಾರವಾಗಿ ಕೂಡ ತರಪೇತಿ ಹೊಂದಿ ಆವತಿಗೆ ಮರಳಿದೆನು.

ಗ್ರಾಮಾಂತರ ಕೈಗಾರಿಕಾಭಿವೃದ್ಧಿ ಯೋಜನೆಯನ್ನು ಮೈಸೂರು ರಾಜ್ಯದಲ್ಲಿ ಅಳವಡಿಸಲು ಭಾರತರತ್ನ ವಿಶ್ವೇಶ್ವರಯ್ಯನವರು ಸಿದ್ಧಪಡಿಸಿಕೊಟ್ಟರು. ಇಲ್ಲಿ ಆರಂಭವಾಗಿ ಫಲ ನೀಡಲು ಶುರುವಾದ ಮೇಲೆ ಭಾರತದ ಇತರೆ ರಾಜ್ಯಗಳೂ ತಮ್ಮಲ್ಲಿ ಈ ಯೋಜನೆಯನ್ನು ಆರಂಭಿಸಲು ಮುಂದೆ ಬಂದವು. ನನಗೆ 1955 ರಲ್ಲಿ ಮದುವೆಯಾಯಿತು. ಆಗ ನನಗೆ ಕೊಡುತ್ತಿದ್ದ ಸಂಬಳವನ್ನು ಸಂಭಾವನೆ ಎಂದು ಕರೆಯ ಲಾಗುತ್ತಿತ್ತು. ಆ ಸಂಭಾವನೆ 57 ರೂಪಾಯಿ 50 ಪೈಸೆ ಮಾತ್ರ. ಈ ಅಲ್ಪ ಮೊತ್ತದಲ್ಲಿ ನಾನು ನನ್ನ ಸಂಸಾರ ತೂಗಿಸಿಕೊಂಡು ಪರಸ್ಥಳದಲ್ಲಿ ಇದ್ದು, ಬಹು ದೊಡ್ಡ ಸಂಸಾರದ ಹೊಣೆ ಹೊತ್ತಿದ್ದ ನಮ್ಮ ತಂದೆ-ತಾಯಿಯವರಿಗೂ ನೆರವು ನೀಡುವುದು ಸಾಧ್ಯವಾಗುತ್ತಿರಲಿಲ್ಲ. ಹೀಗಾಗಿ ಇಲ್ಲಿ ಕೆಲಸದಲ್ಲಿರುವುದೋ ಬಿಟ್ಟು ಮನೆಗೆ ಬರುವುದೋ ಎಂದು ಯೋಚಿಸುತ್ತಿದ್ದೆ. ಅಷ್ಟು ಹೊತ್ತಿಗೆ ಮೈಸೂರು ರಾಜ್ಯದ ಎಲ್ಲ ಜಿಲ್ಲೆಗಳಿಗೂ ವಿಶ್ವೇಶ್ವರಯ್ಯನವರ ಗ್ರಾಮಾಂತರ ಕೈಗಾರಿಕಾ ಯೋಜನೆಯು ವಿಸ್ತರಿಸಲ್ಪಟ್ಟಕಾರಣ ತುಮಕೂರು ಜಿಲ್ಲೆಗೂ ಬಂದಿತು. ಆಗ ನಮ್ಮ ರಾಜ್ಯದಲ್ಲಿ ಯೋಜನೆಯ ನಿರ್ದೇಶಕರಾಗಿದ್ದ ಬಿ. ಬೀರಪ್ಪನವರು. ತಮ್ಮ ಕಾರ್ಯ ಪ್ರವೃತ್ತಿಯಿಂದ ಅಚ್ಚು ಮೆಚ್ಚಿನವರಾಗಿದ್ದ ಎನ್. ಮಲ್ಲಪ್ಪನವರನ್ನು ತುಮಕೂರು ಜಿಲ್ಲಾ ಕೈಗಾರಿಕಾ ಮುಖ್ಯಾಧಿಕಾರಿಯವರನ್ನಾಗಿ ನಿಯೋಜಿಸಿಕೊಂಡರು. ಮಲ್ಲಪ್ಪನವರು ನನ್ನ ಹುಟ್ಟೂರಾದ ಹೊನ್ನೇನಹಳ್ಳಿ ಸಮೀಪದ ಅರಳೀಮರದಪಾಳ್ಯದವರೇ ಆಗಿದ್ದು ನನ್ನನ್ನೂ ನಮ್ಮ ತಂದೆಯವರನ್ನೂ ತೀರ ಬಲ್ಲವರಾಗಿದ್ದದ್ದು ಒಂದು ಸುಯೋಗವೇ ಎಂದು ಹೇಳಬೇಕು.

ಇದೇ ಸಮಯಕ್ಕೆ ತುಮಕೂರು ಕಸಬ ಹೋಬಳಿ ಕೈಗಾರಿಕಾ ಸಹಕಾರ ಸಂಘದಲ್ಲಿ ಗ್ರಾಮಾಂತರ ಕೈಗಾರಿಕಾಭಿವೃದ್ಧಿ ಇನ್‌ಸ್ಪೆಕ್ಟರ ಒಂದು ಹುದ್ದೆ ಖಾಲಿ ಇರುವುದು ಗೊತ್ತಾಯಿತು. ಈ ಸಂಬಂಧವಾಗಿ ಮಲ್ಲಪ್ಪನವರನ್ನು ಕಂಡು ನನ್ನನ್ನು ಆ ಸೊಸೈಟಿಯ ಖಾಲಿ ಜಾಗಕ್ಕೆ ತೆಗೆದುಕೊಳ್ಳಲು ಮನವಿ ಮುಂದಿಟ್ಟೆ. ಶ್ರೀ ಮಲ್ಲಪ್ಪನವರು ಈ ಯೋಜನೆಯ ಮುಖ್ಯಸ್ಥರಾಗಿದ್ದ ಬಿ. ಬೀರಪ್ಪನವರಿಂದಲೂ ಅವರಿಗೆ ಸಹಾಯಕ ರಾಗಿದ್ದ ಟಿ. ರಂಗದಾಸಪ್ಪನವರಿಂದಲೂ ನನ್ನ ನಡತೆ ಹಾಗೂ ಕೆಲಸದ ಬಗ್ಗೆ ಸರಿಯಾದ ಮಾಹಿತಿ ಪಡೆದಿದ್ದರು. ತುಮಕೂರು ಕಸಬ ಹೋಬಳಿಯ ಕೈಗಾರಿಕಾ ಸಹಕಾರ ಸಂಘದ ಕಾರ್ಯಕಾರಿ ಮಂಡಲಿಯವರೂ ಕೆಲಸ ಬಲ್ಲಂಥ ಒಬ್ಬ ಇನ್‌ಸ್ಪೆಕ್ಟರವರನ್ನು ಇಲಾಖೆಯವರೇ ನೇಮಕ ಮಾಡಿಕೊಡಲು ಕೇಳಿದ್ದರು. ಹೀಗಾಗಿ ಟಿ. ರಂಗದಾಸಪ್ಪನವರ ನೆರವಿನಿಂದ ಮತ್ತು ಮಲ್ಲಪ್ಪನವರ ಔದಾರ್ಯದಿಂದ ನಾನು ಆವತಿಯಿಂದ ತುಮಕೂರಿಗೆ ಸುಲಭವಾಗಿ ವರ್ಗಮಾಡಿಸಿಕೊಂಡು ಬಂದು ಸೇರಲು ಅನುಕೂಲವಾಯಿತು. ಇದನ್ನು ನನ್ನ ಜೀವಿತದಲ್ಲಿ ನಾನೆಂದಿಗೂ ಮರೆಯಲಾರೆ.

ಇಲ್ಲಿ ನನ್ನ ಸಹಪಾಠಿಗಳು ಮಲ್ಲಪ್ಪನವರ ಬಳಿ ಕೆಲಸ ಮಾಡುವುದು ಅಷ್ಟು ಸುಲಭವಲ್ಲ. ಸುಳ್ಳು ಸೋಮಾರಿತನಕ್ಕೆ ಅಲ್ಲಿ ಲವಲೇಶವೂ ಎಡೆಯಿಲ್ಲ. ಗಡಿಯಾರದೋಪಾದಿಯಲ್ಲಿ ಕಾರ್ಯನಿರತವಾದಲ್ಲಿ ಮಾತ್ರ ಅಲ್ಲಿರಲು ಸಾಧ್ಯ ಎಂದು ಹೇಳುತ್ತಿದ್ದರು. ವಿಶ್ವೇಶ್ವರಯ್ಯನವರ ಯೋಜನೆಯ ಮೂಲ ಉದ್ದೇಶ ಪ್ರತಿ ಹಳ್ಳಿಯ ಪ್ರತಿ ಕುಟುಂಬಕ್ಕೂ ನೆರವು ನೀಡಿ ಆರ್ಥಿಕ ಪರಿಸ್ಥಿತಿಯನ್ನು ಉತ್ತಮ ಪಡಿಸಿ ಅವರ ಆರ್ಥಿಕ ಆದಾಯದ ಮಟ್ಟವನ್ನು ಮೇಲಕ್ಕೆತ್ತುವುದೇ ಆಗಿದ್ದಿತು. ಈ ಪ್ರಕಾರ ಹೋಬಳಿಯ ಎಲ್ಲ ಗ್ರಾಮಗಳಿಗೂ ನೆರವು ಕೇಳಲು ಬಂದವರಿಗೆ ಆರ್ಥಿಕ ನೆರವು ನೀಡಿ ಅಭಿವೃದ್ಧಿಯ ಕನಸು ಕಂಡವು.

ತುಮಕೂರು ಕಸಬ ಮಲ್ಲೇನಹಳ್ಳಿ ಗ್ರಾಮದಲ್ಲಿ ಈ ಒಂದೆ ಅನಿಯಮಿತ ಸೊಸೈಟಿಯೊಂದರಲ್ಲಿ ಸಾಲಪಡೆದು ಸುಸ್ತಿಯಾಗಿ ಆ ಸಾಲವು ಸಂಘದ ಎಲ್ಲ ಸದಸ್ಯರ ಮೇಲೂ ಬಂದು ನಮ್ಮ ಸಂಘದಿಂದ ಸಾಲ ಪಡೆಯಲು ಯಾರೂ ಮುಂದೆ ಬರಲೊಲ್ಲರು. ಇಂಥ ಹೊತ್ತಿನಲ್ಲಿ ಮಲ್ಲಪ್ಪನವರು ಗ್ರಾಮದವರಿಗೆ ಇದು ಆ ತರಹದ ಸಂಘವಲ್ಲ: ಒಬ್ಬ ಮಾಡಿದ ಸಾಲ ಇನ್ನೊಬ್ಬರ ತಲೆಯ ಮೇಲೆ ಬರುವುದಿಲ್ಲ: ಅವರವರು ಮಾಡಿದ ಸಾಲಕ್ಕೆ ಅವರವರು ಮಾತ್ರ ಬಾಧ್ಯರು; ಭಯಕ್ಕೆ ಕಾರಣವಿಲ್ಲ: ಮುಂದೆ ಬಂದು ಯೋಜನೆಯ ನತಿಯಿಂದ ದೊರಕುವ ಸಾಲ ಸೌಲಭ್ಯಗಳನ್ನು ಪಡೆದುಕೊಳ್ಳಲು ತಿಳುವಳಿಕೆ ಕೊಟ್ಟರು. ಮೊದಲನೆಯದಾಗಿ ಒಬ್ಬ ಹೆಣ್ಣು ಮಗಳಿಗೆ ಕುರಿ ಅಭಿವೃದ್ಧಿ ಸಾಲ ಮಂಜೂರು ಮಾಡಿ ರಾತ್ರಿ 8 ಗಂಟೆಯ ಸಮಯದಲ್ಲಿ ಸಾಲವನ್ನು ಗ್ರಾಮದವರ ಸಮ್ಮುಖದಲ್ಲಿ ವಿತರಣೆ ಮಾಡಿಸಿದರು. ಅನಂತರ ಬಾಜೂ ಗ್ರಾಮಸ್ಥರೆಲ್ಲರೂ ಸಂಘದಲ್ಲಿ ಸದಸ್ಯತ್ವ ಪಡೆದು ಆರ್ಥಿಕ ಸಹಾಯ ಹೊಂದಲು ಇದು ಸಹಾಯ ಮಾಡಿತು. ಈಗಲೂ ಅವರು ಮಾಡಿದ ಸಹಾಯದಿಂದ ಅಣ್ಣೇನಹಳ್ಳಿಯಲ್ಲಿ ಅಭಿವೃದ್ಧಿ ಹೊಂದಿದ ರಂಗಪ್ಪ, ಚಿಕ್ಕಣ್ಣ. ದೊರಕೆರಪ್ಪ, ಪೋಷ್ಟ್ರ ನಂಜಪ್ಪಯ್ಯ ಮೊದಲಾದವರ ಹೆಸರುಗಳನ್ನು ಇಲ್ಲಿ ನಮೂದಿಸಬಹುದಾಗಿದೆ. ಅವರೆಲ್ಲರೂ ಇಂದೂ ನಾವು ಕೊಟ್ಟ ಸಂಘದ ಆ ನೆರವನ್ನು ಹೃತ್ಪೂರ್ವಕವಾಗಿ ಕೃತಜ್ಞೆಯಿಂದ ನೆನೆಯುತ್ತಾರೆ.

ಇದೇ ರೀತಿ ಮಲ್ಲಪ್ಪನವರ ಅಧಿಕಾರಾವಧಿಯಲ್ಲಿ ತಾಲ್ಲೂಕಿನ ಬಹುತೇಕ ಕುಟುಂಬಗಳು ಒಂದಲ್ಲ ಒಂದು ರೀತಿಯಲ್ಲಿ ಕೈಗಾರಿಕಾ ನೆರವು ಪಡೆದು ತಮ್ಮ ಹಣಕಾಸಿನ ಪರಿಸ್ಥಿತಿಯನ್ನು ಸುಧಾರಿಸಿಕೊಂಡು ಮೇಲೆ ಬಂದಿರುತ್ತವೆ. ಇಷ್ಟೊಂದು ನಿಸ್ಪೃಹವಾಗಿ ಅವರವರ ಮನೆಯ ಬಾಗಿಲಿಗೆ ಯೋಜನೆಯನ್ನು ಕೊಂಡೊಯ್ದು ಸಾಲ ಒದಗಿಸಿಕೊಟ್ಟ ಉದಾಹರಣೆಗಳು ರಾಜ್ಯದಲ್ಲಿಯೇ ತೀರ ಅಪರೂಪವೆಂದು ಹೇಳಬಹುದು. ಸಾಲ ಹಂಚಿಕೆ, ದಾಖಲೆ ಹೊಂದಿಸಿಕೊಳ್ಳುವುದು, ಅವುಗಳ ಸಮರ್ಪಕ ಪರಿಶೀಲನೆ, ಸಾಲ ಮಂಜೂರಿ ಬಗ್ಗೆ ಆಫೀಸರಾಗಿ ಹುಕುಂ ಮಕರೂರು ಮಾಡುವುದು ಈ ಎಲ್ಲವುಗಳಲ್ಲಿ ತುಮಕೂರು ಜಿಲ್ಲೆ ರಾಜ್ಯದಲ್ಲಿಯೇ ಮೊದಲ ಸ್ಥಾನದಲ್ಲಿತ್ತು. ಮಲ್ಲಪ್ಪನವರು ಯಾವ ಇಲಾಖೆಯದ್ದೇ ಅಧಿಕಾರದಲ್ಲಿದ್ದಾಗಲೂ ಜನತೆಗಾಗಿ ಕೆಲಸಮಾಡಲು ಅಲ್ಲಿದ್ದ ಎಲ್ಲ ಅವಕಾಶಗಳನ್ನೂ ಪರಮಾವಧಿ ಬಳಸಿಕೊಂಡು ಕಾರ್ಯ ನಿರ್ವಹಿಸಿದ್ದನ್ನು ಇಲ್ಲಿ ನೆನೆಯಬಹುದಾಗಿದೆ. ಇದಕ್ಕೆ ಕಾರಣ ಅವರಲ್ಲಿದ್ದಂತಹ ದಿಟ್ಟ ಪ್ರವೃತ್ತಿ, ನಿಸ್ಪೃಹತೆ, ಪ್ರಾಮಾಣಿಕತೆ ಹಾಗೂ ಕಾಲಹರಣಮಾಡದ ಕಾರ್ಯ ಪ್ರವೃತ್ತಿ ಎನ್ನದೆ ಇರಲಾರೆ.

ರಿಕಾರ್ಡು ಪರಿಶೀಲನೆ ಮಾಡುವಾಗ ಅವರದೇ ಆದ ಒಂದು ವಿಧಾನವನ್ನು ಶ್ರೀ ಮಲ್ಲಪ್ಪನವರು ಅನುಸರಿಸುತ್ತಿದ್ದರು. ಅದೇನೆಂದರೆ ಪರಿಶೀಲಿಸುತ್ತಿರುವಾಗ ಕನ್ನಡಕಕ್ಕೆ ಕೈ ಹೋಗಲಿಲ್ಲವೆಂದರೆ ರಿಕಾರ್ಡು ಪರಿಪಕ್ವವಾಗಿರುತ್ತದೆ ಎಂದು ಭಾವಿಸಬೇಕು. ಅವರ ಕನ್ನಡಕಕ್ಕೆ ಕೈ ಹೋಯಿತೆಂದರೆ ಏನೋ ಭಾರಿ ತಪ್ಪು ರಿಕಾರ್ಡಿನಲ್ಲಿ ಸಿಕ್ಕಿತೆಂದು ತಿಳಿಯಬೇಕು. ಆಗ ಕೆಳಗಿನ ನೌಕರನಿಗೆ ಏನೋ ಕಾದಿದೆ ಎಂದು ಭಾವನೆಯು ಉಂಟಾಗುತ್ತಿತ್ತು. ಇದೆಲ್ಲಕ್ಕೂ ಮಾಡುವ ಕೆಲಸದಲ್ಲಿ ಚಾಚೂ ತಪ್ಪದೆ ಎಚ್ಚರವಹಿಸಬೇಕೆನ್ನುವ ಅವರ

ಮನೋಧರ್ಮವೇ ಹೊರತು ಅನ್ಯಥಾ ಭಾವಿಸಲು ಅವಕಾಶವೇ ಇರುತ್ತಿರಲಿಲ್ಲ. ಯಾರಿಗೇ ಆಗಲಿ ಬಾಯಿ ಗದರಿಕೆಯಲ್ಲಿ ಬೆದರಿಸುತ್ತಿದ್ದರೇ ವಿನಾ ಬರವಣಿಗೆ ಮೂಲಕ ಕೆಡುಕನ್ನು ಹಾರೈಸಿದವರಲ್ಲ ಎನ್ನುವುದನ್ನು ಅವರ ನಿಕಟಸಂಪರ್ಕದಿಂದ ಬಲ್ಲವನಾಗಿ ಹೇಳುತ್ತಿದ್ದೇನೆ.

ನನಗಂತೂ ಪ್ರಾರಂಭದಲ್ಲಿ ಸ್ವಲ್ಪ ಕಷ್ಟ ಎನ್ನಿಸಿದರೂ ಆಮೇಲಾಮೇಲೆ ಲೀಲಾಜಾಲವಾಗಿ ಕೆಲಸ ಮಾಡಲು ಸಂತೋಷವೆನ್ನಿಸುತ್ತಿತ್ತು. ಮಿಕ್ಕ ಹೋಬಳಿಗಳಿಗಿಂತ ಹೆಚ್ಚಾಗಿ ತುಮಕೂರು ಕಸಬ ಹೋಬಳಿ ಯಲ್ಲಿ ರಿಕಾರ್ಡು ಹೊಂದಾಣಿಕೆ, ಸಾಲ ಮಂಜೂರಾತಿ, ವಿಲೇವಾರಿ, ಮೆಂಬರುಗಳ ನೋಂದಾವಣೆ, ಷೇರು ವಸೂಲಿ, ಸಾಲ ವಸೂಲಿ, ಸಾಲಕ್ಕಾಗಿ ಹೆಚ್ಚು ದರಖಾಸ್ತು ತಯ್ಯಾರಿ ಮುಂತಾದವುಗಳಲ್ಲಿ ನಮ್ಮ ಸೊಸೈಟಿ ಮುಂದಿದ್ದಿತು. ನಾನಂತೂ ಹುರುಪು, ಉತ್ಸಾಹಗಳಿಂದ ಕೆಲಸ ಮಾಡುತ್ತಿದ್ದೆ. ಇದರ ಪರಿಣಾಮವಾಗಿ ಹೋಬಳಿವಾರು ಇದ್ದ ಸೊಸೈಟಿಗಳನ್ನೆಲ್ಲ ಕಸಬ ಸೊಸೈಟಿಗೆ ಸೇರಿಸಿ ತಾಲ್ಲೂಕಿಗೆಲ್ಲ ಒಂದೇ ಸೊಸೈಟಿ ಮಾಡಿ ಅದರ ಕಾರ್ಯ ನಿರ್ವಹಿಸಲು ಕೂಡ ನನ್ನನ್ನೇ ಕಾರ್ಯದರ್ಶಿಯನ್ನಾಗಿ ನಿಯಮಿಸಿದರು. ಈ ಸಂಘದಲ್ಲೇ ನಾನು ಉಳಿದದ್ದರಿಂದ ಮಲ್ಲಪ್ಪನವರು ಹಾಕಿಕೊಟ್ಟಿದ್ದ ಮೇಲ್ಪಂಕ್ತಿಯಲ್ಲೇ ಸಂಘದ ಕೆಲಸ ಕಾರ್ಯಗಳನ್ನು ಮುಂದುವರಿಸಿಕೊಂಡು ಇವತ್ತಿಗೂ ನೂರಕ್ಕೆ ನೂರು ಪ್ರಾಮಾಣಿಕನಾಗಿ ಕೆಲಸಮಾಡಲು ಸಾಧ್ಯವಾಗಿದೆ.

ಈ ತಾಲ್ಲೂಕು ಬಿಟ್ಟು ಹೋಗುವಂತಾಗಿದ್ದರೆ ಬಹುಶಃ ನಾನು ಈಗಿನಂತೆ ಇರುತ್ತಿದ್ದೆನೋ ಇಲ್ಲವೋ ಹೇಳಲಾರೆ. ಆರ್ಥಿಕವಾಗಿ ಕೂಡ ಈಗಿಗಿಂತ ಹೆಚ್ಚು ಅನುಕೂಲಗಳನ್ನು ಕಾಣಬಹುದಾಗಿತ್ತೊ ಏನೊ. ಅವೆಲ್ಲ ಮಹತ್ವದ ಸಂಗತಿಗಳೇ ಅಲ್ಲ. ಏನೇ ಆಗಲಿ ಆಗ ನಾನು ಇಷ್ಟು ಪ್ರಾಮಾಣಿಕನಾಗಿಯಂತೂ ಉಳಿಯುತ್ತಿರಲಿಲ್ಲ. ಈ ಬಗೆಯ ಪ್ರಾಮಾಣಿಕತೆಯನ್ನು ಉಳಿಸಿಕೊಳ್ಳಲು, ಕೆಲಸಮಾಡುವುದರಲ್ಲಿ ಸಂತೋಷ ವನ್ನು ಕಂಡುಕೊಳ್ಳಲು ಕಾರಣರಾದ ಮೂರು ಮಂದಿ ಪ್ರಾತಃಸ್ಮರಣೀಯರನ್ನು ನನ್ನ ಜೀವಿತ ಕಾಲದಲ್ಲಿ ಸಂಧಿಸಿರುತ್ತೇನೆ. ಅವರುಗಳಲ್ಲಿ ಮೊದಲನೆಯದಾಗಿ ನಿವೃತ್ತ ಡೆವಲಪ್‌ಮೆಂಟ್ ಕಮಿಷನರ್ ಅವರಾದ ಶ್ರೀ ಕೆ. ತಿಪ್ಪೇರುದ್ರಯ್ಯನವರು, ಎರಡನೆಯದಾಗಿ ಅಡಿಷನಲ್ ರಿಜಿಸ್ಟ್ರಾರ್ ಆಗಿ ನಿವೃತ್ತರಾದ ಶ್ರೀ ಟಿ. ರಂಗದಾಸಪ್ಪನವರು, ಮೂರನೆಯದಾಗಿ ಹಾಲಿ ನಮ್ಮ ಊರಿನಲ್ಲೇ ನಮ್ಮ ಕಣ್ಮುಂದೆಯೇ ನಿವೃತ್ತರಾಗಿ ನೆಲೆಸಿರುವ, ಇಂದಿಗೂ ನಮ್ಮ ಸುಖದುಃಖಗಳನ್ನು ವಿಚಾರಿಸುವವರಾಗಿರುವ ಶ್ರೀಮಾನ್ ಮಲ್ಲಪ್ಪನವರು. ಈ ಮಹನೀಯ ತ್ರಯರಿಗೆ ನನ್ನ ಅನಂತ ಪ್ರಣಾಮಗಳು ಸಲ್ಲುತ್ತವೆ. ಶ್ರೀ ಮಲ್ಲಪ್ಪನವರಿಗಂತೂ ನಾನು ವಿಶೇಷ ಋಣಿಯಾಗಿದ್ದೇನೆ. ಏಕೆಂದರೆ ಎಲ್ಲ ವಿಚಾರಗಳಲ್ಲಿಯೂ ಅವರು ನನಗೆ ಗುರುಸದೃಶರಾಗಿರುತ್ತಾರೆ.

ನಮ್ಮ ತಂದೆ

ಡಾ|| ಟಿ. ಎಂ. ಶಂಕರ್

ನಾನು ವೃತ್ತಿಯಿಂದ ವೈದ್ಯನಾಗಿ, ಒಂದು ವಿಷಯದ ಮೇಲೆ ಅದರಲ್ಲೂ ನನ್ನ ತಂದೆಯವರ ಬಗ್ಗೆ ಬರೆಯುವುದು ಚಮ್ಮಾರ ಕುಡಿಕೆ ಮಾಡಿದ ಹಾಗೆ ಆಗಬಹುದು. ಆದರೂ ನೆನಪಿನಂಗಳದಿಂದ ಒಂದೆರಡು ಕಾಳುಗಳನ್ನು ಹೆಕ್ಕುವ ಪ್ರಯತ್ನ ಮಾಡುತ್ತೇನೆ.

1950–51 ರಲ್ಲಿ ನಾವು ಮಧುಗಿರಿಯಲ್ಲಿದ್ದೆವು. ಆಗ ನಾನು ಎಳೆಯ. ಪ್ರಾಥಮಿಕ ಶಾಲೆಯಲ್ಲಿ ಓದುತ್ತಿದ್ದೆ. ಕೋಟೆಯ ಬಳಿ ಇದ್ದ ತಂದೆಯವರ ಕಛೇರಿಯ ಬಳಿಯಲ್ಲಿ ನನ್ನ ಶಾಲೆಯಿತ್ತು. ನಮ್ಮ ಉಪಾಧ್ಯಾಯರು ಶ್ರೀ ರಾಘವೇಂದ್ರರಾಯರು ಕೋಪದ ಇನ್ನೊಂದು ಮುಖವಾಗಿದ್ದರು. ನಮ್ಮ ಒಂದು ಲೋಪದಿಂದ ತರಗತಿಯ ಎಲ್ಲಾ ವಿದ್ಯಾರ್ಥಿಗಳನ್ನು ನಿಲ್ಲಿಸಿ, ಸ್ಲೇಟನ್ನು ಗೋಡೆಯ ಕಡೆಗೆ ತಿರುಗಿಸಿ, ಎಲ್ಲರ ಗೆಣ್ಣುಗಳ ಮೇಲೆ ಹೊಡೆಯುತ್ತಾ ಬಂದರು. ನನ್ನ ಸರದಿ ಬಂದಾಗ, ನಾನು ಸಣ್ಣಗೆ ಇದ್ದುದರಿಂದಲೋ ಅಥವಾ ಅಮಲ್ದಾರರ ಮಗ ಆಗಿದ್ದರಿಂದಲೋ ಏನೋ, ಕೆನ್ನೆಗೆ ಮೃದುವಾಗಿ ಹೊಡೆದರು. ಇದನ್ನು ತದ್ರೂಪವಾಗಿ ತಂದೆಯವರಿಗೆ ವರದಿ ಒಪ್ಪಿಸಿದೆ. ಮಾರನೆಯ ದಿನ ಖುದ್ದು ಶಾಲೆಗೆ ಬಂದು ಮುಖ್ಯೋಪಾಧ್ಯಾಯರಾದ ಶ್ರೀ ಅಪ್ಪಾಜಪ್ಪನವರನ್ನು ಮತ್ತು ರಾಘವೇಂದ್ರರಾಯರನ್ನು ನನ್ನ ಎದುರಿನಲ್ಲಿ ಕರೆದು ಕೇಳಿದರು. ಆಗ ರಾಘವೇಂದ್ರರಾಯರು ಕ್ಷಮೆಯನ್ನು ಕೇಳಿದರು. ನನ್ನ ತಂದೆ 'ಮೇಷ್ಟ್ರೆ ನಾನು ನಮ್ಮ ಹುಡುಗನನ್ನು ಹೊಡೆದದ್ದು ಏಕೆ ಎಂದು ಕೇಳಲು ಬರಲಿಲ್ಲ. ಎಲ್ಲ ಹುಡುಗರಂತೆ ನಮ್ಮ ಹುಡುಗನನ್ನು ಏಕೆ ಹೊಡೆಯಲಿಲ್ಲ ಎಂದು ಕೇಳುವುದಕ್ಕೆ ಬಂದೆ' ಎಂದರು. ಇದರ ಭಾವ ನನಗೆ ಆಗ ಸರಿಯಾಗಿ ತಿಳಿಯಲಿಲ್ಲ. ಆ ಪ್ರಸಂಗ ಆದ ಮೂವತ್ತು ವರ್ಷಗಳನಂತರ ನಾನು ಚಾಮರಾಜನಗರದಲ್ಲಿ ವೈದ್ಯನಾಗಿದ್ದಾಗ ಒಬ್ಬರು ಬಂದು 'ಮೇಷ್ಟ್ರು ಹೊಡೆದಿದ್ದಾರೆ, ಅವರ ಮೇಲೆ ದಾವೆ ಹಾಕಬೇಕು. ಸರ್ಟಿಫಿಕೇಟ್ ಕೊಡಿ' ಅಂತ ಹೇಳಿದಾಗ ಮೇಲ್ಕಂಡ ಪ್ರಸಂಗ ಹೇಳಿದೆ. ಅವರು ದಾವೆ ಪ್ರಸಂಗ ಕೈಬಿಟ್ಟರು.

ಶಿಕ್ಷೆಗೆ ಎಲ್ಲರೂ ಸಮಾನರು. ಶಿಕ್ಷೆ ಅವರು ಮಾಡಿದ ತಪ್ಪಿಗೇ ಪರಂತು ಅವರಿಗಾಗಲೀ ಅಥವಾ ಅವರ ಅಂತಸ್ತಿಗಾಗಲೀ ಅಲ್ಲ ಎಂಬುದು ಅಂದು ನನಗೆ ತಿಳಿಯದಿದ್ದರೂ ಈಗ ಚೆನ್ನಾಗಿ ಮನದಟ್ಟಾಗಿದೆ.

ಇನ್ನೊಂದು ಪ್ರಸಂಗ. ನಾನು ಮಾಧ್ಯಮಿಕ ಶಾಲೆಯ ಮೂರನೆಯ ತರಗತಿಯಲ್ಲಿ ಇದ್ದೆ. ಆಗ ತರಗತಿಗೆ ನಾನೇ ಮೊದಲಿದ್ದೆ. ನನ್ನ ಉಪಾಧ್ಯಾಯರು ಮೆರಿಟ್ ಸ್ಕಾಲರ್‌ಶಿಪ್‌ಗೆ ಅರ್ಜಿಗಳನ್ನು ಕೊಟ್ಟರು. ನಾನು ತರಗತಿಗೇ ಮೊದಲು ಇದ್ದದ್ದರಿಂದ ಹೆಮ್ಮೆಯಿಂದ ಅರ್ಜಿ ಭರ್ತಿಮಾಡಿ, ತಂದೆಯವರ ಸಹಿಗೆ ಅವರ ಮುಂದಿಟ್ಟೆ. ಅವರು ಅರ್ಜಿಯನ್ನು ಸಾವಧಾನದಿಂದ ನೋಡಿ, ನನ್ನ ಕಡೆ ನಗೆಬೀರಿ 'ಶಂಕ್ರೀ (ಪ್ರೀತಿಯ ಭಾವದಲ್ಲಿದ್ದಾಗ ಹೀಗೆ ಕರೆಯುತ್ತಿದ್ದರು. ಸಾಮಾನ್ಯ ಸಂದರ್ಭಗಳಲ್ಲಿ ಶಂಕ್ರ ಎಂದೆನ್ನುತ್ತಿದ್ದರು. ಕೋಪದಲ್ಲಿ ಎಲ್ಲಿ ಆ ನನ್ಮಗ ಎಂದೆನ್ನುತ್ತಿದ್ದರು. ಅದು ನನ್ನನ್ನೇ ಕುರಿತು ಹೇಳಿರುವುದು ಎಂದು ಮನದಟ್ಟು ಮಾಡಿಕೊಂಡು ಆಗ ಎದುರಿನಿಂದ ಮರೆಯಾಗುತ್ತಿದ್ದೆ.) ಫೀಜು ಕಟ್ಟೋಕೆ ಆಗ್ದೆ ಇರೋರ್ಗೆ ಸ್ಕಾಲರ್‌ಶಿಪ್ಪು. ದೇವರು ನಿನಗೆ ಅಷ್ಟೊಂದು ಕಮ್ಮಿ ಮಾಡಿದ್ದಾನೇನೋ? ಬಿಡಲೇ' ಎಂದು ಅರ್ಜಿ ಹರಿದು ಹಾಕಿದರು.

ನಾನು ಅಳುತ್ತಾ ಅದನ್ನು ಮಾಸ್ತರಿಗೆ ಹೇಳಿದೆ. ಮಾಸ್ತರು ಅದು ಅವರ ದೊಡ್ಡತನ ಎಂದಷ್ಟೇ ಹೇಳಿದರು. ಆಗಿನ ನನ್ನ ಕುಬ್ಜ ಮನಸ್ಸು ಅದನ್ನು ದಡ್ಡತನ ಎಂದೇ ಹೇಳಿತು. ಆದರೆ ತದನಂತರದ ದಿನಗಳಲ್ಲಿ ಅದು ದೊಡ್ಡತನ ಎಂದು ಮನವರಿಕೆಯಾಯಿತು.

ನನಗೆ ತುಮಕೂರಿನ ಐ.ಡಿ. ಹಳ್ಳಿಗೆ ವೈದ್ಯಾಧಿಕಾರಿಯಾಗಿ ನೇಮಕಾತಿ ಬಂದಾಗ, ಮೈಸೂರಿನಿಂದ ತುಮಕೂರಿನವರೆಗೂ ನನ್ನೊಡನೆ ಬಂದರು. ಬಸ್ಸಿನಲ್ಲಿ ಅವರು ಹೇಳಿದ್ದು ನನಗೆ ಈಗ ಹೇಳಿದಂತಿದೆ. 'ನಿನ್ನ ವೃತ್ತಿಯಲ್ಲಿ ಹಣ ಬಹಳ ಸುಲಭವಾಗಿ ಬರುತ್ತೆ. ಆದರೆ ಅದರ ಜೊತೆಯಲ್ಲಿ ರೋಗಿಯ ನಿಟ್ಟುಸಿರು ಸಹ ಇರುತ್ತೆ. ಅದು ನಮಗೆ ತಟ್ಟುತ್ತೆ. ಅದರಿಂದ ಮಕ್ಕಳುಮರಿಗೆ ಒಳ್ಳೆಯದಾಗೋಲ್ಲ. ಜನಗಳು ಶಭಾಷ್ ಅನ್ಬೇಕು. ಥು ಇಂದೆಂಥದಪ್ಪಾ ಕ್ರಿಮಿ ಅನ್ಬಾರ್ದು ಹಂಗೆ ಕೆಲಸ ಮಾಡು' ಅಂತ ಹೇಳಿದರು. ಅದು ನನ್ನ ವೃತ್ತಿಯ ಬೀಜಮಂತ್ರವಾಗಿದೆ.

ಲಕ್ಷಾಂತರ ಹಣ ಇರುವವನ ಮಗ ಸಾವಿರ ರೂಪಾಯಿ ಸರದಾರ ಆದ್ರೆ ಅದೇನು ಅಷ್ಟು ಮುಖ್ಯ ವಾಗುವುದಿಲ್ಲ. ಅದೇ ಒಬ್ಬ ಭಿಕ್ಷಾಧಿಪತಿಯ ಮಗ ಸಾವಿರದ ಸರದಾರನಾದರೆ ಅದಕ್ಕೆ ಎಲ್ಲಿಲ್ಲದ ಬೆಲೆ. ಮಲ್ಲಪ್ಪನವರ ಮಕ್ಕಳಾಗಿ ನಾವು ಸ್ವಂತಿಕೆಯಲ್ಲಿ ಹೆಸರು ಗಳಿಸುವುದು ಬಹಳ ಕಷ್ಟಸಾಧ್ಯವಾಗುತ್ತದೆ. ನನ್ನ ದುರಾದೃಷ್ಟವೋ ಏನೋ ಅವರು ಕೆಲಸ ಮಾಡಿದ ಜಾಗಗಳಲ್ಲೇ ನಾನೂ ಕೆಲಸ ಮಾಡಬೇಕಾಗಿ ಬಂದಿದೆ. ಮಂದಿ ತುಲನಾತ್ಮಕವಾಗಿ ನೋಡುತ್ತಾರೆ. ಪರಿಸ್ಥಿತಿ ಸೂಕ್ಷ್ಮತರದ್ದು. ಆದ್ದರಿಂದ ಮೈಎಲ್ಲ ಕಣ್ಣಾಗಿರುತ್ತೇನೆ. ಆದರೂ ಮಂದಿ ಮಲ್ಲಪ್ಪನವರಿಗೇ ಮತ ನೀಡುತ್ತಾರೆ.

ನಾನು ಶಸ್ತ್ರಕ್ರಿಯೆಯಲ್ಲಿ ಸ್ನಾತಕೋತ್ತರ ಅಭ್ಯಾಸ ಮಾಡುವುದಕ್ಕೆ ಹೋಗುವ ಸಮಯದಲ್ಲಿ ನಮ್ಮ ಆರ್ಥಿಕ ಪರಿಸ್ಥಿತಿ ಅಷ್ಟೇನು ಉತ್ತಮವಾಗಿರಲಿಲ್ಲ. ಹಾಗಾಗಿ ನಾನು ಸ್ನಾತಕೋತ್ತರ ಅಭ್ಯಾಸಕ್ಕೆ ಹೋಗಲಿಚ್ಛಿಸಲಿಲ್ಲ. ಆದರೆ ಡಾ॥ ಟಿ. ಎಸ್. ಮಲ್ಲಿಕಾರ್ಜುನಯ್ಯನವರು ನನಗೆ ಸೀಟು ಸಿಕ್ಕಿರುವುದನ್ನು ನನ್ನ ತಂದೆಗೆ ಹೇಳಿದರಂತೆ. ಆಗ ನನ್ನ ತಂದೆ ಹೋಗಲು ಹೇಳಿದರು. ನಾನು ಪರಿಸ್ಥಿತಿಯನ್ನು ಹೇಳಲು ಪ್ರಯತ್ನಿಸಿದಾಗ 'ಬಂದ್ಬಿಟ್ಟ ದೊಡ್ಮನುಷ್ಯ, ಸುಮ್ನೆ ಹೋಗಿ ಸೇರ್ಕೊಳಯ್ಯ, ದೇವರ್ಬಿಟ್ಟಾಗೆ ಆಗುತ್ತೆ' ಎಂದು ನನ್ನ ಬಾಯಿ ಮುಚ್ಚಿಸಿದರು.

ದೇವರ್ಬಿಟ್ಟಾಗೆ ಆಗುತ್ತೆ ಎಂದೇನೋ ಹೇಳಿದರು. ಆದರೆ ಅವರಿಗೆ ದೇವರಲ್ಲಿ ನಂಬಿಕೆ ಇದೆಯೇ ಎಂದರೆ ಇಲ್ಲ ಎಂದೇ ಹೇಳಬೇಕಾಗುತ್ತೇನೊ. ಆದರೆ ಎಂದೂ ಅವರು ದೇವರಿಲ್ಲ ಎಂದು ಹೇಳಲಿಲ್ಲ. ಆದರೆ ದೇವರ ಹೆಸರಿನಲ್ಲಿ ನಡೆಯುವ ದುಂದುಗಾರಿಕೆಗೆ ಹಾಗೂ ಸಂಪ್ರದಾಯಗಳಿಗೆ ಅವರ ವಿರೋಧವಿದೆ. ಆ ವಿರೋಧವನ್ನು ವ್ಯಕ್ತಪಡಿಸಿಯೂ ಇದ್ದಾರೆ. ನನ್ನ ಕೊನೆಯ ತಂಗಿಯ ಮದುವೆಯಲ್ಲಿ ಪುರೋಹಿತರು ಬರದೆ ನಮ್ಮ ಗುರುಗಳಾದ ಸಿರಿಯಪ್ಪ ಒಡೆಯರ್‌ರವರು ನಡೆಸಿದ್ದು ಅದಕ್ಕೊಂದು ಉದಾಹರಣೆ. ದೇವಸ್ಥಾನಕ್ಕೆ ಹುಡುಕಿಕೊಂಡು ಹೋಗದಿದ್ದರೂ ಉಪೇಕ್ಷೆ ಇಲ್ಲ.' ದಿನಾ ಸ್ನಾನವಾದ ನಂತರ ದೇವರ ಮುಂದೆ ಕೈ ಜೋಡಿಸಿ

ಸತ್ಯಮೇ ದೈವಂ
ನಿಷ್ಕಾಮ ಕರ್ಮವೇ ದೈವಂ
ರಾಮ, ರಾಮ, ರಾಮ
ಬುದ್ಧ, ಕ್ರಿಸ್ತ, ಪೈಗಂಬರ್, ತಂದೆ, ತಾಯಿ ಕಾಪಾಡಿ ಎಂದು ಹೇಳಿಕೊಳ್ಳುತ್ತಾರೆ.

ಈ ಪ್ರಾರ್ಥನೆ ಯಾವ ಪುಸ್ತಕದಲ್ಲಿ ಇದೆಯೋ ನನಗೆ ತಿಳಿಯದು. ಆದರೆ ನಮ್ಮ ತಂದೆಯ ಬಾಳಿನ ಪುಸ್ತಕದಲ್ಲಿ ಇದೆ. ದೇವರ ಮುಂದೆ ಇಲ್ಲದಿದ್ದರೂ ಮಲಗುವಾಗ್ಗೆ ಮತ್ತು ಏಳುವಾಗ್ಗೆ ನಾನೂ ಮತ್ತು ನನ್ನ ಮಕ್ಕಳೂ ಈ ಪ್ರಾರ್ಥನೆ ಹೇಳುತ್ತಿರುತ್ತೇವೆ.

ಕೆಲವು ಬಾರಿ ಅವರ ಕಟ್ಟುನಿಟ್ಟು ಅವರ ಸಮಾಜ ಸೇವೆ ತುಸು ಜಾಸ್ತಿ ಆಯಿತೇನೋ ಎಂದು ನಮಗೆ ಅನ್ನಿಸಿದೆ. ಅವರ ಕೆಲಸ ಬಾಹುಳ್ಯದಲ್ಲಿ ಇನ್ನೂ ಸ್ವಲ್ಪ ಬಿಡುವು ಮಾಡಿಕೊಂಡು ಕೊಂಚ ಹಾಯಾಗಿ ಇರಬಹುದಿತ್ತೇನೊ. ಆದರೆ ಹುಲಿಗೆ ಹುಲ್ಲು ತಿನ್ನಿಸುವುದು ವೃಥಾ ಶ್ರಮ ಮತ್ತು ವ್ಯರ್ಥ ಅನ್ನುವುದು ಮನಗಂಡೇ ಅವರಿಗೆ ಹೃದಯಾಘಾತವಾದಾಗಲೂ ನಾವುಗಳು ಸುಮ್ಮನಾದೆವು.

1953 ನಮ್ಮ ತಂದೆಯವರಿಗೆ ಮಧುಗಿರಿಯಿಂದ ಹರಿಹರಕ್ಕೆ ವರ್ಗ ಆಯಿತು. ಆ ಸಂದರ್ಭದಲ್ಲಿ ಯಾಕಾರನಹಳ್ಳಿಯ (ಹೆಸರು ಇದೇ ಇರಬೇಕು) ಜನತೆ ಬೀಳ್ಕೊಡಿಗೆಯಲ್ಲಿ ಪಾಲ್ಗೊಳ್ಳಲು ಕರೆದ ನೆನಪು. ಸಮಯಾಭಾವದಿಂದ ಅದನ್ನು ನಮ್ರವಾಗಿ ತಂದೆಯವರು ನಿರಾಕರಿಸಿದರು. ನಾವು ಲೇಪಾಕ್ಷಿ ನೋಡಿ ಬರುವ ಸಮಯದಲ್ಲಿ ಜನ ಅಡ್ಡ ನಿಂತು, ಸಂಜೆ ಆರು ಗಂಟೆಯ ವೇಳೆಗೆ ಯಾಕಾರನಹಳ್ಳಿಗೆ ಕರೆದೊಯ್ದರು. ನಮ್ಮ ತಂದೆ ಮೂಕ ಪ್ರೇಕ್ಷಕನಂತೆ ಹಿಂಬಾಲಿಸಿದರು. ಆ ದಿನ ನನ್ನ ಬುದ್ಧಿ ತುಪ್ಪ ಹಾಕಿದ ಉಪ್ಪಿಟ್ಟು ತಿನ್ನುತ್ತಿತ್ತು. ನಾನೂ ಸಾರ್ವಜನಿಕ ಜೀವನಕ್ಕೆ ಬಂದಾಗ ಯಾಕಾರನಹಳ್ಳಿಯ ಪ್ರಸಂಗ ಮನನ ಮಾಡಿದಾಗ, ಅದು ಅಮಲ್ದಾರರಿಗೆ ಕೊಟ್ಟ ಬೀಳ್ಕೊಡಿಗೆಯಲ್ಲ, ಅದು ಮಲ್ಲಪ್ಪನವರ ವೈಯಕ್ತಿಕ ಜಯ. ಅವರ ಸಾರ್ವಜನಿಕ ಬದುಕಿನ ನಿರ್ಮಲತೆಗೆ ಸಂದ ಜಯ ಎನ್ನಿಸುತ್ತಿದೆ. ಮಹಾಭಾರದಲ್ಲಿ ಅನೇಕ ಮಂದಿ ಅತಿರಥ ಮಹಾರಥರು ಇದ್ದರೂ ಕವಿ 'ಭಾರತದೋಳ್ ನೆನೆವೊಡೆ ಕರ್ಣನಂ ನೆನೆಯ' ಎಂದು ಏಕೆ ಹೇಳಿದ ಎನ್ನುವುದನ್ನು ನಾನು ಲೆಕ್ಕಹಾಕತೊಡಗುತ್ತೇನೆ.

ಅಯಸ್ಕಾಂತದ ಸಂಪರ್ಕದಲ್ಲಿದ್ದ ಕಬ್ಬಿಣ ತಾನೂ ಆ ಗುಣಗಳನ್ನು ಪಡೆಯುವಂತೆ ನಾವೂ ಸಹ ಅವರ ಸಂಪರ್ಕದಿಂದ ಬಹಳ ಪಡೆದಿದ್ದೇವೆ. ಹೀಗೆ ಅವರು ನಮಗೆ ಕೇವಲ ತಂದೆಯಾಗಿರದೆ a true friend, philosopher and guide ಆಗಿದ್ದಾರೆ ಎನ್ನಲು ಹೆಮ್ಮೆ.

ಆದರ್ಶ ಆಡಳಿತಗಾರ

ರಾಮಾಂಜನೇಯು, ಕೆ.ಎ.ಎಸ್.,

ಪೂಜ್ಯ ಮಲ್ಲಪ್ಪನವರನ್ನು ನಾನು ಓದುತ್ತಿದ್ದಾಗಿನಿಂದಲೂ ನಮ್ಮ ಹಳ್ಳಿಯ ಜನಗಳಲ್ಲಿ ಕೇಳಿದ್ದೆನು. ನನಗೂ ಮತ್ತು ಅವರಿಗೂ ಪರಿಚಯವಾದದ್ದು ಹಿರಿಯ ಕಲಾವಿದರೂ ಹಾಗೂ ರಾಜ್ಯ ಪ್ರಶಸ್ತಿವಿಜೇತರೂ ಆದ ಮಾನ್ಯ ಶ್ರೀ ಪಿ. ಆರ್. ತಿಪ್ಪೇಸ್ವಾಮಿ ಮತ್ತು ರುದ್ರಯ್ಯನ ರೊಪ್ಪದ ವಕೀಲರಾದ ಶ್ರೀ ಎಂ. ನಾಗೇಂದ್ರಪ್ಪನವರಿಂದ. ಮುಂದೆ ಮಲ್ಲಪ್ಪನವರ ಕಿರಿಯ ಮಗಳನ್ನು ಮದುವೆಯಾಗಿ ಅವರ ಕುಟುಂಬದಲ್ಲಿ ಒಬ್ಬನಾದೆ. ಇದರಿಂದ ಅವರ ಬಗ್ಗೆ ನಾನು ಲೇಖನವನ್ನು ಬರೆಯುವುದು ಎಷ್ಟು ಸಮರ್ಪಕವೊ ನನಗೆ ತಿಳಿಯುತ್ತಿಲ್ಲ. ಆದರೂ ಅವರ ಬಗ್ಗೆ ಬರೆಯದೆ ಇದ್ದರೆ ಆತ್ಮವಂಚನೆ ಮಾಡಿದಂತಾಗುತ್ತದೆ. ಅಂತೆಯೇ ಅವರ ಬಗ್ಗೆ ಬರೆಯಲು ಅಶಕ್ತನಾದರೂ ನನ್ನ ಅನಿಸಿಕೆಗಳನ್ನು ನಿರಾಳವಾಗಿ ನಿವೇದಿಸುತ್ತಿದ್ದೇನೆ.

'ಅಲ್ಲವೋ ಶೂದ್ರ ಮುಂಡೇಗಂಡ, ಕುರಿ ಕಾಯೋದು ಬಿಟ್ಟು ಓದೋಕೆ ಬಂದಿದ್ದೀಯಾ ಮುಠ್ಠಾಳ' ಎನ್ನುವ ಕಾಲದಲ್ಲೆ ಬಡತನದ ಗುಡಿಸಲಿನಲ್ಲಿ ಓದಿ ಬಿ.ಎ., ಪಾಸು ಮಾಡಿ ಸರ್ಕಾರಿ ಸೇವೆಗೆ ಸೇರಿದ್ದು ಸಾಹಸವೇ ಅಲ್ಲವೆ ? ಇಂತಹವರಿಗೆ ಸರ್ಕಾರಿ ಸೇವೆ ಅನಿರೀಕ್ಷಿತವಾಗಿ ಉಂಟಾಗಿರುವುದೆಂದರೆ ತಪ್ಪಾಗಲಾರದು. ಅದೇನೇ ಇರಲಿ ಸರ್ಕಾರಿ ಸೇವೆಯಲ್ಲಿ ಸಾಕಷ್ಟು ಮಂದಿ ಈಗಾಗಲೇ ಸೇವೆ ಸಲ್ಲಿಸಿ ನಿವೃತ್ತರಾಗಿರುವುದನ್ನು ಕಂಡಿದ್ದೇವೆ. ಅವರುಗಳಲ್ಲಿ ಎಲ್ಲರನ್ನು ಸಾಮಾನ್ಯ ಜನತೆ ಜ್ಞಾಪಿಸಿಕೊಳ್ಳುತ್ತಿಲ್ಲ, ಆದರೆ ಕೆಲವು ಅಧಿಕಾರಿಗಳನ್ನು ದೇವರನ್ನು ನೆನಪುಮಾಡಿಕೊಳ್ಳುವಂತೆ ನೆನಪಿಸಿಕೊಳ್ಳುತ್ತಿರುತ್ತಾರೆ. ಅಂತಹ ಅಧಿಕಾರಿಗಳಲ್ಲಿ ಶ್ರೀ ಎನ್. ಮಲ್ಲಪ್ಪನವರೂ ಒಬ್ಬರು. ಇವರು ರಾಜಸ್ವ ಇಲಾಖೆ ಸೇವೆಯಲ್ಲಿ ಉತ್ತಮರೆಂದು ಹೆಸರುಪಡೆದು ಆಡಳಿತರಂಗದಲ್ಲಿ ದಕ್ಷ ಹಾಗೂ ಪ್ರಾಮಾಣಿಕ ಸೇವೆ ಸಲ್ಲಿಸಿ ಜನಸಾಮಾನ್ಯನ ನಾಡಿಯಲ್ಲಿ ಮಿಡಿದಿರುತ್ತಾರೆ. ಹಾಗೂ ಉನ್ನತ ಅಧಿಕಾರಿಗಳಾಗಿಯೂ ಮಿಂಚಿರುತ್ತಾರೆ. ಅವರನ್ನು ಇಂದಿಗೂ ಗ್ರಾಮಾಂತರ ಪ್ರದೇಶಗಳಲ್ಲಿ ಅಮಲ್ದಾರ್ ಮಲ್ಲಪ್ಪನವರೆಂದು ಹಾಗೂ ಅವರ ಕಾಲದ ಸರ್ಕಾರಿ ನೌಕರರ ಬಾಯಲ್ಲಿ ಕೂಗೋ ಮಲ್ಲಪ್ಪನವರೆಂದು ಕರೆಯುವ ವಾಡಿಕೆ ಇದೆ. ಅವರ ಕಾಲದಲ್ಲಿಯ ಭೂ ಮಂಜೂರಾತಿ ಕಡತಗಳನ್ನು ಪರಿಶೀಲಿಸಿದ್ದೇನೆ ಹಾಗೂ ಜನರ ಬಾಯಿ ಮಾತುಗಳಲ್ಲಿ ಕೇಳಿದ್ದೇನೆ. ಅವರು ಭೂ ಮಂಜೂರಾತಿ ನೀಡುವ ಬದಲು ವಾಸ್ತವವಾಗಿ ಭೂ ದಾನ ಮಾಡಿರುತ್ತಾರೆ. ಇಂದಿಗೂ ತುಮಕೂರು ಜಿಲ್ಲೆಯಲ್ಲಿ ಭೂ ಮಂಜೂರಾತಿ ನಿಯಮಗಳ ಮೀರಿ ಮಂಜೂರಾತಿಯಾಗಿರುವುದನ್ನು ಶ್ರೀ ಮಲ್ಲಪ್ಪನವರ ಸ್ಕೀಮ್‌ನಲ್ಲಿ ಮಂಜೂರಾಗಿರುವುದೆಂದು ಹೇಳುವ ವಾಡಿಕೆ ಇದೆ. ಯಾವೊಬ್ಬ ಹೊಸ ಅಧಿಕಾರಿಗೂ ಇದು ಯಾವ ಸ್ಕೀಮಪ್ಪ ಎಂದು ದಿಗ್ಭ್ರಮೆಗೊಳ್ಳುವಂತಾಗುತ್ತದೆ. ಅನೇಕ ಪ್ರಕರಣಗಳಲ್ಲಿ ಒಂದೇ ದಿವಸ ಬಂದ ಅರ್ಜಿಗಳಲ್ಲಿ ಅರ್ಜಿ ಮೇಲೆ ಇಷ್ಟು ಎಕರೆ ಮಂಜೂರು ಮಾಡಿದೆ ಎಂದು ಆದೇಶವಿತ್ತಿರುತ್ತಾರೆ. ಅವರ ಸಾರ್ವಜನಿಕ ಸೇವಾ ಆಡಳಿತ ಕಾಲದಲ್ಲಿ ಕೆಲಸ ನಿರ್ವಹಿಸುವುದರಲ್ಲಿ ಗುಟ್ಟಿನ ಸೂತ್ರ ಏನೆಂದು ಕೇಳಿದರೆ ಅವರ ಶೈಲಿ ಮತ್ತು ಅವರ ಗ್ರಾಮ್ಯ ಭಾಷೆಯಲ್ಲಿ "ಕೈ ಬಾಯಿ ಮತ್ತು ಕಚ್ಚೆ ಶುದ್ಧವಾಗಿಟ್ಟುಕೊಂಡು ದರಿದ್ರನಾರಾಯಣನ ಸೇವೆಯೇ ಜನಾರ್ಧನ ಸೇವೆ—ಸಾರ್ವಜನಿಕ ಸೇವೆಯ ರಾಂಬಾಣ"ವೆಂದು ಬಿಚ್ಚು ಮಾತಿನಿಂದ ಹೇಳುತ್ತಾರೆ. ಅಂತೆಯೇ ಇಂದಿಗೂ ಬಡವರ ಮತ್ತು ನೆಲಹತ್ತಿದ ವರ್ಗದವರಿಗೆ ತಮ್ಮ ಕೈಲಾದಷ್ಟು ಸೇವೆಯನ್ನು ಸಹಕಾರ ಸಂಘಗಳು, ಶಾಲಾ ಕಾಲೇಜು ಹಾಸ್ಟಲ್‌ಗಳನ್ನು ಸ್ಥಾಪಿಸುವುದರ ಮೂಲಕ ಮಾಡುತ್ತಿದ್ದಾರೆ. ಇವರು ಅವರೇ ಹೇಳುವ

ಹಮಾಮ್ ಕೋಂ ಜಾತಿಗಳಿಗೆ ದೃಢ ಸಂಕಲ್ಪದಿಂದ ಅನುಕಂಪ ಮತ್ತು ಸಹಾನುಭೂತಿಯಿಂದ ನಿಷ್ಠರಾಗಿ ಮನದಿಂದ ಶ್ರಮಿಸುತ್ತಾರೆ. ಈ ಅಂಶ ಬರೆಯುವಾಗ ಮಲ್ಲಪ್ಪನವರನ್ನು ನೆನೆದಾಗಲೆಲ್ಲ ಶ್ರೀ ವಿ.ಸೀ. ಯವರ ಅಭೀಃ ಕವಿತೆಯ ಐದು ಸಾಲುಗಳು ನನಗೆ ನೆನಪಾಗುತ್ತವೆ.

'ಮಣಿಯದಿಹ ಮನವೊಂದು
ಸಾಧಿಸುವ ಹಟವೊಂದು
ನಿಜದ ನೇರಕ್ಕೆ ನಡೆವ ನಿಶ್ಚಲತೆಯೊಂದು
ಅನ್ಯಾಯಕ್ಕೆಂದು ಬಾಗದೆಚ್ಚರವೊಂದು
ಮರುಕಕ್ಕೆ ಪ್ರೇಮಕ್ಕೆ ಚಿರ ತೆರೆದ ಎದೆಯೊಂದು'

ಶ್ರೀ ಮಲ್ಲಪ್ಪನವರು ನಿವೃತ್ತ ಉಪ ವಿಭಾಗಾಧಿಕಾರಿಯಾಗಿದ್ದರೂ ಬಡತನವನ್ನೇ ಸಿರಿತನವೆಂದು ತಿಳಿದು ನಿಷ್ಕಲಂಕ ಮತ್ತು ಚಾರಿತ್ರ್ಯ ಸಂಪನ್ನರಾಗಿ ಜೀವನ ನಡೆಸುತ್ತಿದ್ದಾರೆ. ಮೂಲತಃ ಗಾಂಧಿ ಪ್ರೇಮಿಯಾದರೂ ಲೆನಿನ್, ರಾಯರ ಮತದವರು. "ಕಾಯಕವೇ ಕೈಲಾಸ", "ಆಚಾರವೇ ಸ್ವರ್ಗ" ಎನ್ನುವ ಸೂಕ್ತಿಗಳನ್ನು ನಂಬಿರುವವರು. ಅವರನ್ನು ಕಂಡಾಗಲೆಲ್ಲಾ ಎದ್ದುಕಾಣುವ ಅಂಶವೆಂದರೆ ರಾಜಸ್ವ ಇಲಾಖೆಯ ಠೀವಿ, ನಿರಾಡಂಬರ ವ್ಯಕ್ತಿತ್ವ, ಸುಪ್ರಸನ್ನ ಮುಖಮುದ್ರೆ, ತೇಜಃಪುಂಜ ಆಕೃತಿ. ಮೇಲಾಗಿ ಒಳ್ಳೆಯ ವಾಗ್ಮಿಗಳು ಕೂಡ. ಅವರ ಭಾಷಣದ ಭಾಷೆ ಮತ್ತು ಹೇಳುವ ಶೈಲಿ ಎಂತಹ ನಿದ್ರೆಯಲ್ಲಿರುವವರನ್ನೂ ಎಚ್ಚರಿಸುತ್ತದೆ. ಅವರು ಬಳಸುವ ಪದಗಳಾದ ಪುಟಗೋಸಿ ಸ್ನೇಹಿತ. ಹಮಾಮ್ ಕೋಂ, ಕಬರ್‌ದಾರ್, ಅಲಕ್ ನಿರಂಜನ್ ಇತ್ಯಾದಿ ಕೇಳುವವರಿಗೆ ಆನಂದವನ್ನುಂಟುಮಾಡುತ್ತವೆ.

ಇನ್ನು ಅವರ ಕುಟುಂಬದ ಬಗ್ಗೆ ಹೇಳುವುದಾದರೆ ಮನೆ ಚಿಕ್ಕದು, ಮನಸ್ಸು ದೊಡ್ಡದು, ಮನೆ ತುಂಬಾ ಮಂದಿ, ಮಗ ಸೊಸೆ ಮಗಳು ಅಳಿಯ ಎಂಬ ಶಬ್ದಗಳ ತಾರತಮ್ಯವೇ ಇಲ್ಲ. ಅವರ ಪ್ರೀತಿಗೆ ಎಲ್ಲರೂ ಸಮ. ಅಂತೆಯೇ ಸಿಟ್ಟಿಗೂ. ಮನೆ ಒಂದು ತರಹದ ಗೆಳೆಯರ ಬಳಗ ಇದ್ದಹಾಗೆ. ಯಾವಾಗಲೂ ಆದರದ ತೆರೆದ ಬಾಗಿಲು. ಈ ಬಾಗಿಲಿನ ಒಂದು ಪಾರ್ಶ್ವ ಈಗಾಗಲೇ ಮುಚ್ಚಿ ಹೋಗಿ ಮನೆ ಗಾಳಿಬಿಟ್ಟ ಬೆಲೂನಿನಂತಾಗಿದೆ. ನಮ್ಮ ಅತ್ತೆಯವರಾದ ಶ್ರೀಮತಿ ರಂಗಮ್ಮನವರು ಮೊನ್ನೆ ತಾನೆ ನಿಧನರಾದದ್ದೇ ಇದಕ್ಕೆ ಕಾರಣ. ಆದ್ದರಿಂದ ಶ್ರೀ ಮೈಲಾರಲಿಂಗೇಶ್ವರನು ಶ್ರೀ ಮಲ್ಲಪ್ಪನವರನ್ನು ಆರೋಗ್ಯದಿಂದಿರಲು ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇನೆ. ಅಲ್ಲದೆ ಈ ಅಭಿನಂದನಾ ಗ್ರಂಥವನ್ನು ಹೊರತರಲು ಶ್ರಮಿಸಿರುವ ಸರ್ವಶ್ರೀಗಳಾದ ವೀಚಿ, ಭಾಸ್ಕರಪ್ಪ, ಕೆ. ದಾಸಪ್ಪ ಹಾಗೂ ಇತರೆ ಸಮಿತಿ ಸದಸ್ಯರೆಲ್ಲರಿಗೂ ನನ್ನ ಪ್ರಣಾಮಗಳನ್ನು ಸಲ್ಲಿಸುತ್ತ—ಶ್ರೀಮಾನ್ ಮಲ್ಲಪ್ಪನವರ ಸೇವೆ ತ್ಯಾಗ, ನಮ್ಮೆಲ್ಲರ ಬಾಳಿಗೆ ಬೆಳಕನ್ನಿತ್ತು ಋಜು ಮಾರ್ಗದಲ್ಲಿ ಮುನ್ನಡಸುವಂತಾಗಲೆಂದು ಆಶಿಸುತ್ತೇನೆ.

ಬೆಂಗಳೂರು
12—11—84

ಶ್ರೀ ಚಿಕ್ಕವೀರಯ್ಯನವರಿಗೆ,

ನಿಮ್ಮ ಪತ್ರ ತಲುಪಿತು. ನಿವೃತ್ತ ಉಪವಿಭಾಗಾಧಿಕಾರಿ ಶ್ರೀ ಎನ್. ಮಲ್ಲಪ್ಪನವರನ್ನು ಸನ್ಮಾನಿಸಲು ಒಂದು ಸಮಾರಂಭ ಏರ್ಪಟ್ಟಿರುವುದಾಗಿಯೂ ಆ ಸಂದರ್ಭದಲ್ಲಿ ಅವರನ್ನು ಕುರಿತು ಅಭಿನಂದನಾ ಗ್ರಂಥವನ್ನು ಹೊರತರಲು ಸಂಕಲ್ಪ ಮಾಡಲಾಗಿದೆಯೆಂದೂ ತಿಳಿಯಿತು. ಶ್ರೀ ಮಲ್ಲಪ್ಪನವರು ನಾನು ಕಂದಾಯ ಸಚಿವನಾಗಿದ್ದಾಗ ಅಸಿಸ್ಟೆಂಟ್ ಕಮಿಷನರ್ ಆಗಿ ನಿಷ್ಠೆಯಿಂದ ಕೆಲಸ ಮಾಡಿದ್ದರು. ಅವರು ತಮ್ಮ ಅಧಿಕಾರ ಸ್ಥಾನದಲ್ಲಿ ದೀನ ದಲಿತರಿಗೆ ಸಹಾಯ ಮಾಡಲು ಬಹಳ ಶ್ರಮಿಸಿದ್ದರು. ಅವರಿಗೆ ಭಗವಂತನು ದೀರ್ಘಾಯುಷ್ಯವನ್ನೂ ಶ್ರೇಯಸ್ಸನ್ನೂ ನೀಡಲೆಂದು ಹಾರೈಸುತ್ತೇನೆ.

ಕಡಿದಾಳ್ ಮಂಜಪ್ಪ

ಆದರ್ಶ

ಟಿ. ಎಂ. ಕುಮಾರ್

ನಮ್ಮ ತಂದೆಯವರ ಬಗ್ಗೆ ಯಾರಿಗಾದರೂ ಮೊದಲ ನೋಟಕ್ಕೆ ಸಿಗುವ ಚಿತ್ರ, ಅವರು ಬಹಳ ಕಠೋರರು ಎಂಬುದು. ಪ್ರಾಯಶಃ ಈ ಗುಣದಿಂದಾಗಿಯೇ ಅವರ ಪರಿಚಯ ಹೆಚ್ಚಿಲ್ಲದವರು ತಪ್ಪು ಕಲ್ಪನೆಯನ್ನಿಟ್ಟುಕೊಂಡು ಅವರೊಡನೆ ಸಂಬಂಧ ಪ್ರಾರಂಭಿಸಿ ನಂತರ ಸಂಪೂರ್ಣವಾಗಿ ತಮ್ಮ ಅಭಿಪ್ರಾಯವನ್ನು ಬದಲಿಸಿರುವುದು ಸರ್ವೇ ಸಾಮಾನ್ಯ. ಅವರ ಮಗನಾದ ನನಗೂ ಈಗಲೂ ಅವರ ಮುಂಗೋಪ, ಅವರ ಕಠಿಣ ಮಾತುಗಳು ಒಗಟೇ. ಇದೇ ಪ್ರಾಯಶಃ ಅವರ ವ್ಯಕ್ತಿತ್ವದ ವೈಶಿಷ್ಟ್ಯ ಕೂಡ ಎನಿಸುತ್ತದೆ.

ನಾನು ನಮ್ಮ ತಂದೆಯವರು ಭಾವೋದ್ರೇಕಗೊಂಡಿದ್ದನ್ನು ಪ್ರಾಯಶಃ ಒಂದೆರಡು ಸಲ ನೋಡಿರಬಹುದು. ನಮ್ಮ ಅಕ್ಕ ಜಯಮ್ಮ ತೀರಿಕೊಂಡಾಗ ನನಗೆ ಬಹಳ ಚಿಕ್ಕ ವಯಸ್ಸು 3–4 ವರ್ಷವಿರಬೇಕು. ಸಾವಿನ ದಿನದಂದು ಅವರು ಯಾವುದೋ ಪ್ರವಾಸದಿಂದ ಹಿಂದಿರುಗಿದರು, ಯಾರೊಡನೆಯೂ ಮಾತನಾಡಲಿಲ್ಲ. ನಮ್ಮ ಹಳ್ಳಿಯಲ್ಲಿ ಅಂತಿಮ ಸಂಸ್ಕಾರ ಮಾಡಲೋಸುಗ ಎಲ್ಲರೂ ಹೊರಟಾಗ ಅವರೊಬ್ಬರೇ ಒಂದುಕಡೆ ನಿಧಾನವಾಗಿ ನಡೆದು ಬಂದರು, ಅನಂತರ ಗುಂಡಿಗೆ ಶವವನ್ನು ಇಳಿಸಿದಾಗ ಅವರ ಮುಖವನ್ನು ನೋಡಿದೆ, ಈಗ 30 ವರ್ಷದ ಅನಂತರವೂ ನನಗೆ ಆ ಮುಖದ ಒಂದು ಕಲ್ಪನೆಯಿದೆ. ಅವರ ಮುಖದಲ್ಲಿನ ದುಃಖ ಅಸಹಾಯಕತೆ ಇದನ್ನು ನೋಡಿ ನನಗೆ ಅಪ್ಪಾಜಿಯವರೂ 'ಆ ರೀತಿ' ಇರುತ್ತಾರಲ್ಲ ಎಂದು ಅನಿಸಿ ಆ ವಯಸ್ಸಿಗೆ ಸೋಜಿಗವಾಗಿದ್ದಿತು.

ನಮ್ಮ ತಂದೆಯವರು ಅನೇಕ ವಿದ್ಯಾರ್ಥಿಗಳಿಗೆ ನಮ್ಮ ಮನೆಯಲ್ಲಿ ಊಟ ಮಾಡುವ ವ್ಯವಸ್ಥೆ ಮಾಡಿದ್ದರು. ದಿನಕ್ಕೆ ಒಂದಿಬ್ಬರಾದರೂ ಬರುತ್ತಿದ್ದರು. ಅವರ ಊಟದ ಬಗ್ಗೆ ಇದ್ದ ಕಾಳಜಿ ವಿದ್ಯಾರ್ಥಿಗಳಿಗೆ ಯಾವ ರೀತಿಯಿಂದಲೂ ಕೀಳರಿಮೆ ಉಂಟಾಗಬಾರದೆಂಬ ಆತಂಕ ಅವರ ಮಾತಿನಲ್ಲಿ ವ್ಯಕ್ತವಾಗುತ್ತಿತ್ತು. ಕೇವಲ ಅವರು 'ನೋಡೋಣ', 'ಆಯ್ತು ಬಂದೋಗು' ಎನ್ನುವ ಮಾತಿನಲ್ಲಿ ಕೊನೆಗೊಳಿಸುತ್ತಿದ್ದರು. ಅಲ್ಲಿಯೂ ಆ ಹುಡುಗನಿಗೆ ಇವರ ಬಗ್ಗೆ ಕೃತಜ್ಞತೆ ಅನಿಸಿದರೂ ಮಾತಾಡಿ ವ್ಯಕ್ತಮಾಡಲು ಅವಕಾಶವಿರಲಿಲ್ಲ. 'ಅದೆಲ್ಲ ಸರಿ, ಓದೋದು ನೋಡೋ' ಎಂದು ಪೂರ್ಣವಿರಾಮ ಹಾಕುತ್ತಿದ್ದರು.

ನನಗೆ ಕೆಲವು ಜನ ನಮ್ಮ ತಂದೆಯವರ ಕಾಳಜಿ ಜಾತಿಯ ಮಕ್ಕಳಿಗಷ್ಟೇ ಸೀಮಿತ ಎನ್ನುವಂತೆ ಮಾತಾಡಿದ್ದು ಗಮನಕ್ಕೆ ಬಂದಿದ್ದಿತು. ಆದರೆ ನನಗೆ ತಿಳಿದಂತೆ ಅವರು ಶೋಷಿತ ಹಾಗೂ ಹಿಂದುಳಿದ ಎಲ್ಲ ಜಾತಿಯ ವಿದ್ಯಾರ್ಥಿಗಳಿಗೆ ಆಶ್ರಯ ನೀಡಿದ್ದರು. ಅವರು ತುಂಬಾ ಮೆಚ್ಚುವುದು 1st generation learners ಅವನು ಯಾವ ಜಾತಿಯೇ ಆಗಲಿ ಅದರಲ್ಲೂ ಅವನು (ಎಸ್‌ಸಿ) ಉತ್ತಮ ತರಗತಿಯಲ್ಲಿ ತೇರ್ಗಡೆಯಾಗಿದ್ದಲ್ಲಿ ಇವರ ಪ್ರಶಂಸೆ ಖಂಡಿತ (ಕೇವಲ ಮಾತಲ್ಲಂತೂ ಅಲ್ಲ).

ಕೆಲವು ಸಲ ಅವರ ಸತ್ಯ ನಿಷ್ಠುರತೆ ಹಾಗೂ ಸಿದ್ಧಾಂತಗಳ ಬಗ್ಗೆ ಆಸಕ್ತಿ ನಾನು ಕೆಲಸಕ್ಕೆ ಸೇರುವ ಮುಂಚೆ ಅತಿಯೇನೋ ಅನ್ನಿಸುತ್ತಿತ್ತು. ಅವರು ಪ್ರವಾಸ ಹೋಗುತ್ತಿದ್ದಾಗ ಒಂದು ಪೆಟ್ಟಿಗೆ ಇಡಿಸಿದ್ದರು

(ಅದು ಅಡಿಗೆ ಪೆಟ್ಟಿಗೆಯೆಂದೇ ನಮ್ಮ ಮನೆಯಲ್ಲಿ ನಾಮಕರಣ ಹೊಂದಿತ್ತು). ಈ ಮರದ ಪೆಟ್ಟಿಗೆಯಲ್ಲಿ 5, 10 ಡಬ್ಬಗಳು. ಅದರಲ್ಲಿ 3 ರಿಂದ 5 ದಿನಕ್ಕೆ ಸಾಕಾಗುವಷ್ಟು ಸಾಂಬಾರ ಪದಾರ್ಥಗಳು, ಅಕ್ಕಿ, ಜೋಳ ಇತ್ಯಾದಿ. ಈ ಪೆಟ್ಟಿಗೆ ತೆಗೆಸಿಕೊಂಡು ಹೋಗಿ ಪ್ರವಾಸಿ ಬಂಗ್ಲೆಯಲ್ಲಿ ಅಡಿಗೆ ಮಾಡಿಸಿ ಊಟ ಮಾಡುತ್ತಿದ್ದರು. ಈಗ ನಾನೇ ಒಬ್ಬ ಅಧಿಕಾರಿಯಾಗಿ ನನ್ನ ಊಟವನ್ನು ನಾನೇ ಕೊಂಡೊಯ್ಯುತ್ತಿದ್ದೇನೆ. ಇದರ ಹಿಂದೆ ಇರುವ ಯೋಚನೆ ನನಗೂ ಪ್ರಿಯ. ನನ್ನನ್ನು ಕೂಡ ಹಾಸ್ಯಮಾಡುವ ಮೂಗು ಮುರಿಯುವ ಮಂದಿ ಉಂಟು.

ಮನೆಗೆ ಯಾರಾದರೂ ನೋಡಲು ಬಂದರೆ ಹಣ್ಣುಹಂಪಲು ತರುತ್ತಿದ್ದರು, ಅದನ್ನಂತೂ ಬಹಳ ಖಂಡಿತವಾಗಿ ನಿರಾಕರಿಸಿ ಕಳುಹಿಸುತ್ತಿದ್ದರು. ತೀರಾ ಹಟ ಹಿಡಿದು ಕೊಡಲು ಬಂದಾಗ ನಿಮ್ಮ ಮನೆಯಲ್ಲಿ ಇರುವ ಮಕ್ಕಳಿಗೆ ಕೊಡಿ ಎಂದು ಹೇಳಿ ಮುಟ್ಟಿ ವಾಪಸ್ಸು ಕಳುಹಿಸುತ್ತಿದ್ದರು.

ಸಾಮಾನ್ಯವಾಗಿ ಇಂಥದೆಲ್ಲಾ ಪ್ರಸಂಗಗಳಲ್ಲಿ ನಾನು ಹುಡುಗನಾಗಿದ್ದಾಗ, ತೀರಾ ಮಡಿವಂತಿಕೆ, ಇವರದು ಅನ್ನಿಸುತ್ತಿತ್ತು. ಪ್ರಲೋಭನೆಗಳು ಪ್ರಾರಂಭವಾಗುವುದು ಹೇಗೆ ಎಂದು ಹೇಳಲು ಬರದು. ಅದನ್ನು ಹತ್ತಿರ ಸುಳಿಯಲೇ ಬಿಡಬಾರದು.

ಪ್ರಾಯಶಃ ನಮ್ಮ ತಂದೆ ಇಂದೂ ತೀರ ಹತ್ತಿರವಾಗಿರುವುದು ದೂರ ದೂರದ ಹಳ್ಳಿ ಜನರಿಗೆ. ಪೇಟೆಯ ಜನರಲ್ಲಿ ಕಂಡುಬರುವ ಕಾಡು ಹರಟೆಯ ಸೋಂಕು ಅವರಿಗಿಲ್ಲ. ನಾನಂತೂ ಒಂದು ದಿನವೂ ಅವರು ಕೂತು ಅವರಿವರ ಬಗ್ಗೆ ಮಾತಾಡಿದ್ದನ್ನು ಕಂಡಿಲ್ಲ. ನಾನು ಶಿರಾ ತಾಲ್ಲೂಕಿನಲ್ಲಿ ಸಹಾಯಕ ವಿದ್ಯಾಧಿಕಾರಿಯಾಗಿ ಕೆಲಸ ಮಾಡುತ್ತಿದ್ದಾಗ, ನನ್ನ ಸ್ನೇಹಿತರಾದ ಅಂದಿನ ಎಂ.ಎಲ್.ಎ. ಶ್ರೀ ಜಯಚಂದ್ರರೊಂದಿಗೆ ಮಾತನಾಡುತ್ತಿದ್ದೆ. ಆಗ ಅವರು ಅಂದು ನಡೆಸಿದ್ದ 'ಜನ ಸಂಪರ್ಕ' ಸಭೆಯ ಬಗ್ಗೆ ಮಾತನಾಡುತ್ತಾ ಒಂದು ಮೋಜಿನ ಪ್ರಸಂಗ ಹೇಳಿದರು. ಒಬ್ಬ ಹಳ್ಳಿಯವ ಅಂದು ಉಪಸ್ಥಿತರಿದ್ದ ಜಿಲ್ಲಾಧಿಕಾರಿಯವರಿಗೆ ಒಂದು ಅರ್ಜಿ ಕೊಟ್ಟು "ಸ್ವಾಮಿ ನನಗೆ ಮಲ್ಲಪ್ಪ ಸ್ಕೀಂನಲ್ಲಿ ಜಮೀನು ಕೊಟ್ಟಿದ್ದರು" ಎಂದು ಪ್ರಾರಂಭಿಸಿದನಂತೆ. ಆಗ ಜಿಲ್ಲಾಧಿಕಾರಿಗಳು "ಸರ್ಕಾರ ಕೊಟ್ಟ ಜಮೀನಿನ ಬಗ್ಗೆ ಇರುವ ಸಮಸ್ಯೆ ಬರೆದು ಅರ್ಜಿ ಕೊಡು. ಬೇರೆ ಯಾರೋ ಕೊಟ್ಟ ಜಮೀನಿನ ಬಗ್ಗೆ ನನ್ನನ್ನು ಕೇಳಬೇಡ" ಎಂದರಂತೆ. ಆಗ ಶ್ರೀ ಜಯಚಂದ್ರರು, ನಮ್ಮ ತಂದೆ ದರಖಾಸ್ತು ವಿಲೇವಾರಿ ಅಸಿಸ್ಟೆಂಟ್ ಕಮಿಷನರ್ ಆಗಿದ್ದಾಗ ಪ್ರಾರಂಭಿಸಿದ ಯೋಜನೆಯ ಬಗ್ಗೆ ತಿಳಿಸಿದರಂತೆ. ಒಬ್ಬ ಸರ್ಕಾರಿ ಅಧಿಕಾರಿಯಾಗಿ ನನಗೆ ಹೀಗೆ ಎಲ್ಲರ ಬಾಯಲ್ಲೂ ಇರಬೇಕಾದಲ್ಲಿ ಪಟ್ಟಿರಬೇಕಾದ ಶ್ರಮ, ಸತ್ಯನಿಷ್ಠುರತೆ, ನ್ಯಾಯವಂತಿಕೆ ಇವುಗಳ ಕಲ್ಪನೆಯಿದೆ.

ಅನೇಕ ಸಲ ನನಗನಿಸುವುದು, ತಂದೆಯವರು ತಮ್ಮ ಕಾರ್ಯವ್ಯಾಪ್ತಿಯಿಂದಾಗಿ ಸಂಸಾರಕ್ಕೆ ಪೂರ್ಣ ಪ್ರಮಾಣದಲ್ಲಿ ಲಭ್ಯವಾಗಲಿಲ್ಲ. ಇವರಿಂದಾಗಿಯೇ ಇರಬೇಕು ನನಗೆ ಈಗಲೂ ಅವರೆದಿರು ನಿಂತು ಮಾತನಾಡಲು ಸಂಕೋಚ, ಮುಜುಗರ, ಒಂದು ರೀತಿಯ ಅವ್ಯಕ್ತ ಹೆದರಿಕೆ. ನಾನು ಎಲ್‌ಎಲ್.ಬಿ. ವ್ಯಾಸಂಗ ಮಾಡಿದನಂತರ ಅಡ್ವೊಕೇಟ್ ಆಗಬೇಕೆಂಬ ಆಸೆ ನಮ್ಮ ತಂದೆಗೆ ಇದ್ದಂತೆ ಕಾಣುತ್ತದೆ. ಇದನ್ನು ಅನೇಕರ ಮುಂದೆ ವ್ಯಕ್ತ ಮಾಡಿಯೂ ಇದ್ದಾರೆ. ಆದರೆ ಅನೇಕ ಸಂದರ್ಭಗಳಲ್ಲಿ ನಮ್ಮ ತಂದೆಯವರನ್ನು ಸಮಾಜ ಸರಿಯಾಗಿ ನಡೆಸಿಕೊಳ್ಳಲಿಲ್ಲವೆಂದೇ ಈಗಲೂ ನನ್ನ ಭಾವನೆ. ಒಬ್ಬ ಮಹನೀಯರು ಅವರ ಬಗ್ಗೆ ಕರಪತ್ರಗಳನ್ನು ಮುದ್ರಿಸಿ ಹಂಚಿದಾಗಂತೂ ರೋಸಿಹೋಗಿತ್ತು.

ಕೊನೆಗೆ ನಮ್ಮ ತಂದೆಯವರನ್ನು ಉಣ್ಣೆ ಸೊಸೈಟಿಯ ಒಂದು ಗ್ರಾಮಾಂತರ ಮಟ್ಟದ ಚುನಾವಣೆಯಲ್ಲಿ ಸೋಲಿಸಲು ಮಾಡಿದ ಮೋಸ ಮುಂತಾದವುಗಳನ್ನು ಕಂಡೂ ಕೂಡ ನಮ್ಮ ತಂದೆಯವರು ಮತ್ತೆ

ಅದೇ ಜನರನ್ನು ಹತ್ತಿರ ಬಿಟ್ಟುಕೊಳ್ಳುತ್ತಾರೆ. ಇಂತಹ ಸಾಕಷ್ಟು ವಿಷಯಗಳಲ್ಲಿ ನಾನು ಅವರನ್ನು ಒಪ್ಪದಿರಬಹುದು. ಇದರಿಂದಾಗಿ ನಾನು ಒಬ್ಬ ಅಡ್ವೊಕೇಟ್ ಆದಲ್ಲಿ ಅನಿವಾರ್ಯವಾಗಿ ಸಮಾಜದ ಕೆಲಸಗಳಲ್ಲಿ ಇಂಥವರೊಡನೆ ಪಾಲ್ಗೊಳ್ಳಬೇಕಾಗಿ ಬರಬಹುದು ಎಂಬ ಆತಂಕದಿಂದಾಗಿ ಆ ಕೆಲಸಕ್ಕೆ ಹೋಗಲಿಲ್ಲ.

ನನ್ನ ಪ್ರಾಮಾಣಿಕ ಅನಿಸಿಕೆಯೆಂದರೆ, ಸಾಮಾನ್ಯವಾಗಿ ಯಾವುದೋ ಒಂದು ಸಂಸ್ಥೆಯನ್ನು ಕಟ್ಟಿ ಬೆಳೆಸುವಾಗ ಬರುವವರು ಕಡಿಮೆ, ಅನಂತರ ಅನೇಕ ಹಿತಾಸಕ್ತಿಗಳು ಹುಟ್ಟಿಕೊಳ್ಳುತ್ತವೆ. ನನಗೆ ನೆನಪಿದ್ದಂತೆ ಹಾಸ್ಟಲ್ ಕಟ್ಟಿಸುವಾಗ ನಮ್ಮ ತಂದೆಯವರು ಪಂಚೆಯಲ್ಲಿ ಸುತ್ತಿ ನಾಣ್ಯಗಳನ್ನು ಹಿಡಿದು ಹಣ ಶೇಖರಿಸಿ ತಂದು ಅದನ್ನು ಬ್ಯಾಂಕಿಗೆ ಕಟ್ಟಿಸುತ್ತಿದ್ದರು. ಮೈಸೂರು, ಬೆಂಗಳೂರಿನಲ್ಲಿ ನಾವು ನೆಲಸಿದ್ದಾಗ ವಾರಕ್ಕೊಮ್ಮೆ ತಪ್ಪದೆ ತುಮಕೂರಿಗೆ ಬಂದು ಹಾಸ್ಟಲ್ ನೋಡಿಕೊಂಡು ಹೋಗುತ್ತಿದ್ದರು. ಒಂದೆರಡು ಸಲ ಅವರು ತೀವ್ರ ಅಸ್ವಸ್ಥರಾಗಿದ್ದರೂ ಹಾಸ್ಟಲಿಗೆ ಬಂದು ಅದರ ಕೆಲಸ ನೋಡಿಕೊಳ್ಳುತ್ತಿದ್ದರು. ಆಗಲೂ ಊಟದ ಹಣವನ್ನು ಭರಿಸಿ ಅನಂತರ ಹಾಸ್ಟಲ್‌ನಲ್ಲಿ ಊಟ ಮಾಡುತ್ತಿದ್ದರು.

ಇಂಥ ಹತ್ತು ಹಲವು ಘಟನೆಗಳನ್ನು ಬಿಚ್ಚುತ್ತಾ ಹೋಗಬಹುದು. ಆದರೆ ಒಂದು ಮಾತಂತೂ ಸತ್ಯ. ನನ್ನ ತಂದೆ ನೋವು ನಲಿವುಗಳೆರಡನ್ನೂ ಉಂಡು ಬೆಳೆದ ಒಬ್ಬ 'ಮನುಷ್ಯ'. ಅವರೇ ನನ್ನ ಬಾಳಿನ ಆದರ್ಶ ಕೂಡ. ಜೀವನ ಕೊಟ್ಟ ನೋವು ನಲಿವುಗಳೆರಡನ್ನೂ ಅವರು ನಿರ್ಲಿಪ್ತರಾಗಿಯೇ ಸ್ವೀಕರಿಸಿದ್ದಾರೆ.

ನೆ ನ ಪು

ಎಂ. ಆರ್. ವೆಂಕಟರಾಮಯ್ಯ

ಸಾವಿರದ ಒಂಭೈನೂರ ನಲವತ್ತೊಂದು ನಲವತ್ತೆರಡು ಇರಬಹುದು. ಆಗ ತಾನೆ ಗ್ರಾಮೋದ್ಯೋಗಗಳು ಮಹತ್ವ ಪಡೆಯುತ್ತಿದ್ದವು. 'ಸಹಕಾರ ತತ್ವ'ದ ಮೇಲೆ ದೇಶ ನಿರ್ಮಾಣಕ್ಕೆ ದೇಶಭಕ್ತರು ಹಾಗೂ ಆಡಳಿತಗಾರರು ಮನಸ್ಸು ಮಾಡಿದ್ದರು. ಇಂತಹ ಸಂದರ್ಭದಲ್ಲೇ ನಮ್ಮೂರಿಗೆ ಶ್ರೀ ಎನ್. ಮಲ್ಲಪ್ಪನವರು ಆಗಮಿಸಿದ್ದು. ನನಗೂ ಮತ್ತು ಮಲ್ಲಪ್ಪನವರಿಗೂ ಗುರು–ಶಿಷ್ಯ ಬಾಂಧವ್ಯವೆನ್ನಬೇಕು. ಪ್ರಾಯಶಃ ಅವರು ಕೂಡ ನನ್ನ ಓರಗೆಯವರು. ನನ್ನ ಹೆಂಡತಿ ಮನೆಯವರ ಕಡೆ ಮಲ್ಲಪ್ಪನವರ ಮತ್ತು ಅವರ ತಾಯಿಯವರದು ಹೆಚ್ಚಿನ ಪರಿಚಯ. ನಮ್ಮ ಮಾವ ಪಂಡಿತ ರಾಮಣ್ಣನವರು. ತುಮಕೂರಿನ ಈಗಿನ ಎಂ. ಜಿ. ರಸ್ತೆಯಲ್ಲಿ ಅವರ ಮನೆ. ಈಗ್ಗೆ 70–80 ವರ್ಷಗಳ ಹಿಂದೆ ಅವರು ರೋಗಿಗಳಲ್ಲಿ ತಾಳುತ್ತಿದ್ದ ಆಸಕ್ತಿ ಇಂದಿಗೂ ಮಾರ್ಗದರ್ಶಕವಾಗುತ್ತದೆ. ಶ್ರೀ ಎನ್. ಮಲ್ಲಪ್ಪನವರು ತಮ್ಮ ತಾಯಿಯ ಹೊಟ್ಟೆಶೂಲೆಗೆ ಇವರಿಂದಲೇ ಔಷಧಿ ತೆಗೆದುಕೊಂಡರಂತೆ. ಇದನ್ನು ಚಿಕ್ಕನಾಯಕನಹಳ್ಳಿಗೆ ಬಂದಾಗ ನನ್ನ ಮಡದಿಯನ್ನು ನೋಡಿ ಅವರೇ ಹೇಳಿದ್ದುಂಟು. ಅನಂತರ ನಮ್ಮಿಬ್ಬರ ಸಂಬಂಧ ಸಾಕಷ್ಟು ಬೆಸೆಯಿತು.

ಚಿಕ್ಕನಾಯಕನಹಳ್ಳಿಗೆ ಬಂದನಂತರ ಮಲ್ಲಪ್ಪನವರು ಕುರುಬ ಜನಾಂಗದ ಮುಖಂಡರ ಸಭೆಯನ್ನು ಸೇರಿಸಿದರು. ಶ್ರೀ ದಿ॥ ವಿ. ಚೌಡಯ್ಯ, ಶ್ರೀ ಮೇಲಪ್ಪನವರ ಗಂಗಯ್ಯ, ಶ್ರೀ ರೇವಣಸಿದ್ದೇಶ್ವರ ಅವರು ಆ ಸಭೆಯಲ್ಲಿ ಭಾಗವಹಿಸಿದ್ದರು. ಮಲ್ಲಪ್ಪನವರು ಕಂಬಳಿ ನೇಕಾರರ ಹಿತಚಿಂತನೆಗಾಗಿ ಇಲ್ಲಿ ಕಂಬಳಿ ಸೊಸೈಟಿಯನ್ನು ತೆರೆಯಬಾರದೇಕೆಂದು ಕೇಳಿ ಅಲ್ಲಿದ್ದವರ ಸಮ್ಮತಿ ಪಡೆದು "ಕಂಬಳಿ ನೇಕಾರರ ಸಂಘ"ವನ್ನು ನೋಂದಣಿ ಮಾಡಿಸಿದರು. ಆ ಸಂಘಕ್ಕೆ ಗುಮಾಸ್ತನಾಗಿ ನಾನು ಸೇರಿಕೊಂಡೆ. ಹೀಗೆ ಮಲ್ಲಪ್ಪನವರು ನಮ್ಮೂರಿಗೆ ಬಂದು ನನಗೊಂದು ಉದ್ಯೋಗವನ್ನು ಕೊಡಿಸಿದರು. ಅನಂತರ ಅವರು ಅಮಲ್ದಾರ್ ಆಗಿ, ಅಸಿಸ್ಟೆಂಟ್ ಕಮಿಷನರ್ ಆಗಿ ಬಡವರಿಗೆ ಉತ್ತಮ ಕೆಲಸವನ್ನೇ ಮಾಡಿದರು. ಆದರೆ ಅವರ ಉದ್ಯೋಗದ ಪ್ರಾರಂಭ ಕಾಲದಲ್ಲಿ ಪರಿಚಯವಾಗಿದ್ದ ನನ್ನನ್ನು ಮರೆಯಲಿಲ್ಲ. ಯಾವಾಗ ಹೋದರೂ ನಿಮ್ಮ ಕಂಬಳಿ ಸೊಸೈಟಿ ಹೇಗಿದೆ ಎಂದು ಕಳಕಳಿಯಿಂದ ವಿಚಾರಿಸುತ್ತಿದ್ದರು. ಅವರಿಗೆ ತಾವು ಸ್ಥಾಪಿಸಿದ ಸಂಘದ ಏಳಿಗೆಯೇ ಪ್ರಮುಖ ಧ್ಯೇಯವಾಗಿದೆ.

ಒಂದು ಸಾರಿ ತುಮಕೂರಿಗೆ ಹೋಗಿದ್ದಾಗ ಮಲ್ಲಪ್ಪನವರನ್ನು ಕಾಣಲು ಅವರ ಮನೆಗೆ ಹೋಗಿದ್ದೆ. ಮನೆಯ ವರಾಂಡದಲ್ಲಿ ವಿರಾಮವಾಗಿ ಕುಳಿತಿದ್ದ ಅವರು ನನ್ನನ್ನು ಕಂಡೊಡನೆ ಕುರ್ಚಿಯಿಂದ ಎದ್ದುಬಂದು ಕೈಹಿಡಿದು ಒಳಗೆ ಕರೆದುಕೊಂಡು ಹೋದರು. ಅದೇ ವೇಳೆಗೆ ಒಳಗಿನಿಂದ ಅವರ ಶ್ರೀಮತಿಯವರು ಅಷ್ಟೇ ಸಹಜ ವಾತ್ಸಲ್ಯದಿಂದ ಮಾತನಾಡಿಸಿದರು. ನಾನು ಜಾತಿಯಲ್ಲಿ ಬ್ರಾಹ್ಮಣ. ಅವರು ತಕ್ಷಣವೇ ಅಂಗಡಿಯಿಂದ ಬಾಳೆಹಣ್ಣು ತರಿಸಿ, ಹಾಲು–ಹಣ್ಣು ಕೊಟ್ಟರು. ಅವರದು ಏಕಪ್ರಕಾರವಾದ ವಿಶ್ವಾಸ. ಯಾವುದೇ ಕಾರಣಕ್ಕೆ ಗೋಸುಂಬೆ ತರಹ ಬದಲಾಗುವಂತಹುದಲ್ಲ.

ಶ್ರೀಯುತರು ಸರಳ ಜೀವಿಗಳು. ಬಡವರ ಬಗ್ಗೆ ಅನುಕಂಪವುಳ್ಳವರಾಗಿದ್ದರು. ಈಗಲೂ ತಮ್ಮ ಕೈಲಾದ ಸಹಾಯ ಮಾಡುವ ಮನಸ್ಸುಳ್ಳವರಾಗಿದ್ದಾರೆ. ಬಡ ವಿದ್ಯಾರ್ಥಿಗಳ ಬಗ್ಗೆ ಅವರ ಕಾಳಜಿ ನಿಜಕ್ಕೂ ಪ್ರಶಂಸನೀಯ. ಚಿಕ್ಕನಾಯಕನಹಳ್ಳಿಯಲ್ಲಿದ್ದಾಗಲೇ ಬಡ ವಿದ್ಯಾರ್ಥಿಗಳಿಗೆ ಸಾರ್ವಜನಿಕ ವಿದ್ಯಾರ್ಥಿನಿಲಯವೊಂದನ್ನು ಪ್ರಾರಂಭಿಸಲು ಮನಸ್ಸು ಮಾಡಿದ್ದರು. ಆ ಸಂಬಂಧವಾಗಿ ಕಟ್ಟಡಕ್ಕೆ ಕಲ್ಲು ಕೂಡ ಹೊಡಿಸಿಯಾಗಿತ್ತು. ಮುಂದೆ ಊರಿನವರ ನಿರಾಸಕ್ತಿಯಿಂದಾಗಿ ಅದು ಕಾರ್ಯರೂಪಕ್ಕೆ ಬರಲಿಲ್ಲ.

ಒಂದು ವೈಯಕ್ತಿಕ ವಿಚಾರ ಹೇಳಿ ನನಗೆ ಅವರಲ್ಲಿರುವ ಗೌರವ ಭಾವನೆಯನ್ನು ಹೇಳಬಯಸುತ್ತೇನೆ. ನನಗೆ ಹುಟ್ಟಿದ ಎಲ್ಲ ಮಕ್ಕಳೂ ಸಾವಿಗೆ ಬಲಿಯಾಗಿದ್ದವು. ಇವರು ನಮ್ಮೂರಿಗೆ ಬರುವ ಹೊತ್ತಿಗೆ ನನ್ನ ಒಬ್ಬನೇ ಮಗನಿಗೆ ಆಗ ಎಂಟು–ಹತ್ತು ವರ್ಷ. ಪದವಿ ಗಳಿಸಿ, ಸೊಸೈಟಿ ಇನ್‌ಸ್ಪೆಕ್ಟರ್ ಹುದ್ದೆಗೆ ಬಂದ ಮಲ್ಲಪ್ಪನವರ ಶಿಸ್ತಿನ ಉಡುಗೆ ತೊಡಿಗೆಗಳು ಮಾತ್ರವಲ್ಲದೆ ಮಾತುಕತೆಗಳು ಜನರನ್ನು ಆಕರ್ಷಿಸಿದವು. ಇವರು ನಮ್ಮೂರಿನ ಬೀದಿಗಳಲ್ಲಿ ಸಂಚರಿಸುತ್ತಿದ್ದರೆ, ಜನ ಒಂದು ಕ್ಷಣ ಅವರನ್ನೇ ಗೌರವ ಭಾವದಿಂದ ನೋಡುತ್ತಿದ್ದರು. ಇಂತಹವರಿಂದ ನಮ್ಮ ಕರುಳುಬಳ್ಳಿಗೆ ಆಶೀರ್ವಾದ ಪಡೆಯಬೇಕೆಂದು ನಿಶ್ಚಯಿಸಿ ಅವರ ಬಿಡಾರಕ್ಕೆ ಮಗುವನ್ನು ಕರೆದುಕೊಂಡು ಹೋಗಿ ನಮಸ್ಕರಿಸಿದೆ. ಅವರ ಆಶೀರ್ವಾದವೋ ಏನೋ, ನನ್ನ ಮಗ ಉಪನ್ಯಾಸಕನಾಗಿದ್ದು ಒಂದಿಷ್ಟು ಸಾಹಿತ್ಯ ಸೇವೆ ಮಾಡುತ್ತಿದ್ದಾನೆ. ನನ್ನ ಮೂರು ಮೊಮ್ಮಕ್ಕಳು ಇಂಜಿನಿಯರಿಂಗ್ ಕಲಿಯುತ್ತಿದ್ದಾರೆ. ನನಗೆ ಮಲ್ಲಪ್ಪನವರಷ್ಟೇ ವಯಸ್ಸು ಅಥವಾ ಒಂದೆರಡು ವರ್ಷ ಅಧಿಕವೋ ತಿಳಿಯದು. ಅವರು ವಹಿಸಿಕೊಟ್ಟ ಕೆಲಸವನ್ನು ಇಂದೂ ಬಿಡದೇ ಮಾಡುತ್ತಿದ್ದೇನೆ. ಶರೀರ ಇರುವ ತನಕ ಕಾಯಕ ಮಾಡಬೇಕೆನ್ನುವ ಮಲ್ಲಪ್ಪನವರ ಮಾತು ನನಗೆ ಮಾರ್ಗದರ್ಶಕವೆನಿಸಿದೆ. ಮಲ್ಲಪ್ಪನವರನ್ನು ನಮ್ಮ ಸಮಾಜ ನೆನಸಿಕೊಳ್ಳುತ್ತಿರುವುದು ಸೂಕ್ತ. ಅವರಿಗೆ ದೇವರು ಆಯುರಾರೋಗ್ಯವನ್ನು ಕರುಣಿಸಲೆಂದು ಪ್ರಾರ್ಥಿಸುತ್ತೇನೆ.

ನಮ್ಮ ಬಳಗ

ಸಿ. ಎನ್. ಭಾಸ್ಕರಪ್ಪ
ಶಾಸಕರು.
ಶ್ರೀರಾಮನಗರ, ತುಮಕೂರು

ವೀ. ಚಿಕ್ಕವೀರಯ್ಯ
ಮಾಜಿ ಪುರಸಭಾಧ್ಯಕ್ಷ
ಚಿಕ್ಕವೀರಯ್ಯನಪಾಳ್ಯ, ತುಮಕೂರು-6

ಕೆ. ಆರ್. ನಾಯಕ್
ಕಾರ್ಯದರ್ಶಿ : ವಾಲ್ಮೀಕಿ ವಿದ್ಯಾವರ್ಧಕ ಸಂಘ
ತುಮಕೂರು

ಎಸ್. ಕಂಬಣ್ಣ
ಅಸಿಸ್ಟೆಂಟ್ ಎಕ್ಸಿಕ್ಯುಟಿವ್ ಇಂಜಿನಿಯರ್
ಹೌಸಿಂಗ್ ಬೋರ್ಡ್, ಮಂಡ್ಯ

ಜಿ. ವಿ. ನಾ.
c/o ದಯಾನಂದ
ಸೈಂಟ್ ಜೋಸೆಫ್ ಕಾಲೇಜ್, ಬೆಂಗಳೂರು

ಎಸ್. ಜಿ. ಸಿದ್ಧರಾಮಯ್ಯ
ಉಪನ್ಯಾಸಕರು, ಕನ್ನಡ ವಿಭಾಗ
ಸರ್ಕಾರಿ ಕಾಲೇಜು, ಮರಕೆರ

"ವೀಚಿ"
ತುಮಕೂರು-6

ಟಿ. ರಂಗದಾಸಪ್ಪ
ಸಹಕಾರ ಇಲಾಖೆಯ ನಿವೃತ್ತ ರಿಜಿಸ್ಟ್ರಾರ್
ನಂ. 416, 7 ನೇ ಬ್ಲಾಕ್
ಜಯನಗರ, ಬೆಂಗಳೂರು-11

ಕೆ. ದಾಸಪ್ಪ
ನಿವೃತ್ತ ಅಸಿಸ್ಟೆಂಟ್ ಕಮಿಷನರ್
ಎಸ್.ಐ.ಟಿ. ಬಡಾವಣೆ, ತುಮಕೂರು

ಆರ್. ತಿಮ್ಮಯ್ಯ
ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿ
ಎರಡನೇ ತಿರವು, ರಾಜೇಂದ್ರನಗರ, ಶಿವಮೊಗ್ಗ

ಡಾ॥ ಪಿ. ರಾಜಪ್ಪ
ಪ್ರೊಫೆಸರ್ ಆಫ್ ಮೆಡಿಸನ್
ಮೆಡಿಕಲ್ ಕಾಲೇಜ್, ಬಳ್ಳಾರಿ

ಎಸ್. ಎನ್. ಈಶ್ವರಪ್ಪ
ಅಡ್ವೊಕೇಟ್
ಶಿವಮೊಗ್ಗ-1

ಚಿಕ್ಕತಾಯಿ w/o
ಗಂಗಯ್ಯ
ನಿರ್ದೇಶಕರು
ಕರ್ನಾಟಕ ವಿಶ್ವವಿದ್ಯಾಲಯ ಮುದ್ರಣಾಲಯ
ಧಾರವಾಡ

ಕೆ. ಬಿ. ಕಲ್ಲಂಣವರ
ಅಡ್ವೊಕೇಟ್
ಧಾರವಾಡ

ಕೆ. ಆರ್. ಕಮಲೇಶ್
ನೃಪತುಂಗ
ಶ್ರೀದೇವಿ ಲೇ ಔಟ್. ಉಪ್ಪಾರಹಳ್ಳಿ, ತುಮಕೂರು

ಕೆ. ಮಲ್ಲಪ್ಪ
ವಿದ್ಯಾ ಇಲಾಖೆಯ ನಿವೃತ್ತ ನಿರ್ದೇಶಕರು
ವಸಂತನಗರ, ಬೆಂಗಳೂರು

ಸಿ. ಗಂಗಯ್ಯ
ಉಪನ್ಯಾಸಕರು
ಸರ್ಕಾರಿ ಕಿರಿಯ ಕಾಲೇಜು, ತುಮಕೂರು

ಪ್ರೊ॥ ಎಚ್. ಜಿ. ಸಣ್ಣಗುಡ್ಡಯ್ಯ
ಕನ್ನಡ ವಿಭಾಗ
ಸರ್ಕಾರಿ ಕಲಾ ಕಾಲೇಜು, ತುಮಕೂರು

ಹೆಚ್. ಆರ್. ದಾಸೇಗೌಡ
ನಿರ್ದೇಶಕರು
ಕಾಲೇಜುಗಳ ಅಭಿವೃದ್ಧಿ ಮಂಡಲಿ
ಬೆಂಗಳೂರು

ಕೆ. ಸಿ. ರಾಮಯ್ಯ
ಪ್ರಾಂಶುಪಾಲರು
ಕಾಳಿದಾಸ ಕಿರಿಯ ಕಾಲೇಜು, ತುಮಕೂರು

ಎಸ್. ಕೆ. ವೇಣುಗೋಪಾಲ್
ಉಪನ್ಯಾಸಕರು
ಕಾಳಿದಾಸ ಕಿರಿಯ ಕಾಲೇಜು, ತುಮಕೂರು

ಎಸ್. ಮಂಚಯ್ಯ
ವಿದ್ಯಾ ಇಲಾಖೆಯ ನಿವೃತ್ತ ನಿರ್ದೇಶಕರು
ಟಿ ಬ್ಲಾಕ್, ಜಯನಗರ, ಬೆಂಗಳೂರು

ಎಂ. ಹೆಚ್. ಸಿದ್ಧನಂಜಯ್ಯ
ಕಾರ್ಯದರ್ಶಿ
ತಾಲ್ಲೂಕು ಕೈಗಾರಿಕಾ ಸಹಕಾರ ಸಂಘ, ತುಮಕೂರು

ಡಾ॥ ಟಿ. ಎಂ. ಶಂಕರ್
ಶಸ್ತ್ರ ತಜ್ಞರು
ಸರ್ಕಾರಿ ಆಸ್ಪತ್ರೆ, ಕೆ.ಜಿ.ಎಫ್.

ರಾಮಾಂಜನೇಯ, ಕೆ.ಎ.ಎಸ್.,
ತಹಶೀಲ್ದಾರ್, ಕುಣಿಗಲ್

ಕಡಿದಾಳ್ ಮಂಜಪ್ಪ
ಮಾಜಿ ಮುಖ್ಯ ಮಂತ್ರಿಗಳು
ನಂ. 7, ಲಾಂಗ್ ಫೋರ್ಡ್ ರೋಡ್
ಬೆಂಗಳೂರು–25

ಟಿ. ಎಂ. ಕುಮಾರ್
ಶಿಕ್ಷಣಾಧಿಕಾರಿ
ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು

ಎಂ. ಆರ್. ವೆಂಕಟರಾಮಯ್ಯ
ಚಿಕ್ಕನಾಯಕನಹಳ್ಳಿ

ಪ್ರಾಮಾಣಿಕತೆ ಮಲ್ಲಪ್ಪನವರ ಜೀವನದ ಉಸಿರು. ಆದರ್ಶದ ಬೆಳ್ಗೊಡೆ ಅವರಿಗೆ ಯಾವಾಗಲೂ ಬೆಂಗಾವಲು. ಕಷ್ಟಾರ್ಜಿತವಲ್ಲದ ಒಂದು ದಂಬಡಿಯನ್ನೂ ಮುಟ್ಟೆನೆನ್ನುವ ಹಟ; ಸದಾ ಬಡವರ ಪರವಾದ ನಿಲುವು ಹಿಡಿದು ಅಹೋರಾತ್ರಿ ದುಡಿಮೆ; ಇದು ಅವರ ಬದುಕಿನ ಮೂಲಮಂತ್ರ, ಆ ಹಿರಿಯ ಜೀವದ ದೃಢ ಸಂಕಲ್ಪ ವಾಗಿದೆ.

ಹುಟ್ಟು ಬಡತನವನ್ನೂ ಅನಾರೋಗ್ಯವನ್ನೂ ಕಟ್ಟಿಕೊಂಡು ಬಂದ ಆ ಚೇತನಕ್ಕೆ ಜೀವನದ ಎಂತಹ ಜಟಿಲ ಸಮಸ್ಯೆಯೂ ಎದೆಗೆಡಿಸುವ ಕಷ್ಟವೂ ನಿಜವಾಗಿ ತೋರದೇ ಹೋಯಿತು. ತುಂಬು ಜೀವನದ ತುಂಬ ಸಾಗಿಬರಲು ಒಂದು ಬಗೆಯ ಕೆಚ್ಚನ್ನೂ ಕೆಲಸಕಾರ್ಯಗಳಲ್ಲಿ ಮೈಮರೆಯುವ ಆತ್ಮತೃಪ್ತಿಯ ಪ್ರವೃತ್ತಿಯನ್ನೂ ಎಳೆತನದಿಂದಲೇ ಅವರು ಬೆಳೆಸಿಕೊಂಡು ಬಂದರು.

ಹಾಸುವುದು ಹೊದೆಯುವುದು ಉಡುವುದು ತೊಡುವುದು ಎಲ್ಲ ಖಾದಿ. ಮಾನವತೆಯ ತನಿರಸದಲ್ಲಿ ಮಿಂದ ಇವರು ಗಾಂಧಿವಾದಿ.

—(ಪ್ರಸ್ತಾವನೆಯಿಂದ)